ಶನಿವಾರ, ಜನವರಿ 14, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಹಿತ್ಯ ಉತ್ಸವ

ಕೋಲ್ಕತ್ತದಲ್ಲಿ ಶುಕ್ರವಾರ ನಡೆದ ಸಾಹಿತ್ಯ ಉತ್ಸವದಲ್ಲಿ ನಟಿ ದಿವ್ಯಾ ದತ್ತ ಮಾತನಾಡಿದರು





ಸಂಕ್ಷಿಪ್ತ ಸುದ್ದಿ

‘ಸುರಂಗಕ್ಕೂ ಕುಸಿತಕ್ಕೂ ಸಂಬಂಧವಿಲ್ಲ’

ನವದೆಹಲಿ (ಪಿಟಿಐ): ತಪೋವನ ವಿಷ್ಣುಗಡ ಜಲವಿದ್ಯುತ್ ಯೋಜನೆಯನ್ನು ಸಂಪರ್ಕಿಸುವ 12 ಕಿಲೋ ಮೀಟರ್ ಉದ್ದದ ಸುರಂಗವು ಜೋಶಿಮಠದಿಂದ 1 ಕಿ.ಮೀ. ದೂರದಲ್ಲಿದ್ದು, ಆ ಪಟ್ಟಣ ಕುಸಿಯುತ್ತಿರುವುದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ಎನ್‌ಟಿಪಿಸಿ ಕಂಪನಿಯು ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಈ ಸುರಂಗವು ನೆಲ ಮಟ್ಟದಿಂದ ಕನಿಷ್ಠ ಒಂದು ಕಿ.ಮೀ. ಆಳದಲ್ಲಿದೆ ಎಂದು ಕೂಡ ಕಂಪನಿ ಹೇಳಿದೆ. ಕೇಂದ್ರ ಇಂಧನ ಸಚಿವಾಲಯವು, ಎನ್‌ಟಿಪಿಸಿ ಅಧಿಕಾರಿಗಳನ್ನು ಕರೆಸಿ, ಜೋಶಿಮಠ ಕುಸಿಯುತ್ತಿರುವ ಬಗ್ಗೆ ಪರಿಶೀಲನೆ ನಡೆಸುವಂತೆ ಜನವರಿ 10ರಂದು ಸೂಚಿಸಿತ್ತು. ಇದಕ್ಕೆ ಉತ್ತರವಾಗಿ ಕಂಪನಿಯು ಈ ವಿವರಣೆ ನೀಡಿದೆ. ಸುರಂಗವು ಜೋಶಿಮಠದ ಅಡಿಯಲ್ಲಿ ಸಾಗಿಲ್ಲ ಎಂದು ಕಂಪನಿ ಹೇಳಿದೆ.

‘ಭಾರತ ಮಾತಾಕಿ ಜೈ ಎನ್ನುವುದು ದೇಶಭಕ್ತಿಯಲ್ಲ’

ಸುಲ್ತಾನ್‌ಪುರ (ಪಿಟಿಐ): ‘ಭಾರತ ಮಾತಾಕಿ ಜೈ’ ಎಂದು ಕೂಗುವುದು ದೇಶಭಕ್ತಿ ಅಲ್ಲ. ದೇಶಭಕ್ತರಾಗುವುದಕ್ಕೆ ನಿಸ್ವಾರ್ಥ ಸೇವೆಯ ಅಗತ್ಯ ಇದೆ’ ಎಂದು ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

‘ಮಕರ ಸಂಕ್ರಾಂತಿ’ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಶ್ರೀಕೃಷ್ಣನ ಹಿರಿಮೆ, ಶ್ರೀರಾಮನ ಗರಿಮೆಗಳನ್ನು ಜನರು ತಮ್ಮ ವರ್ತನೆಯಲ್ಲಿ ರೂಢಿಸಿಕೊಂಡರೆ ಮಾತ್ರವೇ ಕೃಷ್ಣ, ರಾಮರು ಜನರ ಮಧ್ಯೆ ಇರುತ್ತಾರೆ’ ಎಂದರು. ‘ಭಾರತ ಮಾತಾಕಿ ಜೈ’ ಎಂದು ಕೂಗಿದರೆ ದೇಶಭಕ್ತಿ ಇದೆ ಎಂದು ಅರ್ಥವಲ್ಲ. ಜೀವನದಲ್ಲಿ ಕಠಿಣ ಪರಿಶ್ರಮ ಪಡುವ ವ್ಯಕ್ತಿಗೆ ಮಾತ್ರವೇ ಭಾರತ್ ಮಾತಾಕಿ ಜೈ ಎಂದು ಹೇಳುವ ನೈತಿಕ ಹಕ್ಕಿದೆ’ ಎಂದರು.

ಸರ್ಕಾರಿ ನೌಕರಿಗೆ ತಮಿಳು ಕಡ್ಡಾಯ: ಕಾಯ್ದೆಗೆ ತಿದ್ದುಪಡಿ

ಚೆನ್ನೈ: ರಾಜ್ಯದಲ್ಲಿ ಸರ್ಕಾರಿ ಸೇವೆಗೆ ನೇಮಕಗೊಳ್ಳಲು ತಮಿಳು ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದನ್ನು ಕಡ್ಡಾಯಗೊಳಿಸುವ ಸಲುವಾಗಿ ತಮಿಳುನಾಡು ವಿಧಾನಸಭೆಯಲ್ಲಿ ಶುಕ್ರವಾರ ಕಾಯಿದೆಗೆ ತಿದ್ದುಪಡಿ ಮಾಡಲಾಗಿದೆ.

ರಾಜ್ಯದ ಅಧಿಕೃತ ಭಾಷೆಯಾದ ತಮಿಳಿನಲ್ಲಿ ಸಾಕಷ್ಟು ಜ್ಞಾನ ಹೊಂದಿರದಿದ್ದರೆ, ಯಾವುದೇ ವ್ಯಕ್ತಿ ನೇರ ನೇಮಕಾತಿಯ ಮೂಲಕ ಯಾವುದೇ ಸೇವೆಗೆ ನೇಮಕಗೊಳ್ಳಲು ಅರ್ಹನಾಗಿರುವುದಿಲ್ಲ ಎಂದು ತಮಿಳುನಾಡು ಸರ್ಕಾರಿ ನೌಕರರ (ಸೇವಾ ಷರತ್ತುಗಳು) ಕಾಯಿದೆ, 2016ಕ್ಕೆ ಮಾಡಿರುವ ತಿದ್ದುಪಡಿಯಲ್ಲಿ ಹೇಳಲಾಗಿದೆ.

11 ಪೊಲೀಸರ ಅಮಾನತು

ನವದೆಹಲಿ (ಪಿಟಿಐ): ಕಾರಿನಡಿ ಸಿಲುಕಿದ್ದ ಯುವತಿಯನ್ನು 12 ಕಿ.ಮೀ ಎಳೆದೊಯ್ದ ಪ್ರಕರಣ ಸಂಬಂಧ ಪೊಲೀಸ್ ನಿಯಂತ್ರಣ ಕೊಠಡಿ ಸೇವೆ ಹಾಗೂ ಗಸ್ತು ಸೇವೆಯಲ್ಲಿ ನಿಯೋಜನೆಗೊಂಡಿದ್ದ 11 ಪೊಲೀಸರನ್ನು ದೆಹಲಿ ಪೊಲೀಸರು ಶುಕ್ರವಾರ ಅಮಾನತು ಮಾಡಿದ್ದಾರೆ.

ಘಟನೆ ಕುರಿತು ವಿಶೇಷ ಆಯುಕ್ತೆ ಶಾಲಿನಿ ಸಿಂಗ್ ಅವರ ನೇತೃತ್ವದಲ್ಲಿ ತನಿಖೆ ನಡೆಸಲಾಗಿದೆ. ಶಾಲಿನಿ ಅವರು ನೀಡಿದ ವರದಿಯನ್ನು ಆಧರಿಸಿ ಗೃಹ ಇಲಾಖೆಯು ಸಿಬ್ಬಂದಿಯನ್ನು ಅಮಾನತುಗೊಳಿಸಲು ದೆಹಲಿ ಪೊಲೀಸರಿಗೆ ಗುರುವಾರವೇ ನಿರ್ದೇಶನ ನೀಡಿತ್ತು.

ಛತ್ತೀಸಗಢ, ಬೆಂಗಳೂರಿನಲ್ಲಿ ಇ.ಡಿ ದಾಳಿ

ನವದೆಹಲಿ: ಕಲ್ಲಿದ್ದಲು ತೆರಿಗೆ ಹಗರಣದಲ್ಲಿನ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ, ಛತ್ತೀಸಗಢ, ಜಾರ್ಖಂಡ್ ಮತ್ತು ಕರ್ನಾಟಕದಲ್ಲಿ ಶುಕ್ರವಾರ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಛತ್ತೀಸಗಢದ ರಾಜಧಾನಿ ರಾಯಪುರ, ಕೊರಬಾ, ದುರ್ಗ್, ಜಾರ್ಖಂಡ್‌ನ ರಾಂಚಿ ಮತ್ತು ಕರ್ನಾಟಕದ ಬೆಂಗಳೂರಿನಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಇದರಲ್ಲಿ ಛತ್ತೀಸಗಢ ರಾಜ್ಯ ಸರ್ಕಾರದ ಕಾರ್ಯದರ್ಶಿ ಅನ್ಬಳಗನ್ ಪಿ. ಮತ್ತು ಐಎಎಸ್ ಅಧಿಕಾರಿ ಸೇರಿದಂತೆ ಪ್ರಮುಖರು ಒಳಗೊಂಡಿದ್ದಾರೆ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ಐಎಎಸ್ ಅಧಿಕಾರಿ ಸಮೀರ್ ವಿಷ್ಣೋಯಿ ಮತ್ತು ಕೆಲವು ಉದ್ಯಮಿಗಳ ಮೇಲೆ ದಾಳಿ ನಡೆಸಲಾಗಿತ್ತು.

ಛತ್ತೀಸಗಢದಲ್ಲಿ ಪ್ರತಿ ಟನ್ ಕಲ್ಲಿದ್ದಲು ಸಾಗಣೆಗೆ ಅಕ್ರಮವಾಗಿ ₹25 ವಸೂಲಿ ಮಾಡಲಾಗಿದ್ದು, ಅಧಿಕಾರಿಗಳು, ಉದ್ಯಮಿಗಳು, ರಾಜಕಾರಣಿಗಳು, ಮಧ್ಯವರ್ತಿಗಳು ಈ ಜಾಲದಲ್ಲಿ ಶಾಮೀಲಾಗಿದ್ದಾರೆ ಎಂದು ಇ.ಡಿ. ತಿಳಿಸಿದೆ.

1975ರಲ್ಲಿ ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಂಡಿದ್ದ ಬಿರುಕು ● ಹೆಚ್ಚುತ್ತಿರುವ ಹೋಂ ಸ್ಟೇಗಳು

ದೇವನಾಡಲ್ಲಿ ಬೀದಿಗೆ ಬಿದ್ದ ಬದುಕು



ಸಾಕ್ಷಾತ್ ವರದಿ
ಮಂಜುನಾಥ ಹೆಬ್ಬಾರ್

ಜೋಶಿಮಠ (ಉತ್ತರಾಖಂಡ): ಹಿಮಾಲಯ ತಪ್ಪಲಿನ ದೇವನಾಡು ಜೋಶಿಮಠದ ಹಿರೀಕ ಪುರಾನ್ ಸಿಂಗ್ ಪದೇ ಪದೇ ಉದ್ವಿಗ್ನರಾಗುತ್ತಾರೆ. ಸಣ್ಣ ಸದ್ದಾದ ಕೂಡಲೇ ಮನೆಯೊಳಗೆ ಧಾವಿಸುತ್ತಾರೆ. ಮನೆಯ ಹತ್ತು ಕಡೆ ಆಗಿರುವ ಬಿರುಕುಗಳನ್ನು ಲೆಕ್ಕ ಹಾಕಿ ಸಮಾಧಾನದ ನಿಟ್ಟುಸಿರು ಬಿಡುತ್ತಾರೆ. ಇನ್ನಷ್ಟು ಹಾನಿ ಆಗಿಲ್ಲವಲ್ಲ ಎಂಬುದು ಅವರ ಸಮಾಧಾನಕ್ಕೆ ಕಾರಣ.

ಜೋಶಿಮಠದ ಬಸ್ ನಿಲ್ದಾಣದ ಸಮೀಪದಲ್ಲೇ ದಶಕಗಳಷ್ಟು ಹಳೆಯದಾದ ಅವರ ಮನೆ ಇದೆ. ಅವರ ಮನೆಯನ್ನು ಅಸುರಕ್ಷಿತ ಪಟ್ಟಿಗೆ ಜಿಲ್ಲಾಡಳಿತ ಸೇರಿಸಿಲ್ಲ. ಹಾಗಾಗಿ, ಕುಟುಂಬದವರು ಕೊಂಚ ನೆಮ್ಮದಿ ಯಿಂದ ಇದ್ದಾರೆ. ಆದರೆ, ಕುಟುಂಬದ ಯಜಮಾನ ಪುರಾನ್ ಸಿಂಗ್ ಚಡಪಡಿಸುತ್ತಲೇ ಇರುತ್ತಾರೆ. ತನ್ನ ನೆಚ್ಚಿನ ಮನೆ ಬಿಟ್ಟು ಪುನರ್ವಸತಿ ಕೇಂದ್ರಕ್ಕೆ ಹೋಗುವ ಪರಿಸ್ಥಿತಿ ನಿರ್ಮಾಣವಾಗದಿದ್ದರೆ ಸಾಕು ಎಂಬುದು ಅವರ ಪ್ರಾರ್ಥನೆ.

ಜೋಶಿಮಠ 12 ದಿನಗಳ ಅವಧಿಯಲ್ಲಿ 5.4 ಸೆಂ.ಮೀ.ನಷ್ಟು ಕುಸಿದಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯ ರಾಷ್ಟ್ರೀಯ ದೂರಸಂವೇದಿ ಕೇಂದ್ರ ವರದಿ ನೀಡಿದ ಬಳಿಕ ಅವರ ಆತಂಕ ದುಪ್ಪಟ್ಟಾಗಿದೆ. ಅವರ ಮನೆಗೆ ‘ಪ್ರಜಾವಾಣಿ’ ಪ್ರತಿನಿಧಿ ಭೇಟಿ ನೀಡಿದಾಗ ಬಿಸಿಲೇರುತ್ತಿತ್ತು. ಮನೆಯ ಹೊರಗೆ ಬಿಸಿಲಿಗೆ ಮೈಯೊಡ್ಡಿದ್ದ 75ರ ಅಜ್ಜ ಬೇಸರದಿಂದಲೇ ಮಾತು ಆರಂಭಿಸಿದರು. ‘ನಮ್ಮ ಮನೆ ಸುರಕ್ಷಿತ ಎಂದು ಭಾವಿಸಿದ್ದೆವು. ಕಳೆದ ಕೆಲವು ದಿನಗಳಿಂದ ಆಗುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ ತಲೆ ಬಿಸಿ ಜಾಸ್ತಿ ಆಗಿದೆ. ಭಯದಿಂದ ರಾತ್ರಿ ನಿದ್ದೆ ಬರುವುದಿಲ್ಲ. ಮನೆಯ ಬಿರುಕುಗಳನ್ನು ದಿಟ್ಟಿಸಿ ಕೂರುತ್ತೇನೆ. ಮುಂದೇನು ಮಾಡಬೇಕು ಎಂದು ತೋಚುತ್ತಿಲ್ಲ’ ಎಂದು ಅವರು ಹೇಳಿಕೊಂಡರು.

ಪಟ್ಟಣದ ಸಿಂಗ್‌ಧಾರ್ ವಾರ್ಡ್‌ನ ನಿವಾಸಿ ಉಮೇಶ್ ರಾಣಾ ಅವರ ಮನೆಯಲ್ಲಿ ಎಂಟು ಮಂದಿ ಇದ್ದಾರೆ. ಅವರ ಮನೆಯ ಸೂರು ಹಾಗೂ ಗೋಡೆಯಲ್ಲಿ ಹಲವು ಕಡೆ ಬಿರುಕುಗಳು ಕಾಣಿಸಿಕೊಂಡಿವೆ. ‘ಇಲ್ಲಿನ ಪರಿಸರವೇ ಸೂಕ್ಷ್ಮವಾದುದು. ಇಲ್ಲಿ ಇಂತಹ ಅವಘಡ ಸಂಭವಿಸುತ್ತಿರುವುದು ಇದೇ ಮೊದಲು ಅಲ್ಲ. 1975ರಲ್ಲಿ ಇಲ್ಲಿನ ಕೆಲವು ಮನೆಗಳಲ್ಲಿ ಸಣ್ಣ ಬಿರುಕುಗಳು ಕಾಣಿಸಿಕೊಂಡಿದ್ದವು. ನನಗೆ ಆಗ 15 ವರ್ಷ. ಇಲ್ಲಿ ನಿರ್ಮಾಣ ಚಟುವಟಿಕೆ ಕೂಡದು ಎಂದು ಎಂ.ಸಿ. ಮಿಶ್ರಾ ಸಮಿತಿ 1976ರಲ್ಲೇ ಶಿಫಾರಸು ಮಾಡಿತ್ತು. ಆಗ ಇಲ್ಲಿ 200–300 ಮನೆಗಳು ಇದ್ದವು. ಈಗ ಮನೆಗಳ ಸಂಖ್ಯೆ 4 ಸಾವಿರ ದಾಟಿದೆ. ಇಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಬರುವ ಪ್ರವಾಸಿಗರಿಗೆ ಸೌಲಭ್ಯ ಕಲ್ಪಿಸಲು ನಾಯಿ ಕೊಡೆಗಳಂತೆ ಹೋಟೆಲ್, ಹೋಂ ಸ್ಟೇಗಳು ತಲೆ ಎತ್ತಿವೆ. ಈಗ ನಮಗೆ ಪ್ರಕೃತಿಯೇ ಬುದ್ಧಿ ಕಲಿಸಲು ಹೊರಟಿದೆ. ಅದನ್ನು ಅನುಭವಿಸಬೇಕು ಅಷ್ಟೇ’ ಎಂದು ನುಡಿದರು.

ಅದೇ ವಾರ್ಡ್‌ನ ಮತ್ತೊಬ್ಬ ನಿವಾಸಿ ಜಗದೀಶ್ ನೇಗಿ, ‘ನನ್ನ ಮನೆಯಲ್ಲಿ ಜನವರಿ 2ರಂದು ಬಿರುಕು ಕಾಣಿಸಿಕೊಂಡಿತು. ಈಗ ಮತ್ತಷ್ಟು ಕಡೆ ಕಾಣಿಸಿಕೊಂಡು ಮನೆ ಕುಸಿಯುತ್ತಿದೆಯೋ ಎಂಬಂತೆ ಭಾಸವಾಗುತ್ತಿದೆ. ಅಧಿಕಾರಿಗಳು ಬಂದು ಪರಿಶೀಲನೆ ನಡೆಸಿದ್ದಾರೆ. ಮನೆಯನ್ನು ಅಸುರಕ್ಷಿತ ಪಟ್ಟಿಗೆ ಸೇರಿಸಿಲ್ಲ. ಮನೆಯಲ್ಲಿ ವರ್ಷದ ಮಗುವಿದೆ. ಇಲ್ಲಿ ಹೇಗೆ ಇರುವುದು ಎಂಬುದೇ ತೋಚುತ್ತಿಲ್ಲ. ಬಾಂಬ್ ಮೇಲೆ ಕುಳಿತ ಅನುಭವವಾಗುತ್ತಿದೆ’ ಎಂದು ಹೇಳಿಕೊಂಡರು.



ಮನೆ ಬಿರುಕುಬಿಟ್ಟಿರುವುದು –ಪಿಟಿಐ ಚಿತ್ರ

ಎರಡು ಮಹಡಿಯ ಮನೆಯಲ್ಲಿ ನೆಲೆಸಿರುವ ಪುಷ್ಪಾ ವರ್ಮಾ, ‘ನಮ್ಮದು ಆರು ಜನರ ಕುಟುಂಬ. ಪತಿ ಕೆಲವು ವರ್ಷಗಳ ಹಿಂದೆ ತೀರಿಕೊಂಡರು. ವಾರದ ಹಿಂದೆ ಮನೆ ಕೊಂಚ ವಾಲಿದ ಅನುಭವವಾಯಿತು. ಮರುದಿನವೇ ಇಬ್ಬರು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಗನನ್ನು ಚಮೋಲಿಯ ಸಂಬಂಧಿಕರ ಮನೆಗೆ ಕಳುಹಿಸಿದೆ. ಅಧಿಕಾರಿಗಳು ಒಪ್ಪಿಗೆ ಕೊಟ್ಟರೆ ಪರಿಹಾರ ಕೇಂದ್ರಕ್ಕೆ ಹೋಗುತ್ತೇನೆ’ ಎಂದು ಹೇಳುತ್ತಾರೆ.

ಹಿಮ ಪ್ರವಾಸಿಗರ ಪ್ರವೇಶದ್ವಾರವಾಗಿರುವ ಜೋಶಿಮಠವು ಸಮುದ್ರ ಮಟ್ಟದಿಂದ 6,150 ಅಡಿ ಎತ್ತರದಲ್ಲಿದೆ. ಪ್ರತಿ ವರ್ಷವೂ ಪ್ರಕೃತಿಯ ಕೋಪಕ್ಕೆ ತುತ್ತಾಗುತ್ತಲೇ ಇರುತ್ತದೆ. ವಿಪರೀತ ಮಳೆ, ಪ್ರವಾಹ ಜೋಶಿಮಠಕ್ಕೆ ಹೊಸತಲ್ಲ. ಕಡಿದಾದ ಬೆಟ್ಟ ಗುಡ್ಡಗಳಿಂದ ಆವೃತವಾಗಿರುವ ಈ ಪಟ್ಟಣದ ನೈಸರ್ಗಿಕ ಸೌಂದರ್ಯವೂ ಅಷ್ಟೇ ಅದ್ಭುತವಾದುದು. ಇದೀಗ, ಇಡೀ ಪಟ್ಟಣವೇ ಕುಸಿದು ಬೀಳುವ ಭೀತಿ ಎದುರಾಗಿದೆ. ಇಲ್ಲಿನ ಸುಮಾರು 20 ಸಾವಿರ ನಿವಾಸಿಗಳು ಭಯದಿಂದಲೇ ಇದ್ದಾರೆ. ಪವಿತ್ರ ಯಾತ್ರಾಸ್ಥಳ ಬದರೀನಾಥದ ಹೆಬ್ಬಾಗಿಲು ಎಂದೇ ಕರೆಸಿಕೊಳ್ಳುವ ಜೋಶಿಮಠ ನಾಮಾವಶೇಷಗೊಳ್ಳಲಿದೆ ಎಂಬುದು ಪ್ರವಾಸಿಗರ ಆತಂಕ.

ಹರಿದ್ವಾರ, ಋಷಿಕೇಶಕ್ಕೆ ಭೇಟಿ ಕೊಟ್ಟು ಜೋಶಿಮಠಕ್ಕೆ ಬಂದಿದ್ದ ಯಾತ್ರಾರ್ಥಿ ನೂತನ್ ಮಿಶ್ರಾ, ‘ಇಲ್ಲಿಗೆ ಇದು ಕೊನೆಯ ಪ್ರವಾಸ ಇರಬೇಕು. ಮುಂದಿನ ಸಲ ಇಲ್ಲಿಗೆ ಬರಲಿಕ್ಕೆ ಅವಕಾಶ ಸಿಗುತ್ತಾ ಇಲ್ಲವೇ ಗೊತ್ತಿಲ್ಲ. ಪ್ರಕೃತಿ ಇನ್ನಷ್ಟು ಮುನಿಯದಿದ್ದರೆ ಸಾಕು’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಸಿಜೆಐ ಪ್ರಕರಣ: ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿಗಳು

ನವದೆಹಲಿ: ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರ ನೇಮಕವನ್ನು ಪ್ರಶ್ನಿಸಿ ವಜಾಗೊಳಿಸಿದ್ದ ಅರ್ಜಿಯನ್ನು, ಮರು ಪರಿಶೀಲಿಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯಿಂದ ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹಾಗೂ ನ್ಯಾಯಮೂರ್ತಿ ಸುಬ್ರಮೋನಿಯಂ ಪ್ರಸಾದ್ ಅವರು ಶುಕ್ರವಾರ ಹಿಂದೆ ಸರಿದಿದ್ದಾರೆ.

ಸಿಜೆಐ ನೇಮಕದ ವಿರುದ್ಧದ ಅರ್ಜಿಯಲ್ಲಿ ತಮ್ಮ ಕುರಿತೂ ಕೆಲವು ಆರೋಪಗಳಿರುವುದನ್ನು ಗಮನಿಸಿದ ಹೈಕೋರ್ಟ್‌ನ ವಿಭಾಗೀಯ ಪೀಠವು, ಈ ಅರ್ಜಿಯ ವಿಚಾರಣೆ ನಡೆಸಲು ಸಾಧ್ಯವಿಲ್ಲ. ಜನವರಿ 16ರಂದು ಮತ್ತೊಂದು ಪೀಠವು ಅರ್ಜಿಯ ವಿಚಾರಣೆ ನಡೆಸಲಿದೆ ಎಂದೂ ಹೇಳಿದೆ. ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ವಕೀಲರು, ಅರ್ಜಿದಾರರ ವಿರುದ್ಧ ನ್ಯಾಯಾಂಗ ನಿಂದನೆಯ ಮೊಕದ್ದಮೆ ದಾಖಲಿಸುವಂತೆ ನ್ಯಾಯಪೀಠಕ್ಕೆ ಒತ್ತಾಯಿಸಿದರು.



ಚಂದ್ರಚೂಡ್ ಅವರನ್ನು ಸಿಜೆಐ ಆಗಿ ನೇಮಿಸಿರುವುದನ್ನು ಪ್ರಶ್ನಿಸಿ ಅರ್ಜಿದಾರರಾದ ಗ್ರಾಮ ಉದಯ ಫೌಂಡೇಷನ್‌ನ ಅಧ್ಯಕ್ಷ ಸಂಜೀವ್ ಕುಮಾರ್ ತಿವಾರಿ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) 2022ರ ನ. 11ರಂದು ವಜಾಗೊಳಿಸಿದ್ದ ದೆಹಲಿ ಹೈಕೋರ್ಟ್ ₹ 1 ಲಕ್ಷ ದಂಡವನ್ನೂ ವಿಧಿಸಿತ್ತು.

ಕಲುಷಿತ ನೀರು: ಲೋಕಾಯುಕ್ತ ಸ್ವಯಂಪ್ರೇರಿತ ಪ್ರಕರಣ ದಾಖಲು

ಬೆಂಗಳೂರು: ಹೊಸಪೇಟೆ (ವಿಜಯನಗರ) ನಗರದ ರಾಣಿಪೇಟೆಯಲ್ಲಿ ಕಲುಷಿತ ನೀರು ಸೇವಿಸಿ ಮಹಿಳೆಯೊಬ್ಬರು ಮೃತಪಟ್ಟು, 54 ಜನ ಅಸ್ವಸ್ಥರಾದ ಘಟನೆಗೆ ಸಂಬಂಧಿಸಿದಂತೆ ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿದ್ದಾರೆ.

‘ಪ್ರಜಾವಾಣಿ’ಯ ಬುಧವಾರದ (ಜನವರಿ 11) ಸಂಚಿಕೆಯಲ್ಲಿ ‘ಕಲುಷಿತ ನೀರು ಸೇವನೆ ಮಹಿಳೆ ಸಾವು: 54 ಜನ ಆಸ್ಪತ್ರೆಗೆ ದಾಖಲು’ ಶೀರ್ಷಿಕೆಯಲ್ಲಿ ಪ್ರಕಟವಾದ ವರದಿಯನ್ನು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ, ಪೌರಾಡಳಿತ ಇಲಾಖೆ ನಿರ್ದೇಶಕ, ವಿಜಯನಗರ ಜಿಲ್ಲಾಧಿಕಾರಿ, ಹೊಸಪೇಟೆ ನಗರಸಭೆಯ ಆಯುಕ್ತ ಮತ್ತು ವಿಜಯನಗರ ಜಿಲ್ಲಾ ವೈದ್ಯಾಧಿಕಾರಿಗೆ ನೋಟಿಸ್ ಜಾರಿಗೆ ಆದೇಶಿಸಿದ್ದಾರೆ. ಜೊತೆಗೆ, ರಾಣಿಪೇಟೆಯ ನಿವಾಸಿಗಳಿಗೆ ಶುದ್ಧ ನೀರು ಪೂರೈಕೆಯನ್ನು ಖಾತ್ರಿಪಡಿಸಿದ ಬಗ್ಗೆ ಇದೇ 13ರ ಒಳಗೆ ವರದಿ ನೀಡಬೇಕು ಎಂದೂ ಸೂಚಿಸಿದ್ದಾರೆ.

ಅಲ್ಲದೆ, ಘಟನಾ ಸ್ಥಳಕ್ಕೆ ಮತ್ತು ಅಸ್ವಸ್ಥರಾದವರು ದಾಖಲಾಗಿರುವ ಆಸ್ಪತ್ರೆಗೆ ಭೇಟಿ ನೀಡಿ ಇದೇ 17ರ ಒಳಗೆ ವರದಿ ನೀಡುವಂತೆ ಬಳ್ಳಾರಿ ಜಿಲ್ಲೆಯ ಲೋಕಾಯುಕ್ತ ಎಸ್‌ಪಿಯವರಿಗೆ ನಿರ್ದೇಶನ ನೀಡಿದ್ದಾರೆ. ಘಟನೆ ಕುರಿತು ‘ಪ್ರಜಾವಾಣಿ’ ಪ್ರಕಟಿಸಿದ್ದ ವರದಿಯನ್ನು ಸಾಮಾಜಿಕ ಕಾರ್ಯಕರ್ತ (ನೈಜ ಹೋರಾಟಗಾರರ ವೇದಿಕೆ) ಎಚ್.ಎಂ. ವೆಂಕಟೇಶ್ ಅವರು ಇ- ಮೇಲ್ ಮೂಲಕ ಲೋಕಾಯುಕ್ತರಿಗೆ ತಲುಪಿಸಿದ್ದರು.

ಪಕ್ಷಭೇದ ಮರೆತು ಕೇಂದ್ರ ಸಚಿವರು, ವಿರೋಧ ಪಕ್ಷಗಳ ನಾಯಕರಿಂದ ಅಂತಿಮ ದರ್ಶನ

ಶರದ್ ಯಾದವ್ ಅಂತ್ಯಕ್ರಿಯೆ ಇಂದು

ನವದೆಹಲಿ (ಪಿಟಿಐ): ಅನಾರೋಗ್ಯದಿಂದ ಗುರುವಾರ ರಾತ್ರಿ ನಿಧನರಾದ ಸಮಾಜವಾದಿ ನಾಯಕ ಶರದ್ ಯಾದವ್ ಅವರ ಅಂತ್ಯಕ್ರಿಯೆಯು ಮಧ್ಯಪ್ರದೇಶದಲ್ಲಿನ ಅವರ ಸ್ವಗ್ರಾಮದಲ್ಲಿ ಶನಿವಾರ ನಡೆಯಲಿದೆ. ದೆಹಲಿಯ ಛತರ್‌ಪುರದಲ್ಲಿನ ನಿವಾಸದಲ್ಲಿ ಅವರ ಅಂತಿಮದರ್ಶನಕ್ಕೆ ಶುಕ್ರವಾರ ವ್ಯವಸ್ಥೆ ಮಾಡಲಾಗಿತ್ತು. ಪಕ್ಷಭೇದ ಮರೆತು ಎಲ್ಲ ಪಕ್ಷಗಳ ನಾಯಕರು ಶರದ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಬಿಹಾರ ಸರ್ಕಾರವು ಒಂದು ದಿನದ ಶೋಕಾಚರಣೆಯನ್ನು ಶುಕ್ರವಾರ ಘೋಷಿಸಿತ್ತು.

ಪಂಜಾಬ್‌ನಿಂದ ದೆಹಲಿಗೆ ಹಿಂತಿರುಗಿದ್ದ ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರು, ಬೆಳಿಗ್ಗೆ 8.30ಕ್ಕೆ ಶರದ್ ಅವರ ನಿವಾಸಕ್ಕೆ ಭೇಟಿ ನೀಡಿದರು. ಶರದ್ ಅವರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ‘ಶರದ್ ಯಾದವ್ ಅವರಂತಹ ದೊಡ್ಡ ನಾಯಕರಿಂದ ನಾನು ಬಹಳಷ್ಟು ಕಲಿತಿದ್ದೇನೆ’ ಎಂದು ಅವರು ಹೇಳಿದರು.

ಆನಂತರ ಕೇಂದ್ರ ಗೃಹಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಬಿಹಾರದ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಅವರು ಭೇಟಿ ನೀಡಿ, ಅಂತಿಮ ನಮನ ಸಲ್ಲಿಸಿದರು. ಹರಿಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್, ಸಮಾಜವಾದಿ ಪಕ್ಷದ ನಾಯಕ ರಾಮ್ ಗೋಪಾಲ್ ಯಾದವ್, ಆರ್‌ಜೆಡಿಯ ಮನೋಜ್ ಝಾ ಅವರೂ ಅಗಲಿದ ನಾಯಕನಿಗೆ ಅಂತಿಮ ನಮನ ಸಲ್ಲಿಸಿದರು.

ಮಧ್ಯಪ್ರದೇಶದ ಹೋಶಂಗಾಬಾದ್ ಜಿಲ್ಲೆಯ ಅನ್‌ಖ್ಮಾವು ಗ್ರಾಮದಲ್ಲಿ ಶನಿವಾರ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ಮಾಹಿತಿ ನೀಡಿದ್ದಾರೆ.



ಶರದ್ ಯಾದವ್ ಅವರ ಮಗಳು ಸುಭಾಷಿಣಿ ಅವರನ್ನು ಆರ್‌ಜೆಡಿ ನಾಯಕಿ ರಾಬ್ಡಿ ದೇವಿ ಅವರು ಸಂತೈಸಿದರು –ಪಿಟಿಐ ಚಿತ್ರ

> ಇದು ದೇಶಕ್ಕೆ ತುಂಬಲಾರದ ನಷ್ಟ. ಐದು ದಶಕಗಳಲ್ಲಿ ಶರದ್ ಯಾದವ್ ಅವರು ಜನರ ಸಮಸ್ಯೆಗಳ ಬಗ್ಗೆ ದನಿ ಎತ್ತಿದ್ದರು ಮತ್ತು ಕೊನೆಯ ಉಸಿರಿನವರೆಗೂ ಸಮಾಜವಾದಿ ಚಿಂತನೆ ಉತ್ತೇಜಿಸಿದ್ದರು
>
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ನನ್ನ ಅಜ್ಜಿ ಇಂದಿರಾ ಗಾಂಧಿ ಮತ್ತು ಶರದ್ ಯಾದವ್ ಅವರು ಪರಸ್ಪರ ರಾಜಕೀಯ ಎದುರಾಳಿಗಳಾಗಿದ್ದರು. ಆದರೆ, ಇಬ್ಬರ ಮಧ್ಯೆಯೂ ಪರಸ್ಪರ ಗೌರವವಿತ್ತು
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ದೊಡ್ಡಣ್ಣನಂತಿದ್ದರು: ಲಾಲು ಪ್ರಸಾದ್

‘ನಾನು, ಶರದ್ ಯಾದವ್, ನಿತೀಶ್ ಕುಮಾರ್ ಮತ್ತು ಮುಲಾಯಂ ಸಿಂಗ್ ಯಾದವ್ ಅವರು ರಾಜಕೀಯ ಹಾಗೂ ಸಮಾಜವಾದವನ್ನು ರಾಮ ಮನೋಹರ್ ಲೋಹಿಯಾ ಮತ್ತು ಕರ್ಪೂರಿ ಠಾಕೂರ್ ಅವರಿಂದ ಕಲಿತೆವು. ನಾನು ಮತ್ತು ಶರದ್ ಚುನಾವಣೆಗಳಲ್ಲಿ ಪರಸ್ಪರ ಎದುರಾಳಿಗಳಾಗಿದ್ದೆವು. ಆದರೆ ಆ ಸ್ಪರ್ಧೆ ಮತ್ತು ನಮ್ಮ ನಡುವಣ ಭಿನ್ನಾಭಿಪ್ರಾಯಗಳು ಯಾವತ್ತಿಗೂ ದ್ವೇಷದ ರೂಪ ಪಡೆಯಲಿಲ್ಲ. ಅವರು ಸದಾ ನನಗೆ ದೊಡ್ಡಣ್ಣನಂತಿದ್ದರು’ ಎಂದು ಆರ್‌ಜೆಡಿ ನಾಯಕ ಲಾಲು ಪ್ರಸಾದ್ ಹೇಳಿದ್ದಾರೆ.

ಅನಾರೋಗ್ಯದ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಲಾಲು ಅವರು, ಅಲ್ಲಿಂದಲೇ ಸಂತಾಪದ ವಿಡಿಯೊ ಬಿಡುಗಡೆ ಮಾಡಿದ್ದಾರೆ.

‘ಎಲ್ಲರೂ ಒಟ್ಟಾದರೆ ನಿರ್ವಾತ ತುಂಬಬಹುದು’: ‘ನಮ್ಮ ತಂದೆ ತೋರಿಸಿಕೊಟ್ಟ ಧ್ಯೇಯಗಳನ್ನು ಉಳಿಸಿಕೊಳ್ಳುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವ. ಅವರ ನಿಧನದಿಂದ ದೊಡ್ಡ ನಿರ್ವಾತ ನಿರ್ಮಾಣವಾಗಿದೆ. ಅವರ ಚಿಂತನೆಗಳು ಮತ್ತು ಸಿದ್ಧಾಂತಗಳೊಂದಿಗೆ ಸಹಮತ ಹೊಂದಿರುವವರೆಲ್ಲರೂ ಒಟ್ಟಾಗುವುದರ ಮೂಲಕ ಮಾತ್ರ ಆ ನಿರ್ವಾತವನ್ನು ತುಂಬಬಹುದಾಗಿದೆ’ ಎಂದು ಶರದ್ ಯಾದವ್ ಅವರ ಮಗಳು ಸುಭಾಷಿಣಿ ಹೇಳಿದ್ದಾರೆ.

ಮೆಟ್ರೊ ಅವಘಡ: ಪಿಐಎಲ್ ದಾಖಲಿಸಲು ಆದೇಶ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಹೆಣ್ಣೂರು–ನಾಗವಾರ ಮಧ್ಯೆ ಮೆಟ್ರೊ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಕುಸಿದು ಬಿದ್ದು ಮಹಿಳೆ ಮತ್ತು ಗಂಡು ಮಗು ಮೃತಪಟ್ಟ ಪ್ರಕರಣ ಹಾಗೂ ಬ್ರಿಗೇಡ್ ರಸ್ತೆಯಲ್ಲಿ ಗುಂಡಿ ಬಿದ್ದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮ ವರದಿಗಳನ್ನು ಆಧರಿಸಿ ಹೈಕೋರ್ಟ್ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಿಕೊಂಡಿದೆ.

ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠವು, ‘ಬೆಂಗಳೂರಿನಲ್ಲಿ ಇದೇ 11 ಮತ್ತು 13ರಂದು ಪ್ರತ್ಯೇಕವಾಗಿ ಘಟಿಸಿರುವ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿ‘ ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಆದೇಶಿಸಿದೆ.

‘ಗುತ್ತಿಗೆ ನಡೆಸುತ್ತಿರುವ ಸಂಸ್ಥೆ ಅಥವಾ ಕಾಮಗಾರಿಯ ಮೇಲುಸ್ತುವಾರಿ ನಿಭಾಯಿಸುತ್ತಿರುವ ಅಧಿಕಾರಿಗಳ ಕುರಿತಾದ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಇಂತಹ ಕಾಮಗಾರಿ ನಡೆಸುವಾಗ ಯಾವ ರೀತಿಯ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ? ಸುರಕ್ಷತಾ ಕ್ರಮ ನಿರ್ವಹಿಸಲು ಹೊಣೆಗಾರಿಕೆ ನಿಗದಿ ಮಾಡಲಾಗಿದೆಯೇ’ ಎಂಬುದನ್ನು ಪರಿಶೀಲಿಸಬೇಕಿದೆ ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣದಲ್ಲಿ ರಾಜ್ಯ ಸರ್ಕಾರದ ಸಂಬಂಧಿತ ಇಲಾಖೆಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಂಗಳೂರು ಮೆಟ್ರೊ ರೈಲು ಅಭಿವೃದ್ಧಿ ನಿಗಮ (ಬಿಎಂಆರ್‌ಸಿಎಲ್), ಸಂಬಂಧಿತ ಗುತ್ತಿಗೆದಾರರನ್ನು ಪ್ರತಿವಾದಿಗಳನ್ನಾಗಿ ಮಾಡಲು ನಿರ್ದೇಶಿಸಲಾಗಿದೆ.

ತಿರುಪತಿ: 2022ರಲ್ಲಿ ₹ 1,450 ಕೋಟಿ ಕಾಣಿಕೆ



ತಿರುಪತಿ (ಪಿಟಿಐ): ಪ್ರಸಿದ್ಧ ತಿರುಪತಿ ದೇವಸ್ಥಾನಕ್ಕೆ 2022ರಲ್ಲಿ ಹುಂಡಿ ಕಾಣಿಕೆ ಮೂಲಕ ₹ 1,450 ಕೋಟಿ ಬಂದಿದೆ ಎಂದು ದೇವಸ್ಥಾನದ ಅಧಿಕಾರಿಗಳು ತಿಳಿಸಿದ್ದಾರೆ.

‘2022ರಲ್ಲಿ ಸುಮಾರು 2.37 ಕೋಟಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಹುಂಡಿ ಮೂಲಕ ₹ 1,450.50 ಕೋಟಿ ಕಾಣಿಕೆ ಬಂದಿದೆ. 2021ರಲ್ಲಿ 1.04 ಕೋಟಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರು, ₹ 833.41 ಕೋಟಿ ಕಾಣಿಕೆ ಬಂದಿತ್ತು’ ಎಂದು ತಿರುಪತಿ ತಿರುಮಲ ದೇವಸ್ಥಾನಂ (ಟಿಟಿಡಿ) ಕಾರ್ಯನಿರ್ವಾಹಕ ಅಧಿಕಾರಿ ಧರ್ಮಾ ರೆಡ್ಡಿ ಮಾಹಿತಿ ನೀಡಿದರು. ‘2022 ಹಾಗೂ 2021ರ ಹೋಲಿಕೆ ಅಷ್ಟು ಸರಿಯಾದುದ್ದಲ್ಲ. ಏಕೆಂದರೆ, 2021ರ ಹೆಚ್ಚಿನ ತಿಂಗಳು ಹಾಗೂ 2022ರ ಪ್ರಾರಂಭದ ತಿಂಗಳಲ್ಲಿ ಕೋವಿಡ್ ನಿರ್ಬಂಧವಿತ್ತು’ ಎಂದು ದೇವಸ್ಥಾನದ ಹಿರಿಯ ಅಧಿಕಾರಿಗಳು ತಿಳಿಸಿದರು.



ಶ್ರೀನಗರದ ಹೊರವಲಯದಲ್ಲಿ ಹಿಮಪಾತದ ನಡುವೆಯೂ ಕೊಡೆ ಹಿಡಿದು ಸಾಗುತ್ತಿರುವ ಯುವತಿಯರು -ಎಎಫ್‌ಪಿ ಚಿತ್ರ

ಟಿ.ವಿ ಮಾಧ್ಯಮ ಸಮಾಜವನ್ನು ಒಡೆಯುತ್ತಿದೆ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ದ್ವೇಷ ಭಾಷಣ ಅಪಾಯಕಾರಿ. ಮುಕ್ತ ಮತ್ತು ಸಮತೋಲಿತ ವರದಿ ಬಿತ್ತರಿಸುವ ಮಾಧ್ಯಮಗಳು ದೇಶಕ್ಕೆ ಬೇಕು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಅಭಿಪ್ರಾಯಪಟ್ಟಿದೆ.

ದೇಶದಾದ್ಯಂತ ದ್ವೇಷ ಭಾಷಣ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಬಿ.ವಿ. ನಾಗರತ್ನ ಅವರಿದ್ದ ನ್ಯಾಯಪೀಠ, ‘ದ್ವೇಷ ಭಾಷಣ ಅಪಾಯಕಾರಿ, ಅದು ನಿಲ್ಲಲೇಬೇಕು’ ಎಂದು ಹೇಳಿತು.

‘ಇತ್ತೀಚಿನ ದಿನಗಳಲ್ಲಿ ಸುದ್ದಿವಾಹಿನಿಗಳು ಟಿಆರ್‌ಪಿಗಾಗಿ ಪರಸ್ಪರ ಸ್ಪರ್ಧೆಗೆ ಇಳಿದು, ಸಮಾಜವನ್ನು ಇಬ್ಭಾಗ ಮಾಡುತ್ತಿವೆ. ದ್ವೇಷ ಭಾಷಣ ಬಿತ್ತುವ ಅಜೆಂಡಾಗಳಲ್ಲಿ ಟಿ.ವಿ ನಿರೂಪಕರೂ ಭಾಗಿಯಾಗಿರುವುದು ಅಚ್ಚರಿ ಉಂಟುಮಾಡಿದೆ’ ಎಂದಿತು.

ಮುದ್ರಣ ಮಾಧ್ಯಮಗಳಂತೆ ದೃಶ್ಯ ಮಾಧ್ಯಮಗಳಿಗೆ ‘ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ’ ಏಕಿಲ್ಲ ಎಂದೂ ಪ್ರಶ್ನಿಸಿತು

ದೆಹಲಿ ಪೊಲೀಸರಿಗೆ ‘ಸುಪ್ರೀಂ’ ಚಾಟಿ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ದ್ವೇಷ ಭಾಷಣಗಳ ವಿರುದ್ಧದ ಪ್ರಕರಣಗಳನ್ನು ದಾಖಲಿಸಲು ತೋರಿದ ವಿಳಂಬ ಮತ್ತು ತನಿಖೆಯಲ್ಲಿ ಗಣನೀಯ ಪ್ರಗತಿ ಸಾಧಿಸದಿರುವುದನ್ನು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್ ಶುಕ್ರವಾರ ದೆಹಲಿ ಪೊಲೀಸರಿಗೆ ಚಾಟಿ ಬೀಸಿದೆ.

ರಾಜಧಾನಿಯಲ್ಲಿ 2021ರಿಂದ ಇಲ್ಲಿಯವರೆಗೆ ಧಾರ್ಮಿಕ ಸಭೆಗಳಲ್ಲಿ ಮಾಡಿದ ದ್ವೇಷ ಭಾಷಣಗಳ ಕುರಿತು ದಾಖಲಿಸಿರುವ ಪ್ರಕರಣಗಳ ತನಿಖೆಯ ವಿವರ ಮತ್ತು ತನಿಖಾಧಿಕಾರಿಯ ವರದಿಯನ್ನು ಎರಡು ವಾರಗಳ ಒಳಗೆ ಸಲ್ಲಿಸುವಂತೆ ಸುಪ್ರೀಂಕೋರ್ಟ್ ದೆಹಲಿ ಪೊಲೀಸರಿಗೆ ಸೂಚಿಸಿತು.

‘2021ರ ಡಿಸೆಂಬರ್ 19ರಂದು ನಡೆದ ಘಟನೆಯ ಬಗ್ಗೆ 2022ರ ಮಾರ್ಚ್ 4ರಂದು ಎಫ್‌ಐಆರ್ ದಾಖಲಿಸಲಾಗಿದೆ. ಅಂದರೆ ಎಫ್‌ಐಆರ್ ದಾಖಲಿಸಲು ಐದು ತಿಂಗಳು ಏಕೆ ಬೇಕು? ಯಾವ ರೀತಿಯ ತನಿಖೆ ನಡೆಸುತ್ತಿದ್ದೀರಿ?’ ಎಂದು ಸಿಜೆಐ ನೇತೃತ್ವದ ಪೀಠವು ಪೊಲೀಸರನ್ನು ತೀವ್ರ ತರಾಟೆಗೆ ತೆಗೆದುಕೊಂಡಿತು.

‘ನೀವು ಏನು ಮಾಡುತ್ತಿದ್ದೀರಿ? ಎಷ್ಟು ಜನರನ್ನು ಬಂಧಿಸಿದ್ದೀರಿ? ಎಷ್ಟು ಮಂದಿ ವಿಚಾರಣೆ ನಡೆಸಿದ್ದೀರಿ’ ಎಂದು ಪೀಠವು, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ ಅವರನ್ನೂ ಕಟುವಾಗಿ ಪ್ರಶ್ನಿಸಿತು. 2021ರ ಡಿಸೆಂಬರ್ 17ರಿಂದ 19ರವರೆಗೆ ಹರಿದ್ವಾರದಲ್ಲಿ ನಡೆದ ‘ಧರ್ಮ ಸಂಸದ್’ ಮತ್ತು ಡಿಸೆಂಬರ್ 19ರಂದು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ದ್ವೇಷದ ಭಾಷಣ ಮಾಡಲಾಗಿದೆ.

ಭಾಷಣಗಳು ಸಾಮಾಜಿಕ ಜಾಲತಾಣಗಳಲ್ಲಿ ಲಭ್ಯವಿವೆ. ಆದರೆ, ಉತಾರಖಂಡ ಮತ್ತು ದೆಹಲಿ ಪೊಲೀಸರು ಅಪರಾಧಿಗಳ ವಿರುದ್ಧ ಕ್ರಮ ಕೈಗೊಂಡಿಲ್ಲವೆಂದು ದೂರಿ ಸಾಮಾಜಿಕ ಹೋರಾಟಗಾರ ತುಷಾರ್ ಗಾಂಧಿ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿತು.

ಮಕ್ಕಳ ಆಯ್ಕೆಯಂತೆಯೇ ಮೊಟ್ಟೆ ವಿತರಣೆ: ಆಯುಕ್ತರ ಸೂಚನೆ

ಬೆಂಗಳೂರು: ರಾಜ್ಯದ ಶಾಲೆಗಳಲ್ಲಿ ಮಕ್ಕಳ ಆಯ್ಕೆಯಂತೆಯೇ ಮೊಟ್ಟೆ ವಿತರಿಸಬೇಕು ಎಂದು ಶಿಕ್ಷಣ ಇಲಾಖೆ ಆಯುಕ್ತ ಆರ್.ವಿಶಾಲ್ ಸೂಚಿಸಿದ್ದಾರೆ.

ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 1ರಿಂದ 8ನೇ ತರಗತಿ ಮಕ್ಕಳಲ್ಲಿನ ಅಪೌಷ್ಟಿಕತೆ ಮತ್ತು ರಕ್ತಹೀನತೆ ಹೋಗಲಾಡಿಸಲು ವಾರದಲ್ಲಿ ಎರಡು ದಿನ ಪೌಷ್ಟಿಕ ಆಹಾರ ನೀಡಲು ಕ್ರಮ ಕೈಗೊಂಡಿದೆ. ಮಕ್ಕಳ ಆಯ್ಕೆಯಂತೆ ಮೊಟ್ಟೆ, ಶೇಂಗಾಚಿಕ್ಕಿ, ಬಾಳೆ ಹಣ್ಣು ವಿತರಿಸಲಾಗುತ್ತಿದೆ. ಕೆಲ ಶಾಲೆಗಳಲ್ಲಿ ಮಕ್ಕಳು ಮೊಟ್ಟೆಗೆ ಬೇಡಿಕೆ ಇಟ್ಟರೂ, ಕೊಡದೆ ಚಿಕ್ಕಿ, ಬಾಳೆಹಣ್ಣು ನೀಡುತ್ತಿರುವುದು ಗಮನಕ್ಕೆ ಬಂದಿದೆ. ಮಕ್ಕಳ ಆಯ್ಕೆಗೆ ವಿರುದ್ಧವಾಗಿ ನೀಡಿದರೆ ಕ್ರಮ ಕೈಗೊಳ್ಳಲಾಗುವುದು. ಈ ಕುರಿತು ಜಿಲ್ಲಾ ಪಂಚಾಯಿತಿ ಸಿಇಒ ಮೇಲ್ವಿಚಾರಣೆ ನಡೆಸಬೇಕು ಎಂದಿದ್ದಾರೆ.

ಮೊಟ್ಟೆಯನ್ನು ಬೇಯಿಸಿ ಮಕ್ಕಳಿಗೆ ನೀಡಬೇಕು. ಪ್ರಸ್ತುತ ಒಂದು ಮೊಟ್ಟೆಗೆ ₹ 6 ನೀಡಲಾಗುತ್ತಿದ್ದು, ದರ ಹೆಚ್ಚಳವಾದರೆ ಹಿಂದಿನ ಉಳಿಕೆ ಹಣ ಅಥವಾ ಎಸ್‌ಡಿಎಂಸಿ ಸಮಿತಿಯ ಹಣದಲ್ಲೇ ಭರಿಸಿಕೊಳ್ಳಬೇಕು ಎಂದು ವಿವರಿಸಿದ್ದಾರೆ.

ದೆಹಲಿ ಹೈಕೋರ್ಟ್‌ನಲ್ಲಿ ಶಂಕರ್ ಮಿಶ್ರಾ ವಾದ

‘ಮಹಿಳೆ ಮೇಲೆ ಮೂತ್ರ ಮಾಡಿಲ್ಲ’

ನವದೆಹಲಿ (ಪಿಟಿಐ): ‘ನಾನು ಮಹಿಳೆಯ ಮೇಲೆ ಮೂತ್ರ ವಿಸರ್ಜನೆ ಮಾಡಿಲ್ಲ. ಬಹುಶಃ ಬೇರೆ ಯಾರೋ ಮಾಡಿರಬಹುದು. ಆಕೆಯೇ ಮೂತ್ರ ಮಾಡಿಕೊಂಡಂತೆ ಕಾಣುತ್ತದೆ. ಎಲ್ಲಾ ಕಥಕ್ ನೃತ್ಯಗಾರರಿಗೂ ಇರುವ ಮೂತ್ರಕೋಶದ ಸಮಸ್ಯೆಯೇ ಈಕೆಗೂ ಇರಬಹುದು’- ಇದು ಶಂಕರ್ ಮಿಶ್ರಾ ಅವರ ಪರ ವಕೀಲ ರಮೇಶ್ ಗುಪ್ತಾ ಅವರು ದೆಹಲಿ ಹೈಕೋರ್ಟ್‌ನಲ್ಲಿ ಶುಕ್ರವಾರ ಮಂಡಿಸಿದ ವಾದ. ಇದರೊಂದಿಗೆ, ಏರ್ ಇಂಡಿಯಾ ವಿಮಾನದಲ್ಲಿ ವೃದ್ಧ ಮಹಿಳೆಯೊಬ್ಬರ ಮೇಲೆ ಶಂಕರ್ ಮಿಶ್ರಾ ಅವರು ಮೂತ್ರ ವಿಸರ್ಜಿಸಿದ್ದಾರೆ ಎನ್ನಲಾದ ಪ್ರಕರಣಕ್ಕೆ ಈಗ ಹೊಸ ತಿರುವು ದೊರೆತಿದೆ.

ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ವಿಮಾನದಲ್ಲಿ ನವೆಂಬರ್ 26ರಂದು ಶಂಕರ್ ಅವರು ಮಹಿಳೆ ಮೇಲೆ ಮೂತ್ರ ವಿಸರ್ಜನೆ ಮಾಡಿದ ಘಟನೆ ನಡೆದಿರುವುದಾಗಿ ದೂರು ದಾಖಲಾಗಿದೆ. ತನಿಖೆಗಾಗಿ ಶಂಕರ್ ಅವರನ್ನು ತಮ್ಮ ವಶಕ್ಕೆ ಕೊಡುವಂತೆ ಕೋರಿ ದೆಹಲಿ ಪೊಲೀಸರು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ದೆಹಲಿ ಪೊಲೀಸರು ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ.

‘ಘಟನಾವಳಿಗಳನ್ನು ಅರ್ಥ ಮಾಡಿಕೊಳ್ಳಲು ಶಂಕರ್ ಅವರ ವಿಚಾರಣೆ ಅಗತ್ಯವಾಗಿದೆ. ಆತನ ಕುಟುಂಬ ಸದಸ್ಯರು ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದರು. ಆದರೆ,ಅವರು ತಲೆಮರೆಸಿಕೊಳ್ಳಲು ಯತ್ನಿಸಿದರು. ವಿಮಾನ ಪ್ರಯಾಣಕ್ಕೂ ಮೊದಲು ಅವರು ಏನನ್ನಾದರೂ ಸೇವಿಸಿದ್ದರೆ ಇಲ್ಲವೇ ಎನ್ನುವ ಕುರಿತು ತನಿಖೆ ನಡೆಸಬೇಕಿದೆ. ತನಿಖಾ ಸಂಸ್ಥೆಗಳ ಮುಂದೆ ಅವರು ಏಕೆ ಬರುತ್ತಿಲ್ಲ ಎನ್ನುವುದರ ಕುರಿತು ಉತ್ತರ ಬೇಕಿದೆ. ತಮ್ಮ ಮೊಬೈಲ್ ಅನ್ನು ಕೂಡ ನಿಷ್ಕ್ರಿಯಗೊಳಿಸಿಕೊಂಡಿದ್ದರು’ ಎಂದು ಪೊಲೀಸರ ಪರ ವಕೀಲರು ವಾದ ಮಂಡಿಸಿದರು.

ಪೊಲೀಸರ ಅರ್ಜಿಯನ್ನು ವಜಾಗೊಳಿಸುವಂತೆ ಶಂಕರ್ ವಾದ ಮಂಡಿಸಿದರು. ವಾದ ಆಲಿಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಹರ್ಜ್ಯೋತ್ ಸಿಂಗ್ ಭಲ್ಲಾ ಅವರು ಪೊಲೀಸರ ಅರ್ಜಿಯನ್ನು ವಜಾಗೊಳಿಸಿದರು. ‘ಈ ವಾದವನ್ನು ನೀವು ಮೆಟ್ರೊ ಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಮಾಡಿದಂತಿಲ್ಲ. ಪೊಲೀಸರು ಅಲ್ಲಿಯೇ ಹೊಸ ಅರ್ಜಿ ಸಲ್ಲಿಸಬಹುದು’ ಎಂದು ಅಭಿಪ್ರಾಯಪಟ್ಟರು. ಆರೋಪಿ ಹಾಗೂ ಮಹಿಳೆಗೆ ಘಟನೆಗೂ ಮೊದಲೇ ಶತ್ರುತ್ವ ಇತ್ತೇ ಅಥವಾ ಇಬ್ಬರ ಮಧ್ಯೆ ವಾಗ್ವಾದ ನಡೆದಿತ್ತೇ ಎಂದು ನ್ಯಾಯಾಧೀಶರು ದೆಹಲಿ ಪೊಲೀಸರ ಬಳಿ ಕೇಳಿದರು. ಇದಕ್ಕೆ ‘ಇಲ್ಲ’ ಎಂದು ಪೊಲೀಸರು ಉತ್ತರಿಸಿದರು. ‘ಹಾಗಿದ್ದರೆ, ಆರೋಪಿಯನ್ನು ನೀವು ಜೈಲಿನಲ್ಲಿಯೂ ಪ್ರಶ್ನಿಸಬಹುದು’ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟರು.

ಎಎಪಿ, ಬಿಆರ್‌ಎಸ್‌ಗೆ ಇನ್ನೂ ದೊರೆಯದ ಆಹ್ವಾನ

‘ಜೋಡೊ’ ಸಮಾರೋಪ: ಜೆಡಿಎಸ್‌ಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿ ಜ. 30ರಂದು ನಡೆಯಲಿರುವ ‘ಭಾರತ್ ಜೋಡೊ’ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ನೇತೃತ್ವದ ಜೆಡಿಎಸ್‌ಗೆ ಕಾಂಗ್ರೆಸ್ ಆಹ್ವಾನ ನೀಡಿದೆ. ಆದರೆ, ಅರವಿಂದ್ ಕೇಜ್ರಿವಾಲ್ ನೇತೃತ್ವದ ಎಎಪಿ ಹಾಗೂ ಕೆ. ಚಂದ್ರಶೇಖರ್ ರಾವ್ ನೇತೃತ್ವದ ಬಿಆರ್‌ಎಸ್ ಪಕ್ಷಗಳಿಗೆ ಇನ್ನೂ ಆಹ್ವಾನ ನೀಡಿಲ್ಲ.

ಜೆಡಿಎಸ್‌ಗೆ ನೀಡಿದ ಆಹ್ವಾನದಿಂದಾಗಿ ‘ಭಾರತ್ ಜೋಡೊ’ದ ಸಮಾರೋಪದಲ್ಲಿ ಒಟ್ಟು 23 ಸಮಾನ ಮನಸ್ಕ ಪಕ್ಷಗಳ ನಾಯಕರಿಗೆ ಆಹ್ವಾನ ದೊರೆತಂತಾಗಿದೆ.

ಕಾಂಗ್ರೆಸ್ ಈ ಹಿಂದೆ ಪ್ರಕಟಿಸಿದ್ದ 21 ಆಹ್ವಾನಿತ ಸಮಾನಮನಸ್ಕ ಪಕ್ಷಗಳ ಪಟ್ಟಿಯಲ್ಲಿ ಕರ್ನಾಟಕದ ಜೆಡಿಎಸ್‌ಗೆ ಆಹ್ವಾನವಿರಲಿಲ್ಲ. ಕರ್ನಾಟಕದಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್, ಕಾಂಗ್ರೆಸ್‌ನ ಮಿತ್ರಪಕ್ಷವಾಗಿತ್ತು. ಈ ಹಿಂದೆ ಕಾಂಗ್ರೆಸ್ ಜೆಡಿಎಸ್ ಅನ್ನು ಬಿಜೆಪಿಯ ‘ಬಿ’ ಟೀಂ ಎಂದೂ ಕರೆದಿತ್ತು. ಆದರೆ, ಇತ್ತೀಚಿನ ಬೆಳವಣಿಗೆಗಳಲ್ಲಿ ಬಿಜೆಪಿಯು ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಈ ಹಿನ್ನೆಲೆಯಲ್ಲಿ ಜೆಡಿಎಸ್‌ಗೆ ಕಾಂಗ್ರೆಸ್ ಆಹ್ವಾನ ನೀಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ತೃಣಮೂಲ ಕಾಂಗ್ರೆಸ್, ಸಮಾಜವಾದಿ, ಡಿಎಂಕೆ, ಸಿಪಿಎಂ, ಸಿಪಿಐ, ಶಿವಸೇನಾ, ಜೆಡಿಯು, ಎನ್‌ಸಿಪಿ ಹಾಗೂ ಬಿಎಸ್‌ಪಿ ಸೇರಿದಂತೆ ಒಟ್ಟು 23 ಸಮಾನಮನಸ್ಕ ಪಕ್ಷಗಳ ನಾಯಕರನ್ನು ಕಾಂಗ್ರೆಸ್ ಆಹ್ವಾನಿಸಿದೆ. ಆದರೆ, ಬಿಆರ್‌ಎಸ್, ಎಎಪಿ ಜೊತೆಗೆ ವೈಎಸ್‌ಆರ್ ಕಾಂಗ್ರೆಸ್, ಬಿಜೆಡಿ, ಅಕಾಲಿ ದಳ ಮತ್ತು ಎಐಯುಡಿಎಫ್ ಅನ್ನೂ ಕಾಂಗ್ರೆಸ್ ಯಾತ್ರೆಯ ಸಮಾರೋಪಕ್ಕೆ ಇನ್ನೂ ಆಹ್ವಾನ ನೀಡಿಲ್ಲ.

ಮಮತಾ ಬ್ಯಾನರ್ಜಿ, ಅಖಿಲೇಶ್ ಯಾದವ್ ಮತ್ತು ಮಾಯಾವತಿ ಅವರಂಥ ನಾಯಕರು ರಾಹುಲ್ ಗಾಂಧಿ ಕೇಂದ್ರೀತವಾಗಿರುವ ಯಾತ್ರೆಯ ಸಮಾರೋಪದಲ್ಲಿ ಪಾಲ್ಗೊಳ್ಳುವರೇ ಎಂಬ ಪ್ರಶ್ನೆ ಎದುರಾಗಿದೆ. ಏಕೆಂದರೆ ಈ ಹಿಂದೆ ‘ಜೋಡೊ’ ಯಾತ್ರೆಯಲ್ಲಿ ಈ ನಾಯಕರು ಪಾಲ್ಗೊಂಡಿರಲಿಲ್ಲ.

ರಾಹುಲ್ ಪತ್ರ: ‘ವಿಭಜಕ ಶಕ್ತಿಗಳು ವೈವಿಧ್ಯತೆಯನ್ನು ನಮ್ಮ ವಿರುದ್ಧ ತಿರುಗಿಸಲು ಯತ್ನಿಸುತ್ತಿವೆ. ಆದರೆ, ಭಾರತವು ದ್ವೇಷವನ್ನು ತಿರಸ್ಕರಿಸುತ್ತದೆ. ಇನ್ನು ಮುಂದೆ ಕೆಟ್ಟ ಅಜೆಂಡಾ ಮುಂದುವರಿಯಲು ಸಾಧ್ಯವಿಲ್ಲ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದ್ದಾರೆ.

‘ಭಾರತ್ ಜೋಡೊ’ ಯಾತ್ರೆಯ ಮುಂದುವರಿದ ಭಾಗವಾಗಿರುವ ಪಕ್ಷದ ಮುಂಬರುವ ‘ಹಾಥ್ ಸೆ ಹಾಥ್ ಜೋಡೊ’ ಅಭಿಯಾನದ ಅಂಗವಾಗಿ ಜನರನ್ನು ಉದ್ದೇಶಿಸಿ ಪತ್ರ ಬರೆದಿರುವ ರಾಹುಲ್, ‘ಇಂದು ನಮ್ಮ ಬಹುತ್ವಕ್ಕೂ ಅಪಾಯವಿದೆ. ವಿಭಜಕ ಶಕ್ತಿಗಳು ನಮ್ಮ ವೈವಿಧ್ಯತೆಯನ್ನು ನಮ್ಮ ವಿರುದ್ಧ ತಿರುಗಿಸಲು ಪ್ರಯತ್ನಿಸುತ್ತಿವೆ. ಯಾತ್ರೆಯ ನಂತರ, ಈ ಕೆಟ್ಟ ಅಜೆಂಡಾವು ತನ್ನ ಮಿತಿಗಳನ್ನು ಹೊಂದಿದೆ ಎಂಬುದು ನನಗೆ ಮನವರಿಕೆಯಾಗಿದೆ. ಇದು ಇನ್ನು ಮುಂದೆ ಮುಂದುವರಿಯಲು ಸಾಧ್ಯವಿಲ್ಲ’ ಎಂದಿದ್ದಾರೆ.

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹಬ್ಬದ ಸಂಭ್ರಮ
ಅಮೃತಸರದ ಕಾಲೋಜೊಂದರಲ್ಲಿ ಶುಕ್ರವಾರ ವಿದ್ಯಾರ್ಥಿನಿಯರು ಸಾಂಪ್ರದಾಯಿಕ ದಿರಿಸು ತೊಟ್ಟು 'ಲೋಹ್ರಿ' ಹಬ್ಬ ಆಚರಿಸಿದರು



ಋಣಾತ್ಮಕ ಅಂಕಗಳ ಕಡಿತದ ತಪ್ಪು ಸರಿಪಡಿಸಲು ಪತ್ರ ● ಅಕ್ರಮವಾಗಿ ಪದವಿ ಪಡೆದ ನಾಲ್ವರ ವಿರುದ್ಧ ಕ್ರಮ

ಕೆಇಎ ಎಡವಟ್ಟು: 500ಕ್ಕೂ ಹೆಚ್ಚು ಉಪನ್ಯಾಸಕರು ಅತಂತ್ರ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪದವಿಪೂರ್ವ ಕಾಲೇಜುಗಳ 1,203 ಉಪನ್ಯಾಸಕರಿಗೆ ನೇಮಕಾತಿ ಆದೇಶ ನೀಡಿದ ಮೂರು ವರ್ಷಗಳ ಬಳಿಕ ಲೋಪಗಳನ್ನು ಸರಿಪಡಿಸಲು ಸರ್ಕಾರ ಮುಂದಾಗಿದ್ದು, 500ಕ್ಕೂ ಹೆಚ್ಚು ಉಪನ್ಯಾಸಕರ ಭವಿಷ್ಯ ಅತಂತ್ರವಾಗಿದೆ.

ರಾಜ್ಯದ ಪದವಿಪೂರ್ವ ಕಾಲೇಜುಗಳಲ್ಲಿ ಖಾಲಿ ಇದ್ದ ಹುದ್ದೆಗಳ ಭರ್ತಿಗೆ 2015ರ ಮೇನಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅದೇ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ 2017ರ ಫೆಬ್ರುವರಿಯಲ್ಲಿ ಮತ್ತೆ ಅರ್ಜಿ ಆಹ್ವಾನಿಸಲಾಗಿತ್ತು. 47,120 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. 2019ರಲ್ಲಿ ಅಭ್ಯರ್ಥಿಗಳ ಅರ್ಹತಾಪಟ್ಟಿ, 2020ರಲ್ಲಿ ಅಂತಿಮ ಆಯ್ಕೆ ಪಟ್ಟಿ ಬಿಡುಗಡೆ ಮಾಡಲಾಗಿತ್ತು.

> **ಹಿಂದಿ ವಿಷಯದ ನಾಲ್ವರು ಉಪನ್ಯಾಸಕರು ನಿಯಮಕ್ಕೆ ವಿರುದ್ಧವಾಗಿ ಪದವಿ ಪಡೆದಿರುವುದು ದೃಢಪಟ್ಟಿದೆ. ಉಳಿದ ವಿಷಯಗಳಲ್ಲೂ ವಿಚಾರಣೆ ನಡೆಸಲಾಗುವುದು.**
> **ರಿತೀಶ್‌ಕುಮಾರ್ ಸಿಂಗ್**
> ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

ಪರೀಕ್ಷೆ ನಡೆಸಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿಸುವಾಗ ಅಭ್ಯರ್ಥಿ ಬರೆದ ತಪ್ಪು ಉತ್ತರಕ್ಕೆ (ಋಣಾತ್ಮಕ ಅಂಕಗಳು) ನಿಯಮದಂತೆ 1/4 ರಷ್ಟು ಅಂಕಗಳನ್ನು ಕಡಿತಮಾಡಬೇಕಿತ್ತು. ಅಂದರೆ 150 ಅಂಕಗಳ ಪರೀಕ್ಷೆಯಲ್ಲಿ 100 ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಯೂ 1.50 ಅಂಕಗಳನ್ನು ಒಳಗೊಂಡಿತ್ತು. ಆದರೆ, ಪ್ರಾಧಿಕಾರ ಪ್ರತಿ ತಪ್ಪು ಉತ್ತರಕ್ಕೆ 0.375 ಅಂಕ ಕಡಿತ ಮಾಡುವ ಬದಲು 0.25 ಅಷ್ಟೇ ಕಡಿತ ಮಾಡಿತ್ತು.

ತಪ್ಪು ಉತ್ತರಗಳ ಅಂಕ ಕಡಿತದಲ್ಲಿನ ವ್ಯತ್ಯಾಸದಿಂದಾಗಿ ಅರ್ಹರಲ್ಲದ 500ಕ್ಕೂ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಇದರ ವಿರುದ್ಧ ಉದ್ಯೋಗ ವಂಚಿತ ಅಭ್ಯರ್ಥಿಗಳು ನಿರಂತರ ಹೋರಾಟ ನಡೆಸಿದ್ದರು. ಕೊನೆಗೂ ಆಗಿರುವ ಪ್ರಮಾದವನ್ನು ಸರಿಪಡಿಸಲು ಮುಂದಾಗಿರುವ ಪದವಿಪೂರ್ವ ಶಿಕ್ಷಣ ಇಲಾಖೆ, ನೇಮಕಾತಿ ಪ್ರಕ್ರಿಯೆಯಲ್ಲಿ ಮಾಡಲಾದ ಋಣಾತ್ಮಕ ಅಂಕಗಳ ತಪ್ಪು ಲೆಕ್ಕಾಚಾರವನ್ನು ಪರಿಶೀಲಿಸುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪತ್ರ ಬರೆದಿದೆ.

ಪ್ರಜಾವಾಣಿ ವಿಶೇಷ

ನಾಲ್ವರ ವಿರುದ್ಧ ಕ್ರಮಕ್ಕೆ ಸೂಚನೆ: 2022 ಏಪ್ರಿಲ್‌ಗೂ ಹಿಂದೆ ಇದ್ದ ಯುಜಿಸಿ ನಿಯಮಗಳ ಪ್ರಕಾರ ಒಬ್ಬ ವಿದ್ಯಾರ್ಥಿ ಒಂದೇ ಶೈಕ್ಷಣಿಕ ಅವಧಿಯಲ್ಲಿ ಏಕ ಕಾಲಕ್ಕೆ ಎರಡು ಪದವಿ ಪಡೆಯುವಂತಿಲ್ಲ. ಆದರೆ, ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ ಕೆಲವರು ಒಂದೇ ಶೈಕ್ಷಣಿಕ ಅವಧಿಯಲ್ಲಿ ಸ್ನಾತಕೋತ್ತರ ಪದವಿ ಹಾಗೂ ಬಿ.ಇಡಿ ಪದವಿ ಪೂರೈಸಿರುವ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಈ ಕುರಿತು ಹಿಂದಿ ಭಾಷಾ ವಿಷಯದ ಅಭ್ಯರ್ಥಿ ಕಲಬುರಗಿಯ ಮನೋಹರ ಅವರು ಸಲ್ಲಿಸಿದ ಅರ್ಜಿ ಆಧಾರದಲ್ಲಿ, ಆ ವಿಷಯದಲ್ಲಿ ನಿಯಮಬಾಹಿರವಾಗಿ ಪದವಿ ಪಡೆದಿದ್ದ ನಾಲ್ವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಸೂಚಿಸಿದೆ.

‘20 ವಿಷಯಗಳಿಗೆ ಉಪನ್ಯಾಸಕರ ನೇಮಕಾತಿ ನಡೆದಿದೆ. ಅರ್ಜಿ ಸಲ್ಲಿಸಿದ ಹಿಂದಿ ವಿಷಯದಲ್ಲಷ್ಟೆ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಿದೆ. ಉಳಿದ ವಿಷಯಗಳಲ್ಲೂ ಇಂತಹ 200ಕ್ಕೂ ಹೆಚ್ಚು ಅಭ್ಯರ್ಥಿಗಳಿದ್ದಾರೆ. ನೇಮಕಾತಿಯ ಎಲ್ಲ ನ್ಯೂನತೆಗಳ ಕುರಿತು ತನಿಖೆ ನಡೆಸಬೇಕು. ಅಲ್ಲಿಯವರೆಗೂ ನೇಮಕವಾದ ಉಪನ್ಯಾಸಕರ ಸೇವೆ ಕಾಯಂ ಮಾಡಬಾರದು’ ಎಂದು ಉದ್ಯೋಗ ವಂಚಿತ ಮನೋಹರ್ ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

ಹರಜಾತ್ರಾ ಮಹೋತ್ಸವಕ್ಕೆ ಸಿದ್ಧತೆ

ಹರಿಹರ: ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರು ಪೀಠದಲ್ಲಿ ಜ.14 ಹಾಗೂ 15ರಂದು ನಡೆಯಲಿರುವ ಹರಜಾತ್ರಾ ಮಹೋತ್ಸವ–2023ಕ್ಕೆ ಭರದ ಸಿದ್ಧತೆ ನಡೆದಿದೆ.

ಪೀಠದ ವಚನಾನಂದ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಮಹೋತ್ಸವಕ್ಕೆ ಎರಡು ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ. ಪಂಚಮಸಾಲಿ ಸಮುದಾಯದವರಿಗೆ 2 ‘ಎ’ ಮೀಸಲಾತಿ, ಕೇಂದ್ರದ ಇತರೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಸಮುದಾಯದಿಂದ ಬೇಡಿಕೆ ಇರುವುದರಿಂದ ಈ ಬಾರಿಯ ಜಾತ್ರೆಯನ್ನು ‘ಜನಜಾಗೃತಿ’ ಸಮಾವೇಶದ ಹೆಸರಿನಲ್ಲಿ ಆಯೋಜಿಸಲಾಗಿದೆ.

ಜ. 14ರಂದು ಬೆಳಿಗ್ಗೆ 8ಕ್ಕೆ ಗುರುಪೀಠದಿಂದ 1 ಕಿ.ಮೀ. ದೂರದ ಬೈಪಾಸ್ ಸರ್ಕಲ್‌ನಿಂದ ಬೃಹತ್ ಪೂರ್ಣಕುಂಭ ಮೆರವಣಿಗೆ ಆರಂಭವಾಗಲಿದೆ. ಬೆಳಿಗ್ಗೆ 11ಕ್ಕೆ ಜನಜಾಗೃತಿ ಸಮಾವೇಶ ಆರಂಭವಾಗಲಿದೆ. ಮಧ್ಯಾಹ್ನ 3ಕ್ಕೆ ನಡೆಯುವ ‘ರೈತ ರತ್ನ’ ಸಮಾವೇಶದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ ಸೇರಿ ಅನೇಕರು ಭಾಗವಹಿಸುವರು.

ಭಾನುವಾರ ಸಿದ್ಧೇಶ್ವರ ಸ್ವಾಮೀಜಿಗಳಿಗೆ ‘ಜ್ಞಾನಯೋಗಿ ನುಡಿನಮನ’ ಆಯೋಜಿಸಲಾಗಿದೆ. ಮಧ್ಯಾಹ್ನ 3ಕ್ಕೆ ವಚನಾನಂದ ಶ್ರೀಗಳ ಪಂಚಮ ಪೀಠಾರೋಹಣ ನಡೆಯಲಿದ್ದು, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾಗವಹಿಸುವರು.

‘ಲಿಂಗಾಯತ ಧರ್ಮ ಹೋರಾಟ ನಿಲ್ಲದು’



ಕೂಡಲಸಂಗಮ (ಬಾಗಲಕೋಟೆ): ‘ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟವು ಯಾವ ಧರ್ಮವನ್ನೂ ಒಡೆದಿಲ್ಲ. ಮತಗಟ್ಟೆ ರಾಜಕಾರಣದಿಂದಾಗಿ ಹಾಳಾಯಿತು. ಪ್ರತ್ಯೇಕ ಧರ್ಮದ ಮಾನ್ಯತೆ ಸಿಗುವವರೆಗೆ ಕಾನೂನು ಹೋರಾಟ ಮುಂದುವರಿಯಲಿದೆ’ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಹೇಳಿದರು.

ಕೂಡಲಸಂಗಮದ ಬಸವ ಧರ್ಮ ಪೀಠ ಆವರಣದಲ್ಲಿ ಶುಕ್ರವಾರ 36ನೇ ಶರಣ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ನಮ್ಮ ಬೇಡಿಕೆಯ ಆಗ್ರಹ ಇರುವುದು ಯಾವುದೇ ರಾಜಕೀಯ ಪಕ್ಷದ ಜತೆಗಲ್ಲ; ಸರ್ಕಾರದೊಂದಿಗೆ’ ಎಂದರು.

‘ತೆಲಂಗಾಣ, ಮಹಾರಾಷ್ಟ್ರದ ಸಂಸದರು ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ಮಾನ್ಯತೆ ನೀಡಬೇಕು ಎಂದು ಸಂಸತ್ತಿನಲ್ಲಿ ಮಾತನಾಡುತ್ತಾರೆ. ರಾಜ್ಯದ 28 ಜನ ಸಂಸದರಿಗೆ ಏನಾಗಿದೆ’ ಎಂದು ಪ್ರಶ್ನಿಸಿದರು.

ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಶರಣ ಮೇಳ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ತೇಜಸ್ವಿನಿ ಅನಂತಕುಮಾರ ಅವರಿಗೆ ₹1 ಲಕ್ಷ ನಗದನ್ನು ಒಳಗೊಂಡಿರುವ ‘ಬಸವಾತ್ಮಜೆ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪರ್ಯಾಯ ಮೇಳ: ಕೂಡಲಸಂಗಮ ಸಮೀಪದ ಹೂವನೂರ ಬಳಿ ನಡೆದ ಪರ್ಯಾಯ ಸ್ವಾಭಿಮಾನಿ ಶರಣ ಮೇಳವನ್ನು ಸ್ವಾಭಿಮಾನಿ ಶರಣ ಮೇಳ ಸಮಿತಿಯ ಅಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ ಉದ್ಘಾಟಿಸಿದರು. ಬೀದರ ಬಸವ ಮಂಟಪದ ಮಾತೆ ಸತ್ಯಾದೇವಿ ಇದ್ದರು.

‘ಸಿದ್ದರಾಮಯ್ಯಗೆ ಸತ್ಯ ಎದುರಿಸುವ ಧೈರ್ಯವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದು ನಿಜಕನಸು’ ಪುಸ್ತಕ ವೈಯಕ್ತಿಕ ತೇಜೋವಧೆಯ ಪುಸ್ತಕವಲ್ಲ. ರಾಜಕೀಯವಾಗಿ ಅವರ ದ್ವಂದ್ವಗಳನ್ನು ಪ್ರಶ್ನಿಸುವ ಪುಸ್ತಕವಾಗಿತ್ತು. ಆ ಪುಸ್ತಕವನ್ನು ಓದದೇ ಸಿದ್ದರಾಮಯ್ಯ ಹೆದರಿಕೊಂಡು ಓಡಿ ಹೋಗಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದರು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

‘ಪುಸ್ತಕದಲ್ಲಿ ಆಕ್ಷೇಪಾರ್ಹ ವಿಷಯ ಇದಿದ್ದರೆ ಮಾನನಷ್ಟ ಹೂಡಬಹುದಿತ್ತು. ಆದರೆ, ಅವರಿಗೆ ಸತ್ಯವನ್ನು ಎದುರಿಸುವ ಧೈರ್ಯವೇ ಇಲ್ಲ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇನ್ನು ಮುಂದೆಯಾದರೂ ಬೇರೆಯವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುವಾಗ ಸಿದ್ದರಾಮಯ್ಯ ಯೋಚಿಸಬೇಕು ಎಂದರು.

‘65 ವರ್ಷ ಆದಾಗ ಇದೇ ನನ್ನ ಕೊನೆ ಚುನಾವಣೆ, ಮುಂದೆ ಸ್ಪರ್ಧಿಸುವುದಿಲ್ಲ ಎಂದಿದ್ದರು. ಈಗ 75 ವರ್ಷ ಆದರೂ ರಾಜಕೀಯದಿಂದ ನಿವೃತ್ತಿ ಆಗುತ್ತಿಲ್ಲ. ರಾಜಕೀಯದಲ್ಲೇ ಉಳಿಯುತ್ತೇನೆ ಎನ್ನುವ ಮೂಲಕ ‘ಸ್ಟೇ ರಾಮಯ್ಯ’ ಆಗಿದ್ದಾರೆ’ ಎಂದರು.

ಡಾ.ವಿಷ್ಣುವರ್ಧನ್ ಸ್ಮಾರಕ ಭವನ ಉದ್ಘಾಟನೆಗೆ ಮುಹೂರ್ತ, ಅಭಿಮಾನಿಗಳ ಸಂಭ್ರಮ

‘13 ವರ್ಷಗಳ ಹೋರಾಟ ಸಾರ್ಥಕ’

ಪ್ರಜಾವಾಣಿ ವಾರ್ತೆ

ಮೈಸೂರು: ಚಲನಚಿತ್ರ ನಟ ದಿ. ವಿಷ್ಣುವರ್ಧನ್ ಅವರ ಸ್ಮಾರಕದ ಉದ್ಘಾಟನೆಗೆ ಮುಹೂರ್ತ ನಿಗದಿಯಾಗಿರುವುದು ಅವರ ಅಭಿಮಾನಿಗಳಲ್ಲಿ ಸಂತಸ ಮೂಡಿಸಿದೆ.

ಕಲಿಕೆಯ ತಾಣವಾಗುವ ಮಹತ್ವಾಕಾಂಕ್ಷೆಯೊಂದಿಗೆ ಜಿಲ್ಲೆಯ ಎಚ್‌.ಡಿ.ಕೋಟೆ ರಸ್ತೆಯಲ್ಲಿರುವ ಉದ್ಬೂರು ಬಳಿಯ ಹಾಲಾಳು ಗ್ರಾಮದಲ್ಲಿ ‘ಸಾಹಸ ಸಿಂಹ ದಿ. ಡಾ.ವಿಷ್ಣುವರ್ಧನ್ ಸ್ಮಾರಕ ಭವನ’ ನಿರ್ಮಾಣವಾಗಿದೆ. ಅಂತಿಮ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ.

2020ರ ಸೆ.15ರಂದು ಸ್ಮಾರಕ ನಿರ್ಮಾಣಕ್ಕೆ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವರ್ಚುವಲ್ ವೇದಿಕೆಯಲ್ಲಿ ಭೂಮಿ ಪೂಜೆ ನೆರವೇರಿಸಿದ್ದರು. ಕರ್ನಾಟಕ ಪೊಲೀಸ್ ವಸತಿ ನಿಗಮವು ₹ 11 ಕೋಟಿ ವೆಚ್ಚದಲ್ಲಿ ಸ್ಮಾರಕ ನಿರ್ಮಿಸಿದೆ. 5 ಎಕರೆಯಲ್ಲಿ ಸ್ಮಾರಕವಿದೆ. ಎರಡು ಎಕರೆಯಲ್ಲಿ ತಳಮಹಡಿ, ನೆಲಮಹಡಿ ಸೇರಿ ಒಟ್ಟು 27ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಸ್ಮಾರಕ ಕಟ್ಟಡ ತಲೆ ಎತ್ತಿದೆ. ವಿಷ್ಣುವರ್ಧನ್ ಅವರು ನಿಂತಿರುವ ಭಂಗಿಯ ಪ್ರತಿಮೆಯನ್ನು ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೃಷ್ಣಶಿಲೆಯಲ್ಲಿ ಕೆತ್ತಿದ್ದಾರೆ. ಸ್ಮಾರಕವನ್ನು ‘ಎಂ9 ಡಿಸೈನ್ ಸ್ಟುಡಿಯೊ’ದ ನಿಶ್ಚಲ್ ಅವರು ವಿನ್ಯಾಸಗೊಳಿಸಿದ್ದಾರೆ. ಸಭಾಂಗಣ, ಕಲಾವಿದರ ಕೊಠಡಿ, ತರಗತಿಗಳೂ ಇವೆ. ಸ್ಮಾರಕ ಉದ್ಘಾಟನೆಗೊಳ್ಳುವಾಗ ಇಲ್ಲಿ ವಿಷ್ಣುವರ್ಧನ್ ಅವರ ಚಿತಾಭಸ್ಮವನ್ನೂ ತಂದಿಡಲಾಗುತ್ತದೆ. ಮೈಸೂರಿನ ಪ್ರವಾಸಿ ತಾಣಗಳ ಪಟ್ಟಿಗೆ ಮತ್ತೊಂದು ಸೇರ್ಪಡೆಯಾಗಲಿದೆ.

‘ಜ.29ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್‌.ಟಿ.ಸೋಮಶೇಖರ್ ಸೇರಿದಂತೆ ಜನಪ್ರತಿನಿಧಿಗಳು ಭಾಗವಹಿಸುವರು. ಆರಂಭದಲ್ಲಿ ಫೋಟೊ ಗ್ಯಾಲರಿ, ಪ್ರತಿಮೆ, ಥಿಯೇಟರ್ ಉದ್ಘಾಟಿಸುವರು. ಬಳಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಥಿಯೇಟರ್ ಒಳಗೆ 250 ಮಂದಿಯಷ್ಟೆ ಕುಳಿತುಕೊಳ್ಳಲು ಸಾಧ್ಯವಿರುವುದರಿಂದ ಹೊರಭಾಗದಲ್ಲಿ ಕಾರ್ಯಕ್ರಮ ನಡೆಸುವ ಸಂಬಂಧ ಶೀಘ್ರದಲ್ಲೇ ಸಭೆ ನಡೆಸಿ ತೀರ್ಮಾನಿಸಲಾಗುವುದು’ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಡಾ.ವಿಷ್ಣುವರ್ಧನ್ ಪ್ರತಿಷ್ಠಾನದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘13 ವರ್ಷಗಳ ಹೋರಾಟ, ಸಂಘರ್ಷದ ಬಳಿಕ ಸಂತಸದ ದಿನ ಬಂದಿದೆ. ಸ್ಮಾರಕದ ಸ್ಥಳಕ್ಕೆ ಭಾರತಿ ವಿಷ್ಣುವರ್ಧನ್ ಅವರೊಂದಿಗೆ ಆಗಾಗ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳುತ್ತಿದ್ದೇವೆ’ ಎಂದು ವಿಷ್ಣುವರ್ಧನ್ ಅಳಿಯ, ನಟ ಅನಿರುದ್ಧ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಳ್ಳೆಯವರಿಗೆ ತಡವಾಗಿ ಒಳ್ಳೆಯದಾಗುತ್ತದೆ, ಅದು ಶಾಶ್ವತವಾಗಿರುತ್ತದೆ ಎಂದು ವಿಷ್ಣುವರ್ಧನ್ ಹೇಳುತ್ತಿದ್ದರು. ಅದರಂತೆ ಅಂತರರಾಷ್ಟ್ರೀಯ ಮಟ್ಟದ ಸ್ಮಾರಕ ಚೆನ್ನಾಗಿ ಮೂಡಿಬಂದಿದೆ. ಅವರ ಕೋಟ್ಯಂತರ ಅಭಿಮಾನಿಗಳಿಗೆ ಖುಷಿ ನೀಡಿದೆ’ ಎಂದು ವಿಷ್ಣು ಸೇನಾ ಜಿಲ್ಲಾ ಮತ್ತು ಗ್ರಾಮಾಂತರ ಘಟಕದ ಅಧ್ಯಕ್ಷ, ನಿರ್ಮಾಪಕ ಎಂ.ಡಿ.ಪಾರ್ಥಸಾರಥಿ ಹೇಳಿದರು.



ಮೈಸೂರಿನ ಎಚ್‌.ಡಿ.ಕೋಟೆ ರಸ್ತೆಯಲ್ಲಿರುವ ಉದ್ಬೂರು ಬಳಿಯ ಹಾಲಾಳು ಗ್ರಾಮದ ವಿಷ್ಣು ಸ್ಮಾರಕದಲ್ಲಿ ವಿಷ್ಣು ಪ್ರತಿಮೆಯ ಕೆಲಸದಲ್ಲಿ ನಿರತರಾಗಿರುವ ಕಾರ್ಮಿಕರು – ಪ್ರಜಾವಾಣಿ ಚಿತ್ರ/ ಹಂಪಾ ನಾಗರಾಜ

ಮೈಸೂರಿನಿಂದ ಸ್ಮಾರಕದವರೆಗೆ ಮೆರವಣಿಗೆ

‘ಜ.29ರಂದು ಬೆಳಿಗ್ಗೆ ಅಭಿಮಾನಿಗಳು ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ ವಿಷ್ಣುವರ್ಧನ್ ಭಾವಚಿತ್ರವನ್ನು ಹೂವಿನ ಪಲ್ಲಕ್ಕಿಯಲ್ಲಿರಿಸಿ ಬೆಳ್ಳಿ ರಥದಲ್ಲಿ ಸ್ಮಾರಕದವರೆಗೆ ಮೆರವಣಿಗೆ ಮಾಡಲಾಗುವುದು. ಒಂದು ಲಕ್ಷ ಜನ ಸೇರಿಸುವ ಉದ್ದೇಶವಿದೆ. ಈ ಬಗ್ಗೆ ಸಭೆ ನಡೆಸಿ ಯೋಜನೆ ರೂಪಿಸಲಾಗುವುದು’ ಎಂದು ಎಂ.ಡಿ.ಪಾರ್ಥಸಾರಥಿ ಹೇಳಿದರು.

‘ನಮ್ಮ ಮನವಿಗಳನ್ನು ಸರ್ಕಾರ ಈಡೇರಿಸಿದೆ. ಕೋಟೆ ಆಂಜನೇಯ ದೇವಸ್ಥಾನದ ಬಳಿಯ ಉದ್ಯಾನಕ್ಕೆ ವಿಷ್ಣುವರ್ಧನ್ ಉದ್ಯಾನ ಎಂದು ಅಧಿಕೃತವಾಗಿ ನಾಮಕರಣ ಮಾಡಬೇಕು’ ಎಂದು ಕೋರಿದರು.

2010–11ರಲ್ಲೇ ಅನುದಾನ

2009ರ ಡಿ.30ರಂದು ಮೈಸೂರಿನಲ್ಲಿ ಮೃತಪಟ್ಟ ವಿಷ್ಣುವರ್ಧನ್ ಅಂತ್ಯಕ್ರಿಯೆ ಬೆಂಗಳೂರಿನ ಅಭಿಮಾನ್ ಸ್ಟುಡಿಯೊದಲ್ಲಿ ನೆರವೇರಿತ್ತು. ಅಭಿಮಾನಿಗಳು, ಕುಟುಂಬದವರ ಒತ್ತಾಸೆಯಂತೆ ಸ್ಮಾರಕ ಭವನ ನಿರ್ಮಾಣಕ್ಕಾಗಿ ಅಂದಿನ ಸರ್ಕಾರ 2010–11ರ ಬಜೆಟ್‌ನಲ್ಲಿ ₹ 11 ಕೋಟಿ ಅನುದಾನ ಮೀಸಲಿರಿಸಿ ಜಾಗ ಘೋಷಿಸಿತ್ತು.

ಆರಂಭದಿಂದಲೂ ಸ್ಮಾರಕಕ್ಕೆ ಜಾಗದ ತಕರಾರು ಕಂಟಕವಾಗಿ ಕಾಡಿತು. ಕೊನೆಗೆ, ಭಾರತಿ ಅವರು ಮೈಸೂರಿನಲ್ಲೇ ಜಾಗ ಕೋರಿದ ಬಳಿಕ 5 ಎಕರೆ ಭೂಮಿಯನ್ನು ಸರ್ಕಾರ ನೀಡಿತು. ವಿಷ್ಣುಗೆ ಪ್ರಿಯವಾದ ಮೈಸೂರಿನಲ್ಲೇ ಸ್ಮಾರಕ ಮೈದಳೆದಿದೆ.

ಸಾಲಬಾಧೆ: ಮಕ್ಕಳೊಂದಿಗೆ ರೈತ ಆತ್ಮಹತ್ಯೆ

ಭಾಲ್ಕಿ (ಬೀದರ್): ಸಾಲ ತೀರಿಸಲಾಗದೇ ತಾಲ್ಲೂಕಿನ ಲಂಜವಾಡ ಗ್ರಾಮದ ರೈತ ವಿಕ್ರಂ ಜಾಲೀಂದರ್ ಬಿರಾದಾರ (36) ತಮ್ಮ ಇಬ್ಬರು ಮಕ್ಕಳಾದ ಸುದರ್ಶನ (8) ಮತ್ತು ಸಂಗಮೇಶ (6) ಜೊತೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಗುರುವಾರ ರಾತ್ರಿ ನಡೆದಿದೆ.

‘ಬ್ಯಾಂಕ್ ಸೇರಿದಂತೆ ಖಾಸಗಿಯಾಗಿ ವಿಕ್ರಂ ₹ 8 ಲಕ್ಷ ಸಾಲ ಮಾಡಿದ್ದರು’ ಎಂದು ಭಾಲ್ಕಿ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬಸವೇಶ್ವರ ರಥೋತ್ಸವ, ಕಣ್ಮನ ಸೆಳೆವ ಉತ್ಸವ



ಕೆಂಗೇರಿ ಹೋಬಳಿ ನೈಸ್ ಕಾರಿಡಾರ್ ಸೋಂಪುರ ಬಳಿಯ ಚೆನ್ನವೀರಯ್ಯನಪಾಳ್ಯದಲ್ಲಿ ಕೆ.ಆರ್.ಐ.ಡಿ.ಎಲ್ ಅಧ್ಯಕ್ಷ ಮತ್ತು ಬಿಜೆಪಿ ನಾಯಕ ಎಂ.ರುದ್ರೇಶ್ ಅವರ ನೇತೃತ್ವದಲ್ಲಿ ಜ.14, 15 ರಂದು ನಡೆಯಲಿರುವ 16 ವರ್ಷದ ಶ್ರೀ ಬಸವೇಶ್ವರ ಸ್ವಾಮಿ ದೇವಾಸ್ಥಾನದ ಬಸವ ಉತ್ಸವ ಮತ್ತು ಕಡಲೆಕಾಯಿ ಪರಿಷೆಗೆ-ಜಾನಪದ ಜಾತ್ರೆಗೆ ಭರದ ಸಿದ್ದತೆ ನಡೆದಿದೆ.

ಯಶವಂತಪುರ ವಿಧಾನಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಸೋಂಪುರ ಜಾತ್ರೆ ಎಂದೇ ಪ್ರಸಿದ್ಧಿ ಪಡೆದಿರುವ ಬಸವೇಶ್ವರಸ್ವಾಮಿ ಕಡಲೇಕಾಯಿ ಪರಿಷೆಯಲ್ಲಿ ಲಕ್ಷಾಂತರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಲಕ್ಷಾಂತರ ಮಂದಿ ಸೇರುವ ಜಾತ್ರೆಯಲ್ಲಿ ಬೆಳಗ್ಗೆ 7ರಿಂದಲೇ ಅನ್ನದಾಸೋಹ ಆರಂಭವಾಗಲಿದೆ. ಪ್ರತಿ ವರ್ಷ ದೇವಾಲಯಕ್ಕೆ ಒಂದೊಂದು ಪರಿಕಲ್ಪನೆಯಲ್ಲಿ ವಿಶೇಷವಾದ ಹೂವಿನ ಅಲಂಕಾರವನ್ನು ಮಾಡಲಾಗುತ್ತದೆ. ಈ ಬಾರಿಯೂ ವಿಶೇಷವಾದ ಹೂವಿನ ಅಲಂಕಾರ ನಡೆಯಲಿದೆ. ಭಕ್ತರಿಗೆ ಗಿಣ್ಣಿನಿಂದ ತಯಾರಿಸಿದ ಪ್ರಸಾದ ವಿಯೋಗ ಹಾಗೂ ಉಚಿತವಾಗಿ ಗೆಣಸು, ಕಡೆಲೆಕಾಯಿ ಹಾಗೂ ಕಬ್ಬು ವಿತರಣೆ ಜಾತ್ರೆಯ ಗೈರತ್ತನ್ನು ಮತ್ತಷ್ಟು ಹೆಚ್ಚಿಸಲಿದೆ. ಕಾಳಮ್ಮ ಮಲ್ಲೇಶಯ್ಯ ಫೌಂಡೇಶನ್, ಶ್ರೀ ಬಸವಣ್ಣ ದೇವರ ಸಮಿತಿ(ಶ್ರೀ ಬಸವೇಶ್ವರ ಭಕ್ತ ಮಂಡಳಿ) ವತಿಯಿಂದ ಉತ್ಸವ ನಡೆಯಲಿದೆ.

ಮೊದಲ ಬಾರಿಗೆ ರಥೋತ್ಸವ: ಕಡಲೆಕಾಯಿ ಪರಿಷೆಯ ಜತೆಗೆ ಇದೇ ಮೊದಲ ಬಾರಿಗೆ ಬಸವೇಶ್ವರಸ್ವಾಮಿ ರಥೋತ್ಸವ ಮತ್ತು ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿಯನ್ನು ಏರ್ಪಡಿಸಿರುವುದು ಈ ಬಾರಿಯ ಮತ್ತೊಂದು ವಿಶೇಷತೆಯಾಗಿದೆ. ಜ.15(ಭಾನುವಾರ) ಮಧ್ಯಾಹ್ನ 12 ಗಂಟೆಗೆ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ನಡೆಯಲಿದ್ದು, ಈ ಸಮಾರಂಭದ ದಿವ್ಯ ಸಾನಿಧ್ಯವನ್ನು ಮೈಸೂರು ಸುತ್ತೂರು ಮಠದ ಶ್ರೀ ದೇಶಿಕೇಂದ್ರ ಮಹಾಸ್ವಾಮೀಜಿ, ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗಾ ಮಹಾಸ್ವಾಮೀಜಿ, ಕನಕಪುರ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮೀಜಿ, ಕನಕಪುರ ಮರಳೇಗವಿ ಮಠದ ಶ್ರೀ ಶಿವರುದ್ರ ಮಹಾಸ್ವಾಮೀಜಿಯವರು ವಹಿಸಲಿದ್ದಾರೆ. ಹರಗುರು ಚರಮೂರ್ತಿಗಳವರ ಸಾನಿಧ್ಯದಲ್ಲಿ ವಿಜಯೇಂದ್ರ ಯಡಿಯೂರಪ್ಪ ಅವರ ಕುಟುಂಬದವರಿಂದ ಬಸವೇಶ್ವರಸ್ವಾಮಿ ದೇವಾಸ್ಥಾನಕ್ಕೆ ರಥ ಸಮರ್ಪಣೆ ನಡೆಯಲಿದೆ. ಇನ್ನು ಪ್ರತಿ ವರ್ಷ ರಥೋತ್ಸವ ನಡೆಲಿದೆ.

ರಥ ಸಮರ್ಪಣೆ: ವಿಜಯೇಂದ್ರ ಯಡಿಯೂರಪ್ಪ ಅವರು, ಶ್ರೀಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಒಮ್ಮೆ ಗಿರಿಜಾ ಕಲ್ಯಾಣೋತ್ಸವ ಮಾಡಿಸಿದ್ದರು. ಅದೇ ವರ್ಷ ಅವರ ತಂದೆ ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿ ಪಟ್ಟವನ್ನು ಅಲಂಕರಿಸಿದರು. ದೇವಾಲಯಕ್ಕೆ ಮರದಿಂದ ತಯಾರಿಸಿದಂತಹ ರಥವನ್ನು ಸಮರ್ಪಣೆ ಮಾಡುತ್ತಿದ್ದಾರೆ.

ಮೊದಲ ಬಾರಿಗೆ ಕುಸ್ತಿ ಪಂದ್ಯಾವಳಿ: ಕಾಳಮ್ಮ ಮಲ್ಲೇಶಯ್ಯ ಫೌಂಡೇಶನ್ ಹಾಗೂ ರಾಮನಗರ ಜಿಲ್ಲಾ ಅಮೇಚೂರ್ ಕುಸ್ತಿ ಸಂಘದ ಸಂಯುಕ್ತ ಆಶ್ರಯದಲ್ಲಿ ಕಡಲೆಕಾಯಿ ಪರಿಷೆ ಮತ್ತು ಬಸವೇಶ್ವರಸ್ವಾಮಿ ರಥೋತ್ಸವ ಪ್ರಯುಕ್ತ ಪುರುಷರ ಮತ್ತು ಮಹಿಳೆಯರ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಜ.14 ರಂದು ನಡೆಯಲಿದ್ದು ಅಂತಿಮ ಪಂದ್ಯಾವಳಿ ಜ.15 ರ ಮಧ್ಯಾಹ್ನ ನಡೆಲಿದ್ದು, ಅದೇ ದಿನ ಬಹುಮಾನ ವಿತರಣೆ ನಡೆಯಲಿದೆ. ಪಂದ್ಯಾವಳಿಯಲ್ಲಿ ಭಾಗವಹಿಸಲು ಈಗಾಗಲೇ ಸುಮಾರು 500 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ ಯಡಿಯೂರಪ್ಪ ಮಾಡಲಿದ್ದಾರೆ. ಚಲನಚಿತ್ರ ನಟರಾದ ದುನಿಯಾ ವಿಜಯ್ ಮತ್ತು ಲವ್ಲಿ ಸ್ಟಾರ್ ಪ್ರೇಮ್ ಬಹುಮಾನವನ್ನು ವಿತರಣೆ ಮಾಡಲಿದ್ದಾರೆ. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಹಕಾರ ಸಚಿವ (ಸ್ಥಳೀಯ ಶಾಸಕ) ಎಸ್.ಟಿ.ಸೋಮಶೇಖರ್, ನೈಸ್ ಸಂಸ್ಥೆಯ ಮುಖ್ಯಸ್ಥ ಹಾಗೂ ಮಾಜಿ ಶಾಸಕ ಅಶೋಕ್ ಖೇಣಿ, ಭಾರತೀಯ ಕುಸ್ತಿ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಎನ್.ಪ್ರಸೂದ್ ಮತ್ತು ಕರ್ನಾಟಕ ರಾಜ್ಯ ಕುಸ್ತಿ ಸಂಘದ ಅಧ್ಯಕ್ಷ ಹಾಗೂ ನಟಿ ಅನುಷ್ಕಾ ಶೆಟ್ಟಿ ಸಹೋದರ ಬೆಳ್ಳಿಪಾಡಿ ಗುಣರಂಜನ್ ಶೆಟ್ಟಿ ಭಾಗವಹಿಸಲಿದ್ದಾರೆ.






ಬಸವ ಉತ್ಸವ, ಕಡಲೆಕಾಯಿ ಪರಿಷೆಗೆ ಜಾನಪದ ಜಾತ್ರೆಗೆ ಭರದ ಸಿದ್ಧತೆ

- ಜ.15 ರಂದು ನಡೆಯಲಿರುವ ಉತ್ಸವ
- ಮೊದಲ ಬಾರಿಗೆ ರಥೋತ್ಸವ ಮತ್ತು ಕುಸ್ತಿ ಪಂದ್ಯಾವಳಿ

ಪ್ರಮುಖಾಂಶಗಳು

- 16 ನೇ ವರ್ಷದ ಬಸವೇಶ್ವರಸ್ವಾಮಿ ದೇವಸ್ಥಾನದ ಉತ್ಸವ
- ಬಿಜೆಪಿ ನಾಯಕ ಎಂ.ರುದ್ರೇಶ್ ಅವರ ನೇತೃತ್ವದಲ್ಲಿ ನಡೆಯಲಿರುವ ಜಾತ್ರೆ
- ದೇವಾಲಯಕ್ಕೆ ರಥ ಸಮರ್ಪಣೆ ಮಾಡಲಿರುವ ವಿಜಯೇಂದ್ರ
- ಉತ್ಸವದಲ್ಲಿ ಭಾಗಿಯಾಗಲಿರುವ ಯಡಿಯೂರಪ್ಪ ಕುಟುಂಬ
- ಇದೇ ಮೊದಲ ಬಾರಿಗೆ ನಡೆಯಲಿರುವ ರಥೋತ್ಸವ
- ಪುರುಷಮಹಿಳೆಯರಿಗಾಗಿ ಕುಸ್ತಿ ಪಂದ್ಯಾವಳಿ ಆಯೋಜನೆ
- ಗೆದ್ದವರಿಗೆ ಸಿಗಲಿದೆ ಬೆಳ್ಳಿ ಗದೆ ಬಹುಮಾನ ವಿತರಣೆ
- ಬಹುಮಾನ ವಿತರಣೆ ಮಾಡಲಿರುವ ದುನಿಯಾ ವಿಜಿ, ಪ್ರೇಮ್
- ಮುಖ್ಯ ಅತಿಥಿಯಾಗಿ ಸಚಿವ ಸೋಮಶೇಖರ್ ಆಗಮನ
- ಒಂದು ಲಕ್ಷಕ್ಕೂ ಅಧಿಕ ಜನರು ಸೇರುವ ನಿರೀಕ್ಷೆ
- ಉಚಿತ ಕಡೆಲೆಕಾಯಿ ಹಾಗೂ ಕಬ್ಬು ವಿತರಣೆ
- ಭಕ್ತರಿಗಾಗಿ ಅನ್ನ ದಾಸೋಹ ಕಾರ್ಯಕ್ರಮ





ಗ್ರಾಮೀಣ ಸೊಗಡನ್ನು ಉಳಿಸಿ ಬೆಳೆಸುವ ನಿಟ್ಟನಲ್ಲಿ ಜಾತ್ರಾ ಮಹೋತ್ಸವ ಹಾಗೂ ಕಡಲೆಕಾಯಿ ಪರಿಷೆಯನ್ನು ಕಳೆದ 16 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ವಿಜಯೇಂದ್ರ ಯಡಿಯೂರಪ್ಪ ಕುಟುಂಬದವರು ದೇವಾಲಯಕ್ಕೆ ರಥವನ್ನು ಸಮರ್ಪಿಸುತ್ತಿದ್ದು, ಹೀಗಾಗಿ ಈ ವರ್ಷದಿಂದ ಬಸವೇಶ್ವರ ಸ್ವಾಮಿ ರಥೋತ್ಸವವನ್ನು ಆಚರಿಸಲಾಗುತ್ತಿದೆ. ಜತೆಗೆ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಈ ಬಾರಿ ಲಕ್ಷಕ್ಕೂ ಅಧಿಕ ಭಕ್ತರು ಆಗಮಿಸುವ ನಿರೀಕ್ಷೆಯಿದೆ.

ಎಂ.ರುದ್ರೇಶ್, ಕೆಆರ್‌ಐಡಿಎಲ್ ಅಧ್ಯಕ್ಷ, ಬಿಜೆಪಿ ನಾಯಕ



ಬೆಳ್ಳಿ ಗದೆ ಬಹುಮಾನ

ಕುಸ್ತಿ ಪಂದ್ಯದಲ್ಲಿ ವಿಜೇತರಾದವರಿಗೆ ಒಟ್ಟು 6 ಬೆಳ್ಳಿ ಗದೆ ಬಹುಮಾನವನ್ನು ನೀಡಲಾಗುತ್ತಿದೆ. ಪ್ರಥಮ, ದ್ವೀತಿಯ ಹಾಗೂ ಸಮಾಧಾನಕರ ಬಹುಮಾನ ವಿತರಣೆ ಮಾಡಲಾಗುತ್ತದೆ. ಇದರಲ್ಲಿ ಪುರುಷರ ವಿಭಾಗಕ್ಕೆ ಮೂರು ಹಾಗೂ ಮಹಿಳೆಯ ವಿಭಾಗಕ್ಕೆ ಮೂರು ಸೇರಿ ಒಟ್ಟು ಆರು ಬೆಳ್ಳಿ ಗದೆ ಬಹುಮಾನವನ್ನು ವಿತರಣೆ ಮಾಡಲಾಗುತ್ತದೆ. ಪ್ರಥಮ ಬಹುಮಾನ ಬಂದವರಿಗೆ ದೊಡ್ಡ ಗದೆ ಹಾಗೂ ಸಮಾಧಾನಕರ ಬಹುಮಾನ ಬಂದವರಿಗೆ ಚಿಕ್ಕ ಗದೆಯನ್ನು ನೀಡಲಾಗುತ್ತದೆ.

ಅನ್ನದಾಸೋಹ

ಜಾತ್ರಾ ಮಹೋತ್ಸವಕ್ಕೆ ಬರುವ ಭಕ್ತರಿಗಾಗಿ ಬೃಹತ್ ಪೆಂಡಾಲ್ ಹಾಕಿ ಅನ್ನ ದಾಸೋಹ ಏರ್ಪಡಿಸಲಾಗುತ್ತದೆ. ಜಾತ್ರೆಗೆ ಆಗಮಿಸುವ ಭಕ್ತರಿಗಾಗಿ ಮುದ್ದೆ, ಅವರೆಕಾಳು ಸಾಂಬಾರು, ಸಿಹಿ ಪೊಂಗಲ್, ಪುಳಿಯೊಗರೆ ಮತ್ತಿತರ ಆಹಾರವನ್ನು ತಯಾರು ಮಾಡಲಾಗುತ್ತದೆ.

ವಿಶೇಷ ಗಿಣ್ಣು ಪ್ರಸಾದ ವಿತರಣೆ

ವರಾಹಸಂದ್ರ, ಹೆಮ್ಮಿಗೆಪುರ, ದೊಡ್ಡಬೆಲೆ, ಚನ್ನವೀರಯ್ಯನಪಾಳ್ಯ, ಎಚ್. ಗೊಲ್ಲಹಳ್ಳಿ, ಗೊಟ್ಟಿಗೆರೆ ಪಾಳ್ಯ, ಸೋಂಪುರ ಸೇರಿ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಭಕ್ತರು ಸೇರಿ ಬೇರೆ ರಾಜ್ಯಗಳ ಭಕ್ತರು ಈ ಉತ್ಸವದಲ್ಲಿ ಭಾಗವಹಿಸಲಿದ್ದಾರೆ. ಈ 21 ಗ್ರಾಮಗಳಿಂದ ಹಸುಗಳ ಹಾಲನ್ನು ತಂದು ಗಿಣ್ಣು ಮಾಡಲಾಗುತ್ತದೆ. ಅದನ್ನು ಸಂಕ್ರಾಂತಿ ದಿನ ಬಸವೇಶ್ವರ ದೇವರ ಅಭಿಷೇಕಕ್ಕೆ ಬಳಸಲಾಗುತ್ತದೆ. ಬಳಿಕ ದೇವಾಲಯಕ್ಕೆ ಬರುವ ಭಕ್ತರಿಗೆ ಪ್ರಸಾದವಾಗಿ ಗಿಣ್ಣು ಅನ್ನು ವಿತರಣೆ ಮಾಡಲಾಗುತ್ತದೆ.



ಜೀರ್ಣೋದ್ಧಾರ

ಪಾಳುಬಿದ್ದಿದ್ದ ದೇಗುಲಕ್ಕೆ ಕಾಯಕಲ್ಪ ಕಲ್ಪಿಸಬೇಕೆಂಬ ಸಂಕಲ್ಪ ಮಾಡಿದ ಎಂ.ರುದ್ರೇಶ್ ಜೀರ್ಣೋದ್ಧಾರಕ್ಕೆ ಕೈಹಾಕಿದರು. ನೈಸ್ ಕಾರಿಡಾರ್ ಮುಖ್ಯಸ್ಥ ಅಶೋಕ್ ಖೇಣಿ ಸಹಕಾರದೊಂದಿಗೆ 2006 ರಲ್ಲಿ ದೇಗುಲ ಪುನರುಜ್ಜೀವನಗೊಂಡಿತು. ಇದಕ್ಕೆ ಹಲವು ಭಕ್ತರ ನೆರವು ಹರಿದುಬಂತು. ಇದೀಗ ಸುತ್ತಮುತ್ತಲ 120 ಹಳ್ಳಿಗಳ ಭಕ್ತರಲ್ಲದೆ ರಾಜ್ಯದ ಮೂಲೆಗಳಿಂದ ಹರಿದು ಬರುತ್ತಿರುವ ಭಕ್ತಸಾಗರದ ಧಾರ್ಮಿಕ ಕೇಂದ್ರವಾಗಿ ಬಸವೇಶ್ವರ ದೇಗುಲ ಗಮನ ಸೆಳೆಯುತ್ತಿದೆ. ಸಿದ್ದಗಂಗಾ ಶ್ರೀ ನೇತೃತ್ವದಲ್ಲಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ಅಂದು 108 ಕ್ಕೂ ಅಧಿಕ ಮಠಾಧೀಶರು ಜೀರ್ಣೋದ್ಧಾರ ಸಮಾರಂಭದಲ್ಲಿ ಭಾಗವಹಿಸಿ ಶುಭ ಹಾರೈಸಿದ್ದರು.

ರುದ್ರೇಶ್ ಮಹಾತ್ವಾಕಾಂಕ್ಷೆ ಜಾತ್ರೆ

ರೈತಾಪಿ ವರ್ಗದ ಸುಗ್ಗಿ ಸಂಭ್ರಮದ ಸಂಕ್ರಾಂತಿ ಹಬ್ಬವನ್ನು ವಿನೂತನವಾಗಿ ಆಚರಿಸಬೇಕು ಹಾಗೂ ಹಳ್ಳಿಯ ಸೊಗಡಿನ ಸಾಂಪ್ರದಾಯಿಕ ಆಚರಣೆಯನ್ನು ಮುಂದಿನ ಪೀಳಿಗೆಗೂ ಜೀವಂತವಾಗಿರಿಸಬೇಕು ಎಂಬ ನಿಟ್ಟಿನಲ್ಲಿ ಎಂ.ರುದ್ರೇಶ್, ಕಳೆದ 16 ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಸುಗ್ಗಿ ಸಂಭ್ರಮವೇ ‘ಬಸವೇಶ್ವರ ಸ್ವಾಮಿಯ ಕಡಲೇಕಾಯಿ ಪರಿಷೆ’. ನಗರೀಕರಣದ ಭರಾಟೆ ನಡುವೆ ನಾಡಿನ ಸಾಂಸ್ಕೃತಿಕ ಪ್ರತೀಕಗಳಾಗಿರುವ ಹಬ್ಬ-ಹರಿದಿನಗಳು ಅಸ್ತಿತ್ವ ಕಳೆದುಕೊಳ್ಳುತ್ತಿವೆ. ಇವುಗಳನ್ನು ಉಳಿಸಿಕೊಂಡು ಮುಂದಿನ ತಲೆಮಾರಿಗೂ ಮುಂದುವರಿಸಿಕೊಂಡು ಬರಬೇಕು ಎಂಬ ಮಹಾತ್ವಾಕಾಂಕ್ಷೆಯನ್ನು ಇಟ್ಟುಕೊಂಡಿರುವ ರುದ್ರೇಶ್ ಅವರು ಈ ಜಾತ್ರಾ ಮಹೋತ್ಸವವನ್ನು ಕಳೆದ 16 ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಐತಿಹಾಸಿಕ ಹಿನ್ನೆಲೆ

ಚೋಳರ ಕಾಲದಲ್ಲಿ ನಿರ್ಮಾಣವಾದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಂದಿ ಮೂರ್ತಿ ಪ್ರತಿಷ್ಠಾಪನೆಗೊಂಡಿದೆ. ಜಾನುವಾರುಗಳಿಗೆ ಬಾವು, ಕಾಲುಬಾಯಿ ಜ್ವರ ಮತ್ತಿತರ ಕಾಯಿಲೆ ಕಾಸಿಕೊಂಡರೂ, ಇಲ್ಲಿನ ದೇವರಿಗೆ ಹರಕೆ ಹೊತ್ತರೆ ಅಂಥ ಜಾನುವಾರುಗಳು ಗುಣಮುಖವಾಗುತ್ತವೆ ಎಂಬ ನಂಬಿಕೆ ಸ್ಥಳೀಯರದ್ದು. ಹೈನುಗಾರಿಕೆಯನ್ನು ಜೀವನಾಧಾರ ಮಾಡಿಕೊಂಡಿರುವ ಕೃಷಿಕರ ಪಾಲಿಗೆ ಶ್ರೀ ಬಸವೇಶ್ವರ ದೇವರೆಂದರೆ ವಿಶೇಷ ಭಕ್ತಿ. ಸುತ್ತಮುತ್ತಲಿನ 120 ಹಳ್ಳಿಗಳ ಆರಾಧ್ಯ ದೈವವೆನಿಸಿರುವ ಶ್ರೀ ಬಸವೇಶ್ವರ ದೇವರ ಮೂರ್ತಿಗೆ ಗಿಣ್ಣಿನ ಹಾಲಿನ ಅಭಿಷೇಕ ಮಾಡುವುದು ವಿಶೇಷ. ಚನ್ನವೀರಯ್ಯನಪಾಳ್ಯ, ವರಹಾಸಂದ್ರ, ಸೋಂಪುರ ಹಾಗೂ ಹೆಮ್ಮಿಗೆಪುರ ಪಂಚಾಯಿತಿಯ ಸುತ್ತಮುತ್ತಲಿನ ಗ್ರಾಮಗಳಿಗೆ ಇಲ್ಲಿನ ದೇಗುಲ ಧಾರ್ಮಿಕ ಶ್ರದ್ಧಾಕೇಂದ್ರವಾಗಿದೆ.


ಶನಿವಾರ, ಜನವರಿ 14, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 14 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭೂಮಿಕಾ
ವರ್ಷಾರಂಭದ ಸುಗ್ಗಿಯ ಹಬ್ಬ 'ಸಂಕ್ರಾಂತಿ' ಮಹಿಳಾ ಉದ್ಯಮ ಲೋಕದಲ್ಲಿ ಮತ್ತಷ್ಟು ಹೊಸ ಭರವಸೆ ಮೂಡಿಸಲಿ

ಚರ್ಚೆ
ಶಾಲೆಯಲ್ಲಿ ಧರ್ಮಾಧಾರಿತ ಮೌಲ್ಯ ಶಿಕ್ಷಣವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯ ಇದೆಯೇ?

ಕೋಳಿಗಳ ಸಾವು, ಗಡಿಯಲ್ಲಿ ಆತಂಕ 5

ಜ. 31ರಿಂದ ಬಜೆಟ್ ಅಧಿವೇಶನ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,261 ▲	17,956 ▲	₹57,980 (ಬೆಂಗಳೂರು) ▲	₹70,100 (ಬೆಂಗಳೂರು) ▲	81.38 ▼

12 ದಿನಗಳಲ್ಲಿ 5.4 ಸೆಂ.ಮೀ ಕುಸಿದ ಪಟ್ಟಣ • ಇಸ್ರೊ ಉಪಗ್ರಹದ ಚಿತ್ರಗಳಲ್ಲಿ ದೃಢ

ಜೋಶಿಮಠ: ಕ್ಷಿಪ್ರಗತಿ ಭೂಕುಸಿತ

ನವದೆಹಲಿ (ಪಿಟಿಐ): ಉತ್ತರಾಖಂಡದ ಭೂಕುಸಿತ ವಲಯವಾಗಿ ಪರಿಗಣಿಸಿರುವ ಜೋಶಿಮಠ ಪಟ್ಟಣ ಕೇವಲ 12 ದಿನಗಳಲ್ಲಿ 5.4 ಸೆಂ.ಮೀನಷ್ಟು ವೇಗವಾಗಿ ಕುಸಿದಿರುವುದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಬಿಡುಗಡೆ ಮಾಡಿರುವ ಕಾರ್ಟೊಸ್ಯಾಟ್ -2 ಎಸ್ ಉಪಗ್ರಹ ಚಿತ್ರಗಳಲ್ಲಿ ಕಂಡುಬಂದಿದೆ. ತ್ವರಿತಗತಿಯಲ್ಲಿ ಪರಿಹಾರ ಕಾರ್ಯಾಚರಣೆ ಕೈಗೊಳ್ಳಲು ಇದು ಎಚ್ಚರಿಕೆಯ ಗಂಟೆ ಬಾರಿಸಿದೆ.

ಜೋಶಿಮಠದಲ್ಲಿ ಜನವರಿ 2ರಂದು ಸಂಭವಿಸಿದ ಭೂಕುಸಿತದಿಂದ ಪಟ್ಟಣದ ಜನವಸತಿ ಪ್ರದೇಶದ ಕುಸಿಯುವಿಕೆ ವೇಗ ತೀವ್ರಗೊಂಡಿದೆ. ಪ್ರಸಿದ್ಧ ಯಾತ್ರಾತಾಣಗಳಾದ ಬದರೀನಾಥ ಮತ್ತು ಹೇಮಕುಂಡ್ ಸಾಹೀಬ್ ಹಾಗೂ ಅಂತರರಾಷ್ಟ್ರೀಯ ಸ್ಕೀಯಿಂಗ್ ಕ್ರೀಡೆಯ ಗಮ್ಯತಾಣ ಔಲಿಯ ಹೆಬ್ಬಾಗಿಲು ಎನಿಸಿರುವ ಈ ಪಟ್ಟಣದ ಅಸ್ತಿತ್ವಕ್ಕೆ ಭೂಕುಸಿತದ ಸಮಸ್ಯೆ ಬಹುದೊಡ್ಡ ಸವಾಲಾಗಿ ಪರಿಣಮಿಸಿದೆ.

ಹಿಮಾಲಯ ಪರ್ವತಶ್ರೇಣಿಯ ಈ ಪಟ್ಟಣದಲ್ಲಿ 2022ರ ಏಪ್ರಿಲ್ ಮತ್ತು ನವೆಂಬರ್ ನಡುವೆ ಭೂಕುಸಿತ ನಿಧಾನಗತಿಯಲ್ಲಿತ್ತು. ಈ ಅವಧಿಯಲ್ಲಿ 8.9 ಸೆಂ.ಮೀ. ಯಷ್ಟು ಕುಸಿದಿರುವುದು ಇಸ್ರೊದ ರಾಷ್ಟ್ರೀಯ ದೂರಸಂವೇದಿ ಕೇಂದ್ರದ (ಎನ್‌ಆರ್‌ಎಸ್‌ಸಿ) ಪ್ರಾಥಮಿಕ ಅಧ್ಯಯನದಲ್ಲಿ ಕಂಡುಬಂದಿತ್ತು. ಆದರೆ, 2022ರ ಡಿಸೆಂಬರ್ 27ರಿಂದ 2023ರ ಜ.8ರ ನಡುವೆ ಭೂ ಕುಸಿತದ ವೇಗ ತೀವ್ರಗೊಂಡಿದೆ. ಕೇವಲ 12 ದಿನಗಳಲ್ಲಿ ವ್ಯಾಪಕ ಪ್ರಮಾಣದ ಕುಸಿತವಾಗಿದೆ.



ಜೋಶಿಮಠದಲ್ಲಿ ಅಸುರಕ್ಷಿತ ಮನೆಗಳಿಂದ ಶುಕ್ರವಾರ ವ್ಯಕ್ತಿಯೊಬ್ಬರು ಪೀಠೋಪಕರಣ ಸ್ಥಳಾಂತರಿಸಿದರು – ಪಿಟಿಐ ಚಿತ್ರ

'ಈ ಪ್ರದೇಶವು ಕೆಲವೇ ದಿನಗಳಲ್ಲಿ 5 ಸೆಂ.ಮೀ. ಕುಸಿದಿದೆ. ಇದರ ವ್ಯಾಪ್ತಿ ವಾಸಸ್ಥಳವನ್ನು ಹೆಚ್ಚು ಆವರಿಸಿದೆ. ಆದರೆ, ಇದು ಪಟ್ಟಣದ ಕೇಂದ್ರ ಭಾಗಕ್ಕೆ ಮಾತ್ರ ಸೀಮಿತವಾಗಿದೆ. ಭೂಕುಸಿತದ ಮುಕುಟ ಭಾಗ 2,180 ಮೀಟರ್ ಎತ್ತರದಲ್ಲಿ ಜೋಶಿಮಠ-ಔಲಿ ರಸ್ತೆ ಬಳಿಯ ವಸತಿ ಸ್ಥಳದಲ್ಲಿ ಗುರುತಿಸಲಾಗಿದೆ' ಎಂದು ಎನ್‌ಆರ್‌ಎಸ್‌ಸಿ ವರದಿ ಹೇಳಿದೆ.

ಇಸ್ರೊ ಬಿಡುಗಡೆ ಮಾಡಿರುವ ಈ ಚಿತ್ರಗಳಲ್ಲಿ ಜೋಶಿಮಠ ಪಟ್ಟಣದ ಕೇಂದ್ರ ಭಾಗ ವ್ಯಾಪಿಸಿರುವ ಸೇನೆಯ ಹೆಲಿಪ್ಯಾಡ್ ಮತ್ತು ನರಸಿಂಗ ದೇವಸ್ಥಾನ ಭೂಕುಸಿತದ ವಲಯದಲ್ಲಿ ಕಾಣಿಸಿವೆ.

ಹೆಚ್ಚು ಅಪಾಯದ ಸ್ಥಳದಿಂದ ಜನರ ಸ್ಥಳಾಂತರ ಮುಂದುವರಿದಿದೆ. ಈ ವರೆಗೆ 169 ಕುಟುಂಬಗಳ 589 ಮಂದಿಯನ್ನು ಪರಿಹಾರ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ಸುಮಾರು 3,630 ಸಂತ್ರಸ್ತರಿಗೆ ಆಶ್ರಯ ಕಲ್ಪಿಸುವ 835 ಕೊಠಡಿಗಳ ಪರಿಹಾರ ಕೇಂದ್ರಗಳನ್ನು ಜೋಶಿಮಠ ಮತ್ತು ಪಿಪಾಲ್‌ಕೋಟಿಯಲ್ಲಿ ತೆರೆಯಲಾಗಿದೆ. ಈವರೆಗೆ 42 ಸಂತ್ರಸ್ತ ಕುಟುಂಬಗಳಿಗೆ ರಾಜ್ಯ ಸರ್ಕಾರ ತಲಾ ₹1.5 ಲಕ್ಷ ಮಧ್ಯಂತರ ಪರಿಹಾರವನ್ನು ಪಾವತಿಸಿದೆ.

ಸಂತ್ರಸ್ತರ ಆರು ತಿಂಗಳ ವಿದ್ಯುತ್, ನೀರಿನ ಶುಲ್ಕ ಮನ್ನಾ

ಡೆಹ್ರಾಡೂನ್: ಭೂಕುಸಿತ ಪೀಡಿತ ಜೋಶಿಮಠದಲ್ಲಿ ತೊಂದರೆಗೆ ಸಿಲುಕಿದ ಸಂತ್ರಸ್ತರಿಗೆ ಆರು ತಿಂಗಳ ವಿದ್ಯುತ್ ಮತ್ತು ಕುಡಿಯುವ ನೀರಿನ ಶುಲ್ಕ ಮನ್ನಾ ಮಾಡಲು, ಸಂತ್ರಸ್ತರ ಬ್ಯಾಂಕ್ ಸಾಲಗಳ ಮರುಪಾವತಿಯನ್ನು ಒಂದು ವರ್ಷ ತಡೆಹಿಡಿಯಲು ಉತ್ತರಾಖಂಡ ಸರ್ಕಾರ ಶುಕ್ರವಾರ ನಿರ್ಧರಿಸಿತು.

ಅಲ್ಲದೇ, ಸಂತ್ರಸ್ತ ಕುಟುಂಬಗಳ ತಲಾ ಇಬ್ಬರಿಗೆ ಉದ್ಯೋಗ ಖಾತ್ರಿಯಡಿ ಕೆಲಸ ನೀಡಲು ತೀರ್ಮಾನಿಸಲಾಯಿತು. ಜೋಶಿಮಠದ ಭೂಕುಸಿತಕ್ಕೆ ಸರ್ಕಾರಿ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಸಂಸ್ಥೆ ಎನ್‌ಟಿಪಿಸಿ ಕಾರಣವಾಗಿದ್ದರೆ ಆ ಬಗ್ಗೆಯೂ ತನಿಖೆ ನಡೆಸಲು ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ನೇತೃತ್ವದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು. ಅಲ್ಲದೇ, ಬೆಟ್ಟಗಳಲ್ಲಿರುವ ಎಲ್ಲ ಪಟ್ಟಣಗಳಿಂದ ಜನರನ್ನು ಸ್ಥಳಾಂತರಿಸುವ ಸಾಮರ್ಥ್ಯದ ಅಧ್ಯಯನಕ್ಕೂ ಸಂಪುಟ ಅನುಮೋದನೆ ನೀಡಿತು ಎಂದು ಮುಖ್ಯ ಕಾರ್ಯದರ್ಶಿ ಎಸ್.ಎಸ್. ಸಂಧು ಅವರು ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಹಕಾರಿ ಬ್ಯಾಂಕುಗಳು ಸಾಲಗಳ ಮರುಪಾವತಿಯನ್ನು ಒಂದು ವರ್ಷ ಮುಂದೂಡುವ ನಿರ್ಧಾರ ತಕ್ಷಣವೇ ಜಾರಿಗೆ ತರಲಾಗುವುದು. ವಾಣಿಜ್ಯ ಬ್ಯಾಂಕುಗಳೂ ಇದನ್ನು ಪಾಲಿಸುವಂತೆ ಕೇಂದ್ರಕ್ಕೂ ಮನವಿ ಮಾಡಲಾಗುವುದು ಎಂದರು.

ಕೋಟಿ ಫಾರ್ಮ್, ಪಿಪಾಲ್‌ಕೋಟಿ, ಗೌಚಾರ್, ಗೌಖ್ ಸಿಲಾಂಗ್ ಮತ್ತು ಧಾಕ್ ಹಳ್ಳಿಗಳ ಸಂತ್ರಸ್ತರ ಪುನರ್ವಸತಿಗಾಗಿ ಸಿದ್ಧಮನೆಗಳ ನಿರ್ಮಾಣಕ್ಕೆ, ಬಾಡಿಗೆ ಮನೆಗಳಿಗೆ ಸ್ಥಳಾಂತರವಾಗುವ ಸಂತ್ರಸ್ತರಿಗೆ ತಿಂಗಳಿಗೆ ನಿಗದಿಪಡಿಸಿದ್ದ ₹4 ಸಾವಿರ ಬಾಡಿಗೆಯನ್ನು ₹5 ಸಾವಿರಕ್ಕೆ ಏರಿಸಲು ಅನುಮತಿಸಲಾಯಿತು.

'ತಾಯಿ ಮೇಲೆ ಆಣೆ ಮಾಡಿ ಮೋಸ ಮಾಡಿದ್ರು'

ಹೆದ್ದಾರಿ ತಡೆ: ಸಿ.ಎಂ ವಿರುದ್ಧ ಪಂಚಮಸಾಲಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ): ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸಲು ಒತ್ತಾಯಿಸಿ, ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಸಮುದಾಯದ ಸಾವಿರಾರು ಮಂದಿ ಶಿಗ್ಗಾವಿ ಪಟ್ಟಣದಲ್ಲಿ ಶುಕ್ರವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಧರಣಿ ಮಾಡಿದರು.

ಪಟ್ಟಣದ ಕಿತ್ತೂರು ಚನ್ನಮ್ಮ ವೃತ್ತದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮನ ಮೂರ್ತಿಗೆ ಪೂಜೆ ಸಲ್ಲಿಸಿ, ಕೆಲಕಾಲ ಧರಣಿ ನಡೆಸಿ, ನಂತರ ಪಾದಯಾತ್ರೆ ಕೈಗೊಂಡರು. ಮುಖ್ಯಮಂತ್ರಿಯವರ ಮನೆ ಮುಂದೆ ಧರಣಿ ಕೂರಲು ಇಕ್ಕಟ್ಟಾಗುವುದೆಂದು, ಆ ನಿರ್ಧಾರ ಕೈಬಿಟ್ಟು, ರಾಷ್ಟ್ರೀಯ ಹೆದ್ದಾರಿಯಲ್ಲೇ ಒಂದು ಗಂಟೆ ಕುಳಿತರು.

ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಾಯಿ ಮೇಲೆ ಆಣೆ ಮಾಡಿ, 2ಎ ಮೀಸಲಾತಿ ಕೊಡುತ್ತೇನೆ ಎಂದು ಭರವಸೆ ನೀಡಿದ್ದರು. ಮಾತು ಕೊಟ್ಟು ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದನ್ನು ತಪ್ಪಿಸಿದರು. ಇಲ್ಲದಿದ್ದರೆ ನರಗುಂದ ಬಂಡಾಯದಂಥ ಹೋರಾಟ ಆಗುತ್ತಿತ್ತು. ರಾಜೀನಾಮೆ ಕೊಡುವ ಪರಿಸ್ಥಿತಿ ಬರುತ್ತಿತ್ತು' ಎಂದು ಆಕ್ರೋಶ ವ್ಯಕ್ತಪಡಿಸಿದರು.



ಶಿಗ್ಗಾವಿ ಪಟ್ಟಣದಲ್ಲಿ ಶುಕ್ರವಾರ ನಡೆದ ಧರಣಿಯಲ್ಲಿ ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿದರು. ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ, ಮಾಜಿ ಸಚಿವ ವಿನಯ ಕುಲಕರ್ಣಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಇದ್ದಾರೆ – ಪ್ರಜಾವಾಣಿ ಚಿತ್ರ

ಪಂಚಮಸಾಲಿಗಳ ಹೋರಾಟವನ್ನು ಹತ್ತಿಕ್ಕಲು ಸರ್ಕಾರ 2ಡಿ ಮೀಸಲಾತಿ ಘೋಷಿಸಿತು. ನಾವಿದನ್ನು ತಿರಸ್ಕರಿಸಿದ್ದೇವೆ. ಮೋಸ ಹೋಗುವ ಜನ ನಾವಲ್ಲ
ಬಸವಜಯ ಮೃತ್ಯುಂಜಯ ಸ್ವಾಮೀಜಿ
ಕೂಡಲಸಂಗಮ ಪೀಠ

ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, 'ಆರು ಬಾರಿ ಸುಳ್ಳು ಭರವಸೆ ಕೊಟ್ಟ ಸರ್ಕಾರವಿದು. ಮೀಸಲಾತಿ ಕೊಡುತ್ತೇವೆ ಎಂದು ಮೋಸ ಮಾಡಿದ ಬಿ.ಎಸ್. ಯಡಿಯೂರಪ್ಪ ಅವರು ಸ್ವಾಮೀಜಿ ಶಾಪದಿಂದಲೇ ಸಿ.ಎಂ ಹುದ್ದೆ ಕಳೆದುಕೊಂಡರು. ಬೊಮ್ಮಾಯಿಯವರೇ ನಿಮಗೂ ಕುರ್ಚಿ ಶಾಶ್ವತವಲ್ಲ. ಈ ಶಿಗ್ಗಾವಿ ಕ್ಷೇತ್ರದಿಂದ ನಿಮ್ಮನ್ನು ಹೊರ ಕಳುಹಿಸದೇ ಬಿಡುವುದಿಲ್ಲ' ಎಂದು ಎಚ್ಚರಿಸಿದರು.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗುಜರಾತ್‌ನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ


ಸ್ಯಾಂಟ್ರೊ ರವಿ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಅತ್ಯಾಚಾರ, ವೇಶ್ಯಾವಾಟಿಕೆ, ಗೂಂಡಾ ಪ್ರಕರಣಗಳ ಆರೋಪಿ ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿಯನ್ನು (51) ಪೊಲೀಸರು ಗುಜರಾತ್‌ನ ಅಹಮದಾಬಾದ್‌ನಲ್ಲಿ ಶುಕ್ರವಾರ ಬಂಧಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಎಡಿಜಿಪಿ ಅಲೋಕ್ ಕುಮಾರ್, 'ಪ್ರತಿದಿನ ಸ್ಥಳ ಬದಲಾಯಿಸುತ್ತಿದ್ದ ಆರೋಪಿಯ ಜೊತೆಗೆ ಆತನ ನಿಕಟವರ್ತಿಗಳಾದ ಕೇರಳದ ಶ್ರುತೇಶ್ (35) ಮತ್ತು ರಾಮ್‌ಜಿ (45) ಎನ್ನುವವರನ್ನು ಬಂಧಿಸಲಾಗಿದೆ. ಎರಡು ದಿನಗಳ ಹಿಂದೆ ಮೈಸೂರಿನ ಮಧುಸೂದನ ಎಂಬಾತನನ್ನು ಬಂಧಿಸಲಾಗಿತ್ತು' ಎಂದು ತಿಳಿಸಿದರು.

'ತಲೆ ಮರೆಸಿಕೊಂಡಿದ್ದ ಆರೋಪಿಯು ಕೇರಳ, ಮಹಾರಾಷ್ಟ್ರ, ರಾಮನಗರ, ಬೆಂಗಳೂರಿನಲ್ಲಿ ನೆಲೆ ಬದಲಿಸುತ್ತಿದ್ದ. ಕೊನೆಗೆ, ಗುಜರಾತಿನಲ್ಲಿರುವ ಮಾಹಿತಿ ಸಿಕ್ಕಿದ್ದರಿಂದ ಮೈಸೂರು, ರಾಮನಗರ, ಮಂಡ್ಯ ಹಾಗೂ ರಾಯಚೂರು ಜಿಲ್ಲೆಯ ಹಿರಿಯ ಪೊಲೀಸರ ತಂಡ ಕಾರ್ಯಾಚರಣೆ ನಡೆಸಿತ್ತು. ಎಫ್‌ಐಆರ್ ದಾಖಲಾದ ಹತ್ತು ದಿನಗಳ ನಂತರ ಆರೋಪಿಯನ್ನು ಬಂಧಿಸಲಾಗಿದೆ' ಎಂದು ವಿವರ ನೀಡಿದರು.



ಸ್ಯಾಂಟ್ರೊ ರವಿ

ಸಂತ್ರಸ್ತ ಮಹಿಳೆ ಹಾಗೂ ಅವರ ಕುಟುಂಬದ ಸದಸ್ಯರು ಒಡನಾಡಿ ಸೇವಾ ಸಂಸ್ಥೆಯ ನೆರವು ಪಡೆದು ದೂರು ದಾಖಲಿಸಿದ್ದರು. ವರದಕ್ಷಿಣೆ ನಿಷೇಧ ಕಾಯ್ದೆ, ಪರಿಶಿಷ್ಟರ ಮೇಲಿನ ದೌರ್ಜನ್ಯ ನಿಯಂತ್ರಣ ಕಾಯ್ದೆ, ಐಪಿಸಿ 506 (ಉದ್ದೇಶಪೂರ್ವಕ ಅವಹೇಳನ, ಮನಶಾಂತಿ ಕೆಡಿಸುವ ಪ್ರಯತ್ನ), 504 (ಕ್ರಿಮಿನಲ್ ಪಿತೂರಿ), 376 (ಅತ್ಯಾಚಾರ), 270 (ಪ್ರಾಣಹಾನಿಕರವಾದ ಸೋಂಕು ಹರಡುವ ಯತ್ನ), ಬಲವಂತದ ಗರ್ಭಪಾತ (313) ಹಾಗೂ 323 (ಹಲ್ಲೆ), 498ಎ (ಕೌಟುಂಬಿಕ ದೌರ್ಜನ್ಯ) ಅಡಿ ಪ್ರಕರಣ ದಾಖಲಿಸಲಾಗಿತ್ತು.

'ಮುಖವಾಡ ಹೊತ್ತವರೂ ಬಯಲಾಗಬೇಕು'

'ಸ್ಯಾಂಟ್ರೊ ರವಿ ಬಂಧನ ದೊಡ್ಡ ವಿಷಯವಲ್ಲ. ಆತನ ಮುಖವಾಡ ಹೊತ್ತು ಅಧಿಕಾರದ ಸ್ಥಾನದಲ್ಲಿರುವವರು ಬಯಲಾಗಬೇಕು. ಆ ಮೂಲಕ ಪ್ರಭುತ್ವದ ಘನತೆಯನ್ನು ಎತ್ತಿ ಹಿಡಿಯಬೇಕು. ಆತನೊಂದಿಗೆ ಶಾಮೀಲಾಗಿದ್ದ ಹಿರಿಯ–ಕಿರಿಯ ಅಧಿಕಾರಿಗಳು, ಆತನಿಂದ ಅಕ್ರಮವಾಗಿ ಅನುಕೂಲ ಪಡೆದುಕೊಂಡವರನ್ನು ಪರೇಡ್ ಮಾಡಿ ಬಂಧಿಸಬೇಕು' ಎಂದು ಒಡನಾಡಿ ಸೇವಾ ಸಂಸ್ಥೆಯ ಪರಶುರಾಮ್ ಒತ್ತಾಯಿಸಿದರು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಟೆಂಟ್ ನಗರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ


'ಗಂಗಾ ವಿಲಾಸ್' ಯಾನ ಆರಂಭ

ಪ್ರಜಾವಾಣಿ ವಾರ್ತೆ

ಲಖನೌ: ಜಗತ್ತಿನ ಅತ್ಯಂತ ಉದ್ದದ ನದಿ ವಿಹಾರ ನೌಕೆ 'ಎಂವಿ ಗಂಗಾ ವಿಲಾಸ್'ಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹಸಿರು ನಿಶಾನೆ ತೋರಿದರು.

'ನೌಕೆಯಲ್ಲಿ ವಿಹಾರಕ್ಕಾಗಿ ವಿದೇಶಕ್ಕೆ ತೆರಳುವವರು ಇನ್ನು ಮುಂದೆ ಭಾರತದಲ್ಲಿಯೇ ಈ ಸೌಲಭ್ಯ ಪಡೆಯಬಹುದು. ನಾವು ಇಂಥ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತಿದ್ದೇವೆ. ಇದು ದೇಶ ಮತ್ತು ಅದರ ವೈವಿಧ್ಯತೆಯನ್ನು ಕಣ್ತುಂಬಿಕೊಳ್ಳಲು ಅವಕಾಶ ನೀಡುತ್ತದೆ' ಎಂದು ಪ್ರಧಾನಿ ಮೋದಿ ಹೇಳಿದರು.

ಉತ್ತರ ಪ್ರದೇಶದ ವಾರಾಣಸಿಯಿಂದ ಆರಂಭಗೊಳ್ಳುವ ಯಾತ್ರೆಯು 51 ದಿನಗಳ ಬಳಿಕ ಪೂರ್ವ ಅಸ್ಸಾಂನ ದಿಬ್ರೂಗಢಕ್ಕೆ ತಲುಪಲಿದೆ. 3,200 ಕಿ.ಮೀ ಹಾದಿಯ ಉದ್ದಕ್ಕೂ ಪಟ್ನಾ, ಕೋಲ್ಕತ್ತ, ಗುವಾಹಟಿ ಮತ್ತು ಬಾಂಗ್ಲಾದೇಶದ ಢಾಕಾ ಸೇರಿ 50 ನಗರ ಮತ್ತು ವಿವಿಧ ಪ್ರವಾಸಿತಾಣಗಳಿಗೆ 'ಗಂಗಾ ವಿಲಾಸ್' ನೌಕೆಯು ಭೇಟಿ ನೀಡಲಿದೆ. ಪಾರಂಪರಿಕ ತಾಣಗಳು, ರಾಷ್ಟ್ರೀಯ ಉದ್ಯಾನಗಳು, ಘಾಟ್‌ಗಳು ಈ ವಿಹಾರದ ಹಾದಿಯಲ್ಲಿ ಇವೆ. ಬಾಂಗ್ಲಾದೇಶದ ನದಿ ಸೇರಿ ಒಟ್ಟು ಮೂರು ನದಿಗಳ ಮೂಲಕ ನೌಕೆಯು ಸಾಗಲಿದೆ.




ಎಂವಿ ಗಂಗಾ ವಿಲಾಸ್ ನೌಕೆ

ಎಂವಿ ಗಂಗಾದ ಪ್ರಥಮ ಯಾತ್ರೆಯಲ್ಲಿ ಸ್ವಿಟ್ಜರ್ಲೆಂಡ್‌ನ 23 ಪ್ರವಾಸಿಗರು ಯಾತ್ರೆ ಆರಂಭಿಸಿದ್ದಾರೆ. ಪ್ರವಾಸಿಗರಿಗೆ ವಾರಾಣಸಿ ಜಲೇಬಿ, ಕಚೋರಿ ಸೇರಿ ದೇಶೀಯ ಸಿಹಿತಿನಿಸುಗಳನ್ನು ನೀಡಲಾಗುತ್ತದೆ. ವಿಶ್ವ ಪ್ರಸಿದ್ಧ ಅಸ್ಸಾಂ ಚಹಾದ ಕೇಂದ್ರವಾಗಿರುವ ದಿಬ್ರೂಗಢದಲ್ಲಿ ಯಾತ್ರೆಯು ಮೇ 1ರಂದು ಪೂರ್ಣಗೊಳ್ಳಲಿದೆ.

ಪ್ರಯಾಣ ವೆಚ್ಚ ₹20 ಲಕ್ಷ!: ಈ ಐಷಾರಾಮಿ ನೌಕೆಯಲ್ಲಿ ಪ್ರಯಾಣಿಸಲು ಪ್ರತಿ ಪ್ರಯಾಣಿಕರಿಗೆ ದಿನಕ್ಕೆ ₹25,000ದಂತೆ 51 ದಿನಕ್ಕೆ ₹20 ಲಕ್ಷ ವಿಧಿಸಲಾಗುತ್ತದೆ.

10ನೇ ಪುಟ ನೋಡಿ



ಅಪಾರ್ಟ್‌ಮೆಂಟ್‌ಗಳಲ್ಲಿ ಎಲೆಕ್ಟ್ರಿಕ್ ವಾಹನ ಮಾಲೀಕರ ಪೇಚಾಟ

ಚಾರ್ಜಿಂಗ್ ಪಾಯಿಂಟ್‌ಗೆ ತೊಡಕು

• ಆರ್. ಮಂಜುನಾಥ್

ಬೆಂಗಳೂರು: ಪರಿಸರ ಮಾಲಿನ್ಯ ತಡೆ ಹಾಗೂ ಮಿತವ್ಯಯಿ ಎಂಬ ಕಾರಣಕ್ಕೆ ಹೆಚ್ಚು ಉತ್ಪಾದನೆ ಹಾಗೂ ಮಾರಾಟವನ್ನೂ ಕಾಣುತ್ತಿರುವ ಎಲೆಕ್ಟ್ರಿಕ್ ವಾಹನಗಳ (ಇವಿ) ಚಾರ್ಜಿಂಗ್‌ಗೆ ಕೆಲವು ಅಪಾರ್ಟ್‌ಮೆಂಟ್‌ಗಳಲ್ಲಿ ತೊಡಕಾಗಿದೆ. ಪ್ರತ್ಯೇಕ 'ಚಾರ್ಜಿಂಗ್ ಪಾಯಿಂಟ್' ಸ್ಥಾಪಿಸಲು ಫ್ಲ್ಯಾಟ್ ಮಾಲೀಕರಿಗೆ ಅನುಮತಿ ಸಿಗುತ್ತಿಲ್ಲ.

ಇವಿ ಚಾರ್ಜಿಂಗ್‌ಗಾಗಿ ವಾಹನ ನಿಲುಗಡೆ ಪ್ರದೇಶದಲ್ಲಿ ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಲು ಫ್ಲ್ಯಾಟ್ ಮಾಲೀಕರು ಮುಂದಾಗುತ್ತಿದ್ದಾರೆ. ವಾಹನ ಕಂಪನಿ ಇದನ್ನು ಅಳವಡಿಸಿಕೊಡುತ್ತದೆ. ಆದರೆ, ಅವರಿಗೆ ಅಸೋಸಿಯೇಷನ್‌ನಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಬೇಕು. ಈ ಎನ್‌ಒಸಿ ನೀಡಲು ಕೆಲವು ಅಸೋಸಿಯೇಷನ್‌ಗಳು ನಿರಾಕರಿಸಿವೆ. ಕಟ್ಟಡ ಬೈಲಾದಲ್ಲೂ ಇದಕ್ಕೆ ಅವಕಾಶವಿಲ್ಲ. ಹೀಗಾಗಿ ಕೆಲವು ಫ್ಲ್ಯಾಟ್ ಮಾಲೀಕರು ಇಂಧನ ಇಲಾಖೆ, ಬೆಸ್ಕಾಂಗೆ ಪತ್ರ ಬರೆದು ಕ್ರಮ ಕೈಗೊಳ್ಳಲು ಮನವಿ ಮಾಡಿದ್ದಾರೆ.

ಮನವಿಗಳನ್ನು ಪರಿಗಣಿಸಿರುವ ಇಂಧನ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅಪರ್ಣಾ ಪಾವಟೆ, 'ಖಾಸಗಿ ಸಮುಚ್ಚಯಗಳಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ 'ಚಾರ್ಜಿಂಗ್ ಪಾಯಿಂಟ್' ಅಳವಡಿಕೊಳ್ಳಲು ಸಮಸ್ಯೆ ಉಂಟಾಗುತ್ತಿದೆ. ಕಟ್ಟಡ ನಿರ್ಮಾಣ ಬೈಲಾದಲ್ಲಿ ತಿದ್ದುಪಡಿಯಾಗಬೇಕಿದೆ. ಇದನ್ನು ನಗರಾಭಿವೃದ್ಧಿ ಇಲಾಖೆ ಪರಿಶೀಲಿಸಬೇಕು' ಎಂದು ಡಿ.26ರಂದು ಟಿಪ್ಪಣಿ ಬರೆದು ಕಳುಹಿಸಿದ್ದಾರೆ.

'ಅಪಾರ್ಟ್‌ಮೆಂಟ್‌ನಲ್ಲಿ ನಮ್ಮ ಫ್ಲ್ಯಾಟ್‌ಗೆ ಇರುವ ಮೀಟರ್‌ನಿಂದಲೇ ಚಾರ್ಜಿಂಗ್ ಸೌಲಭ್ಯದ ಪ್ಲಗ್ ಅಳವಡಿಸಿ ಕೊಡುವಂತೆ ಮನವಿ ಮಾಡಿದ್ದೆ. ಆದರೆ, ಅಸೋಸಿಯೇಷನ್‌ನವರು ಅನುಮತಿ ನೀಡಿಲ್ಲ. ನಿಲುಗಡೆ ಪ್ರದೇಶವೆಲ್ಲ ಹಾಳಾಗುತ್ತೆ ಎನ್ನುತ್ತಾರೆ' ಎಂದು ರಂಜನ್ ದೂರಿದರು.

'ವಾಹನ ನಿಲುಗಡೆ ಪ್ರದೇಶದಲ್ಲಿ ನಾಲ್ಕಾರು ವಾಹನಗಳಿಗೆ ಪ್ರತ್ಯೇಕ ಚಾರ್ಜಿಂಗ್ ಸೌಲಭ್ಯ ಕಲ್ಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರೆ ನೆಲವೆಲ್ಲ ಹಾಳಾಗುತ್ತದೆ. ಎಲ್ಲೆಡೆ ವೈರ್‌ಗಳು ಹರಡಿಕೊಳ್ಳುತ್ತವೆ. ಸುರಕ್ಷತೆ ವಿಷಯದಲ್ಲೂ ಸಮಸ್ಯೆಯಾಗುತ್ತದೆ' ಎಂದು ಅಪಾರ್ಟ್‌ಮೆಂಟ್ ರೆಸಿಡೆಂಟ್ಸ್ ಅಸೋಸಿಯೇಷನ್‌ವೊಂದರ ಶ್ರೀನಿವಾಸ್ ಹೇಳಿದರು.

ಅಪಾರ್ಟ್‌ಮೆಂಟ್‌ಗಳಲ್ಲಿ ವಾಹನ ನಿಲುಗಡೆ ಪ್ರದೇಶ 'ಕಾಮನ್ ಫ್ಲೋರ್ ಯುಟಿಲಿಟಿ' ಸ್ಥಳವಾಗಿದ್ದು, ಈ ಪ್ರದೇಶದಲ್ಲಿ 'ಚಾರ್ಜಿಂಗ್ ಪಾಯಿಂಟ್'ಗೆ ಅವಕಾಶ ಕೊಟ್ಟರೆ ಅದೆಲ್ಲವೂ ವಾಣಿಜ್ಯವಾಗುತ್ತದೆ. ಅದರಂತೆ ಬೆಸ್ಕಾಂಗೆ ವಿದ್ಯುತ್ ದರ ಪಾವತಿಸಬೇಕಾಗುತ್ತದೆ. ನಾಲ್ಕೈದು ವಾಹನಗಳಿಗೆ ಅನುಕೂಲ ಆಗಿ, ಉಳಿದ ಎಲ್ಲರಿಗೂ ಇದು ಹೊರೆಯಾಗುತ್ತದೆ ಎಂಬುದು ಅಪಾರ್ಟ್‌ಮೆಂಟ್ ರೆಸಿಡೆಂಟ್ಸ್ ಅಸೋಸಿಯೇಷನ್‌ಗಳ ವಾದವಾಗಿದೆ.

ಹೊಸ ಬೈಲಾ ಸಿದ್ಧ..

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಉಪವಿಧಿಗಳು (ಬೈಲಾ) 2003 ರಲ್ಲಿ ರಚನೆಯಾಗಿವೆ. ಇವುಗಳನ್ನು ಪರಿಷ್ಕರಿಸಿ ಹೊಸದಾದ ಹಲವು ನಿಯಮಗಳನ್ನು ರಚಿಸಿ 'ಹೊಸ ಬೈಲಾ' ಸಿದ್ಧಪಡಿಸಲಾಗಿದೆ. ಅನುಮೋದನೆಗಾಗಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯಕ್ಕೆ (ಡಿಟಿಸಿಪಿ) ಬೈಲಾ ಕರಡು ಕಳುಹಿಸಿಕೊಡಲಾಗಿದೆ. ಅದಕ್ಕೆ ಅನುಮೋದನೆ ಸಿಕ್ಕ ಕೂಡಲೇ ಜಾರಿ ಮಾಡಲಾಗುತ್ತದೆ. ಆಗ ಚಾರ್ಜಿಂಗ್ ಸೌಲಭ್ಯ ಅಳವಡಿಸಿಕೊಳ್ಳುವುದಕ್ಕೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್ ತಿಳಿಸಿದರು.

ಎಲೆಕ್ಟ್ರಿಕಲ್ ಆ್ಯಂಡ್ ಕಂಪ್ಯೂಟರ್ ಎಂಜಿನಿಯರಿಂಗ್ ಬಿಲ್ಡಿಂಗ್ (ಇಸಿಇಬಿ) ಷರತ್ತನ್ನು ಕಟ್ಟಡ ನಕ್ಷೆ ಅನುಮೋದನೆಯಲ್ಲಿ ಆರು ತಿಂಗಳಿನಿಂದ ಸೇರಿಸಲಾಗಿದೆ. ಇಂತಹ ಕಟ್ಟಡಗಳಲ್ಲಿ ಚಾರ್ಜಿಂಗ್ ಪಾಯಿಂಟ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕಾಗುತ್ತದೆ. ಆದರೆ ಆರು ತಿಂಗಳ ಹಿಂದೆ ನಕ್ಷೆ ಪಡೆದಿರುವ ಕಟ್ಟಡಗಳಿಗೆ ಇದು ಅನ್ವಯಿಸುವುದಿಲ್ಲ. ಹೀಗಾಗಿ ಹೊಸ ಬೈಲಾ ಬಂದ ಮೇಲೆ ಹಿಂದಿನ ಕಟ್ಟಡಗಳಿಗೂ ಇದು ಅನ್ವಯವಾಗುವಂತೆ ನಿಯಮಗಳನ್ನು ರೂಪಿಸಬೇಕಾಗುತ್ತದೆ ಎಂದು ಮಾಹಿತಿ ನೀಡಿದರು.

ಕಿಯೋಸ್ಕ್‌ಗಳ ಬಳಕೆ ಉತ್ತಮ...

'ಅಪಾರ್ಟ್‌ಮೆಂಟ್‌ಗಳಲ್ಲಿ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್‌ಗೆ ಖಾಸಗಿ ಸಂಸ್ಥೆಗಳು ಉಚಿತವಾಗಿ ಸ್ಥಾಪನೆ ಮಾಡುತ್ತಿರುವ ಕಿಯೋಸ್ಕ್‌ಗಳು ಉತ್ತಮ. ಎಲ್ಲವನ್ನೂ ಸಂಸ್ಥೆಗೆ ನಿರ್ವಹಿಸಿ, ಕ್ಯೂಆರ್ ಕೋಡ್ ಮೂಲಕ ಪ್ರೀಪೇಯ್ಡ್ ಸೌಲಭ್ಯದಲ್ಲಿ ವಾಹನವನ್ನು ಚಾರ್ಜಿಂಗ್ ಮಾಡಿಕೊಳ್ಳಬಹುದು. ಇದು ವೇಗವಾಗಿಯೂ ಆಗುತ್ತದೆ. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ' ಎಂದು ಕ್ರೆಡೈ- ಬೆಂಗಳೂರು ಅಧ್ಯಕ್ಷ ಭಾಸ್ಕರ್ ಟಿ. ನಾಗೇಂದ್ರಪ್ಪ ಅಭಿಪ್ರಾಯಪಟ್ಟರು.

ಸಂಕ್ಷಿಪ್ತ ಸುದ್ದಿ

ಡಿ.ಎಸ್.ಮಾಳಗಿ ಲಿಡ್ಕರ್ ಉಪಾಧ್ಯಕ್ಷ

ಬೆಂಗಳೂರು: ಕರ್ನಾಟಕ ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮದ(ಲಿಡ್ಕರ್) ಉಪಾಧ್ಯಕ್ಷರಾಗಿ ಡಿ.ಎಸ್.ಮಾಳಗಿ ಅವರು ಶುಕ್ರವಾರ ಅಧಿಕಾರ ಸ್ವೀಕರಿಸಿದರು.



ಶಿಗ್ಗಾವಿಯ ಬಿಜೆಪಿ ನಾಯಕ ಮಾಳಗಿ, ಮುಖ್ಯಮಂತ್ರಿಯವರ ಆಪ್ತರೂ ಹೌದು. ಅಧಿಕಾರ ಸ್ವೀಕರಿಸುವ ವೇಳೆ ಮಾದಾರ ಚನ್ನಯ್ಯ ಸ್ವಾಮೀಜಿ, ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕ ನಟರಾಜ್ ಅವರೂ ಇದ್ದರು.

ಫೆ.12ರಿಂದ ಮಹಾಶಿವರಾತ್ರಿ ವಿಶೇಷ ಯಾತ್ರೆ

ಬೆಂಗಳೂರು: ಮಹಾ ಶಿವರಾತ್ರಿ ಪ್ರಯುಕ್ತ ಟ್ರಾವೆಲ್ ಟೈಮ್ಸ್ ಇಂಡಿಯಾ ಸಂಸ್ಥೆ ಸಹಯೋಗದಲ್ಲಿ ಭಾರತೀಯ ರೈಲ್ವೆಯು ವಾರಾಣಸಿ, ಗಯಾ, ಪ್ರಯಾಗ್‌ರಾಜ್ ಹಾಗೂ ಅಯೋಧ್ಯೆಗೆ- ಫೆ.12ರಿಂದ 9 ದಿನಗಳ ವಿಶೇಷ ಯಾತ್ರೆ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಾವೆಲ್ ಟೈಮ್ಸ್ ಇಂಡಿಯಾ ಸಂಸ್ಥೆ ನಿರ್ದೇಶಕ ವಿಘ್ನೇಶ್,'ಕೊಯಮತ್ತೂರು ಉತ್ತರದಿಂದ ರೈಲು ಹೊರಡಲಿದೆ. ಪ್ರವಾಸದ ವೇಳೆ ಊಟ–ತಿಂಡಿ ಮತ್ತು ವಾಸ್ತವ್ಯದ ವ್ಯವಸ್ಥೆ ಕಲ್ಪಿಸಲಾಗುವುದು. ಫೆ.20ರಂದು ವಾಪಸ್ ಬರಲಾಗುವುದು. ಹವಾನಿಯಂತ್ರಿತ ವ್ಯವಸ್ಥೆ ಒಳಗೊಂಡ ಕೋಚ್‌ಗೆ ₹18,750, ಸ್ಲೀಪರ್ ಕ್ಲಾಸ್ ಕೋಚ್‌ಗೆ ₹16,500 ನಿಗದಿಪಡಿಸಲಾಗಿದೆ. ಮಕ್ಕಳಿಗೆ ಕ್ರಮವಾಗಿ ₹800 ಹಾಗೂ ₹ 700 ಇರಲಿದೆ'.'ರಾಮಜನ್ಮಭೂಮಿ ದರ್ಶನ, ಗಂಗಾ ಸ್ನಾನ, ಕಾಶಿ ವಿಶ್ವನಾಥ ದರ್ಶನ ಸೇರಿ ಹಲವು ವಿಶೇಷತೆಯನ್ನು ಯಾತ್ರೆ ಒಳಗೊಂಡಿರಲಿದೆ' ಎಂದರು. ಆನ್ ಲೈನ್ ಬುಕ್ಕಿಂಗ್: www.ularail.com



ಚುನಾವಣೆ ಸಮೀಪಿಸುತ್ತಿದ್ದಂತೆ ಕಾಮಗಾರಿಗೆ ವೇಗ

ರಸ್ತೆ ಡಾಂಬರಿಗೆ ₹3,142 ಕೋಟಿ

● ನವೀನ್ ಮಿನೇಜಸ್

ಬೆಂಗಳೂರು: ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ 1,705 ಕಿ.ಮೀ. ವಾರ್ಡ್ ರಸ್ತೆ ಹಾಗೂ 477 ಕಿ.ಮೀ. ಮುಖ್ಯರಸ್ತೆಗಳು ಡಾಂಬರು ಕಾಣಲಿದ್ದು, ಇದಕ್ಕಾಗಿ ₹3,142 ಕೋಟಿ ವೆಚ್ಚ ಮಾಡಲಾಗುತ್ತಿದೆ.

ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲಿ ರಸ್ತೆ ಮರುಮೇಲ್ಮೈ ಅಭಿವೃದ್ಧಿ ನಡೆಯುತ್ತಿದ್ದು, ಮಳೆಗಾಲಕ್ಕೆ ಮುನ್ನ ಎಲ್ಲ ಕಾಮಗಾರಿಯನ್ನು ಮುಗಿಸುವ ಗುರಿಯನ್ನು ಬಿಬಿಎಂಪಿ ಹೊಂದಿದೆ. ಈ ರಸ್ತೆ ಕಾಮಗಾರಿಗಳಿಗೆ ಮುಖ್ಯಮಂತ್ರಿಯವರ ನವ ನಗರೋತ್ಥಾನ ಯೋಜನೆಯಲ್ಲಿ ಹಣ ಒದಗಿಸಲಾಗಿದೆ.

ಅಧಿಕಾರಿಗಳ ಪ್ರಕಾರ, 'ಈ ರಸ್ತೆಗಳ ದೋಷ ಹೊಣೆಗಾರಿಕೆ ಅವಧಿ ಒಂದು ವರ್ಷದಿಂದ ಮೂರು ವರ್ಷಗಳವರೆಗಿದೆ. ನಿವಾಸಿಗಳ ಗುಂಪು, ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ) ಅವರು ಈ ಅವಧಿಯನ್ನು ಕನಿಷ್ಠ ಐದು ವರ್ಷ ನಿಗದಿಪಡಿಸಬೇಕೆಂದು ಆಗ್ರಹಿಸಿದ್ದಾರೆ. ಇದರಿಂದ ಕಾಮಗಾರಿ ದೀರ್ಘ ಅವಧಿ ಸುಸ್ಥಿತಿಯಲ್ಲಿರುತ್ತದೆ ಎಂಬ ಆಶಯ ವ್ಯಕ್ತಪಡಿಸಿದ್ದಾರೆ. 28 ವಿಧಾನಸಭೆ ಕ್ಷೇತ್ರಗಳ ವಾರ್ಡ್ ರಸ್ತೆಗಳಿಗೆ ವೆಚ್ಚ;₹2,501 ಕೋಟಿಯಷ್ಟಾಗಲಿದೆ.

ಮುಖ್ಯ, ಉಪಮುಖ್ಯ ರಸ್ತೆಗಳಿಗೆ ಡಾಂಬರು

ವಲಯ	ವೆಚ್ಚ(₹ಕೋಟಿ)	ಉದ್ದ(ಕಿ.ಮೀ)
ಪೂರ್ವ	104.49	77.57
ಪಶ್ಚಿಮ	102.54	88.04
ದಕ್ಷಿಣ	89.48	46.69
ಬೊಮ್ಮನಹಳ್ಳಿ	66.1	50.34
ದಾಸರಹಳ್ಳಿ	26.31	47.34
ಮಹದೇವಪುರ	94.7	59.1
ಕೆ.ಆರ್. ಪುರ	30.79	13.82
ಆರ್.ಆರ್. ನಗರ	59.75	46.09
ಯಲಹಂಕ	65.93	48.2
ಒಟ್ಟು	641.09	477.19



ನೂತನ ಜಿಲ್ಲಾ ನ್ಯಾಯಾಧೀಶರನ್ನು ಬೆಂಗಳೂರು ವಕೀಲರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಡಿ. ಸರಿತಾ (ಎಡದಿಂದ ಕುಳಿತವರು), ಸುಮಂಗಲಾ ಚಾಕಲಬ್ಬಿ, ಎ. ಸಿರಾಜುದ್ದೀನ್, ಬಿ.ಎಲ್.ಮಾಯಣ್ಣ, ಆನಂದ್, ಎನ್.ಆರ್.ಮಧು, ಗಂಗಪ್ಪ ಈರಪ್ಪ ಪಾಟೀಲ್. ಸಿಟಿ ಸಿವಿಲ್ ಕೋರ್ಟ್ ಪ್ರಧಾನ ನ್ಯಾಯಾಧೀಶ ರಾಮಚಂದ್ರ ಡಿ. ಹುದ್ದಾರ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಟಿ. ವೆಂಕಟೇಶ್ ನಾಯಕ್, ಲಘು ವ್ಯವಹಾರಗಳ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ತ್ಯಾಗರಾಜ್ ಎನ್. ಇನವಳ್ಳಿ, ವಕೀಲರ ಸಂಘದ ಅಧ್ಯಕ್ಷ ವಿವೇಕ ಸುಬ್ಬಾರೆಡ್ಡಿ, ಪ್ರ.ಕಾ. ಟಿ.ಜಿ.ರವಿ, ನಗರ ವಿಭಾಗದ ಉಪಾಧ್ಯಕ್ಷ ಜಿ.ನಾರಾಯಣ ಸ್ವಾಮಿ ಮತ್ತು ಜಂಟಿ ಕಾರ್ಯದರ್ಶಿ ಕೆ.ಎನ್.ಅಂಬರೀಶ್ ಇದ್ದಾರೆ.

ನ್ಯಾಯಾಧೀಶರಿಗೆ ಸ್ಥಳ ನಿಯೋಜನೆ

ಬೆಂಗಳೂರು: ಹೊಸದಾಗಿ ನೇಮಕಗೊಂಡಿರುವ ಜಿಲ್ಲಾ ನ್ಯಾಯಾಧೀಶರಿಗೆ ಹುದ್ದೆ ತೋರಿಸಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಬಿ.ಮುರಳೀಧರ ಪೈ ಅಧಿಸೂಚನೆ ಹೊರಡಿಸಿದ್ದು, ಎಲ್ಲಾ ನಿಯೋಜಿತ ನ್ಯಾಯಾಧೀಶರು ಇದೇ 16ರ ಬೆಳಿಗ್ಗೆ ಅಧಿಕಾರ ವಹಿಸಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಗಂಗಪ್ಪ ಈರಪ್ಪ ಪಾಟೀಲ್ ಅವರಿಗೆ ಬೆಂಗಳೂರು ನಗರದ 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ, ಸುಮಂಗಲ ಚಾಕಲಬ್ಬಿ ಅವರಿಗೆ 41ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ, ಎನ್.ಆರ್. ಮಧು ಅವರಿಗೆ 30ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಮತ್ತು ಎ. ಸಿರಾಜುದ್ದೀನ್ ಅವರಿಗೆ 20ನೇ ಹೆಚ್ಚುವರಿ ಮತ್ತು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ನಿಯೋಜಿಸಲಾಗಿದೆ.

ಆನಂದ ಅವರಿಗೆ ಹಾಸನದ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಡಿ.ಸರಿತಾ ಅವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮತ್ತು ಬಿ.ಎಲ್. ಮಾಯಣ್ಣ ಅವರಿಗೆ ಉತ್ತರ ಕನ್ನಡ ಜಿಲ್ಲೆಯ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಹುದ್ದೆಗೆ ನಿಯೊಜಿಸಲಾಗಿದೆ.

ಒಂದೇ ಕ್ಷೇತ್ರದಿಂದ ಸ್ಪರ್ಧೆ: ಸಿದ್ದರಾಮಯ್ಯ

ಹಾಸನ: 'ಯಾರು ಏನೇ ಹೇಳಿದರೂ ನಾನು ಒಂದೇ ಕ್ಷೇತ್ರದಿಂದ ಸ್ಪರ್ಧಿಸುತ್ತೇನೆ' ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಬೇಕು ಎಂದು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಚಿಟ್ಟನಹಳ್ಳಿ ಗ್ರಾಮದ ಆದಿನಾಡು ಚಿಕ್ಕಮ್ಮ ತಾಯಿ ದೇವರ ಗುಡ್ಡ ಹೇಳಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಈ ಹೇಳಿಕೆ ಕುರಿತು ಅರಕಲಗೂಡು ತಾಲ್ಲೂಕಿನ ಮುದಗನೂರು ಗ್ರಾಮದಲ್ಲಿ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, 'ಒಂದೆ ಕಡೆ ಕಣಕ್ಕಿಳಿಯುವುದು ನನ್ನ ಅಭಿಪ್ರಾಯವಾಗಿದೆ' ಎಂದರು.

ಸಿದ್ದರಾಮಯ್ಯ ಅವರನ್ನು ಹರಕೆಯ ಕುರಿ ಮಾಡುತ್ತಿದ್ದಾರೆ ಎಂಬ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಕುಮಾರಸ್ವಾಮಿ ನಮ್ಮ ಪಕ್ಷದವರಾ? ನನ್ನನ್ನು ಯಾರೂ ಹರಕೆ ಕುರಿ ಮಾಡಲು ಸಾಧ್ಯವಿಲ್ಲ' ಎಂದು ಹೇಳಿದರು.

ವರ್ಗಾವಣೆ ದಂಧೆ; ಸ್ಯಾಂಟ್ರೊ ರವಿ ವಿರುದ್ಧ ವಾಟ್ಸ್‌ಆ್ಯಪ್ ಪುರಾವೆ

2022ರ ಮೊದಲ ವರ್ಗಾವಣೆ ಸಂಭ್ರಮಿಸಿದ್ದ ಸ್ಯಾಂಟ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದ ಪ್ರಕರಣದ ಆರೋಪಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ವರ್ಗಾವಣೆ ದಂಧೆಯಲ್ಲಿ ಭಾಗಿಯಾಗಿದ್ದನೆಂಬ ಆರೋಪ ಕೇಳಿಬಂದಿದೆ.

ಸ್ಯಾಂಟ್ರೊ ರವಿ ವಿರುದ್ಧ ಮೈಸೂರು ವಿಜಯನಗರ ಠಾಣೆಗೆ ಜ. 2ರಂದು ದೂರು ನೀಡಿರುವ ಎರಡನೇ ಪತ್ನಿ, ವಾಟ್ಸ್‌ಆ್ಯಪ್ ಸಂದೇಶ ಹಾಗೂ ಸ್ಟೇಟಸ್‌ಗಳನ್ನು ಪುರಾವೆಯಾಗಿ ನೀಡಿದ್ದಾರೆ. ಆರೋಪಿ ರವಿ ತನ್ನ ಸ್ಟೇಟಸ್‌ಗಳಲ್ಲಿ ವರ್ಗಾವಣೆಗೆ ಸಂಬಂಧಪಟ್ಟಂತೆ ಹಲವು ಮಾಹಿತಿ ಹಂಚಿಕೊಂಡಿದ್ದಾನೆ.

'ವಿಜಯನಗರದ ನಾಲ್ಕನೇ ಹಂತದಲ್ಲಿರುವ ಮನೆಯಲ್ಲಿ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಎಂಟರ್‌ಪ್ರೈಸಸ್' ಹೆಸರಿನ ಕಚೇರಿ ತೆರೆದಿದ್ದ ಸ್ಯಾಂಟ್ರೊ ರವಿ, ತಾನೊಬ್ಬ ಫೈನಾನ್ಶಿಯರ್ ಎಂಬುದಾಗಿ ಹೇಳಿಕೊಳ್ಳುತ್ತಿದ್ದ. 'ಕೆ.ಎಸ್. ಮಂಜುನಾಥ್, ಬಿ.ಎ, ಫೈನಾನ್ಶಿಯರ್' ಎಂಬ ಫಲಕವನ್ನೂ ಕಚೇರಿಯಲ್ಲಿ ನೇತು ಹಾಕಿದ್ದ' ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.

ಮೇಲ್ನೋಟಕ್ಕೆ ಕಚೇರಿ ಹೊಂದಿದ್ದ ರವಿ, ತೆರೆಮರೆಯಲ್ಲಿ ರಾಜಕಾರಣಿಗಳು ಹಾಗೂ ಅವರ ಕುಟುಂಬದವರ ಜೊತೆ ಒಡನಾಟವಿಟ್ಟುಕೊಂಡು ವರ್ಗ ಮಾಡಿಸುತ್ತಿದ್ದನೆಂಬ ಆರೋಪ ಎದುರಿಸುತ್ತಿದ್ದಾನೆ. ವೇಶ್ಯಾವಾಟಿಕೆ ಹಾಗೂ ಹಣವೇ ವರ್ಗಾವಣೆಯ ಅಸ್ತ್ರವಾಗಿತ್ತೆಂಬುದನ್ನು ಪುರಾವೆಗಳು ಹೇಳುತ್ತಿವೆ.

'ಅತ್ಯಾಚಾರ, ಹಲ್ಲೆ, ಜೀವ ಬೆದರಿಕೆ, ವರದಕ್ಷಿಣೆ ಕಿರುಕುಳ ಪ್ರಕರಣ ಸಂಬಂಧ ಸಂತ್ರಸ್ತೆ ದೂರು ನೀಡಿದ್ದಾರೆ. ಅದರನ್ವಯ ಮಾತ್ರ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಉಳಿದಂತೆ, ವರ್ಗಾವಣೆ ಹಾಗೂ ವೇಶ್ಯಾವಾಟಿಕೆ ಆಯಾಮದಲ್ಲಿ ತನಿಖೆ ನಡೆಸುವುದು ನಮ್ಮ ವ್ಯಾಪ್ತಿಗೆ ಮೀರಿದ್ದು' ಎಂದು ಮೈಸೂರು ಕಮಿಷನರೇಟ್ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

2022ರಲ್ಲಿ ರಾಜ್ಯದ ಹಲವು ಪಿಎಸ್‌ಐಗಳನ್ನು ವರ್ಗಾವಣೆ ಮಾಡಿ ಪೊಲೀಸ್ ಸಿಬ್ಬಂದಿ ಮಂಡಳಿ ಆದೇಶ ಹೊರಡಿಸಿತ್ತು. ಆದೇಶ ಪ್ರತಿಯನ್ನು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ ಸ್ಯಾಂಟ್ರೊ ರವಿ, 'ಇದು ನನ್ನ ಕೆಲಸ. 2022ರ ಮೊದಲ ಜಯ' ಎಂಬುದಾಗಿ ಬರೆದುಕೊಂಡು ಸಂಭ್ರಮಿಸಿದ್ದ.

ವರ್ಗಾವಣೆ ಆದೇಶ ಪತ್ರದಲ್ಲಿದ್ದ ಪಿಎಸ್‌ಐ ಡಿ. ರವಿಕುಮಾರ್ (ಮಂಡ್ಯ ಜಿಲ್ಲೆಯ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಹಲಗೂರು ಪೊಲೀಸ್ ಠಾಣೆಗೆ ವರ್ಗ) ಹೆಸರನ್ನು ಗುರುತು ಮಾಡಿದ್ದ. ಈ ವರ್ಗಾವಣೆಗೂ ರವಿಗೂ ಸಂಬಂಧವೇನು? ಎಂಬುದು ತನಿಖೆಯಿಂದಲೇ ತಿಳಿಯಬೇಕಿದೆ.

ಶಿವಮೊಗ್ಗ ಕೇಂದ್ರ ಕಾರಾಗೃಹ ಅಧೀಕ್ಷಕ ಮಹೇಶ್‌ಕುಮಾರ್ ಜಿಗಣಿ ಅವರನ್ನು ಬೆಂಗಳೂರು ಕೇಂದ್ರ ಕಾರಾಗೃಹದ ಅಧೀಕ್ಷಕ ಲತಾ ಅವರ ಜಾಗಕ್ಕೆ ವರ್ಗಾಯಿಸುವಂತೆ ಕೋರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು ಪತ್ರ ಬರೆದಿದ್ದರು. ಅದನ್ನು ಉಲ್ಲೇಖಿಸಿ ಕಾರಾಗೃಹ ಇಲಾಖೆಯ ಡಿಜಿಪಿಯವರಿಗೆ ನಿರ್ದೇಶನ ನೀಡಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ, ವರ್ಗಾವಣೆ ಮಾಡುವಂತೆ ಸೂಚಿಸಿದ್ದರು. ಈ ಪತ್ರವನ್ನೂ ಸ್ಯಾಂಟ್ರೊ, 'ವಿಕ್ಟರಿ' ಎಮೋಜಿ ಸಹಿತವಾಗಿ ಸ್ಟೇಟಸ್‌ನಲ್ಲಿ ಹಾಕಿಕೊಂಡಿದ್ದ.

'ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಕೃಷ್ಣಮೂರ್ತಿ ಬಿ. ಕುಲಕರ್ಣಿ ಅವರನ್ನು ಅದೇ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಲಾಗಿದೆ' ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿತ್ತು. ಇದರ ಆದೇಶವನ್ನೂ ವಿಕ್ಟರಿ ಎಮೋಜಿ ಸಮೇತ ಹಾಕಿಕೊಂಡಿದ್ದ. ಕೃಷ್ಣಮೂರ್ತಿ ಅವರೇ ಸದ್ಯ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಯಾಗಿದ್ದು, ಇವರ ವರ್ಗಾವಣೆಯಲ್ಲಿ ರವಿ ಪಾತ್ರವೇನು ಎಂಬ ಪ್ರಶ್ನೆ ಹುಟ್ಟಿಕೊಂಡಿದೆ.

ಸಚಿವರ ನಂಟು: ತನಿಖೆಗೆ ಕಾಂಗ್ರೆಸ್ ಆಗ್ರಹ

ಬೆಂಗಳೂರು: ಸ್ಯಾಂಟ್ರೊ ರವಿ ಜತೆಗೆ ಬಿಜೆಪಿ ಸರ್ಕಾರದ ಸಚಿವರು ಹೊಂದಿರುವ ನಂಟಿನ ಕುರಿತು ಲೋಕಾಯುಕ್ತ ಅಥವಾ ನ್ಯಾಯಾಂಗ ತನಿಖೆಗೆ ಆದೇಶಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ರವಿ ಬಂಧನದ ಬಳಿಕ ಕೆಪಿಸಿಸಿ ಅಧಿಕೃತ ಟ್ವಿಟರ್ ಖಾತೆಯಿಂದ ಸರಣಿ ಟ್ವೀಟ್ ಮಾಡಿದ್ದು, 'ಆತನ ಪತ್ನಿ ನೀಡಿದ್ದ ದೂರಿನ ಆಧಾರದಲ್ಲಿ ರವಿಯ ಬಂಧನವಾಗಿದೆ. 'ಆದರೆ ಸರ್ಕಾರದ ದೂರು ಕಾರಣವಲ್ಲ. ವರ್ಗಾವಣೆ ದಂಧೆಯ ಬಗ್ಗೆ ಇನ್ನೂ ತನಿಖೆ ಆರಂಭವಾಗಿಲ್ಲ. ಸಚಿವರು ಮತ್ತು ಸರ್ಕಾರದ ಜತೆಗಿನ ಆತನ ನಂಟು ಹಾಗೂ ವರ್ಗಾವಣೆ ದಂಧೆ ಕುರಿತು ತನಿಖೆ ನಡೆಸಬೇಕು' ಎಂದು ಒತ್ತಾಯಿಸಲಾಗಿದೆ.

'ಎಲ್ಲ ಸಾಕ್ಷ್ಯಗಳನ್ನೂ ನಾಶಪಡಿಸಿದ ಬಳಿಕ ಸರ್ಕಾರದ ಮುಖ್ಯ ಬ್ರೋಕರ್, ಬಿಜೆಪಿ ಮುಖಂಡ ಸ್ಯಾಂಟ್ರೊ ರವಿಯ ಬಂಧನ ನಾಟಕ ನಡೆದಿದೆ. ಅವನನ್ನು ಗುಜರಾತಿನಲ್ಲಿ ಬಂಧಿಸಲಾಗಿದೆ. ಆತ ಗುಜರಾತ್‌ಗೆ ಹೋಗಿದ್ದು ಹೇಗೆ? ಎಲ್ಲ ದಂಧೆಕೋರರಿಗೂ ಗುಜರಾತ್ ಪ್ರಿಯವಾಗುವುದೇಕೆ? ಇದು ಗುಜರಾತ್ ಮಾದರಿಯ ಪ್ರಭಾವವೆ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

'ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಗುರುವಾರ ಗುಜರಾತ್‌ನ ಅಹಮದಾಬಾದ್‌ಗೆ ತೆರಳಿದ್ದರು. ಸ್ಯಾಂಟ್ರೊ ರವಿಯನ್ನು ಅಹಮದಾಬಾದ್‌ನಲ್ಲೇ ಬಂಧಿಸಲಾಗಿದೆ. ಇದು ಖಂಡಿತಾ ಕಾಕತಾಳೀಯವಲ್ಲ' ಎಂದು ಟೀಕಿಸಿದೆ.

ಗೃಹ ಸಚಿವರ ರಕ್ಷಣೆ: ಕುಮಾರಸ್ವಾಮಿ ಆರೋಪ

ಕಲಬುರಗಿ: 'ಮಹಿಳೆಗೆ ವಂಚಿಸಿ ಸ್ಯಾಂಟ್ರೊ ರವಿ ಗುಜರಾತ್ ಮೂಲಕ ವಿದೇಶಕ್ಕೆ ಪರಾರಿಯಾಗಲು ಯೋಜನೆ ರೂಪಿಸಿದ್ದನೆ? ಕರ್ನಾಟಕ ಗಡಿ ದಾಟಲು ಆತನಿಗೆ ಹೇಗೆ ಸಾಧ್ಯವಾಯಿತು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು. ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಹುಶಃ ಸ್ಯಾಂಟ್ರೊ ರವಿಗೆ ಗೃಹ ಸಚಿವರ ರಕ್ಷಣೆ ಇರಬಹುದು. ಅವರೇ ಆತನೊಂದಿಗೆ ತೆರಳಿರಬಹುದು' ಎಂದು ಅನುಮಾನ ವ್ಯಕ್ತಪಡಿಸಿದರು.

ಭಯವೂ ಇದೆ: ಸಂತ್ರಸ್ತೆ

ಮೈಸೂರು: 'ರವಿಯ ಬಂಧನದಿಂದ ಸಮಾಧಾನವಾಗಿದೆ. ಆದರೆ, ಸರ್ಕಾರದ ಭಾಗವಾದ ಪ್ರಭಾವಿಗಳ ಜೊತೆ ಆತನೊಂದಿಗೆ ಶಾಮೀಲಾಗಿರುವ ಆರೋಪ ಇರುವಾಗ ಸಮಸ್ಯೆಯಾಗಬಹುದೆಂಬ ಭಯವೂ ಇದೆ' ಎಂದು ಸಂತ್ರಸ್ತೆ ಹೇಳಿದ್ದಾರೆ.

'ತಾಯಿ ಮೇಲೆ ಆಣೆ ಮಾಡಿ ಮೋಸ'

ಒಂದನೇ ಪುಟದಿಂದ..

'ಬೊಮ್ಮಾಯಿಯವರೇ ಮೀಸಲಾತಿ ಕೊಟ್ಟರೆ ಮಾತ್ರ ನಿಮಗೆ ಮತ. ಹೋರಾಟದಿಂದ ಕದಲುವುದಿಲ್ಲ. ಪಂಚಮಸಾಲಿಗಳ ಹೋರಾಟಕ್ಕೆ ಜನ ಬರದಂತೆ ಬೊಮ್ಮಾಯಿ ಅವರು ಬೆದರಿಕೆ ಹಾಕಿದ್ದಾರೆ' ಎಂದು ಆರೋಪಿಸಿದರು. ಮಾಜಿ ಸಚಿವ ವಿನಯ ಕುಲಕರ್ಣಿ, ಹರಿಹರದ ಮಾಜಿ ಶಾಸಕ ಎಚ್.ಎಸ್. ಶಿವಶಂಕರಪ್ಪ, ಮುಖಂಡರಾದ ಶಶಿಧರ ಯಲಿಗಾರ, ಹಂದಿಗನೂರಿನ ರಾಜೇಶ್ವರಿ ಪಾಟೀಲ, ತಾಲ್ಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಶಿವಾನಂದ ಬಾಗೂರ ಸೇರಿದಂತೆ ವಿವಿಧ ಜಿಲ್ಲೆಗಳ ಜಿಲ್ಲಾ ಘಟಕದ ಅಧ್ಯಕ್ಷರು ಮತ್ತು ರಾಜ್ಯ ಸಮಿತಿ ಸದಸ್ಯರು ಇದ್ದರು.

ಸಿ.ಎಂ ಬೊಮ್ಮಾಯಿಗೆ ಯತ್ನಾಳ ಸವಾಲ್

'ಬೊಮ್ಮಾಯಿಯವರೇ ನೀವು ಚುನಾವಣೆ ನಂತರ ವಿಧಾನಸಭೆಯಲ್ಲಿ ಇರುತ್ತೀರೋ ಇಲ್ಲವೋ ಗೊತ್ತಿಲ್ಲ. ನಾನಂತೂ ಇರುತ್ತೇನೆ. ಯಾರೇ ರೊಕ್ಕ ಕೊಟ್ಟರೂ ನಮ್ಮ ಸ್ವಾಮೀಜಿ ತೆಗೆದುಕೊಳ್ಳುವುದಿಲ್ಲ. ಯಾಕೆ ಹೀಗೆ ಮಾಡ್ತಾ ಇದೀರೀ ಬೊಮ್ಮಾಯಿಯವರೇ?' ಎಂದು ಸಿಎಂ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ಕೇಳಿದರು.

'ಜಯಪ್ರಕಾಶ ಹೆಗ್ಡೆ ಅವರಿಗೆ ಹಿಂದುಳಿದ ವರ್ಗಗಳ ಆಯೋಗದ ವರದಿ ಕೊಡಬೇಡ ಎಂದು ಹೇಳಿದ್ದಾರೆ. ಚುನಾವಣೆಗೆ ಇಬ್ಬರೂ (ಯಡಿಯೂರಪ್ಪ ಮತ್ತು ಬೊಮ್ಮಾಯಿ) ಓಡಾಡ್ರಿ ನಿಮ್ಮ ಶಕ್ತಿ ತೋರಿಸ್ರಿ ನೋಡೋಣ' ಎಂದು ಸವಾಲು ಹಾಕಿದರು.

ನಿರಾಣಿ ವಿರುದ್ಧ ಯತ್ನಾಳ ವಾಗ್ದಾಳಿ

'ವಿಜಾಪುರದಾಗ ಮಂತ್ರಿ ಅದಾನಲ್ಲ, ಅವ ಪ್ರೆಸ್ ಮೀಟ್ ಮಾಡಿ, ಬಸನಗೌಡಗೆ ಟಿಕೆಟ್ ಕೊಡಿಸಲ್ಲ, ಸೋಲಸ್ತೀನಿ ಅಂದ. ದಮ್ ಇದ್ದರೆ ಅಖಾಡಕ್ಕೆ ಬರಲಿ; ಅವನಂತೆ ಚಿಲ್ಲರೆ ಕೆಲಸವನ್ನು ನಾನು ಮಾಡಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಸಚಿವ ಮುರುಗೇಶ ನಿರಾಣಿ ಹೆಸರು ಹೇಳದೇ, ಅವಹೇಳನಕಾರಿ ಭಾಷೆ ಬಳಸಿ ವಾಗ್ದಾಳಿ ನಡೆಸಿದರು.

'ಸ್ವಾಮೀಜಿ ಮಾತಾಡಿದ್ರೆ ನಿಮ್ಮ ಗುರುಗಳದ್ದು ಸಿ.ಡಿ ಇದೆ ಎಂದು ಹೆದರಿಸಿದರು. ಸಿ.ಡಿ ಅಂದರೆ ಹೆದರಬೇಡಿ ಗುರುಗಳೇ ಅಂದಿದ್ದೆ. ಈ ಮಕ್ಕಳದು ಸಿ.ಡಿ ಫ್ಯಾಕ್ಟರಿ ಇದೆ. ಬೆದರಿಸುವವರ ಜೊತೆಗೆ ಓಡಾಡ್ತೀರಿ ಬೊಮ್ಮಾಯಿಯವರೇ. ಸ್ಪೆಷಲ್ ವಿಮಾನದಲ್ಲಿ ಹಾರಾಡುವುದು ಬಿಟ್ಟು ಬೇರೆ ಏನೂ ಮಾಡಲಿಲ್ಲ' ಎಂದು ಟೀಕಿಸಿದರು.

ಸ್ಯಾಂಟ್ರೊ ರವಿ ಬಂಧನ

ಒಂದನೇ ಪುಟದಿಂದ...

'ಅಷ್ಟೆಲ್ಲ ಪ್ರಕರಣಗಳಿದ್ದರೂ ಅವ್ಯವಹಾರ ಮಾಡಲು ಆತನಿಗೆ ಸಾಧ್ಯವಾದದ್ದು ಹೇಗೆ' ಎಂಬ ಪ್ರಶ್ನೆಗೆ, 'ಎಲ್ಲವೂ ತನಿಖೆ ಆಗಲಿದೆ. ಸಭ್ಯತೆಯ ಮುಖವಾಡ ಧರಿಸಿದ್ದ ದುಷ್ಟ ವ್ಯಕ್ತಿ ಆತ' ಎಂದರು.

ಇನ್ನೆರಡು ದಿನಗಳಲ್ಲಿ ಮೈಸೂರಿಗೆ: 'ಆರೋಪಿಯನ್ನು ಅಹಮದಾಬಾದ್‌ನ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ನ್ಯಾಯಾಲಯದಿಂದ 'ಟ್ರಾನ್ಸಿಟ್ ವಾರೆಂಟ್' ಪಡೆದು ಮೈಸೂರಿಗೆ ಸ್ಥಳಾಂತರಿಸಿ, ಇಲ್ಲಿನ ನ್ಯಾಯಾಲಯಕ್ಕೆ ಎರಡು ದಿನಗಳಲ್ಲಿ ಹಾಜರುಪಡಿಸಲಾಗುವುದು' ಎಂದರು.

ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಡಿಸಿಪಿ ಮುತ್ತುರಾಜ್ ಎಂ., ಎಸಿಪಿ ಎಂ.ಶಿವಶಂಕರ್, ಎಸ್ಪಿಗಳಾದ ರಾಮನಗರದ ಡಾ.ಸಂತೋಷ್ ಬಾಬು, ಮಂಡ್ಯದ ಯತೀಶ್ ಎನ್., ರಾಯಚೂರಿನ ನಿಖಿಲ್ ಇದ್ದರು.

ಆತನ ವಿರುದ್ಧ, ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ, ಕೊಲೆ ಬೆದರಿಕೆಯೊಡ್ಡಿದ್ದ ಬಗ್ಗೆ ಜ.2ರಂದು ಇಲ್ಲಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಆರೋಪಿಯನ್ನು ಬಂಧಿಸದಿರುವುದಕ್ಕೆ ವಿವಿಧ ಸಂಘಟನೆಗಳು ವ್ಯಾಪಕ ಆಕ್ರೋಶ ವ್ಯಕ್ತಪಡಿಸಿ, ಪ್ರತಿಭಟನೆಗಳನ್ನು ನಡೆಸಿದ್ದವು.

'ರೂಪ ಬದಲಿಸಿದ್ದ ಆರೋಪಿ'

ಮೈಸೂರು: 'ಕಪ್ಪು ಕೂದಲು, ದಪ್ಪ ಮೀಸೆಯುಳ್ಳ ತನ್ನ ಚಿತ್ರಗಳು ಮಾಧ್ಯಮದಲ್ಲಿ ಪ್ರಕಟವಾಗಿದ್ದರಿಂದ, ತಲೆ ಕೂದಲು, ಮೀಸೆ-ಗಡ್ಡವನ್ನೂ ತೆಗೆದು ಆರೋಪಿ ಚಹರೆಯನ್ನೇ ಬದಲಿಕೊಂಡಿದ್ದ' ಎಂದು ಆತನ ಈಗಿನ ಚಿತ್ರವನ್ನು ಅಲೋಕ್ ಕುಮಾರ್ ಪ್ರದರ್ಶಿಸಿದರು. 'ಆತನ ಮುಖ ಚಹರೆ ಬದಲಾಗಿದ್ದರೂ ಪತ್ತೆ ಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ತಂಡಗಳಿಗೆ ಮುಖ್ಯಮಂತ್ರಿ ಬಹುಮಾನ ಘೋಷಿಸಿದ್ದಾರೆ' ಎಂದು ತಿಳಿಸಿದರು.

'ಬೆಂಗಳೂರಿನ ಆರ್.ಆರ್.ನಗರ, ಮೈಸೂರಿನ ದಟ್ಟಗಳ್ಳಿ ಸೇರಿದಂತೆ ಆತನ ಮೂರು ಮನೆಗಳಲ್ಲಿ ಶೋಧ ನಡೆಸಲಾಗಿತ್ತು. 2002ರಲ್ಲಿ ಆತನ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಅದರೊಂದಿಗೆ ಪ್ರಭಾವಿಗಳ ಜತೆ ಒಡನಾಟ ಮತ್ತಿತರ ಪ್ರಕರಣಗಳ ಬಗ್ಗೆಯೂ ತನಿಖೆ ನಡೆಯಲಿದೆ' ಎಂದರು.



ಝಲಕ್...

ಧಾರವಾಡದ ಕರ್ನಾಟಕ ಕಲಾ ಕಾಲೇಜು ಮೈದಾನದಲ್ಲಿನ ಮುಖ್ಯ ವೇದಿಕೆಯಲ್ಲಿ ರಾಷ್ಟ್ರೀಯ ಯುವಜನೋತ್ಸವದಲ್ಲಿ ಶುಕ್ರವಾರ ಸಂಜೆ ಪ್ರದರ್ಶನಗೊಂಡ ದೊಡ್ಡಾಟದ ಝಲಕ್

ಷರತ್ತಿಲ್ಲದೇ ವಿದ್ಯುತ್ ಸಂಪರ್ಕ: ಕೆಇಆರ್‌ಸಿ ಅಧಿಸೂಚನೆ

ಬೆಂಗಳೂರು: ವಾಸ್ತವ್ಯ ಪ್ರಮಾಣ ಪತ್ರದ ಅಗತ್ಯವಿಲ್ಲದೇ, ಮನೆ, ನಿವೇಶನ, ಬಡಾವಣೆ ಮತ್ತು ಕೈಗಾರಿಕಾ ಘಟಕಗಳಿಗೆ ಅವುಗಳ ಬೇಡಿಕೆಯನ್ನು ಆಧರಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವ ಸಂಬಂಧ ಕೆಇಆರ್‌ಸಿ ಅಧಿಸೂಚನೆಯನ್ನು ಹೊರಡಿಸಿದೆ.

ಈ ಹಿಂದೆ ವಿದ್ಯುತ್ ಸಂಪರ್ಕ ಪಡೆಯಲು ಕಟ್ಟಡ ಯೋಜನಾ (ಪ್ಲಾನ್) ಅನುಮೋದನೆ ಪಡೆಯುವುದು ಅಗತ್ಯವಿತ್ತು. ಇನ್ನು ಮುಂದೆ ಅದರ ಅಗತ್ಯವಿಲ್ಲ. ಈಗ ಇರುವ ಏಕೈಕ ಷರತ್ತು ಎಂದರೆ, ಅರ್ಜಿ ಸಲ್ಲಿಸುವ ವ್ಯಕ್ತಿ ಕಟ್ಟಡದ ಮಾಲೀಕನಾಗಿರಬೇಕು ಅಥವಾ ಮನೆಯಲ್ಲಿರಬೇಕು ಎಂದು ನಿಯಮಾವಳಿಗೆ ತಿದ್ದುಪಡಿ ಮಾಡಲಾಗಿದೆ.

ವಾಸ್ತವ್ಯ ಪ್ರಮಾಣ ಪತ್ರ (ಓಸಿ) ನೀಡದ ಕಾರಣಕ್ಕೆ ವಿದ್ಯುತ್ ಸಂಪರ್ಕ ನೀಡಲು ನಿರಾಕರಿಸಲಾಗುತ್ತಿತ್ತು. ಅದರಲ್ಲೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಮಸ್ಯೆಯಾಗಿ ಪರಿಣಮಿಸಿತ್ತು. 'ಬೆಳಕು' ಯೋಜನೆಯಡಿ ಸಂಪರ್ಕ ಕಲ್ಪಿಸಲು ಸರ್ಕಾರ ಮುಂದಾಗಿದೆ.

'ಡಿಜಿಟಲೀಕರಣಕ್ಕೆ ವೇಗ ನೀಡಿದ ಕೋವಿಡ್ ಪಿಡುಗು'

ನವದೆಹಲಿ (ಪಿಟಿಐ): ಕೋವಿಡ್-19 ಪಿಡುಗು ಹಲವು ಸವಾಲುಗಳ ನಡುವೆಯೂ ಬೆಳವಣಿಗೆಯ ವೇಗ ವರ್ಧಕವಾಗಿದೆ ಮತ್ತು ಡಿಜಿಟಲ್ ಸಾಧನಗಳ (ಟೂಲ್ಸ್) ಅಳವಡಿಕೆಯನ್ನು ಚುರುಕುಗೊಳಿಸಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯಾ ಶುಕ್ರವಾರ ಹೇಳಿದರು.

'ವಾಯ್ಸ್ ಆಫ್ ಗ್ಲೋಬಲ್ ಸಮ್ಮಿಟ್ 2023'ರ ಆರೋಗ್ಯ ಸಚಿವರ ಅಧಿವೇಶನ ಉದ್ದೇಶಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಭರವಸೆಗೆ ಇಂಧನ ಸಚಿವ ಸುನಿಲ್ ಕುಮಾರ್ ಲೇವಡಿ

'200 ಯುನಿಟ್ ವಿದ್ಯುತ್ ಉಚಿತ: ಶತಮಾನದ ಸುಳ್ಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಜೋಡಿ ಎಸ್ಕಾಂಗಳನ್ನು ನಷ್ಟಕ್ಕೆ ತಳ್ಳಿದ್ದೂ ಅಲ್ಲದೇ ಕರ್ನಾಟಕವನ್ನು ಕತ್ತಲೆಗೆ ದೂಡಿದರು. ಇವರು ಮಾಡಿದ ನಷ್ಟವನ್ನು ನಮ್ಮ ಸರ್ಕಾರ ಬಂದ ಮೇಲೆ ತುಂಬಿದೆವು' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದ್ದಾರೆ.



'ಈಗ ಮಹಾನ್ ಆರ್ಥಿಕ ತಜ್ಞರೊಬ್ಬರು ಈಗ 200 ಯುನಿಟ್ ಉಚಿತ ವಿದ್ಯುತ್ ನೀಡುವ ಭರವಸೆ ಕೊಟ್ಟಿದ್ದಾರೆ. ಇದು ಜನಹಿತದ ಹೇಳಿಕೆಯಲ್ಲ' ಎಂದು ಅವರು ತಿಳಿಸಿದ್ದಾರೆ.

'ಸಿದ್ದರಾಮಯ್ಯ ಅಧಿಕಾರದಲ್ಲಿದ್ದಾಗ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಂಪರ್ಕ ನೀಡದೇ ಸತಾಯಿಸಿದವರು; ಈಗ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ನೀಡುತ್ತೇವೆ ಎಂದು ಡಂಗುರ ಸಾರುತ್ತಿರುವುದು ಈ ಶತಮಾನದ ಅತಿ ದೊಡ್ಡ ಸುಳ್ಳಾಗಬಹುದು' ಎಂದು ಅವರು ವ್ಯಂಗ್ಯವಾಡಿದ್ದಾರೆ.

'ಉಚಿತ ವಿದ್ಯುತ್‌ನಿಂದ ಎಸ್ಕಾಂಗಳ ಮೇಲೆ ಇನ್ನಷ್ಟು ಹೊರೆಯಾಗುತ್ತದೆ. ಕಾಂಗ್ರೆಸ್ ಆಡಳಿತಾವಧಿಯಲ್ಲಿ ಹೊರಿಸಿದ್ದ ನಷ್ಟದ ಬಾಬ್ತು ₹9,000 ಕೋಟಿಯನ್ನು ನಮ್ಮ ಸರ್ಕಾರ ಬಂದ ಮೇಲೆ ಎಸ್ಕಾಂಗಳಿಗೆ ಕೊಟ್ಟೆವು. ಹೀಗೆ ಮಾಡಿ, ಕಾಂಗ್ರೆಸ್ ಆಡಳಿತ ವೈಫಲ್ಯವನ್ನು ಸರಿಪಡಿಸಿದ್ದೆವು. ಮತಕ್ಕಾಗಿ ಇಂಧನ ಇಲಾಖೆ ಮಾರಾಟ ಮಾಡಬೇಡಿ' ಎಂದಿದ್ದಾರೆ.

'ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಕೃಷಿ ಪಂಪ್‌ಸೆಟ್‌ಗಳಿಗೆ ಹೊಸ ಸಂಪರ್ಕ ನೀಡಿರಲಿಲ್ಲ. ಇದರಿಂದ ರೈತರು ಮತ್ತು ಕೃಷಿ ವಿಸ್ತರಣೆ ಚಟುವಟಿಕೆಗೆ ತೀವ್ರ ಸಮಸ್ಯೆ ಆಗಿತ್ತು. 2016-17 ರಿಂದ ಕೃಷಿ ಪಂಪ್‌ಸೆಟ್‌ಗಳಿಗೆ ನೀಡುತ್ತಿದ್ದ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ನೀಡದೇ ಸತಾಯಿಸಿದರು. ಇದರಿಂದ ರೈತರು ಮಾತ್ರವಲ್ಲ ಉದ್ಯಮಗಳಿಗೂ ತೊಂದರೆ ಆಗಿತ್ತು. ಬೊಮ್ಮಾಯಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2016 ರಿಂದ ಇಲ್ಲಿಯವರೆಗಿನ ಹಿಂಬಾಕಿಯೂ ಸೇರಿ ₹18,000 ಕೋಟಿ ಸಬ್ಸಿಡಿ ಹಣವನ್ನು ಎಸ್ಕಾಂಗಳಿಗೆ ನೀಡಿದ್ದೇವೆ' ಎಂದು ಸುನಿಲ್ ಹೇಳಿದ್ದಾರೆ.

ಸುನಿಲ್ ಅಸಾಮರ್ಥ್ಯಕ್ಕೆ ತಕ್ಕಂತೆ ಇಂಧನ ಇಲಾಖೆ : ಸಿದ್ದರಾಮಯ್ಯ



'ಸಚಿವ ಸುನಿಲ್‌ಕುಮಾರ್ ಅಸಾಮರ್ಥ್ಯಕ್ಕೆ ತಕ್ಕಂತೆ ಇಂಧನ ಇಲಾಖೆಯೂ ಕೆಲಸ ಮಾಡುತ್ತಿದೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಇಲಾಖೆಯನ್ನು ಲಾಭದ ಹಳಿಗೆ ತಂದು ಜನರಿಗೆ 200 ಯುನಿಟ್‌ವರೆಗೆ ಉಚಿತವಾಗಿ ವಿದ್ಯುತ್ ಪೂರೈಸಲಾಗುವುದು. ಉದ್ಘಾಟನಾ ಸಮಾರಂಭಕ್ಕೆ ಸುನಿಲ್ ಅವರನ್ನೂ ಆಹ್ವಾನಿಸುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಸಚಿವರ ಆರೋಪಕ್ಕೆ ಸರಣಿ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, 'ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ವಿದ್ಯುತ್ ಸರಬರಾಜು ಕಂಪನಿಗಳಿಗೆ (ಎಸ್ಕಾಂ) ನೀಡಿದ ಅನುದಾನ ₹ 6,000 ಕೋಟಿಯೋ? ಅಥವಾ ₹ 9,000 ಕೋಟಿಯೋ? ಯಾವುದು ನಿಜ ಲೆಕ್ಕ? ಯಾವುದು ಸುಳ್ಳು ಲೆಕ್ಕ? ಎಂಬುದನ್ನು ಸುನಿಲ್ ಕುಮಾರ್ ಹೇಳಬೇಕು' ಎಂದು ಆಗ್ರಹಿಸಿದ್ದಾರೆ.

'2013ರಲ್ಲಿ ನಮ್ಮ ಸರ್ಕಾರ ಅಧಿಕಾರ ಬರುವಾಗ ಹಿಂದಿನ ಸರ್ಕಾರ ಇಂಧನ ಇಲಾಖೆಯ ಮೇಲೆ ದೊಡ್ಡ ಮೊತ್ತದ ಸಾಲದ ಗಂಟನ್ನು ಹೊರಿಸಿ ಹೋಗಿತ್ತು. ಕುತ್ತಿಗೆವರೆಗೂ ಸಾಲದಲ್ಲಿ ಮುಳುಗಿದ್ದ ಎಸ್ಕಾಂಗಳನ್ನು ಸಾಲ ಮಾಡಿ ಬಾಕಿ ತೀರಿಸಿ ಮೇಲೆತ್ತಿದವರು ನಾವು' ಎಂದಿದ್ದಾರೆ.

ರಾಜ್ಯದಲ್ಲಿ ಸೌರಶಕ್ತಿ, ಪವನ ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ತಮ್ಮ ಸರ್ಕಾರ ಮಾಡಿದ ಕೆಲಸ ಕಾರಣ. ಈಗ ಬಿಜೆಪಿ ಸರ್ಕಾರ ವಿದ್ಯುತ್ ಮಾರಾಟ ಮಾಡಿ ಲಾಭ ಗಳಿಸುತ್ತಿದ್ದರೆ ಅದು ತಮ್ಮ ಸರ್ಕಾರದ ಶ್ರಮದ ಫಲದಿಂದ. ದಿನದ ಎರಡು-ಮೂರು ಗಂಟೆ ವಿದ್ಯುತ್ ಪೂರೈಸುವುದು ಕಷ್ಟವಾದ ಪರಿಸ್ಥಿತಿ ಇತ್ತು. ಐದು ವರ್ಷಗಳ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ 13,175 ಮೆಗಾ ವಾಟ್‌ನಷ್ಟು ಹೆಚ್ಚಳ ಸಾಧಿಸಿದ್ದು ತಮ್ಮ ಸರ್ಕಾರದ ಯೋಜನೆಗಳಿಂದ ಎಂದು ತಿರುಗೇಟು ನೀಡಿದ್ದಾರೆ.

ಗಾಂಜಾ ಮಾರಾಟ: ಮತ್ತಿಬ್ಬರು ವೈದ್ಯ ವಿದ್ಯಾರ್ಥಿಗಳ ಸೆರೆ

ಪ್ರಜಾವಾಣಿ ವಾರ್ತೆ


ಡಾ.ಬಾಲಾಜಿ


ಡಾ.ರಾಘವ

ಮಂಗಳೂರು: ಗಾಂಜಾ ಸೇವನೆ ಹಾಗೂ ಮಾರಾಟ ಸಂಬಂಧ ಮತ್ತಿಬ್ಬರು ವೈದ್ಯಕೀಯ ವಿದ್ಯಾರ್ಥಿಗಳನ್ನು ನಗರದ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಅರಿವಳಿಕೆ ವಿಜ್ಞಾನದ ಸ್ನಾತಕೋತ್ತರ ಪದವಿ ವಿದ್ಯಾರ್ಥಿ, ಅತ್ತಾವರದ ಡಾ.ರಾಘವ ದತ್ತ ಹಾಗೂ ಜನರಲ್ ಮೆಡಿಸಿನ್ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ, ಫಳ್ನೀರ್ ನಿವಾಸಿ ಡಾ.ಬಾಲಾಜಿ ಬಂಧಿತರು ಎಂದು ಪೊಲೀಸರು ತಿಳಿಸಿದ್ದಾರೆ.

ಅನಿವಾಸಿಭಾರತೀಯಪ್ರಜೆಕಿಶೋರಿಲಾಲ್ ರಾಮ್‌ಜಿ ಷಾ ಬಂಧನದಿಂದ ನಗರದ ವೈದ್ಯಕೀಯ ಕಾಲೇಜುಗಳ ವೈದ್ಯ ಹಾಗೂ ವೈದ್ಯ ವಿದ್ಯಾರ್ಥಿಗಳೂ ಗಾಂಜಾ ಮಾರಾಟ ಮತ್ತು ಸೇವನೆ ಜಾಲದಲ್ಲಿ ಸಕ್ರಿಯರಾಗಿರುವುದು ಬೆಳಕಿಗೆ ಬಂದಿತ್ತು. ಈ ಪ್ರಕರಣ ಸಂಬಂಧ ಪೊಲೀಸರು ನಗರದ ವೈದ್ಯಕೀಯ ಕಾಲೇಜುಗಳ ಇಬ್ಬರು ವೈದ್ಯರು, ಏಳು ವೈದ್ಯ ವಿದ್ಯಾರ್ಥಿಗಳು ಸೇರಿದಂತೆ 10 ಮಂದಿ ಆರೋಪಿಗಳನ್ನು ಮೊದಲು ಬಂಧಿಸಿದ್ದಾರೆ. ಬಂಧಿತರಲ್ಲಿ ನಾಲ್ವರು ವೈದ್ಯ ವಿದ್ಯಾರ್ಥಿನಿಯರು ಇದ್ದರು. ಬಳಿಕ ಗುರುವಾರ ಮತ್ತೆ ಮೂವರನ್ನು ಬಂಧಿಸಿದ್ದರು. ಈ ಪ್ರಕರಣದಲ್ಲಿ ಇದುವರೆಗೆ ಒಟ್ಟು 15 ಮಂದಿಯ ಬಂಧನವಾಗಿದೆ.

ಚರಸ್, ಗಾಂಜಾ ವಶ– ಮೂವರ ಬಂಧನ

ಮಂಗಳೂರು: ಹಿಮಾಚಲ ಪ್ರದೇಶದಿಂದ ಚರಸ್ ಹಾಗೂ ಗಾಂಜಾವನ್ನು ಕಳ್ಳಸಾಗಣೆ ಮಾಡಿ ಇಲ್ಲಿನ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾರಾಟ ಮಾಡಿದ ಮೂವರು ಆರೋಪಿಗಳನ್ನು ನಗರದ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಆರೋಪಿಗಳಿಂದ 500 ಗ್ರಾಂ ಚರಸ್ ಹಾಗೂ 1 ಕೆ.ಜಿ. ಗಾಂಜಾ, ಅದರ ಸಾಗಾಟಕ್ಕೆ ಬಳಸಿದ ರಿಡ್ಜ್ ಕಾರು ಹಾಗೂ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡಿದ್ದಾರೆ. ವಶಪಡಿಸಿಕೊಂಡ ಸೊತ್ತುಗಳ ಒಟ್ಟು ಮೌಲ್ಯ ₹ 8 ಲಕ್ಷ ಎಂದು ಅಂದಾಜಿಸಲಾಗಿದೆ.

ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕು ಬಜಗೋಳಿಯ ಸುಕೇತ್ ಕಾವ ಅಲಿಯಾಸ್ ಚುಕ್ಕಿ (33), ಕೊಯ ಮತ್ತೂರಿನ ಕೆ.ಅರವಿಂದ (24), ಕಾರ್ಕಳ ಪುಲ್ಕೇರಿಯ ಸುನಿಲ್ (32) ಬಂಧಿತರು. ಆರೋಪಿಗಳಲ್ಲಿ ಸುಕೇತ್ ಪ್ರವಾಸಿ ಮಾರ್ಗದರ್ಶಿಯಾಗಿ, ಅರವಿಂದ್ ವಸ್ತ್ರವಿನ್ಯಾಸಗಾರನಾಗಿ, ಸುನಿಲ್ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದರು.

'ಹಿಮಾಚಲ ಪ್ರದೇಶ ರಾಜ್ಯದ ಕುಲ್ಲು ಜಿಲ್ಲೆಯ ಪಾರ್ವತಿ ಕಣಿವೆಯ ಗುಡ್ಡಗಾಡು ಪ್ರದೇಶದಲ್ಲಿ ಬೆಳೆದ ಗಾಂಜಾವನ್ನು ಮತ್ತು ಅದರಿಂದ ತಯಾರಿಸಿದ ಚರಸ್ ಅನ್ನು ಆರೋಪಿಗಳು ಅಲ್ಲಿನ ಗುಡ್ಡಗಾಡು ಜನರಿಂದ ಖರೀದಿಸಿ, ಕಳ್ಳಸಾಗಣೆ ಮಾಡಿದ್ದರು. ವ್ಯಾಪಾರಿಗಳು ಹಾಗೂ ಕೆಲವು ಉದ್ಯಮಿಗಳ ಮೂಲಕ ನಗರದ ಪ್ರತಿಷ್ಠಿತ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾರಾಟ ಮಾಡಿದ್ದರು' ಎಂದು ನಗರ ಪೊಲೀಸ್ ಕಮಿಷನರ್ ಶಶಿಕುಮಾರ್ ತಿಳಿಸಿದ್ದಾರೆ.

ವಶ: ಇನ್ನೊಂದು ಪ್ರಕರಣದಲ್ಲಿ, ಸ್ವಿಫ್ಟ್ ಕಾರಿನಲ್ಲಿ 10.2 ಕೆ.ಜಿ. ಗಾಂಜಾ ಸಾಗಿಸಿದ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರದ ವಿಜಯ್ ಕುಮಾರ್ (24) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಮಂಗಳೂರು ಡ್ರಗ್ಸ್ ದಂಧೆ: ಕಠಿಣ ಕ್ರಮ'

ಉಡುಪಿ: 'ಮಂಗಳೂರು ಡ್ರಗ್ಸ್ ದಂಧೆಯಲ್ಲಿ ವೈದ್ಯ ವಿದ್ಯಾರ್ಥಿಗಳು, ಪ್ರಾಧ್ಯಾಪಕರಂತಹ ವಿದ್ಯಾವಂತರು ಭಾಗಿಯಾಗಿರುವುದು ದುರದೃಷ್ಟಕರ. ಮಾದಕ ವಸ್ತುಗಳನ್ನು ಸೇವಿಸಿದವರು ಹಾಗೂ ಪೆಡ್ಲರ್‌ಗಳ ವಿರುದ್ಧ ಕಠಿಣ ಕಾನೂನುಕ್ರಮ ಜರುಗಿಸಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಕೇರಳದ ಕೋಟಯಂ ಜಿಲ್ಲೆಯಲ್ಲಿ ಹಕ್ಕಿ ಜ್ವರ

ಕೋಳಿಗಳ ಸಾವು, ಗಡಿಯಲ್ಲಿ ಆತಂಕ

ಪ್ರಜಾವಾಣಿ ವಾರ್ತೆ


ಮೃತಪಟ್ಟ ಕೋಳಿಯನ್ನು ಗುಂಡ್ಲುಪೇಟೆ ಪಶುವೈದ್ಯಾಧಿಕಾರಿ ಪರಿಶೀಲಿಸಿದರು

ಮುಖ್ಯಾಂಶಗಳು
- ಕೇರಳದಿಂದ ಬರುವ ವಾಹನಗಳ ತಪಾಸಣೆ ಇಲ್ಲ
- ಸತ್ತ ಕೋಳಿಯೊಂದರ ಅಂಗಾಂಗ ಪ್ರಯೋಗಾಲಯಕ್ಕೆ ರವಾನೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಕೇರಳದ ಕೋಟಯಂ ಜಿಲ್ಲೆಯಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡ ಬೆನ್ನಲ್ಲೇ, ತಾಲ್ಲೂಕಿನ ಗಡಿಭಾಗದ ಕೆಲವೆಡೆ ಸಾಕು ಕೋಳಿಗಳು ಮೃತಪಡುತ್ತಿರುವುದರಿಂದ ಜನರು ಆತಂಕಗೊಂಡಿದ್ದಾರೆ.

ಕಾಡಂಚಿನ ಗ್ರಾಮ ಮೇಲುಕಾಮನಹಳ್ಳಿ, ಅಲ್ಲಿನ ಗಿರಿಜನ ಕಾಲೊನಿ, ಸವಕನಹಳ್ಳಿ ಪಾಳ್ಯ ಸುತ್ತಮುತ್ತ ಆರೋಗ್ಯವಂತ ಕೋಳಿಗಳು ಮೃತಪಡುತ್ತಿರುವುದು ಅಲ್ಲಲ್ಲಿ ವರದಿಯಾಗುತ್ತಿದೆ.

ಕೇರಳದಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡ ನಂತರ ಕೇರಳದಿಂದ ರಾಜ್ಯವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ– 766ರ ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಪಶುಪಾಲನಾ ಇಲಾಖೆ ಕಟ್ಟೆಚ್ಚರ ವಹಿಸಿದೆ. ಗೂಡ್ಸ್ ವಾಹನಗಳಿಗೆ ಸೋಂಕು ನಿವಾರಕ ಸಿಂಪಡಿಸಲಾಗುತ್ತಿದೆ. ಆದರೆ, ರಾಷ್ಟ್ರೀಯ ಹೆದ್ದಾರಿ–212ನಲ್ಲಿ ತಮಿಳುನಾಡಿನ ಕೆಕ್ಕನಹಳ್ಳ ಚೆಕ್‌ಪೋಸ್ಟ್ ಕಡೆಯಿಂದ ಬರುವ ಕೇರಳದ ವಾಹನಗಳಿಗೆ ತಪಾಸಣೆ ಮಾಡುತ್ತಿಲ್ಲ. ತಾಲ್ಲೂಕಿನ ಅನೇಕ ವಾಹನಗಳು ಕೇರಳದ ವಿವಿಧ ಭಾಗಗಳಿಗೆ ರಾಷ್ಟ್ರೀಯ ಹೆದ್ದಾರಿ– 766ರಲ್ಲಿ ಹೋಗಿ, ಬರುವಾಗ ರಾಷ್ಟ್ರೀಯ ಹೆದ್ದಾರಿ–212ರ ತಮಿಳುನಾಡಿನ ಗುಡಲೂರು ಮಾರ್ಗವಾಗಿ ಬರುತ್ತವೆ. ಇದರಿಂದಾಗಿ ಸೋಂಕು ಹರಡಿರಬಹುದು ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಮೇಲುಕಾಮನಹಳ್ಳಿ ಗ್ರಾಮಸ್ಥರು ಮೃತಪಟ್ಟ ಕೋಳಿಯೊಂದನ್ನು ಗುಂಡ್ಲುಪೇಟೆಯ ಪಶು ವೈದ್ಯಾಧಿಕಾರಿ ಬಳಿಗೆ ತಂದಿದ್ದರು. ಇಲಾಖೆಯ ಸಹಾಯಕ ನಿರ್ದೇಶಕ ಡಾ.ಮೋಹನ್ ಕುಮಾರ್ ಮರಣೋತ್ತರ ಪರೀಕ್ಷೆ ನಡೆಸಿ ಮೈಸೂರಿನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

'50ಕ್ಕೂ ಹೆಚ್ಚು ಸಾಕು ಕೋಳಿಗಳು ಮೃತಪಟ್ಟಿವೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಸತ್ತ ಕೋಳಿಯೊಂದರ ಅಂಗಾಂಗಗಳನ್ನು ಪ್ರಯೋಗಾಯಕ್ಕೆ ಕಳುಹಿಸಿದ್ದು, ವರದಿ ಬಂದ ನಂತರವೇ ಸಾವಿನ ಕಾರಣ ತಿಳಿಯಲಿದೆ' ಎಂದು ಪಶುಪಾಲನೆ ಇಲಾಖೆಯ ಉಪನಿರ್ದೇಶಕ ಡಾ.ಶಿವಣ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಿಮ್ಮ ಕೆಲಸಗಳನ್ನು ನೀವು ಹೃತ್ಪೂರ್ವಕವಾಗಿ ಮಾಡಿದಾಗ, ಸಂತಸದ ನದಿಯೊಂದು ನಿಮ್ಮೊಳಗೆ ಹರಿಯುತ್ತಿರುವಂತಹ ಅನುಭವ ನಿಮಗಾಗುತ್ತದೆ.

-ರೂಮಿ

ಮುಸ್ಲಿಮರ ಕುರಿತು ಭಾಗವತ್ ಮಾತು ಅಲ್ಪಸಂಖ್ಯಾತರನ್ನು ಅನ್ಯರನ್ನಾಗಿಸುವ ಯತ್ನ

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ಸಂಘ ಪರಿವಾರದ ನಿಯತಕಾಲಿಕಗಳಾದ 'ಪಾಂಚಜನ್ಯ' ಮತ್ತು 'ಆರ್ಗನೈಸರ್'ನ ಸಂಪಾದಕರಿಗೆ ನೀಡಿದ ಸಂದರ್ಶನವು ಅಪಾಯಕಾರಿ ಸಂದೇಶಗಳನ್ನು ರವಾನಿಸಿದೆ; ದೇಶದಲ್ಲಿ ಈಗ ಇರುವ ವಿಭಜನಕಾರಿ ವಾತಾವರಣವನ್ನು ಇನ್ನಷ್ಟು ಉಲ್ಬಣಗೊಳಿಸುವಂತಿದೆ. 'ಹಿಂದೂ ಸಮಾಜ'ದ ಕುರಿತು ಅವರು ಆಡಿರುವ ಮಾತುಗಳು ಅತ್ಯಂತ ಆಕ್ರಮಣಕಾರಿ ಸ್ವರೂಪವನ್ನು ಹೊಂದಿವೆ. ಸಮಾಜ ಮತ್ತು ಪೌರರ ಕುರಿತು ಸಂವಿಧಾನದಲ್ಲಿ ಅಡಕವಾಗಿರುವ ಪರಿಕಲ್ಪನೆಗಳಿಗೆ ಅನುಗುಣವಾಗಿ ಈ ಮಾತುಗಳು ಇರಲಿಲ್ಲ. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳು ಪರಸ್ಪರ ಸಂಘರ್ಷದಲ್ಲಿರುವ ಭಿನ್ನ ಸಮುದಾಯಗಳು ಎಂದು ಅವರು ಪರಿಗಣಿಸಿರುವಂತಿದೆ. ಆದರೆ, ಇಂತಹ ವಿಭಜನೆ ಮತ್ತು ವೈಷಮ್ಯವನ್ನು ಸಂವಿಧಾನವು ಒಪ್ಪುವುದಿಲ್ಲ. ಪೌರರಿಗೆ ಸಮಾನ ಹಕ್ಕುಗಳಿವೆ ಮತ್ತು ಅವರೆಲ್ಲರೂ ಕಾನೂನಿನ ಆಳ್ವಿಕೆಗೆ ಒಳಪಟ್ಟವರು ಎಂಬುದು ಸಂವಿಧಾನದಲ್ಲಿ ಇದೆ. ಸಮಾಜದ ಕುರಿತಂತೆ ಇಂತಹುದೊಂದು ವ್ಯಾಖ್ಯಾನವನ್ನು ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆ ಕೂಡ ಒಪ್ಪುವುದಿಲ್ಲ. ಭಾಗವತ್ ಅವರು ತಮ್ಮ ಈ ವಿಚಾರಧಾರೆಯನ್ನು ಆರ್‌ಎಸ್‌ಎಸ್‌ನ ಕೈಪಿಡಿಯಿಂದ ಎತ್ತಿಕೊಂಡಿರುವಂತಿದೆ.



> ಇಂತಹ ಮಾತುಗಳು ನಾವು ಅರ್ಥ ಮಾಡಿಕೊಂಡ ಸಂವಿಧಾನ ಮತ್ತು ದೇಶದಲ್ಲಿರುವ ಪ್ರಜಾತಂತ್ರಕ್ಕೆ ವಿರುದ್ಧವಾಗಿವೆ ಮತ್ತು ಅವೆರಡನ್ನೂ ನಿರ್ಲಕ್ಷಿಸುವಂತಹವಾಗಿವೆ

ಮುಸ್ಲಿಮರು ತಮ್ಮ 'ಮೇಲರಿಮೆಯ ಕುರಿತಂತೆ ಇರುವ ಭಾವ'ವನ್ನು ಕೈಬಿಟ್ಟು ಹಿಂದೂಗಳ ಜೊತೆಗೆ ಶಾಂತಿಯಿಂದ ಬದುಕಬೇಕು ಎಂಬುದು ಭಾಗವತ್ ಅವರ ವಾದವಾಗಿದೆ. ಇದು ಆ ಸಮುದಾಯದ ಬಗೆಗಿನ ಕಲ್ಪಿತ ಗೊಣಗಾಟ ಮತ್ತು ದುರುದ್ದೇಶದಿಂದ ಮಾತ್ರ ಮಾಡಲಾಗಿರುವ ಆಪಾದನೆ. ಮೇಲರಿಮೆ ಅಥವಾ ಕೀಳರಿಮೆ ಎಂಬುದು ವ್ಯಕ್ತಿಗಳ ವೈಯಕ್ತಿಕ ಅನುಭವ ಅಥವಾ ಲೋಕಗ್ರಹಿಕೆಯ ಕಾರಣಕ್ಕೆ ಸೃಷ್ಟಿಯಾಗುವ ಭಾವ. ಆದರೆ, ಅದನ್ನು ಯಾವುದೇ ಒಂದು ಸಮುದಾಯಕ್ಕೆ ಇಡಿಯಾಗಿ ಆರೋಪಿಸಲು ಸಾಧ್ಯವಿಲ್ಲ. ಹಾಗೆ ಮಾಡಿದ್ದೇ ಆದರೆ ಅದು ಸಮುದಾಯವನ್ನು ಹಣಿಯುವ ಉದ್ದೇಶವನ್ನಷ್ಟೇ ಹೊಂದಿದೆ ಎಂಬುದು ಸ್ಪಷ್ಟ. ಮುಸ್ಲಿಮರು ಈ ದೇಶದಲ್ಲಿ ಬದುಕಬೇಕಿದ್ದರೆ ಹೀಗೆಯೇ ಇರಬೇಕು ಎಂಬ ಷರತ್ತುಗಳನ್ನು ಹಾಕುವುದಕ್ಕೆ ಯಾರಿಗೂ ಅವಕಾಶ ಇಲ್ಲ. ಹಾಗೆಯೇ ಮುಸ್ಲಿಮರಿಗೆ ಈ ದೇಶದಲ್ಲಿ ಬದುಕಲು ಯಾರದ್ದೇ ಅನುಮತಿಯ ಅಗತ್ಯವೂ ಇಲ್ಲ. '1,000ಕ್ಕೂ ಹೆಚ್ಚು ವರ್ಷಗಳ ಯುದ್ಧ' ಎಂಬ ಅವರ ಯೋಚನೆ ಕೂಡ ಕಲ್ಪಿತವೇ ಆಗಿದೆ. ಹಿಂದೂಗಳಲ್ಲಿ ಅಸುರಕ್ಷ ಭಾವವನ್ನು ಮೂಡಿಸಿ ತಾವು ಸಂತ್ರಸ್ತರು ಎಂದು ಭಾವಿಸುವಂತೆ ಮಾಡಲು ಸಂಘ ಪರಿವಾರವು ಸದಾ ಶ್ರಮಿಸುತ್ತಲೇ ಬಂದಿದೆ ಮತ್ತು ಇಂತಹ ಪ್ರಯತ್ನಗಳಿಗೆ ಉತ್ತೇಜನವನ್ನೂ ನೀಡುತ್ತಿದೆ. 'ಯುದ್ಧದ ನಡುವೆ ಆಕ್ರಮಣಕಾರಿಯಾಗಿರುವುದು ಸಹಜ', 'ಒಳಗೇ ಇರುವ ಶತ್ರು' ಎಂಬ ಅವರ ಮಾತುಗಳು ಆಕ್ರಮಣಕಾರಿಗಳಾಗಿ ಎಂಬ ಕರೆಯೇ ಆಗಿದೆ ಮತ್ತು ಅಲ್ಪಸಂಖ್ಯಾತ ಸಮುದಾಯದ ಮೇಲೆ ಬಲಪ್ರಯೋಗ ನಡೆಸಿ ಎಂಬ ಕುಮ್ಮಕ್ಕು ಕೂಡ ಇದರಲ್ಲಿ ಇದೆ. ಹಿಂಸೆಯನ್ನು ಸಹಜಗೊಳಿಸಿ, ಅದುವೇ ಸರಿ ಎಂಬಂತೆ ಮಾಡುವ ಪ್ರಯತ್ನ ಇದು; ಹಾಗೆಯೇ ಅಲ್ಪಸಂಖ್ಯಾತರನ್ನು ರಕ್ಕಸರೆಂದು, ಅನ್ಯರೆಂದು ಬಿಂಬಿಸಿ ಅವರನ್ನು ಬಹಿಷ್ಕರಿಸಿ, ದಮನಗೊಳಿಸಿ ತಾರತಮ್ಯದಿಂದ ನೋಡುವ ದುರುದ್ದೇಶವೂ ಇಂತಹ ಮಾತುಗಳ ಹಿಂದೆ ಇದೆ. ಭಾಗವತ್ ಅವರು ಈ ಅರ್ಥದಲ್ಲಿ ಮಾತುಗಳನ್ನು ಆಡಿದ್ದಾರೆಯೋ ಇಲ್ಲವೋ ತಿಳಿದಿಲ್ಲ– ಆದರೆ, ಯುದ್ಧದಲ್ಲಿ ಎಲ್ಲವೂ ಸರಿ ಎಂಬ ನಿಲುವಿಗೆ ಬಂದಿದ್ದೇ ಆದರೆ ಹತ್ಯೆ, ಹಲ್ಲೆ, ಪ್ರಾರ್ಥನೆ ವೇಳೆ ದಾಂದಲೆ, ನ್ಯಾಯದ ನಿರಾಕರಣೆ ಎಲ್ಲವೂ ಸರಿ ಎನಿಸಿಕೊಳ್ಳುತ್ತವೆ.

ಭಾಗವತ್ ಅವರ ಮಾತಿಗೆ ವಿವರಣೆಗಳು ಮತ್ತು ಸ್ಪಷ್ಟೀಕರಣಗಳು ಬಂದಿವೆ. ಅವರು ಹಿಂದೂಗಳನ್ನೂ ಕಮ್ಯುನಿಸ್ಟರನ್ನೂ ಉಲ್ಲೇಖಿಸಿದ್ದಾರೆ. ಅವರು ಯುದ್ಧ ಎಂದು ಕರೆದಿರುವುದು ವಿದೇಶಿ ಪ್ರಭಾವದ ವಿರುದ್ಧದ ಮತ್ತು ವಸಾಹತುಶಾಹಿ ಪರಂಪರೆಯ ವಿರುದ್ಧದ ಯುದ್ಧ ಎಂಬ ವಿವರಣೆಗಳನ್ನು ನೀಡಲಾಗಿದೆ. ಭಾಗವತ್ ಅವರದ್ದು ರಾಷ್ಟ್ರವಾದಿ ಹೇಳಿಕೆ ಎಂಬ ಸ್ಪಷ್ಟನೆಯನ್ನೂ ನೀಡಲಾಗಿದೆ. ಆದರೆ, ಭಾಗವತ್ ಅವರ ಮಾತುಗಳು ಮುಸ್ಲಿಮರನ್ನು ಗುರಿಯಾಗಿಸಿಕೊಂಡಿದ್ದವು ಎಂಬುದರಲ್ಲಿ ಸಂದೇಹವೇನೂ ಇಲ್ಲ. ಇದು ಸಂಘರ್ಷ ಮತ್ತು ದ್ವೇಷ ರಾಜಕಾರಣದ ಕೂಗು; ಭುಜಬಲದ ಬಹುಸಂಖ್ಯಾತವಾದಿ ಭಾವನೆಯನ್ನು ಇನ್ನಷ್ಟು ಗಾಢಗೊಳಿಸುವ ಯತ್ನವೂ ಹೌದು. ಇಂತಹ ಮಾತುಗಳು ನಾವು ಅರ್ಥ ಮಾಡಿಕೊಂಡ ಸಂವಿಧಾನ ಮತ್ತು ದೇಶದಲ್ಲಿರುವ ಪ್ರಜಾತಂತ್ರಕ್ಕೆ ವಿರುದ್ಧವಾಗಿವೆ ಮತ್ತು ಅವೆರಡನ್ನೂ ನಿರ್ಲಕ್ಷಿಸುವಂತಹವಾಗಿವೆ. ನೆಲದ ಕಾನೂನು ಭಾಗವತ್ ಅವರಿಗೂ ಅನ್ವಯ ಆಗಬೇಕು.

ದಿನದ ಟ್ವೀಟ್

ಬವಣೆ ತಪ್ಪಿದ್ದಲ್ಲ



2014ರವರೆಗೆ ನಮ್ಮ ಮನಸ್ಸು ಕೆಡಿಸುತ್ತಿದ್ದ ವಿಷಯಗಳು- ಅಡುಗೆ ಅನಿಲದ ದರ, ಪೆಟ್ರೋಲ್ ದರ, ಡಾಲರ್ ಮೌಲ್ಯ. ಹಣದುಬ್ಬರದ ಪ್ರಮಾಣ. ಭ್ರಷ್ಟಾಚಾರ. ದೆಹಲಿಯಲ್ಲಿನ ಗಾಳಿಯ ಗುಣಮಟ್ಟ. ಮಹಿಳಾ ಸುರಕ್ಷತೆ. ಈಗ ಇವು ಯಾವುವೂ ಮುಖ್ಯವಲ್ಲ. ಈಗ ನಮ್ಮ ಚಿತ್ತ ಕೆಡಿಸುವ ಸಂಗತಿಗಳು- ಬಿಕಿನಿಯ ಬಣ್ಣ, ಇತಿಹಾಸ, ಚಲನಚಿತ್ರ ಬಿಡುಗಡೆ, ಟಿ- ಷರ್ಟ್‌ಗಳು.

ಸಾಧನಾ ಗುಪ್ತಾ

ಕಿಡಿನುಡಿ



ಎಸ್ಕಾಂಗಳನ್ನು ಖಾಸಗೀಕರಣ ಮಾಡುವುದೇ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ಅಂತಿಮ ಗುರಿ. ಉಚಿತ ವಿದ್ಯುತ್‌ನಿಂದ ಎಸ್ಕಾಂಗಳ ಮೇಲೆ ಇನ್ನಷ್ಟು ಹೊರೆಯಾಗುತ್ತದೆ. ಆಗ ನಷ್ಟದಲ್ಲಿರುವ ಎಸ್ಕಾಂಗಳನ್ನು ಖಾಸಗೀಕರಣ ಮಾಡುವ ಸಂಚು ಈ ಘೋಷಣೆಯ ಹಿಂದೆ ಇದೆ.

(ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಪ್ರತೀ ಮನೆಗೆ 200 ಯುನಿಟ್ ಉಚಿತ ವಿದ್ಯುತ್ ನೀಡುವ ಕಾಂಗ್ರೆಸ್ ಘೋಷಣೆಗೆ ಪ್ರತಿಕ್ರಿಯೆ)

ಸುನಿಲ್ ಕುಮಾರ್, ಇಂಧನ ಸಚಿವ

25 ವರ್ಷಗಳ ಹಿಂದೆ

ಬುಧವಾರ, 14-1-1998

● **ನದಿಗೆ ಬಸ್ ಬಿದ್ದು 66 ವಿದ್ಯಾರ್ಥಿಗಳ ಸಾವು**

ಮುರ್ಶಿದಾಬಾದ್, (ಪ. ಬಂಗಾಳ) ಜ. 13 (ಪಿಟಿಐ)– ಇಲ್ಲಿಗೆ ಸಮೀಪದ ಜಲಂಗಿ ಎಂಬಲ್ಲಿ ಪ್ರವಾಸಿ ಬಸ್ಸು ರಸ್ತೆಯಿಂದ ಉರುಳಿ ಪದ್ಮಾ ನದಿಗೆ ಬಿದ್ದುದರಿಂದ ಅದರಲ್ಲಿ ಇದ್ದ ವಿದ್ಯಾರ್ಥಿಗಳಲ್ಲಿ ಕನಿಷ್ಠ 66 ವಿದ್ಯಾರ್ಥಿಗಳು ನೀರುಪಾಲಾಗಿರಬೇಕೆಂದು ಶಂಕಿಸಲಾಗಿದೆ.

ಇಂದು ಬೆಳಗಿನ ಜಾವ ಈ ದುರಂತ ಸಂಭವಿಸಿದೆ. ಭಾರಿ ಪ್ರಮಾಣದಲ್ಲಿ ಮಂಜು ಕವಿದುದೇ ಇದಕ್ಕೆ ಕಾರಣ ಎನ್ನಲಾಗಿದೆ. 53 ವಿದ್ಯಾರ್ಥಿಗಳು ಮುಳುಗಿ ಸತ್ತಿದ್ದು, ನಾಪತ್ತೆಯಾಗಿರುವ 13 ವಿದ್ಯಾರ್ಥಿಗಳೂ ಸತ್ತಿರಬೇಕೆಂದು ಶಂಕಿಸಲಾಗಿದೆ. ಶೋಧ ಮುಂದುವರೆದಿದೆ. 46 ಮೃತದೇಹಗಳನ್ನು ನೀರಿನಿಂದ ಮೇಲೆತ್ತಲಾಗಿದೆ.

ಮುರ್ಶಿದಾಬಾದ್ ಜಿಲ್ಲೆಯಲ್ಲಿರುವ, ಕೊನೆಯ ಮೊಘಲ್ ನವಾಬರಿಗೆ ಸೇರಿದ್ದ ಚಾರಿತ್ರಿಕ ಸ್ಥಳ ಲಾಲ್‌ಬಾಗ್‌ಗೆ ವಿಹಾರಕ್ಕೆ ತೆರಳಿದ್ದ 86 ಪ್ರೌಢಶಾಲಾ ವಿದ್ಯಾರ್ಥಿಗಳಿದ್ದ ಬಸ್ಸು ಕರೀಂಪುರಕ್ಕೆ ಮರಳುತ್ತಿದ್ದಾಗ ಈ ದುರಂತ ಸಂಭವಿಸಿದೆ.

● **ರೈತರ ಮೇಲೆ ಗುಂಡು: 18 ಸಾವು**

ಭೋಪಾಲ್, ಜ. 13– ಮಧ್ಯಪ್ರದೇಶದ ಬೇತುಲ್ ಜಿಲ್ಲೆಯಲ್ಲಿ ನಿನ್ನೆ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಪೊಲೀಸರು ಗುಂಡು ಹಾರಿಸಿದ ಘಟನೆಯಲ್ಲಿ ಸತ್ತವರ ಸಂಖ್ಯೆ 18ಕ್ಕೆ ಏರಿದೆ. ಈ ಘಟನೆಯಲ್ಲಿ ಇನ್ನೂ 100 ಜನರಿಗೆ ಗಾಯಗಳಾಗಿವೆ.

ಮುಲ್ತಾಯ್ ತಾಲ್ಲೂಕಿನಲ್ಲಿ ಅಕಾಲಿಕ ಮಳೆ ಮತ್ತು ಗಾಳಿಯಿಂದ ಹಾಳಾಗಿರುವ ಬೆಳೆಗೆ ಹೆಚ್ಚಿನ ಪರಿಹಾರ ನೀಡುವಂತೆ ರೈತರು ಒತ್ತಾಯಿಸುತ್ತಿದ್ದರು. ಅವರು ತಹಸೀಲ್ದಾರರ ಕಚೇರಿಗೆ ಮುತ್ತಿಗೆ ಹಾಕಿ ಖಜಾನೆಯನ್ನು ದೋಚಲು ಯತ್ನಿಸಿದಾಗ ಪೊಲೀಸರು ಗುಂಡು ಹಾರಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 14-1-1973

● **ಜಾತಿ, ಭಾಷಾಂಧತೆಯ ವಿರುದ್ಧ ಸತತ ಸಮರಕ್ಕೆ ಹಸನ್ ಕರೆ**

ಮೈಸೂರು, ಜ. 13– ರಾಷ್ಟ್ರೀಯ ಐಕ್ಯಶಕ್ತಿ ಮತ್ತು ಪ್ರಗತಿಗೆ ಬೆದರಿಕೆ ಒಡ್ಡಿ ಅಲ್ಲಲ್ಲಿ ಅಸಹ್ಯಕರವಾಗಿ ತಲೆ ಎತ್ತುತ್ತಿರುವ ಪ್ರಾದೇಶಿಕತೆ, ಜಾತೀಯತೆ ಹಾಗೂ ಭಾಷಾಂಧತೆಯ ವಿರುದ್ಧ ಸತತ ಸಮರ ಹೂಡುವಂತೆ ಕೇಂದ್ರ ಶಿಕ್ಷಣ ಸಚಿವ ಪ್ರೊ. ಎಸ್. ನೂರುಲ್‌ಹಸನ್ ಅವರು ಇಲ್ಲಿ ನವ ಪದವೀಧರರಿಗೆ ಕರೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಐವತ್ತನೇ ಪದವೀದಾನ ಸಮಾರಂಭದಲ್ಲಿ ದೀಕ್ಷಾಂತ ಭಾಷಣ ಮಾಡಿದ ಹಸನ್ ಅವರು, ನಿಜವಾದ ಉನ್ನತ ಶಿಕ್ಷಣ ಎಲ್ಲ ರೀತಿಯ ಸಂಕುಚಿತತೆಗಳನ್ನು ಬಹಿಷ್ಕರಿಸಿ ಉದಾತ್ತ ಬೌದ್ಧಿಕ ಬೆಳವಣಿಗೆಗೆ ಸಹಕಾರಿಯಾಗುವುದೇ ಅಲ್ಲದೆ ನಮ್ಮ ರಾಷ್ಟ್ರೀಯ ಉದ್ದೇಶವಾದ ಜಾತ್ಯತೀತತೆ, ಪ್ರಜಾಸತ್ತೆ ಮತ್ತು ಸಮಾಜವಾದಿ ಸಮಾಜ ರಚನೆಗೆ ನೆರವಾಗುವುದೆಂದು ಆಶಿಸಿದರು.

● **ರಾಜಕಾರಣಿಗಳಿಗೂ ಆಡಳಿತದ ಬಗ್ಗೆ ತರಬೇತಿ ಅಗತ್ಯ**

ಮೈಸೂರು, ಜ. 13– ಆಡಳಿತ ನಿರ್ವಹಣೆಯಲ್ಲಿ ಅಧಿಕಾರಿಗಳಂತೆ ಸಮಪಾಲುದಾರರಾದ ರಾಜಕಾರಣಿಗಳಿಗೂ ಆಡಳಿತದ ಬಗ್ಗೆ ತರಬೇತಿ ನೀಡಬೇಕೆಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಇಂದು ಇಲ್ಲಿ ಅಪೇಕ್ಷಿಸಿದರು.

ಯಾವುದೇ ಒಂದು ಪ್ರದೇಶದಲ್ಲಿ ಸ್ಥಾನಗಳ ಸಂಖ್ಯೆ ಕುಸಿದರೂ ಬಹುಮತ ಮರೀಚಿಕೆ

ಚುನಾವಣೆ: ಎಲ್ಲಿ ನಡೆವುದು ಹಣಾಹಣಿ?



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ರಾಜ್ಯದಲ್ಲಿ ಈ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗೆ ರಾಜಕೀಯ ಪಕ್ಷಗಳು ಸಿದ್ಧತೆ ನಡೆಸಿವೆ. ತಂತ್ರ, ಪ್ರತಿತಂತ್ರಗಳನ್ನು ಹೆಣೆಯುತ್ತಿವೆ. ಪ್ರತಿದಿನವೂ ಹೊಸ ಅಂಶಗಳು ಕೇಂದ್ರಸ್ಥಾನಕ್ಕೆ ಬರುತ್ತಿವೆ, ಪಕ್ಷಗಳು ಅವುಗಳಿಂದ ಮತದಾರರ ಮೇಲೆ ಆಗುವ ಪರಿಣಾಮವನ್ನು ಪರೀಕ್ಷಿಸುತ್ತಿವೆ. ರಾಜ್ಯದ ಪ್ರತೀ ಪ್ರದೇಶದಲ್ಲಿ ಮುನ್ನೆಲೆಗೆ ಬರುವ ಸಣ್ಣ ಸಣ್ಣ ಚಿತ್ರಣಗಳು ಚುನಾವಣೆ ಹತ್ತಿರವಾಗುತ್ತಿದ್ದಂತೆಲ್ಲ ಹೆಚ್ಚಿನ ಗಮನವನ್ನು ಸೆಳೆಯಲಿವೆ.

ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಕರಾವಳಿ ಕರ್ನಾಟಕ ಹಾಗೂ ಹಳೆ ಮೈಸೂರು ಪ್ರದೇಶಗಳ ಚುನಾವಣಾ ಹಣಾಹಣಿಗಳಲ್ಲಿ ವ್ಯತ್ಯಾಸ ಇರುವುದನ್ನು ನಾವು ಸಾಮಾನ್ಯವಾಗಿ ಗುರುತಿಸುತ್ತೇವೆ. ಈ ಪ್ರದೇಶಗಳಲ್ಲಿ ರಾಜಕೀಯ ಪಕ್ಷಗಳು ತಮ್ಮದೇ ಆದ ಹಿಡಿತ ಹೊಂದಿವೆ. ಹಳೆ ಮೈಸೂರು, ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಪ್ರದೇಶಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಳ್ಳದಿದ್ದರೆ ಯಾವುದೇ ರಾಜಕೀಯ ಪಕ್ಷವು ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದು ಕಷ್ಟ ಎಂಬುದನ್ನು ಇತಿಹಾಸ ಹೇಳುತ್ತದೆ. ರಾಷ್ಟ್ರ ಮಟ್ಟದಲ್ಲಿ ಬಿಜೆಪಿಯು ಉತ್ತರ, ಮಧ್ಯಮ ಹಾಗೂ ಪಶ್ಚಿಮ ಭಾರತದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಂಡಿದೆ. ಕರ್ನಾಟಕದಲ್ಲಿ, ಅದರಲ್ಲೂ ಮುಖ್ಯವಾಗಿ 1983ರ ನಂತರದಲ್ಲಿ, ಪಕ್ಷವೊಂದು ಬಹುಮತ ಗಳಿಸಬೇಕು ಎಂದಾದರೆ ಮೇಲೆ ಹೇಳಿದ ಮೂರು ಪ್ರದೇಶಗಳಲ್ಲಿ ಒಳ್ಳೆಯ ಸಾಧನೆ ತೋರಬೇಕು. ಯಾವುದೇ ಒಂದು ಪ್ರದೇಶದ ಬಹುಪಾಲು ಸ್ಥಾನಗಳನ್ನು ರಾಜಕೀಯ ಪಕ್ಷವೊಂದು ಗೆದ್ದುಕೊಳ್ಳುವ ಸಾಧ್ಯತೆ ತೀರಾ ಕಡಿಮೆ.

ರಾಜ್ಯ ವಿಧಾನಸಭೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಇಲ್ಲದಿದ್ದ ನಾಲ್ಕು ಚುನಾವಣೆಗಳಲ್ಲಿ (1983, 2004, 2008 ಮತ್ತು 2018), ಅತಿಹೆಚ್ಚಿನ ಸ್ಥಾನ ಪಡೆದಿದ್ದ ಪಕ್ಷಗಳು ಈ ಮೂರು ಪ್ರದೇಶಗಳಲ್ಲಿ ಸಮಾನವಾಗಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾನಗಳನ್ನು ಗೆದ್ದಿರಲಿಲ್ಲ. 1983ರಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಜನತಾ ಪಕ್ಷವು, ಹಳೆ ಮೈಸೂರು ಪ್ರದೇಶದಲ್ಲಿ ಭಾರಿ ಸಾಧನೆ ಮೆರೆಯಿತು. ಆದರೆ, ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ನಾಲ್ಕನೆಯ ಒಂದರಷ್ಟಕ್ಕಿಂತ ತುಸು ಹೆಚ್ಚಿನ ಸ್ಥಾನಗಳನ್ನು ಮಾತ್ರ ಪಡೆಯಿತು. ಆಗ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದಲ್ಲಿ ಒಳ್ಳೆಯ ಸಾಧನೆ ತೋರಿದ್ದ ಕಾಂಗ್ರೆಸ್, ಹಳೆ ಮೈಸೂರು ಪ್ರದೇಶದಲ್ಲಿ ಮುಗ್ಗರಿಸಿತ್ತು.

2004ರಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ, ಬಹುಮತ ಇರಲಿಲ್ಲ. ಆಗ ಬಿಜೆಪಿಯು ಹಳೆ ಮೈಸೂರು ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ಸ್ಥಾನಗಳನ್ನು ಗಟ್ಟಿ ಮಾಡಿಕೊಂಡಿರಲಿಲ್ಲ. 2008ರಲ್ಲಿ ಬಿಜೆಪಿ ಹಳೆ ಮೈಸೂರು ಪ್ರದೇಶದಲ್ಲಿ ಸ್ಥಾನಗಳನ್ನು ಉತ್ತಮಪಡಿಸಿಕೊಂಡಿತಾದರೂ, ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ ಅದರ ಸಂಖ್ಯೆ ಕುಸಿದಿತ್ತು. 2018ರಲ್ಲಿ ಕೂಡ ಇದೇ ರೀತಿ ಆಯಿತು. ಬಿಜೆಪಿಯು ಕಿತ್ತೂರು ಕರ್ನಾಟಕ ಹಾಗೂ ಕರಾವಳಿ ಕರ್ನಾಟಕದಲ್ಲಿ ಭಾರಿ ಸಾಧನೆ ತೋರಿತು. ಹಳೆ ಮೈಸೂರು ಪ್ರದೇಶದಲ್ಲಿ ವಿರೋಧಿಗಳ ಕೋಟೆಯನ್ನು ಒಂದಿಷ್ಟು ಪ್ರವೇಶಿಸಿತು. ಆದರೆ, ಪಕ್ಷವು ಕಲ್ಯಾಣ ಕರ್ನಾಟಕದಲ್ಲಿ ಮತ್ತು (ಹಳೆ ಮೈಸೂರು ಪ್ರದೇಶದ ಭಾಗವಾಗಿರುವ) ಬೆಂಗಳೂರಿನಲ್ಲಿ ಸೀಮಿತ ಯಶಸ್ಸು ಕಂಡಿತು. ಆ ಚುನಾವಣೆಯಲ್ಲಿ ಬಿಜೆಪಿಯು ಕೆಲವೇ ಸ್ಥಾನಗಳ ಅಂತರದಲ್ಲಿ ಬಹುಮತದ ಕೊರತೆ ಎದುರಿಸಿತು.

1983ರ ನಂತರದಲ್ಲಿ ಪಕ್ಷವೊಂದು ಸ್ಪಷ್ಟ ಬಹುಮತ ಪಡೆದ ಚುನಾವಣೆಗಳನ್ನು ಗಮನಿಸಿದಾಗಲೂ, ಈ ಮೂರು ಪ್ರದೇಶಗಳ ಪ್ರಾಮುಖ್ಯ ಗೊತ್ತಾಗುತ್ತದೆ. 1985ರಲ್ಲಿ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಪಕ್ಷವು ಹಳೆ ಮೈಸೂರು ಪ್ರದೇಶದಲ್ಲಿ ಸ್ಥಾನ ಭದ್ರಪಡಿಸಿಕೊಂಡು, ಕಿತ್ತೂರು ಕರ್ನಾಟಕ (ಅಲ್ಲಿ ನಾಲ್ಕನೆಯ ಮೂರರಷ್ಟು ಸ್ಥಾನ ಗೆದ್ದಿತ್ತು) ಮತ್ತು ಕಲ್ಯಾಣ ಕರ್ನಾಟಕದಲ್ಲಿ (ಅರ್ಧದಷ್ಟು ಸ್ಥಾನ ಗೆದ್ದುಕೊಂಡಿತ್ತು) ಉತ್ತಮ ಸಾಧನೆ ತೋರಿತ್ತು. 1994ರಲ್ಲಿ ಜನತಾದಳ ಕೂಡ ಇದೇ ಬಗೆಯಲ್ಲಿ ಸಾಧನೆ ತೋರಿತು. 1989, 1999 ಮತ್ತು 2013ರಲ್ಲಿ ಕಾಂಗ್ರೆಸ್ ಆಡಳಿತ ಪಕ್ಷವಾಗಿ ಹೊರಹೊಮ್ಮಿದ್ದು, ಈ ಮೂರು ಪ್ರದೇಶಗಳಲ್ಲಿ ಒಳ್ಳೆಯ ಸಾಧನೆ ತೋರಿದ ಕಾರಣದಿಂದಾಗಿ.

2023ರ ವಿಧಾನಸಭಾ ಚುನಾವಣೆಗೆ ಕಾರ್ಯತಂತ್ರ ಹೆಣೆಯುತ್ತಿರುವ ಬಿಜೆಪಿ ನಾಯಕತ್ವವು, ಬೆಂಗಳೂರನ್ನೂ ಒಳಗೊಂಡಿರುವ ಹಳೆ ಮೈಸೂರು ಪ್ರದೇಶದ ಮೇಲೆ ಹೆಚ್ಚಿನ ಗಮನಹರಿಸಿದೆ. ಹಳೆ ಮೈಸೂರು ಪ್ರದೇಶದಲ್ಲಿ ದೊಡ್ಡ ಜನಾದೇಶ ಪಡೆಯಲು ಸಾಧ್ಯವಾಗದೇ ಇರುವುದು ಪಕ್ಷಕ್ಕೆ ಹಿಂದಿನ ಚುನಾವಣೆಗಳಲ್ಲಿ ಬಹುಮತ ಪಡೆಯಲು ಆಗದಂತೆ ಮಾಡಿತು. ಹಳೆ ಮೈಸೂರು ಪ್ರದೇಶದಲ್ಲಿ ಪಕ್ಷ ಕಂಡ ಸೀಮಿತ ಯಶಸ್ಸು, ಅದು ಬಹುಮತದ ಗಡಿ ದಾಟದಂತೆ ಮಾಡಿತು. ಈ ಬಾರಿ ಬಿಜೆಪಿಗೆ ಇರುವ ಸವಾಲು, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಮತ್ತು ಕರಾವಳಿ ಕರ್ನಾಟಕ ಪ್ರದೇಶಗಳಲ್ಲಿ ಸಾಧನೆಯು ಕೆಳಮಟ್ಟಕ್ಕೆ ಬರದಂತೆ ನೋಡಿಕೊಳ್ಳುವುದು ಹಾಗೂ ಹಳೆ ಮೈಸೂರು ಪ್ರದೇಶದಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆದ್ದುಕೊಂಡು, ಇತರ ಮೂರು ಪ್ರದೇಶಗಳಲ್ಲಿ ಆಗಬಹುದಾದ ಸ್ಥಾನನಷ್ಟವನ್ನು ಸರಿದೂಗಿಸಿಕೊಳ್ಳುವುದು.

ಇಷ್ಟು ಸಾಧ್ಯವಾಗದೇ ಇದ್ದರೆ ಬಿಜೆಪಿ ಪಾಲಿಗೆ, ಬಹುಮತ ಗಳಿಸುವ ಬಯಕೆಯು ಮರೀಚಿಕೆ ಆಗಿಯೇ ಉಳಿಯುತ್ತದೆ. ಬಿಜೆಪಿ ಅಭಿಯಾನದಲ್ಲಿ ಹಳೆ ಮೈಸೂರು ಪ್ರಾಂತ್ಯವು ಆದ್ಯತೆಯನ್ನು ಪಡೆದಿರುವುದು ಏಕೆ ಎಂಬುದನ್ನು ಇದು ಹೇಳುತ್ತದೆ. ಹಳೆ ಮೈಸೂರು ಪ್ರದೇಶದಲ್ಲಿ ಪ್ರಬಲ ಸಮುದಾಯವಾದ ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಒಕ್ಕಲಿಗರ ಮತಗಳು ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ನಡುವೆ ಹಂಚಿಹೋಗಿವೆ. 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಹೊಂದಾಣಿಕೆ ಮಾಡಿಕೊಂಡ ಕಾಂಗ್ರೆಸ್ ಹಾಗೂ ಜೆಡಿಎಸ್, ಬಿಜೆಪಿಗೆ ಈ ಪ್ರದೇಶದಲ್ಲಿ ಸ್ಥಾನ ಗಟ್ಟಿ ಮಾಡಿಕೊಳ್ಳಲು ಒಂದು ಅವಕಾಶ ಕಲ್ಪಿಸಿದವು. ಬಿಜೆಪಿಯು ಅವಕಾಶವನ್ನು ಬಳಸಿಕೊಂಡಿತು. ಈ ಬಾರಿ ಕಾಂಗ್ರೆಸ್ ಮತ್ತು ಜೆಡಿಎಸ್ ಚುನಾವಣೆಯನ್ನು ಪ್ರತ್ಯೇಕವಾಗಿ ಎದುರಿಸಲಿವೆ. ಹೀಗಾಗಿ, ಒಕ್ಕಲಿಗರ ಮತಗಳ ಮೇಲೆ ಸೂಕ್ಷ್ಮವಾಗಿ ಗಮನ ಇರಿಸಲಾಗುತ್ತದೆ. ಈ ಪ್ರದೇಶದಲ್ಲಿ ಪ್ರಬಲ ಅಲ್ಲದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮತಗಳೂ ಬಹಳ ಮುಖ್ಯ.

ಪ್ರಬಲ ಅಲ್ಲದ ಒಬಿಸಿ ವರ್ಗಗಳ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳಲು ಬಿಜೆಪಿ ಹಾಗೂ ಕಾಂಗ್ರೆಸ್ ಯತ್ನ ನಡೆಸಿವೆ. ಕಾಂಗ್ರೆಸ್ ಪಕ್ಷವು ಕಿತ್ತೂರು ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಪ್ರದೇಶದಲ್ಲಿ ಕಳೆದುಕೊಂಡ ನೆಲೆಗಳನ್ನು ಮತ್ತೆ ಗಳಿಸಿಕೊಳ್ಳಲು ಪ್ರಯತ್ನ ನಡೆಸಿದೆ. ಅಲ್ಲದೆ, ಹಳೆ ಮೈಸೂರು ಪ್ರದೇಶದಲ್ಲಿ ತನ್ನ ಸಾಧನೆಯನ್ನು ಇನ್ನಷ್ಟು ಉತ್ತಮಪಡಿಸಿಕೊಳ್ಳಲು ಕೂಡ ಅದು ಗಮನಹರಿಸಿದೆ. 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಕಿತ್ತೂರು ಕರ್ನಾಟಕ ಹಾಗೂ ಕರಾವಳಿ ಕರ್ನಾಟಕದಲ್ಲಿ ಉತ್ತಮ ಸಾಧನೆ ತೋರಲಿಲ್ಲ. ಹಳೆ ಮೈಸೂರು ಪ್ರದೇಶದಲ್ಲಿ ಅದರ ಸ್ಥಾನ ತುಸು ಕಡಿಮೆ ಆಯಿತು. ಬೆಂಗಳೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಪಕ್ಷವು ತನ್ನ ಸ್ಥಾನಗಳನ್ನು ಉಳಿಸಿಕೊಳ್ಳಲಿಲ್ಲ.

ವಿಧಾನಸಭೆಯಲ್ಲಿ ಬಹುಮತ ಸಾಧಿಸಬೇಕು ಎಂದಾದರೆ ಹಳೆ ಮೈಸೂರು, ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಪ್ರದೇಶಗಳಲ್ಲಿ ಉತ್ತಮ ಸಾಧನೆ ತೋರಬೇಕು ಎಂಬುದನ್ನು ಕಾಂಗ್ರೆಸ್ ಮತ್ತು ಬಿಜೆಪಿ ಅರ್ಥ ಮಾಡಿಕೊಂಡಿವೆ. ಈ ಮೂರರಲ್ಲಿ ಯಾವುದೇ ಒಂದು ಪ್ರದೇಶದಲ್ಲಿ ಸ್ಥಾನಗಳ ಸಂಖ್ಯೆ ಕುಸಿದರೂ, ಬಹುಮತವು ಮರೀಚಿಕೆ ಆಗುತ್ತದೆ. ಹೀಗಾಗಿ, ಈ ಮೂರು ಪ್ರದೇಶಗಳಲ್ಲಿನ ಚುನಾವಣಾ ಕಣದ ಮೇಲೆ ಗಮನ ಇರಿಸಬೇಕಾಗಿದೆ.



ಚುರುಮುರಿ



ಬೀಳೋ ಫೋಬಿಯಾ

● ಕೆ.ವಿ.ರಾಜಲಕ್ಷ್ಮಿ

'ಇದೇನು ಅಜಾಗರೂಕತೆ? ಪ್ರಯಾಣಿಕರನ್ನು ಏರಿಸಿಕೊಳ್ಳದೆ ಗೋ ಫಸ್ಟ್ ಗೋ ಫಾಸ್ಟ್ ಆಗಿ ಹಾರಿದೆ? ಮಂಜಿಗೆ ಸುಮಾರು ರೈಲುಗಳೂ ರದ್ದಾದವಂತೆ! ಹೋಗೋ ಮಾರ್ಗ ಸರಿಯಾಗಿ ಕಾಣಿಸದಿದ್ರೆ ಅನಾಹುತ ತಾನೇ?' ಅತ್ತೆ ದಿನಪತ್ರಿಕೆಯಲ್ಲಿ ಕಣ್ಣಾಡಿಸಿದರು.

'ಬೀದರ್‌ನಲ್ಲಿ ತಾಪಮಾನ ಬಿದ್ದುಹೋಗಿದೆ, ಇಲ್ಲೂ... ಬೆಳಗ್ಗೆ ಏಳಾದರೂ ಸೂರ್ಯ ಹೊರಗೆ ಬರೋಕ್ಕಾಗದಷ್ಟು ಮಂಜು. ಇನ್ನೇನು ಕಂಠಿ ಬಂದರೆ ಪಾದರಕ್ಷೆ ಏರಿಸೋದು' ಎನ್ನುತ್ತಾ ಸ್ವೆಟರ್ ಮೇಲೊಂದು ಶಾಲ್ ಎಳೆದು ತಲೆಗೆ ಮಫ್ಲರ್ ಸುತ್ತಿ ವಾಕ್ ಹೊರಡಲು ಅಣಿಯಾದೆ.

ಕಣ್ಣು ಮಾತ್ರ ಕಾಣಿಸುವಷ್ಟು ಸಪಾದಮಸ್ತಕ, ಕಂಠಿ ಉಣ್ಣೆ ಸುತ್ತಿಕೊಂಡಿದ್ದ. 'ಮೈಯೆಲ್ಲಾ ಕಣ್ಣಾಗಿದ್ದರೂ ಸಾಲದು; ಅಕ್ಕಪಕ್ಕ, ಮೇಲೆ ಕೆಳಗೆ ಗಮನ ಇರಲಿ' ಅತ್ತೆ ಎಚ್ಚರಿಸಿದರು. ಅರ್ಥವಾಗದೆ ಕಂಠಿ ನನ್ನ ಮುಖ ನೋಡಿದ.

'ರಸ್ತೇಲಿ ಗುಂಡಿಗಳ ಕಾಟ, ಪಾದಚಾರಿ ರಸ್ತೆಗಳಲ್ಲಿ ವಯಸ್ಸಾಗಿರೋ ಮರಗಳು, ಕಂಬಗಳು ಬೀಳಾಟ, ನಿಂತಲ್ಲೇ ಚಾವಣಿ ಕುಸಿಯೋದು, ಇಷ್ಟೇ ಸಾಲದು ಅನ್ನೋ ಹಾಗೆ ತಲೆಮೇಲಿಂದ ಯಾವಾಗ ಏನು ಬೀಳುತ್ತೋ ಅನ್ನೋ ಭಯ! ಅಂತೂ ಬೀಳೋ ಭಯದಲ್ಲೇ ಓಡಾಡೋ ಸ್ಥಿತಿ ನಿರ್ಮಾಣವಾಗಿದೆ' ನನ್ನವಳು ವಿವರಿಸಿದಳು.

'ಬೀಳೋ ಫೋಬಿಯಾ ಅನ್ನು' ಎಂದೆ.

'ಕಾಮಗಾರಿ ಎಷ್ಟು ಸಸಾರ ಆಗ್ಬಿಟ್ಟಿದೆ, ದೊಡ್ಡವರು ಬಂದ್ರೆ ಬಣ್ಣ ಕಂಡ ರಸ್ತೆ, ಅವರು ಹೋಗುತ್ತಲೇ ಬಣ್ಣ ಕರಗಿ ಸೊರಗಿರುತ್ತೆ' ಅತ್ತೆ ಮುಂದುವರಿಸಿದರು. 'ನಾಟು ನಾಟು ಹಾಡು ಕೊನೆಗೂ ಗೆದ್ದಿದೆ. ನಮ್ಮ ಕಾಂತಾರಕ್ಕೂ ಪ್ರಶಸ್ತಿ ಸಿಕ್ಕಿ ಅಂತ ನಮ್ ಫ್ರೆಂಡ್ಸ್ ಪ್ರೇ ಮಾಡಿಕೊಳ್ತಿದ್ದೀವಿ' ಪುಟ್ಟಿ ಕುಣಿಯುತ್ತ ಬಂದಳು.

'ಹೌದು, ನಮ್ಮ ಚಿತ್ರಗಳೂ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೀತಿವೆ' ನಾನೂ ದನಿಗೂಡಿಸಿದೆ.

'ಹಬ್ಬಕ್ಕೆ ಒಟ್ಟಿಗೆ ಎಳ್ಳು, ಸಕ್ಕರೆಅಚ್ಚು ಮಾಡೋದು ಅಂತ ಶ್ರೀಮತಿ ಹೇಳಿದ್ಲು. ಊಟಕ್ಕೆ ಕ್ಯಾಟರರ್‌ಗೆ ಹೇಳಿದ್ದೀನಿ' ಕಂಠಿ ಬಾಯ್ಬಿಟ್ಟ.

'ಹೌದು ಜ್ಞಾಪಿಸಿದ್ದು ಒಳ್ಳೇದಾಯ್ತು, ಮನೇಲಿ ನೀವು ಕುಕ್ಕರ್ ಕೂಗಿಸಿಕೊಂಡ್ರೆ ಆಯಿತು. ಕಾಫಿ ಕುಡಿದು ವಾಕ್‌ಗೆ ಹೊರಡಿ' ಎನ್ನುತ್ತ ನನ್ನವಳು ಅಕ್ಕರೆಯಿಂದ ಮಾತಲ್ಲೇ ಬೀಳಿಸಿ, ಅಡುಗೆಮನೆಯತ್ತ ಹೊರಟಳು.

ಸಂಗತ

ಅಧಿವೇಶನ: ಅರಿವಾಗುವುದೆಂದು ಮಹತ್ವ?

ಅಧಿವೇಶನದಲ್ಲಿ ಮಂಡನೆಯಾಗುವ ವಿಷಯಗಳ ಸಾಧಕ ಬಾಧಕಗಳ ಕುರಿತು ಅರ್ಥಪೂರ್ಣ ಚರ್ಚೆಗೆ ನಮ್ಮ ಜನಪ್ರತಿನಿಧಿಗಳು ಅನುವು ಮಾಡಿಕೊಡಬೇಕಿದೆ

● ಪ್ರೊ. ಎಂ.ಎಸ್.ರಘುನಾಥ್

ನಾನು, ಬೆಂಗಳೂರಿನಲ್ಲಿ ಪದವಿ ಕಾಲೇಜೊಂದರಲ್ಲಿ ಪ್ರಾಂಶುಪಾಲನಾಗಿದ್ದಾಗ, ವಿಧಾನಮಂಡಲ ಅಧಿವೇಶನ ನಡೆಯುವ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ಅದರಲ್ಲೂ ವಿಶೇಷವಾಗಿ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳ ಬೇಡಿಕೆಯೆಂದರೆ, ಅಧಿವೇಶನವನ್ನು ವೀಕ್ಷಿಸಲು ತಮ್ಮನ್ನು ವಿಧಾನಸೌಧಕ್ಕೆ ಕಳುಹಿಸಿ ಕೊಡಬೇಕು ಎಂಬುದು. ಅದರಿಂದ ಉಂಟಾಗುವ ಪ್ರಯೋಜನ ಅಷ್ಟರಲ್ಲೇ ಇದೆ ಎಂದು ಮೊದಲು ಅನಿಸಿದರೂ ಆ ತಿಳಿವಳಿಕೆಯೂ ವಿದ್ಯಾರ್ಥಿಗಳಿಗೆ ಇರಲಿ ಎಂದು ಆಶಿಸುತ್ತಾ, ಆಗಲಿ ಎಂದು ಒಪ್ಪಿಗೆ ಸೂಚಿಸಿದೆ.

ಒಂದು ಕಾಲದಲ್ಲಿ ನನಗೂ ಆ ಕುತೂಹಲ ಉಂಟಾಗಿದ್ದ ನೆನಪು ಮರುಕಳಿಸಿತ್ತು. ಈ ರೀತಿಯ ತಿಳಿವಳಿಕೆ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಮಾತ್ರವೇನು, ಪದವಿ ಮಟ್ಟದ ಎಲ್ಲ ವಿದ್ಯಾರ್ಥಿಗಳೂ ಅದರ ಪರಿಚಯ ಹೊಂದುವುದು ಒಳ್ಳೆಯದೇ ಎಂಬ ಭಾವನೆ ನನ್ನಲ್ಲಿ ಮೂಡಿತ್ತು. ಕಲಾ ವಿಭಾಗದ ವಿದ್ಯಾರ್ಥಿಗಳಿಗೆ, ಇದೊಂದು ರೀತಿಯ ಪ್ರಾಕ್ಟಿಕಲ್ ಕ್ಲಾಸ್ ನಂತೆ ಆಗಬಹುದೇ ಎಂಬ ಯೋಚನೆಯೂ ಬರುತ್ತಿತ್ತು.

ಹೌದು, ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಶಾಸನಸಭೆಯ ಪರಿಚಯ ಚೆನ್ನಾಗಿಯೇ ಇರಬೇಕು. ಪ್ರಜಾಪ್ರಭುತ್ವದ ಈ ಪ್ರಧಾನ ಸಂಸ್ಥೆಯು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಪ್ರಾಥಮಿಕ ತಿಳಿವಳಿಕೆ ಈ ವಿದ್ಯಾರ್ಥಿಗಳಿಗೆ ಮಾತ್ರವೇ ಏನು, ಎಲ್ಲ ಮತದಾರರಿಗೂ ಇರಬೇಕಾದದ್ದು ಅವಶ್ಯಕ. ಹಾಗೆಂದ ಮಾತ್ರಕ್ಕೆ ಎಲ್ಲರೂ ಅಧಿವೇಶನಗಳನ್ನು ವೀಕ್ಷಿಸಲು ಹೋಗಲಾಗದು. ಆ ಉದ್ದೇಶದಿಂದಲೇ ವಿಧಾನಸಭಾ ಹಾಗೂ ಸಂಸತ್ ಅಧಿವೇಶನಗಳನ್ನು ವೀಕ್ಷಿಸಲು ಅನುವಾಗುವಂತೆ 'ದೂರದರ್ಶನ'ವು ನೇರ ಪ್ರಸಾರ ಮಾಡುತ್ತಿರುವುದು ತಿಳಿದ ವಿಷಯವೇ.

ಕೆಲವು ವಿದ್ಯಾರ್ಥಿಗಳಿಗೆ ಹೀಗೆ ಬೇರೆ ಕಡೆ ಹೋಗುವುದು ತರಗತಿ ತಪ್ಪಿಸಿಕೊಳ್ಳಲು ಒಂದು ಅಧಿಕೃತ ಮಾರ್ಗವಾಗಿತ್ತು ಎಂಬುದು ಗುಟ್ಟಿನ ವಿಷಯವೇನೂ ಆಗಿರಲಿಲ್ಲ. ಆದರೂ, ವಿದ್ಯಾರ್ಥಿಗಳಿಗೆ ಒಂದು ಮನೋಲ್ಲಾಸದ ಪರ್ಯಾಯ ಮಾರ್ಗವಿರಲಿ ಎಂಬ ಕಾರಣದಿಂದ ಹಾಗೂ ಜನಪ್ರತಿನಿಧಿಗಳ ಜವಾಬ್ದಾರಿ ಏನು ಎಂಬುದರ ಕುರಿತು ಕಿಂಚಿತ್ತು ಅರಿವು ಮೂಡಿಸುವ ಉದ್ದೇಶದಿಂದ ಒಪ್ಪಿಗೆ ಸೂಚಿಸಿದೆ.

ಒಂದೆರಡು ದಿನಗಳ ನಂತರ, ಈ ವೀಕ್ಷಣೆ ಮುಗಿಸಿಕೊಂಡು ಬಂದ ಕೆಲವು ವಿದ್ಯಾರ್ಥಿನಿಯರನ್ನು 'ಸದನ ವೀಕ್ಷಣೆಯ ಅನುಭವ ಹೇಗಿತ್ತು' ಎಂದು ಕೇಳಿದೆ. ಒಬ್ಬ ವಿದ್ಯಾರ್ಥಿನಿ ಹೇಳಿದ್ದು, 'ಸಾರ್, ಬೇಜವಾಬ್ದಾರಿ ಎಂದರೆ ಏನೆಂದು ತಿಳಿಯಬೇಕಾದರೆ ಅಲ್ಲಿಗೆ ಹೋಗಬೇಕು. ಅಲ್ಲಾ ಸಾರ್, ಯಾರೋ ಒಬ್ಬ ಸದಸ್ಯರು ತಮ್ಮ ಸರದಿ ಬಂದಾಗ ಬಂದು, ಪ್ರಶ್ನೋತ್ತರ ಆದ ನಂತರ ಹೊರಟೇಹೋದರು. ಮಂತ್ರಿಗಳು ಅಂತ ಕಾಣುತ್ತೆ. ಅವರು ಭಾಷಣ ಮಾಡುತ್ತಿದ್ದಾಗ ಬೇರೆಯವರು ಮಾತನಾಡುತ್ತಾ ಕುಳಿತಿದ್ದರು...' ಎಂದೆಲ್ಲಾ ಹೇಳಬೇಕಾದ್ದನ್ನೇ ಹೇಳಿದಳು.

ಬೆಳಗಾವಿಯಲ್ಲಿ ಮೊನ್ನೆಯಷ್ಟೇ ನಡೆದ ಅಧಿವೇಶನದ ಸಮಯದಲ್ಲಿ ಅದನ್ನು ವೀಕ್ಷಿಸಲು ಸರದಿಗಾಗಿ ಕಾಯುತ್ತಿದ್ದ ಶಾಲಾ–ಕಾಲೇಜು ಮಕ್ಕಳ ಚಿತ್ರವನ್ನು ಪತ್ರಿಕೆಯಲ್ಲಿ ನೋಡಿದಾಗ ಇದೆಲ್ಲಾ ನೆನಪಾಯಿತು.

ಬ್ರಿಟನ್ ಪಾರ್ಲಿಮೆಂಟ್‌ನಲ್ಲಿ ರಿಷಿ ಸುನಕ್ ಅವರು ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ ಮಾತನಾಡುತ್ತಿದ್ದಾಗ, ಸಂಸತ್ ಸದಸ್ಯರು ಭಾಷಣದ ಟಿಪ್ಪಣಿ ಮಾಡಿಕೊಳ್ಳುತ್ತಿದ್ದುದನ್ನು ಗಮನಿಸಬಹುದಿತ್ತು (ತಾಂತ್ರಿಕ ಆವಿಷ್ಕಾರಗಳಿದ್ದರೂ). ನಂತರ ಅದನ್ನು ನೋಡಿಕೊಂಡೇ ಚರ್ಚೆಯಲ್ಲಿ ತೊಡಗಿದ್ದುದನ್ನು ಸಹ ಪ್ರಸಾರದಲ್ಲಿ ನೋಡಿದೆವು.

ನಮ್ಮ ವಿಧಾನಸಭಾ ಸದಸ್ಯರ ಬೇಜವಾಬ್ದಾರಿಯುತ ವರ್ತನೆಗೆ ಯಾವುದೇ ಪಕ್ಷಭೇದವಿಲ್ಲ. ನಮ್ಮ ಜನಪ್ರತಿನಿಧಿಗಳು ಅಭಿವೃದ್ಧಿಯ ಮಂತ್ರವನ್ನು ಸದಾ ಜಪಿಸುತ್ತಾರೆ. ಆದರೆ ಅದಕ್ಕೆ ಪೂರಕವಾಗುವ ಯೋಜನೆ ಜಾರಿಯಾಗಬೇಕಾದರೆ, ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಮೊದಲು ಅದರ ಮಂಡನೆಯಾಗಬೇಕು, ನಂತರ ಅದನ್ನು ಅನುಷ್ಠಾನಕ್ಕೆ ತರಲು ಇರುವ ಸಾಂವಿಧಾನಿಕ ಮಾನ್ಯತೆಗೆ, ಅದರ ಸಾಧಕ ಬಾಧಕಗಳ ಕುರಿತು ಮಾಡಬೇಕಾದ ಅರ್ಥಪೂರ್ಣ ಚರ್ಚೆಗೆ ಅನುವು ಮಾಡಿಕೊಡಬೇಕು ಎನ್ನುವ ನಡಾವಳಿಗೆ ಏಕೆ ಬದ್ಧತೆ ತೋರುವುದಿಲ್ಲ?



ಪ್ರಸ್ತುತ ಸನ್ನಿವೇಶವನ್ನೇ ಗಮನಿಸಿದರೆ, ಬರಲಿರುವ ಚುನಾವಣೆಗೆ ಕೆಲವೇ ತಿಂಗಳುಗಳು ಬಾಕಿ ಇವೆಯಷ್ಟೇ. ಜನಪ್ರತಿನಿಧಿಗಳ ಸಾಮರ್ಥ್ಯವನ್ನು ಒರೆಗೆ ಹಚ್ಚುವ ಸಾಧನಕ್ಕೆ ಅಧಿವೇಶನದ ಚರ್ಚೆಗಳೂ ತಮ್ಮದೇ ಆದ ರೀತಿಯಲ್ಲಿ ಪರಿಣಾಮ ಬೀರುತ್ತವೆ ಎಂಬ ಲವಲೇಶದ ತಿಳಿವಳಿಕೆಯಾದರೂ ಎಂತಹ ಜನಪ್ರತಿನಿಧಿಗಾದರೂ ಇರಲೇಬೇಕು. ಹಾಗಿರುವಾಗ, ನಮ್ಮ ಶಾಸಕ ಮಹೋದಯರು, ಇತರ ರಾಜಕಾರಣಿಗಳ ಕಾಲೆಳೆಯುವುದರಲ್ಲೇ ಕಾಲಹರಣ ಮಾಡದೆ, 'ನಮ್ಮ ಮತದಾರರಿಗೆ ನಾವು ಬದ್ಧರು' ಎಂಬುದನ್ನು ಚರ್ಚೆಯ ಮೂಲಕ ಮಾಡಿ ತೋರಿಸಿದ್ದೇ ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವರು ಅರ್ಥಪೂರ್ಣ ಕೊಡುಗೆ ನೀಡಿದಂತೆಯೇ ಸರಿ.

ಒಟ್ಟಿನಲ್ಲಿ ನಮ್ಮ ಎಲ್ಲಾ ಶಾಸಕರು ಅಧಿವೇಶನವನ್ನು ಗಂಭೀರವಾಗಿ ತೆಗೆದುಕೊಳ್ಳುವ ದಿನಗಳು ಎಂದು ಬರುತ್ತವೋ ತಿಳಿಯದು. ಬೆಳಗಾವಿ ಅಧಿವೇಶನವಂತೂ ಶಾಸಕರ ಕಾಲಹರಣಕ್ಕಾಗಿ ಮೀಸಲಾಗಿದೆಯೇನೋ ಎಂಬಂತಿತ್ತು. ನಮ್ಮಿಂದ ಆಯ್ಕೆಯಾದ ಪ್ರತಿನಿಧಿಗಳು ತಮ್ಮ ಪ್ರತಿಷ್ಠೆಯನ್ನು ಪಣಕ್ಕೆ ಒಡ್ಡದೆ, ತಮ್ಮನ್ನು ಸದಾ ಗಮನಿಸುವವರು ಇರುತ್ತಾರೆ ಎಂಬುದನ್ನು ತಿಳಿದು, ಜನರ ಜ್ವಲಂತ ಸಮಸ್ಯೆಗಳ ಕುರಿತು ಪಕ್ಷಾತೀತವಾಗಿ ಅರ್ಥಪೂರ್ಣ ಚರ್ಚೆಗೆ ತೊಡಗುವರೇ? ತಮ್ಮ ಜವಾಬ್ದಾರಿಯುತ ನಡೆ–ನುಡಿಯಿಂದ ತರುಣ ಪೀಳಿಗೆಗೆ ಮಾದರಿ ಶಾಸಕರಾಗುವರೇ? ಕಾದು ನೋಡಬೇಕು.

ವಾಚಕರ ವಾಣಿ

ಹಿರಿಯರು ಮಾದರಿಯಾಗಲಿ

ಭಾರತೀಯ ಆಹಾರ, ವಿಹಾರ, ಹಬ್ಬ ಹರಿದಿನಗಳ ಆಚರಣೆಗಳಿಗೂ ಆಯುರ್ವೇದ ವೈದ್ಯಶಾಸ್ತ್ರಕ್ಕೂ ಅವಿನಾಭಾವ ಸಂಬಂಧವಿದೆ. ವರ್ಷದ ಯಾವ ಋತುವಿನಲ್ಲಿ ಯಾವ ಯಾವ ಆಹಾರ ವಿಹಾರಗಳು ಯೋಗ್ಯ ಎಂಬ ಬಗ್ಗೆ ವಿಸ್ತೃತ ಉಲ್ಲೇಖಗಳಿವೆ. ಆಹಾರದಲ್ಲಿ ಗಿಡಮೂಲಿಕೆಗಳು, ಖನಿಜಗಳ ಜೊತೆಗೆ ಪ್ರಾಣಿಜನ್ಯ ಆಹಾರವನ್ನೂ ವಿವರಿಸಲಾಗಿದೆ. ಸಣ್ಣಪುಟ್ಟ ಉಡದಂತಹವುಗಳ ಜೊತೆಗೆ ಬೆಕ್ಕು, ಆಕಳು, ಎಮ್ಮೆ, ಆಡು, ಒಂಟೆ, ಹುಲಿ, ಕರಡಿ, ಮಂಗದಂತಹವುಗಳ ಮಾಂಸ, ಮಲ, ಮೂತ್ರಗಳನ್ನು ಔಷಧಕ್ಕೆ ಬಳಸುವ ಬಗೆಗೂ ಹೇಳಲಾಗಿದೆ. ನನಗೆ ತಿಳಿದಂತೆ, ಮಾಂಸಾಹಾರ, ಶಾಕಾಹಾರ ಎಂದು ವಿಭಾಗಿಸಿ ವಿವರಿಸಿಲ್ಲ. ರೋಗ ಬಂದವನಿಗೆ ಹಾಗೂ ಮುಂದೆ ರೋಗ ಬರಬಾರದೆಂಬುವವನಿಗೆ ಯಾವಾಗ ಯಾವುದು ಸೂಕ್ತ ಎಂದಷ್ಟೇ ವಿವರಿಸಲಾಗಿದೆ. ಆಯುರ್ವೇದದಲ್ಲಿ ಸಾತ್ವಿಕ- ತಾಮಸ ಎಂದು ಆಹಾರದ ವಿಭಾಗ ಇದ್ದದ್ದು ನನಗೂ, ನಾನು ಸಲಹೆ ಪಡೆದ ಕೆಲ ಮಿತ್ರರಿಗೂ ಗೊತ್ತಿಲ್ಲ. ಧರ್ಮ ಬೇಕೆನ್ನುವವರು ಮಠ, ಚರ್ಚು, ಮದರಸಾಗಳಲ್ಲಿ ಅವರವರ ಧರ್ಮವನ್ನು ಅವರವರು ಕಲಿತುಕೊಳ್ಳಲಿ.

ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ ಅವರು ಅಭಿಪ್ರಾಯಪಟ್ಟಂತೆ (ಸಂಗತ, ಜ. 11) ನೈತಿಕ ಶಿಕ್ಷಣಕ್ಕೆ ಸಂವಿಧಾನವೇ ಮೂಲ ಸೆಲೆ. ಸರ್ಕಾರದ ಶ್ರಮವು ಸಂವಿಧಾನವನ್ನು ಕಲಿಸುವುದಕ್ಕೆ ಸೀಮಿತಗೊಳ್ಳಲಿ. ಮಕ್ಕಳ ಚಿಂತನೆಯನ್ನು ಸಂವಿಧಾನ ಸೂಚಿಸಿದಂತೆ ವೈಜ್ಞಾನಿಕ ನೆಲೆಯಲ್ಲಿ ರೂಢಿಸಬೇಕು. ಈ ಪಠ್ಯಕ್ಕೆ ಪರೀಕ್ಷೆಯನ್ನೂ ನಡೆಸಬೇಕು. ನಮ್ಮ ಮುಂದಿನ ತಲೆಮಾರಾದರೂ ನೆಮ್ಮದಿಯಿಂದ ಇರಲಿ. ಮಕ್ಕಳಿಗೆ ಇದು ಕಲಿಸಬೇಕು, ಅದು ಕಲಿಸಬೇಕು ಎಂದು ಪ್ರಯತ್ನ ಮಾಡುವುದನ್ನು ಬಿಟ್ಟು, ಏನು ಕಲಿಸಬೇಕೆಂಬುದು ಇದೆಯೋ ಅದನ್ನು ನಾವು ನಡೆದು ತೋರಿಸಿದರೆ ಸಾಕು.

ಡಾ. ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

ಆಶೀರ್ವಾದದ ಭಂಗಿ ಸರಿಯಲ್ಲ

ವಿಧಾನಸೌಧದ ಮುಂಭಾಗದಲ್ಲಿ ಬಸವಣ್ಣ ಮತ್ತು ಕೆಂಪೇಗೌಡ ಅವರ ಪುತ್ಥಳಿಗಳ ಸ್ಥಾಪನೆಗೆ ಶಿಲಾನ್ಯಾಸ ಹಾಗೂ ಭೂಮಿಪೂಜೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸರ್ಕಾರದ ಜಾಹೀರಾತು ಪ್ರಕಟವಾಗಿದ್ದು (ಪ್ರ.ವಾ., ಜ. 13), ಅದರಲ್ಲಿ ಬಸವಣ್ಣನವರ ಆಶೀರ್ವಾದದ ಭಂಗಿಯ ಚಿತ್ರ ಇದೆ. ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ಸಾರಿ 'ಬಾಗಿದ ತಲೆ ಮುಗಿದ ಕೈಯಾಗಿಸು' ಎಂದು ಕೂಡಲಸಂಗಮನಲ್ಲಿ ಬೇಡಿಕೊಂಡು 'ವಿಶ್ವಗುರು'ವೆನಿಸಿದ್ದಾರೆ! ಅಂಥ ಸದ್ವಿನಯದ ಬಸವಣ್ಣನವರು ಯಾರಿಗೆ ಆಶೀರ್ವಾದ ಮಾಡಲು ಸಾಧ್ಯ?

ಕೆಲವು ಪವಾಡಪುರುಷರ ಆಶೀರ್ವಾದದ ಭಂಗಿಯಂತೆ ಬಸವಣ್ಣನವರನ್ನು ಚಿತ್ರಿಸಲು ಹೊರಡುವುದು ಅವರಿಗೆ, ಅವರ ತತ್ವಕ್ಕೆ ಎಸಗುವ ಅಪಚಾರವೇ ಸರಿ. ಇನ್ನು ಕೆಲವರು ಅವರನ್ನು ಕಾವಿ ಧರಿಸಿದಂತೆ ಚಿತ್ರಿಸುತ್ತಾರೆ. ಬಸವಣ್ಣನವರು ಸನ್ಯಾಸಿಯಾಗಿರದೆ ಸಂಸಾರಿಯಾಗಿದ್ದು, ಅಧ್ಯಾತ್ಮ ಸಾಧಕರಿಗೆ ಮಾದರಿಯಾಗಿದ್ದವರು ಎಂಬುದನ್ನು ನಾವು ಮರೆಯಬಾರದು.

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

ನ್ಯಾಯಾಂಗದ ಮೇಲೆ ಪರೋಕ್ಷ ದಾಳಿ

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಸಂಸತ್ತೇ ಸರ್ವೋಚ್ಚ ಎಂದು ಹೇಳುವ ಮೂಲಕ ಪ್ರಸ್ತುತ ಸರ್ಕಾರದ ಗುಪ್ತಕಾರ್ಯಸೂಚಿಯನ್ನು ಅನಾವರಣಗೊಳಿಸಿದ್ದಾರೆ ಎನಿಸುತ್ತದೆ. ಸಂಸತ್ತಿಗೆ ಶಾಸನ ರೂಪಿಸುವ ಶ್ರೇಷ್ಠ ಅಧಿಕಾರವಿದೆ ನಿಜ. ಆದರೆ ಆ ಶಾಸನವು ನ್ಯಾಯಾಂಗದ ವಿಮರ್ಶೆಗೆ ಒಳಗಾಗುವುದು ಅಧಿಕಾರ ಪ್ರತ್ಯೇಕತಾ ಸಿದ್ಧಾಂತದ ಪ್ರಕಾರ ಸರಿ. ಕೇಶವಾನಂದ ಭಾರತಿ ಪ್ರಕರಣದಲ್ಲಿ, ಭಾರತ ಸಂವಿಧಾನದ ಮೂಲ ಸ್ವರೂಪ ಮತ್ತು ತತ್ವಗಳನ್ನು ಬದಲಾಯಿಸುವ ಅಧಿಕಾರ ಸಂಸತ್ತಿಗೆ ಇಲ್ಲವೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡುವುದರ ಮೂಲಕ ಶಾಸಕಾಂಗದ ಸರ್ವಾಧಿಕಾರಕ್ಕೆ ಕಡಿವಾಣ ಹಾಕಿದೆ. ಈ ತೀರ್ಪನ್ನೇ ಅವಹೇಳನ ಮಾಡುವಂತೆ ಮಾತನಾಡಿರುವ ಧನಕರ್ ಅವರು ದೇಶದ ನ್ಯಾಯಾಂಗದ ಮೇಲೆ ಪರೋಕ್ಷವಾಗಿ ದಾಳಿ ಮಾಡಿದ್ದಾರೆ.

ಭಾರತದಲ್ಲಿ ಸಂವಿಧಾನವೇ ಶ್ರೇಷ್ಠವಾದುದು. ಸರ್ಕಾರದ ಮೂರೂ ಅಂಗಗಳು ಸಂವಿಧಾನದ ಮೂಲ ಆಶಯದಂತೆಯೇ ಕಾರ್ಯನಿರ್ವಹಿಸಬೇಕು. ಹಾಗಾಗದಿದ್ದಲ್ಲಿ ದೇಶದಲ್ಲಿ ಅರಾಜಕತೆ ತನ್ನ ರೂಕ್ಷಬಾಹುಗಳನ್ನು ದಶದಿಕ್ಕುಗಳಿಗೂ ಚಾಚಿ ಪ್ರಜಾಪ್ರಭುತ್ವವನ್ನು ತಬ್ಬಿಕೊಳ್ಳುತ್ತದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ನೈತಿಕ ಶಿಕ್ಷಣ: ಬೇಕಿಲ್ಲ ಭಾರವಾದ ಗ್ರಂಥ

ಶಾಲಾ ಮಕ್ಕಳಿಗೆ ನೈತಿಕ ಶಿಕ್ಷಣ ಕಲಿಸುವ ವ್ಯವಸ್ಥೆಯನ್ನು ಆರಂಭಿಸುವ ಲಕ್ಷಣಗಳು ಕಾಣಿಸುತ್ತಿವೆ. ಆದರೆ, ಈ ಸಂಬಂಧವಾಗಿ ಮಠಾಧೀಶರು ಮತ್ತು ಅವರಂತೆಯೇ ಇರುವ ಇನ್ನೊಂದಿಷ್ಟು ಜನರನ್ನು ಸರ್ಕಾರ ಕರೆದಿದ್ದು, ಐಡಿಯಾಲಜಿಗಳ ಭರಾಟೆಯ ಈ ಕಾಲದಲ್ಲಿ ವಿವಾದಾಸ್ಪದವಾಗಿದೆ. ಅಲ್ಲಿಗೆ ಬಂದಿದ್ದವರು ಭಗವದ್ಗೀತೆ, ಕುರಾನ್, ಬೈಬಲ್ ಬಗ್ಗೆಯೆಲ್ಲ ಮಾತನಾಡಿದ್ದಾರೆ. ಇದರಿಂದಾಗಿ, ಸರಳವಾಗಿ ಮುಗಿಯಬಹುದಾಗಿದ್ದ ವಿಷಯ ತಾನಾಗಿಯೇ ಜಟಿಲವಾಗಿದೆ.

ನಮ್ಮ ತಲೆಮಾರಿನವರಲ್ಲಿ ಹೆಚ್ಚಿನವರು ಸರ್ಕಾರಿ ಶಾಲೆಗಳಲ್ಲಿ ಓದಿದವರು. ಆಗ ನಮ್ಮ ಮೇಷ್ಟ್ರುಗಳು ದಿನವೂ ಮಧ್ಯಾಹ್ನದ ನಂತರ ಒಂದು ಪೀರಿಯಡ್‌ನಲ್ಲಿ ನಮಗೆಲ್ಲ ಕತೆಗಳನ್ನು ಹೇಳುತ್ತಿದ್ದರು. ಅವು ಪಂಚತಂತ್ರ, ರಾಮಾಯಣ, ಮಹಾಭಾರತ, ಈಸೋಪ, ಅರೇಬಿಯನ್ ನೈಟ್ಸ್, ಜಾನಪದ ಹೀಗೆ ಹಲವು ಮೂಲಗಳದ್ದಾಗಿದ್ದವು. ಕೆಲವೊಮ್ಮೆ ಹಾಡುಗಳ ರೂಪದಲ್ಲೂ ನಮಗೆ ನೀತಿ, ಸಂದೇಶವನ್ನು ರವಾನಿಸಲಾಗುತ್ತಿತ್ತು. ನಮಗೆ ಇದ್ದ ದೈಹಿಕ ಶಿಕ್ಷಣ ಶಿಕ್ಷಕರು ಕೆಲವು ಆಟಗಳ ಮೂಲಕ ಹಿಂಸೆ, ಅಹಿಂಸೆಗೆ ಸಂಬಂಧಿಸಿದ ಸಂದೇಶಗಳನ್ನು ದಾಟಿಸುತ್ತಿದ್ದರು. ನಾವೂ ನಮಗೆ ದಕ್ಕಿದಷ್ಟನ್ನು ಜಾತಿ, ಧರ್ಮ, ಪಂಗಡಗಳನ್ನೆಲ್ಲ ನೋಡದೆ ಕಲಿತುಕೊಂಡೆವು. ಪುಟ್ಟ ಮಕ್ಕಳ ಮನಸ್ಸು ಕೋಮಲವಾಗಿರುತ್ತದೆ. ಆ ವಯಸ್ಸಿನಲ್ಲೇನಿದ್ದರೂ ಸರಳವಾದ ಕತೆಗಳು, ಲಯಬದ್ಧ ಪದ್ಯಗಳು ಚೆನ್ನಾಗಿ ಹಿಡಿಸುತ್ತವೆ. ಶ್ಲೋಕಗಳನ್ನೇನಿದ್ದರೂ ಬಾಯಿಪಾಠ ಮಾಡಬಹುದಷ್ಟೆ. ಆದ್ದರಿಂದ ಚಿಕ್ಕ ಮಕ್ಕಳಿಗೆ ಭಗವದ್ಗೀತೆ, ಕುರಾನ್, ಬೈಬಲ್‌ನಂತಹ ಭಾರವಾದ ಗ್ರಂಥಗಳು ಬೇಕಾಗಿಲ್ಲ. ಬದುಕಿನಲ್ಲಿ ಧರ್ಮ, ಅಧ್ಯಾತ್ಮ, ತತ್ವಜ್ಞಾನ, ಹುಟ್ಟು, ಸಾವು, ಮೋಕ್ಷದಂತಹವುಗಳ ಬಗ್ಗೆ ಕುತೂಹಲ, ಜಿಜ್ಞಾಸೆ ಶುರುವಾದಾಗ ಬೇಕಾಗುವ ಗ್ರಂಥಗಳಿವು.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಾತ್ವಿಕ ಆಹಾರ ಪದ್ಧತಿ ಸಾತ್ವಿಕತೆಯನ್ನು ಬೆಳೆಸುತ್ತದೆ ಎಂಬ ಅತಾರ್ಕಿಕವಾದ ಸೂತ್ರವನ್ನು ಶಿಕ್ಷಣದಲ್ಲಿ ಜಾರಿಗೊಳಿಸಬೇಕೆಂದು 'ಮೌಲ್ಯಶಿಕ್ಷಣ' ಸಮಾಲೋಚನೆಯ ದುಂಡು ಮೇಜಿನ ಪರಿಷತ್ ಸೂಚನೆ ನೀಡಿದೆ. ಇದು ಸಸ್ಯಾಹಾರವೊಂದೇ ಶ್ರೇಷ್ಠ, ಸಸ್ಯಾಹಾರಿಗಳೆಲ್ಲ ಸಾತ್ವಿಕ ಪ್ರವೃತ್ತಿಯವರಾಗಿರುತ್ತಾರೆ, ಮಾಂಸಹಾರಿಗಳೆಲ್ಲ ಹಿಂಸ್ರಕರಾಗಿರುತ್ತಾರೆ ಎಂಬ ಸುಳ್ಳು ಪ್ರಮೇಯವನ್ನು ವಿದ್ಯಾರ್ಥಿಗಳ ತಲೆಗೆ ತುಂಬುವ ಪುರೋಹಿತಶಾಹಿ ಕುತರ್ಕವಲ್ಲದೆ ಬೇರೇನಲ್ಲ. ಬೇರೆ ಬೇರೆ ಆಹಾರ ಕ್ರಮಗಳನ್ನು ಶ್ರೇಷ್ಠ-ಕನಿಷ್ಠ ಎಂಬ ವಿಂಗಡೀಕರಣಕ್ಕೆ ಇದು ಗುರಿಮಾಡುತ್ತದೆ. ಇದು ಅಸಹಿಷ್ಣು- ಅಗೌರವದ ಭಾವನೆಗಳನ್ನು ಎಳೆ ಮನಸ್ಸುಗಳಲ್ಲಿ ಬಿತ್ತುತ್ತದೆ. ಸಸ್ಯಾಹಾರಿಗಳೆಲ್ಲ ಸಾತ್ವಿಕ ವ್ಯಕ್ತಿತ್ವದವರು ಎಂಬ ವಾದವನ್ನು ಸಮರ್ಥಿಸುವುದಕ್ಕೆ ನಮ್ಮ ಸಮಾಜದಲ್ಲಿ ಇರುವ ನಿದರ್ಶನಗಳೆಷ್ಟು? ಮಾಂಸಾಹಾರಿಗಳೆಲ್ಲ ತಾಮಸರು ಎಂಬುದಕ್ಕೆ ನಮ್ಮಲ್ಲಿ ಇರುವ ಸಾಕ್ಷ್ಯಾಧಾರಗಳೆಷ್ಟು?

ಪ್ರಜಾವಾಣಿ ಚರ್ಚೆ

ಶಾಲೆಯಲ್ಲಿ ಧರ್ಮಾಧಾರಿತ ಮೌಲ್ಯ ಶಿಕ್ಷಣವನ್ನು ಅಳವಡಿಸಿಕೊಳ್ಳಬೇಕಾದ ಅಗತ್ಯ ಇದೆಯೇ?

ಸಾತ್ವಿಕ ಆಹಾರವೆಂಬ ಜಾತಿ ಶ್ರೇಷ್ಠತೆಯ ಮೌಲ್ಯ

• ಬಂಜಗೆರೆ ಜಯಪ್ರಕಾಶ



ಶಿಕ್ಷಣ ಕ್ಷೇತ್ರದಲ್ಲಿ ಸದಾ ಒಂದಿಲ್ಲೊಂದು ವಿವಾದ ಉಂಟು ಮಾಡುವುದು ಸಚಿವ ಬಿ. ಸಿ. ನಾಗೇಶ್ ಅವರಿಗೆ ಒಂದು ಚಟವಾಗಿಬಿಟ್ಟಿದೆ. ಶಿಕ್ಷಣ ಮಂತ್ರಿ ಸದಾ ಸುದ್ದಿಯಲ್ಲಿರುತ್ತಾರೆ ಆದರೆ ಕೆಲಸಕ್ಕೆ ಬಾರದ ವಿಷಯಗಳಿಗಾಗಿ ಎಂದು ವಿಷಾದದಿಂದ ಹೇಳಬೇಕಾಗಿದೆ. ಶಿಕ್ಷಣ ಇಲಾಖೆ ಸುಧಾರಣೆಗಳ ಹೆಸರಲ್ಲಿ ಬೇರೆ ಬೇರೆ ಕ್ರಮಗಳನ್ನು ಪರಿಚಯಿಸಿದೆಯಾದರೂ ಅವು ಯಾವುವೂ ಶಿಕ್ಷಣವನ್ನು ವಸಾಹತುಶಾಹಿ ಛಾಯೆಯಿಂದ ಪೂರ್ಣ ಬಿಡುಗಡೆಗೊಳಿಸಿಲ್ಲ. ವಾರ್ಷಿಕ ಪರೀಕ್ಷೆಯೊಂದರ ಮೂಲಕ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಅಳೆಯುವುದೆಂಬುದು ಸೂಕ್ತ ವಿಧಾನವಲ್ಲ ಎಂಬ ಟೀಕೆಗಳಿಗೆ ಉತ್ತರವಾಗಿ ವರ್ಷದಲ್ಲಿ ಎರಡು ಮೂರು ಸಲ ಕಿರು ಪರೀಕ್ಷೆಗಳನ್ನು ಮಾಡುವ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಆದರೆ ಇದು ಪರೀಕ್ಷೆ ಮಾಡುವ ವಿಧಾನವನ್ನು ಬದಲಿಸಲಿಲ್ಲ, ಬದಲಾಗಿ ಪರೀಕ್ಷೆ ನಡೆಸುವ ಆವರ್ತನಗಳನ್ನು ಮಾತ್ರ ಹೆಚ್ಚಿಸಿತು.

ಪಾಠವೊಂದರ ಬಗ್ಗೆ ವಿದ್ಯಾರ್ಥಿಗಳು ಎಷ್ಟು ಕಲಿತಿದ್ದಾರೆ ಎಂಬುದನ್ನು ಪರೀಕ್ಷೆ ಮಾಡಲು ಜ್ಞಾಪಕ ಶಕ್ತಿಯನ್ನಾಧರಿಸಿದ ಅಳತೆಗೋಲುಗಳನ್ನೇ ಈಗಲೂ ಪ್ರಧಾನವಾಗಿ ಇಟ್ಟುಕೊಳ್ಳಲಾಗಿದೆ. ಪ್ರವಚನ ಮಾದರಿಯ ಬೋಧನೆಯ ಮುಖಾಂತರ ಪಾಠವನ್ನು ಅರ್ಥಮಾಡಿಸುತ್ತೇವೆಂದು ಪ್ರಯತ್ನಿಸುವ ಪದ್ಧತಿ, ಉತ್ತರಗಳನ್ನು ಉರು ಹಚ್ಚುವ ಮುಖಾಂತರ ಹೆಚ್ಚು ಅಂಕ ಗಳಿಸಿದರೆ ಸಾಕು ಎಂಬ ವಿದ್ಯಾರ್ಥಿಗಳ ಮನಸ್ಥಿತಿ ಇವೆರಡೂ ಬಗೆಹರಿಯಬೇಕಾದ ಸಮಸ್ಯೆಗಳಾಗಿಯೇ ಉಳಿದಿವೆ.

ಶಿಕ್ಷಣದಲ್ಲಿ ಮೂಲಭೂತ ಸುಧಾರಣೆಯೆಂದರೆ ಇಂಗ್ಲಿಷರು ವಿನ್ಯಾಸ ಮಾಡಿಟ್ಟು ಹೋಗಿದ್ದ ಶಿಕ್ಷಣ ಕ್ರಮವನ್ನು ಭಾರತದ ಸಾಮಾಜಿಕ - ಸಾಂಸ್ಕೃತಿಕ ಸೂಕ್ಷ್ಮಗಳಿಗೆ ಅನುವಾಗುವ ಹಾಗೆ ಮಾರ್ಪಡಿಸಿಕೊಳ್ಳಬೇಕು ಎಂಬ ಮಾತನ್ನು ನುರಿತ ಶಿಕ್ಷಣ ತಜ್ಞರು ಹೇಳಿದ್ದಾರೆ. ಅದನ್ನು ಜಾರಿಗೊಳಿಸುತ್ತೇವೆಂಬ ಪ್ರಯತ್ನದಲ್ಲಿ ನಡೆಯುತ್ತಾ ಬಂದಿರುವುದು ಶಿಕ್ಷಣದ ವೈದಿಕೀಕರಣ. ಈ ವೈದಿಕೀಕರಣ ಜಾತಿ ಶ್ರೇಣಿ ವ್ಯವಸ್ಥೆಯನ್ನು ಪರೋಕ್ಷವಾಗಿ ಪ್ರತಿಪಾದನೆ ಮಾಡುವ ದಿಕ್ಕಿನಲ್ಲಿದೆ. ಇಂಗ್ಲಿಷರ ಪದ್ಧತಿಯನ್ನು ರಿಪೇರಿ ಮಾಡುವುದೆಂದರೆ ಪ್ರಾಚೀನ ಗುರುಕುಲ ಶಿಕ್ಷಣದ ಮಾದರಿಯನ್ನು ಅಳವಡಿಸಿಕೊಳ್ಳುವುದು ಎಂಬ ದಿಕ್ಕಿಗೆ ಹೊರಳಿಕೊಂಡಿರುವುದು ಹೊಸಶಿಕ್ಷಣ ನೀತಿಯಲ್ಲಿ ಢಾಳಾಗಿ ಕಂಡು ಬರುತ್ತಿದೆ. ವೇದ ಗಣಿತವನ್ನು ಪಠ್ಯಕ್ರಮದೊಳಕ್ಕೆ ಪರಿಚಯಿಸಿರುವುದು ಕೂಡ ಇಂತಹ ಮಹಾನ್ ಸುಧಾರಣೆಗಳ ಒಂದು ಫಲ. ಶಿಕ್ಷಣದ ಕೋಮುವಾದೀಕರಣದ ಹಲವು ಪ್ರಯತ್ನಗಳು ನಡೆಯುತ್ತಿದ್ದು, ಅಂತಹ ಪ್ರಯತ್ನಗಳಲ್ಲಿ ಕರ್ನಾಟಕದ ಬಿಜೆಪಿ ಸರ್ಕಾರ ಮತ್ತು ಅದರ ಶಿಕ್ಷಣ ಮಂತ್ರಿ ಬಹಳ ಮುಂದೆ ಹೋಗುವ ತರಾತುರಿಯಲ್ಲಿದ್ದಾರೆ.

ಶಾಲಾ ಮಕ್ಕಳಿಗೆ ಯೋಗ ಕಲಿಸುವ ಮೂಲಕ ಏಕಾಗ್ರತೆ ಸಾಧಿಸಲು ನೆರವಾಗುತ್ತೇವೆ ಎಂಬ ಒಂದು ಕ್ರಮವನ್ನು ಜಾರಿಗೊಳಿಸಲಾಯಿತು. ಶಾಲಾ ಮಕ್ಕಳ ವಯಸ್ಸು, ಅವರ ಆಸಕ್ತಿಗಳು, ಗಮನ ಕೇಂದ್ರೀಕರಣ ಮಾಡುವಲ್ಲಿನ ಸಾಮರ್ಥ್ಯ, ಸುತ್ತಲ ಲೋಕ ವಿದ್ಯಮಾನಗಳು; ಮುಖ್ಯವಾಗಿ ಡಿಜಿಟಲ್ ಸಂಪರ್ಕ ಮಾಧ್ಯಮಗಳು ಅವರ ಆಸಕ್ತಿಯನ್ನು ಕೆರಳಿಸುತ್ತಿರುವ ವಿಧಾನಗಳನ್ನು ಸಮಗ್ರವಾಗಿ ಗಮನದಲ್ಲಿಟ್ಟುಕೊಳ್ಳದೆ, ಯೋಗಾಭ್ಯಾಸದಿಂದ ಈ ಸಮಸ್ಯೆಯನ್ನು ನೇರ್ಪುಗೊಳಿಸುತ್ತೇವೆಂದು ಹೊರಟಿದ್ದು ವೈದಿಕೀಕರಣದ ಒಂದು ಹುನ್ನಾರವಷ್ಟೆ.

ಈಗ 'ಮೌಲ್ಯ ಶಿಕ್ಷಣ' ಪರಿಚಯ ಎಂಬ ಮತ್ತೊಂದು ತಂತ್ರವನ್ನು ಶಿಕ್ಷಣ ಮಂತ್ರಿಗಳು ಪ್ರಯೋಗಿಸಲು ಹೊರಟಿದ್ದಾರೆ. ನೈತಿಕ ನಡವಳಿಕೆಯನ್ನು ಕಲಿಸುವುದು ಶಿಕ್ಷಣದ ಒಂದು ಕರ್ತವ್ಯ ಎನ್ನುವುದರಲ್ಲಿ ಹೆಚ್ಚು ತಕರಾರಿಲ್ಲ. ಆಧುನಿಕ ಶಿಕ್ಷಣದಲ್ಲಿ ಮೌಲ್ಯ ಪ್ರಜ್ಞೆ ಎನ್ನುವುದು 'ನಾಗರಿಕ ಪ್ರಜ್ಞೆ'ಯಾಗಿ ರೂಪುಗೊಳ್ಳಬೇಕು. ವಿಚಾರಶೀಲ ಮನಸ್ಸು, ಸುಶಿಕ್ಷಿತ ಸ್ವಭಾವ, ಸಂಸ್ಕಾರವಂತ ನಡವಳಿಕೆ ಎನ್ನುವುದು ಆಧುನಿಕ ಸಮಾಜದ ಅಗತ್ಯಗಳನ್ನು ಆಧರಿಸಿ, ವೈಜ್ಞಾನಿಕ ಚಿಂತನೆ ಮತ್ತು ವಿವೇಕಯುತ ಪರಾಮರ್ಶೆಯಿಂದ ರೂಪುಗೊಳ್ಳಬೇಕು. ಸಾರ್ವಜನಿಕ ಬದುಕಿನಲ್ಲಿ ಸಾಮರಸ್ಯ- ಸಹಿಷ್ಣುತೆ- ಸಹಾನುಭೂತಿ ಎಂಬ ಮೌಲ್ಯಗಳು ವಿದ್ಯಾರ್ಥಿಗಳಲ್ಲಿ ಬೆಳೆಯಬೇಕು. 'ತನ್ನಂತೆ ಪರರ ಬಗೆದೊಡೆ ಕೈಲಸಮಕ್ಕು ಬಿನ್ನಾಣಮಕ್ಕು' ಎಂಬ ಮೌಲ್ಯ ಪ್ರಜ್ಞೆ ಮಾತ್ರವೇ ಭಾರತದಂತಹ ಬಹುತ್ವದ ಸಾಂಸ್ಕೃತಿಕ ವಾತಾವರಣದಲ್ಲಿ ಸಾಮಾಜಿಕ ನೆಮ್ಮದಿಯನ್ನು ನೆಲೆಗೊಳಿಸಬಲ್ಲುದು. ಈ ಬಗ್ಗೆ ಸೂಕ್ತವಾದ ತಿಳಿವಳಿಕೆಯನ್ನು ಕಲಿಸಲು, ಪ್ರೇರಣೆಗಳನ್ನು ಒದಗಿಸಲು ಭಗವದ್ಗೀತೆಯೂ ಸೇರಿದಂತೆ ಯಾವುದೇ ಧಾರ್ಮಿಕ ಗ್ರಂಥವನ್ನು ಪಠ್ಯಕ್ರಮದಲ್ಲಿ ಸೇರಿಸುವುದು ಪರಿಣಾಮಕಾರಿ ಕ್ರಮವಾಗುವುದಿಲ್ಲ. ಶಿಕ್ಷಣವು ಕಲಿಸಬೇಕಿರುವುದು ಧಾರ್ಮಿಕ ನೀತಿಯನ್ನಲ್ಲ. ನಾಗರಿಕ ನೈತಿಕತೆಯನ್ನು.

ವಿಮಾರ್ಶಾತ್ಮಕವಾಗಿ ಆಲೋಚಿಸಿ, ಸರಿ-ತಪ್ಪುಗಳನ್ನು ಒಟ್ಟಾರೆ ಸಮಾಜದ ಹಿತದೃಷ್ಟಿಯಿಂದ ವಿವೇಚಿಸಿ ನಡೆದುಕೊಳ್ಳುವ ಮೌಲ್ಯ ಪ್ರಜ್ಞೆ ಬರಬೇಕಿರುವುದು ಸನಾತನ ಧಾರ್ಮಿಕ ಗ್ರಂಥಗಳ ಪಠಣದಿಂದಲ್ಲ. ನಮ್ಮ ದೇಶದ ಸಂವಿಧಾನ ಹೇಳಿರುವ ಸಮಭಾವ- ಸಾಮಾಜಿಕ ನ್ಯಾಯಗಳ ಆಶಯದಲ್ಲಿರುವ 'ಸರ್ವೋದಯ' ಎಂಬ ಚಿಂತನೆ ವಿದ್ಯಾರ್ಥಿ ಯುವಜನರಲ್ಲಿ ಚೆನ್ನಾಗಿ ಬೇರೂರಬೇಕು. ಪಂಗಡ ಪ್ರಜ್ಞೆ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ತಾರತಮ್ಯ, ಅಧಿಕಾರದಾಹ ಮುಂತಾದ ಸಾಮಾಜಿಕ ಅನಿಷ್ಟಗಳನ್ನು ಮನಸ್ಸಿನೊಳಗಿಂದ ತೊಲಗಿಸಿ, ಸಮದರ್ಶಿತ್ವದ - ಭೂತದಯೆಯ ಮನಸ್ಥಿತಿಯನ್ನು ರೂಪಿಸುವುದು ಆಧುನಿಕ ಶಿಕ್ಷಣದ ಗುರಿಯಾಗಬೇಕು.


ಶಿಕ್ಷಣ ಮಂತ್ರಿಗಳಿಗೆ ಬೇಕಿರುವುದು ದೇಶ ಕಟ್ಟುವ, ಸಮಾಜವನ್ನು ಸ್ವಾಸ್ಥ್ಯದೆಡೆಗೆ ಮುನ್ನಡೆಸುವ ಇಂತಹ ಮೌಲ್ಯ ಪ್ರಜ್ಞೆಯಲ್ಲ. ಸಾತ್ವಿಕ ಆಹಾರ ಪದ್ಧತಿ ಸಾತ್ವಿಕತೆಯನ್ನು ಬೆಳೆಸುತ್ತದೆ ಎಂಬ ಅತಾರ್ಕಿಕವಾದ ಸೂತ್ರವನ್ನು ಶಿಕ್ಷಣದಲ್ಲಿ ಜಾರಿಗೊಳಿಸಬೇಕೆಂದು 'ಮೌಲ್ಯಶಿಕ್ಷಣ' ಸಮಾಲೋಚನೆಯ ದುಂಡು ಮೇಜಿನ ಪರಿಷತ್ ಸೂಚನೆ ನೀಡಿದೆ. ಇದು ಸಸ್ಯಾಹಾರವೊಂದೇ ಶ್ರೇಷ್ಠ, ಸಸ್ಯಾಹಾರಿಗಳೆಲ್ಲ ಸಾತ್ವಿಕ ಪ್ರವೃತ್ತಿಯವರಾಗಿರುತ್ತಾರೆ, ಮಾಂಸಹಾರಿಗಳೆಲ್ಲ ಹಿಂಸ್ರಕರಾಗಿರುತ್ತಾರೆ ಎಂಬ ಸುಳ್ಳು ಪ್ರಮೇಯವನ್ನು ವಿದ್ಯಾರ್ಥಿಗಳ ತಲೆಗೆ ತುಂಬುವ ಪುರೋಹಿತಶಾಹಿ ಕುತರ್ಕವಲ್ಲದೆ ಬೇರೇನಲ್ಲ. ಬೇರೆ ಬೇರೆ ಆಹಾರ ಕ್ರಮಗಳನ್ನು ಶ್ರೇಷ್ಠ-ಕನಿಷ್ಠ ಎಂಬ ವಿಂಗಡೀಕರಣಕ್ಕೆ ಇದು ಗುರಿಮಾಡುತ್ತದೆ. ಇದು ಅಸಹಿಷ್ಣು- ಅಗೌರವದ ಭಾವನೆಗಳನ್ನು ಎಳೆ ಮನಸ್ಸುಗಳಲ್ಲಿ ಬಿತ್ತುತ್ತದೆ. ಸಸ್ಯಾಹಾರಿಗಳೆಲ್ಲ ಸಾತ್ವಿಕ ವ್ಯಕ್ತಿತ್ವದವರು ಎಂಬ ವಾದವನ್ನು ಸಮರ್ಥಿಸುವುದಕ್ಕೆ ನಮ್ಮ ಸಮಾಜದಲ್ಲಿ ಇರುವ ನಿದರ್ಶನಗಳೆಷ್ಟು? ಮಾಂಸಾಹಾರಿಗಳೆಲ್ಲ ತಾಮಸರು ಎಂಬುದಕ್ಕೆ ನಮ್ಮಲ್ಲಿ ಇರುವ ಸಾಕ್ಷ್ಯಾಧಾರಗಳೆಷ್ಟು?

ಇವನ್ನೆಲ್ಲಾ ಪರ್ಯಾಲೋಚಿಸಿ ದುಂಡು ಮೇಜಿನ ಪರಿಷತ್ ತನ್ನ ಸಲಹೆಗಳನ್ನು ಕೊಡಬೇಕಿತ್ತು. ಆದರೆ ಅದು ಕೊಟ್ಟಿರುವುದು ವೈದಿಕ ಜಾತಿವಾದದ ಅವೈಜ್ಞಾನಿಕ ಅತಾರ್ಕಿಕ ಸಲಹೆಯನ್ನು. ದುಂಡು ಮೇಜಿನ ಪರಿಷತ್ತಿನಲ್ಲಿ ಸೇರಿದ್ದವರು ಶಿಕ್ಷಣ ತಜ್ಞರಲ್ಲ. ಹೇಳಿ ಕೇಳಿ ಧಾರ್ಮಿಕ ಕ್ಷೇತ್ರದ ಸ್ವಾಮೀಜಿಗಳು. ಜಾತಿಗೊಂದು ಮಠವನ್ನು ಕಟ್ಟಿಕೊಂಡಿರುವ ಪೀಠಾಧೀಶರು. ಪಾದಪೂಜೆ, ಅಡ್ಡಪಲ್ಲಕ್ಕಿ ಮೆರವಣಿಗೆ, ಪಂಕ್ತಿಭೇದ ಪದ್ಧತಿಗಳನ್ನು ಆಚಾರಗಳಾಗಿ ಪಾಲಿಸುತ್ತಿರುವವರು. ಶಿಕ್ಷಣದಲ್ಲಿ ಕ್ಯಾಪಿಟೇಶನ್, ಡೊನೇಷನ್‌ಗಳನ್ನು, ಖಾಸಗಿ ಮನೆಪಾಠಗಳನ್ನು ಬೆಂಬಲಿಸುತ್ತಿರುವವರು.

ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷೆಯಲ್ಲಿ ಕಾಪಿಚೀಟಿ, ಮೌಲ್ಯಮಾಪನದಲ್ಲಿ ಅವ್ಯವಹಾರ ಮುಂತಾದವುಗಳನ್ನು ತಡೆಯದೆ ವಿದ್ಯಾರ್ಥಿಗಳಿಗೆ ನ್ಯಾಯಪ್ರಜ್ಞೆಯ ಉಪದೇಶ ಮಾಡಿದ ಮಾತ್ರಕ್ಕೆ ಪರಿಣಾಮಕಾರಿಯಾಗಬಲ್ಲದೇ. ಶಿಕ್ಷಣ ತಜ್ಞರು, ಬೇರೆ ಬೇರೆ ಸಾಂಸ್ಕೃತಿಕ ವಲಯದ ಚಿಂತಕರು, ಮನೋವರ್ತನ ಶಾಸ್ತ್ರಜ್ಞರು, ದಮನಿತ ಸಮುದಾಯಗಳ ಪ್ರತಿನಿಧಿಗಳು, ಮಹಿಳೆಯರು ಮುಂತಾದವರೆಲ್ಲ ಸೇರಿ ಒಟ್ಟಾಗಿ ಚಿಂತಿಸಿ, ಶಿಕ್ಷಣ ಕ್ಷೇತ್ರದ ಭವಿಷ್ಯ, ದೇಶದ ಹಿತಾಸಕ್ತಿ, ಆಧುನಿಕ ಜಗತ್ತಿನ ಅವಶ್ಯಕತೆಗಳನ್ನೆಲ್ಲಾ ಗಮನಿಸಿ 'ಮೌಲ್ಯ ಶಿಕ್ಷಣ'ದ ನೀತಿಗಳನ್ನು ರೂಪಿಸಿದರೆ ಮಾತ್ರ ಅದಕ್ಕೊಂದು ಅರ್ಥವಿರುತ್ತದೆ. ತನ್ನ ಮೂಗಿನ ನೇರಕ್ಕೆ, ರಾಜಕೀಯ ತಂತ್ರಕ್ಕಾಗಿ 'ಪಕ್ಷಕ್ಕೊಂದು ನೀತಿಶಾಸ್ತ್ರ' ಎಂಬ ಪದ್ಧತಿಯಿಂದ ಉಂಟಾಗುವುದು ದುಷ್ಪರಿಣಾಮ ಮಾತ್ರ.

ಶಿಕ್ಷಣ ಮಂತ್ರಿಗಳಿಗೆ ತಮ್ಮ ಪಕ್ಷದ ಚಾತುರ್ವರ್ಣಿಪ್ರಣೀತ ಸನಾತನವಾದವನ್ನು 'ಮೌಲ್ಯ ಶಿಕ್ಷಣ' ಎಂಬ ಹೆಸರಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ತುರುಕಬೇಕೆಂದಿರುವ ಉದ್ದೇಶವನ್ನು ಈ ಒಟ್ಟಾರೆ ಪ್ರಹಸನ ನಮ್ಮ ಮುಂದಿಟ್ಟಿದೆ. ಕೋಮುವಾದಿ ಪ್ರೇರಣೆಯುಳ್ಳ ಇಂತಹ ಪ್ರಯೋಗಗಳ ಮೂಲಕ ಸಮಾಜದ ನೆಮ್ಮದಿಯನ್ನು ಹಾಳುಗೆಡಹುವ ಪ್ರಯತ್ನಗಳನ್ನು ಸರ್ಕಾರ ಕೈಬಿಡಬೇಕು. ಇದಕ್ಕೆ ಸಿಗುವ ಬೆಂಬಲ ಏನಾದರೂ ಇದ್ದರೆ ಅದು ಜಾತಿ ಶ್ರೇಣೀಕರಣವನ್ನು, ಸಾಂಸ್ಕೃತಿಕ ಅಸಮಾನತೆಯನ್ನು ಪ್ರತಿಪಾದಿಸುವವರದ್ದು ಮಾತ್ರವಾಗಿರುತ್ತದೆ. ಏಕಸಂಸ್ಕೃತಿ ಹೇರಿಕೆಯ ಹುನ್ನಾರದ ಅಂಗವಾಗಿ ಮೂಡಿಬಂದಿರುವ ಇಂತಹ ಅವೈಜ್ಞಾನಿಕ ಸಲಹೆಗಳನ್ನು ನಿರಾಕರಿಸುವುದರಿಂದ ಮಾತ್ರ ವಿದ್ಯಾರ್ಥಿಗಳ ಆಲೋಚನಾ ಸ್ವಾಸ್ಥ್ಯ ಕಾಪಾಡಬಹುದಾಗಿದೆ.

ಲೇಖಕ: ಕವಿ ಮತ್ತು ಸಾಮಾಜಿಕ ಕಾರ್ಯಕರ್ತ



ಅಗತ್ಯವೂ ಹೌದು ಅನಿವಾರ್ಯವೂ ಹೌದು

ನೈತಿಕ ಮೌಲ್ಯ ಶಿಕ್ಷಣವು ಬ್ರಾಹ್ಮಣ್ಯ ಮತ್ತು ವೈದಿಕ ಸಂಸ್ಕೃತಿ ಹೇರಿಕೆಯ ಹುನ್ನಾರ ಎಂಬ ಆರೋಪ ಇದೆ. ಆದರೆ ಈ ಆರೋಪದಲ್ಲಿ ಹುರುಳಿಲ್ಲ. ಇದು ಭಾರತದಲ್ಲೇ ಇರುವ ಒಂದು ಮೂಲಗುಣ. ಈ ಮೂಲಗುಣ ಎನ್ನುವಂಥದ್ದು ಬದುಕಿನ ಎಲ್ಲಾ ಹಂತಗಳಲ್ಲಿಯೂ ಇದೆ. ಕುವೆಂಪು ಅವರು 'ನೀರೆಲ್ಲವೂ ತೀರ್ಥ' ಎಂದು ಹೇಳಿದ್ದಾರೆ. ಅದು ಒಂದು ದೊಡ್ಡ ಮೌಲ್ಯ. ನೀರನ್ನು ತೀರ್ಥ ಎಂದು ನೋಡುವುದರಲ್ಲೇ ಎಲ್ಲಾ ನೀರಿಗೂ ಒಂದು ಉನ್ನತ ಸ್ಥಾನ ನೀಡಿದ್ದೇವೆ ಎಂಬ ಅರ್ಥವಿದೆ

• ವಿನಯ್ ಬಿದರೆ



ಇಡೀ ನಾಡು ಕಳೆದ ಎರಡು ದಿನದ ಹಿಂದೆ (ಜನವರಿ-12) ಸಂತರ ಸಂತ, ಮಹಾತ್ಮರ ಮಹಾತ್ಮ ಸ್ವಾಮಿ ವಿವೇಕಾನಂದರ 160ನೇ ಜಯಂತಿಯನ್ನು ಗೌರವಪೂರ್ವಕವಾಗಿ ಆಚರಿಸಿದೆ. ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಮೌಲ್ಯಗಳ ಬಗ್ಗೆ, ಅದರ ಅವಶ್ಯಕತೆಗಳ ಬಗ್ಗೆ ಅತ್ಯಂತ ಸ್ಪಷ್ಟವಾದ ಮಾತುಗಳಿಂದ ತಿಳಿಸಿದವರಲ್ಲಿ ವಿವೇಕಾನಂದ ಅಗ್ರಗಣ್ಯರು. ಯೋಗಿ ಅರವಿಂದ, ಡಾ. ಸರ್ವಪಲ್ಲಿ ರಾಧಾಕೃಷ್ಣ, ರಸಋಷಿ ಕುವೆಂಪು ಅವರು ಕೂಡ ನೈತಿಕ ಮೌಲ್ಯಾಧಾರಿತ ಶಿಕ್ಷಣದ ಅವಶ್ಯವನ್ನು ಸಾರಿ ಹೇಳಿದ್ದಾರೆ ಮತ್ತು ಮೌಲ್ಯಯುತ ಬದುಕಿಗೆ ಉತ್ತಮ ಉದಾಹರಣೆಗಳಾಗಿದ್ದಾರೆ. ಅವರ ಬರಹ ಮತ್ತು ಬದುಕಿನ ಸಾಮ್ಯತೆ 'ನುಡಿ ಮತ್ತು ನಡೆ'ಯ ನಡುವೆ ವ್ಯತ್ಯಾಸ ಇರಬಾರದೆಂಬ ಜೀವನ ಮೌಲ್ಯಕ್ಕೆ ನಿದರ್ಶನಗಳಾಗಿವೆ. ಈ ಹೊತ್ತಿನಲ್ಲಿ ದೇಶದಲ್ಲಿ ಅನುಷ್ಠಾನಗೊಳ್ಳುತ್ತಿರುವ 'ರಾಷ್ಟ್ರೀಯ ಶಿಕ್ಷಣ ನೀತಿ'ಯು ನೈತಿಕ ಹಾಗೂ ಮೌಲ್ಯಯುತ ಶಿಕ್ಷಣಕ್ಕೆ ಒತ್ತು ನೀಡಿದೆ. ರಾಜ್ಯ ಸರ್ಕಾರವು ಮಠಾಧೀಶರು ಹಾಗೂ ಧಾರ್ಮಿಕ ಮುಖಂಡರನ್ನು ಒಳಗೊಂಡಂತೆ ಶಿಕ್ಷಣ ತಜ್ಞರ ಸಭೆ ನಡೆಸಿ ಪಠ್ಯದಲ್ಲಿ ನೈತಿಕ ಶಿಕ್ಷಣದ ಬಗ್ಗೆ ಸಲಹೆಗಳನ್ನು ಇತ್ತೀಚೆಗೆ ಪಡೆದದ್ದು ಅತ್ಯಂತ ಸ್ವಾಗತಾರ್ಹ ಕ್ರಮವಾಗಿದೆ.

ಕರ್ನಾಟಕ ರಾಜ್ಯ ಶೈಕ್ಷಣಿಕ ವ್ಯವಸ್ಥೆಗೆ ಮಠಮಾನ್ಯಗಳ ಕೊಡುಗೆ ಅನನ್ಯವಾದದ್ದು. ನಾಡಿನ ಅಸಂಖ್ಯ ಮಾದರಿ ವ್ಯಕ್ತಿತ್ವಗಳು ಈ ಮಠಗಳ ಶಿಕ್ಷಣ ಸಂಸ್ಥೆಗಳಿಂದ ರೂಪುಗೊಂಡಿರುವುದು ವಾಸ್ತವ. ಹಾಗಾಗಿಯೇ ಮೌಲ್ಯ ಶಿಕ್ಷಣದ ಕುರಿತು ಸಲಹೆ ನೀಡಲು ಮಠಗಳು ಅತ್ಯಂತ ಸೂಕ್ತ ಹಾಗೂ ಅವಶ್ಯ ಸಂಸ್ಥೆ ಅಥವಾ ವ್ಯವಸ್ಥೆಯಾಗಿವೆ. ಇತ್ತೀಚೆಗೆ ನಡೆದ ಒಂದೆರಡು ಘಟನೆಗಳು ಶಿಕ್ಷಣ ವ್ಯವಸ್ಥೆಯಲ್ಲಿ ನೈತಿಕ ಶಿಕ್ಷಣದ ಅವಶ್ಯಕತೆಯನ್ನು ಸಾರಿ ಹೇಳುತ್ತಿವೆ. ಮಂಗಳೂರಿನ ವೈದ್ಯ ವಿದ್ಯಾರ್ಥಿಗಳ ಡ್ರಗ್ ಪಾರ್ಟಿ, ಬೆಂಗಳೂರಿನ ಕೆಲವು ಪ್ರತಿಷ್ಠಿತ ಖಾಸಗಿ ಸಂಸ್ಥೆಗಳ ವಿದಾರ್ಥಿಗಳ ಶಾಲಾ ಬ್ಯಾಗ್‌ನಲ್ಲಿ ದೊರೆತ ಅನಪೇಕ್ಷಿತ ವಸ್ತುಗಳು ವಿದ್ಯಾರ್ಥಿ ಮತ್ತು ಯುವ ಸಮುದಾಯದ ಕೆಲವರು 3ಡಿ (ಡ್ರಗ್ಸ್-ಡ್ರಿಂಕ್ಸ್-ಡೇಟಿಂಗ್) ಸಂಸ್ಕೃತಿಗೆ ಮಾರು ಹೋಗುತ್ತಿರುವುದನ್ನು ಸೂಚಿಸುತ್ತದೆ. ಪಾಶ್ಚಿಮಾತ್ಯ ಅನುಕರಣೆಯ, ಕೇವಲ ಮಾರ್ಕ್ಸ್ (ಅಂಕ) ಕೇಂದ್ರಿತ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಸಮಗ್ರ ಅಭಿವೃದ್ಧಿಗೆ ಪೂರಕವಾಗುವಂತಹ ಅಂದರೆ ಶರೀರ- ಬುದ್ಧಿ-ಮನಸ್ಸು-ಆತ್ಮ (ಜೀವ) ಶಿಕ್ಷಣವನ್ನು ರೂಪಿಸುವಂತಹ ವ್ಯವಸ್ಥೆಯಲ್ಲಿ ನೈತಿಕ ಶಿಕ್ಷಣದ ಅವಶ್ಯಕತೆಯು ಬಹು ಮುಖ್ಯವಾದ ಅಂಶವಾಗಿದೆ.

ಮಾರ್ಟಿನ್ ಲೂಥರ್ ಕಿಂಗ್ ಶಿಕ್ಷಣದ ಬಗ್ಗೆ ಮಾತನಾಡುವ ಹೊತ್ತಿನಲ್ಲೇ 'ನೈತಿಕತೆಯಿಲ್ಲದ ಶಿಕ್ಷಣವು ದಿಕ್ಸೂಚಿ ಇಲ್ಲದ ಹಡಗಿನಂತೆ' ಎಂಬ ಮಾತನ್ನು ಉಲ್ಲೇಖಿಸಿದ್ದಾರೆ. ಮೌಲ್ಯಯುತ ಶಿಕ್ಷಣ ಗಳಿಕೆಯು ಮನೆಯಿಂದಲೇ ಪ್ರಾರಂಭವಾಗುವುದಾದರೂ ಶಾಲಾ ಶಿಕ್ಷಣದಲ್ಲಿ ದೊರೆತಾಗ ಅದರ ಪ್ರಭಾವವು ಜೀವನದ ಎಲ್ಲ ಹಂತಗಳಲ್ಲಿ ಸಿಗುವಂತಾಗುತ್ತದೆ. ಧಾರ್ಮಿಕ ಗ್ರಂಥಗಳು ತತ್ವಜ್ಞಾನಿಗಳು, ಚಿಂತಕರು, ಬೋಧಕರು ನೈತಿಕತೆ ಹಾಗೂ ನೈತಿಕ ಮೌಲ್ಯಗಳ ಬಹು ದೊಡ್ಡ ಆಕರವಾಗಿರುತ್ತಾರೆ. ಔಪಚಾರಿಕವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಸಿಗುವ ನೈತಿಕ ಜೀವನ ಮೌಲ್ಯಗಳಂತಯೇ, ರಾಷ್ಟ್ರೀಯತೆ, ನಿಸರ್ಗ, ಆಧ್ಯಾತ್ಮ, ಸಹಬಾಳ್ವೆಯ ಮಾನವೀಯ ಮೌಲ್ಯಗಳು ಧಾರ್ಮಿಕವಾಗಿಯೂ ನಮಗೆ ಸಿಗುವಂತಾಗಬೇಕು. 'ಧರ್ಮ ಅಫೀಮು' ಎಂಬ ವಾದಕ್ಕೆ ಕಟ್ಟು ಬಿದ್ದಾಗ ಈ ಸಂಗತಿಗಳನ್ನು ಧರ್ಮದಲ್ಲಿ, ಆಧ್ಯಾತ್ಮದಲ್ಲಿ ಕಾಣಲಾಗದು. 'ಧರ್ಮ ಅಮೃತ' ಎಂದಾಗ ಈ ಎಲ್ಲಾ ಸಂಗತಿಗಳು ನಮಗೆ ದೊರಕುತ್ತವೆ.

'ಕಾಯಕವೇ ಕೈಲಾಸ', 'ನೀರೆಲ್ಲವೂ ತೀರ್ಥ', 'ದಯವೇ ಧರ್ಮದ ಮೂಲ' ಮತ್ತು 'ಶುದ್ಧ ಸಾತ್ವಿಕ ಪ್ರೀತಿ' ಎಂಬ ಮೌಲ್ಯಗಳು ನಮ್ಮ ಬದುಕಿಗೆ ಆಧಾರ. 'ಶಕ್ತಿಯೇ ಜೀವನ', 'ಹಸಿದವನಿಗೆ ಅನ್ನ' ಎನ್ನುವ ಮೌಲ್ಯಗಳು ಪ್ರೀತಿ, ಏಕತೆ, ಶೀಲ, ತ್ಯಾಗ, ಸೇವೆ, ನಾವು ಎಂಬ ಭಾವವನ್ನು ಮೂಡಿಸುತ್ತವೆ. ಶರೀರ, ಬುದ್ಧಿ, ಮನಸ್ಸು, ಆತ್ಮದ ವಿಕಾಸಕ್ಕೆ ಪೂರಕವಾದ ಪರಿಪೂರ್ಣ ವ್ಯಕ್ತಿತ್ವವನ್ನು ನೈತಿಕ ಮೌಲ್ಯಗಳ ಶಿಕ್ಷಣವು ರೂಪಿಸುತ್ತದೆ. ಹಾಗಾಗಿ ಈ ಹೊತ್ತಿನಲ್ಲಿ ನೈತಿಕ ಮೌಲ್ಯಗಳ ಶಿಕ್ಷಣ ಅವಶ್ಯಕತೆಯಾಗಿದೆ.

'ಉದಾತ್ತ ಚಿಂತನೆಗಳು ವಿಶ್ವದ ಎಲ್ಲಾ ದಿಕ್ಕಿನಿಂದಲೂ ಬರಲಿ' ಎಂಬ ಉನ್ನತ ವಿಚಾರವನ್ನು ಪ್ರತಿಪಾದಿಸಿದ ನಾವು ನೂರಾರು ವರ್ಷಗಳಿಂದ ನಾಡಿನ ಜ್ಞಾನ ದಾಹವನ್ನು ಮೌಲ್ಯಾಧಾರಿತ ಶಿಕ್ಷಣದ ಮೂಲಕ ಹಿಂಗಿಸಿದ ನಮ್ಮ ನಾಡಿನ ಮಠಗಳಿಂದ, ಈ ಹೊತ್ತಿನ ಶೈಕ್ಷಣಿಕ ಅವಶ್ಯಕತೆಯನ್ನು ಪಡೆಯಲು ಹೊರಟ ಸರ್ಕಾರದ ನಿರ್ಧಾರ ನೂರಕ್ಕೆ ನೂರು ಸರಿಯಾಗಿದೆ. ಹಾಗೂ ಶಿಕ್ಷಣ ಕ್ಷೇತ್ರದ ಬಗ್ಗೆ ಕಾಳಜಿ ಇರುವ ಎಲ್ಲರೂ ಸಮರ್ಥಿಸಿ ಸ್ವಾಗತಿಸುವಂತಿದೆ.

ನೈತಿಕ ಮೌಲ್ಯ ಶಿಕ್ಷಣವು ಬ್ರಾಹ್ಮಣ್ಯ ಮತ್ತು ವೈದಿಕ ಸಂಸ್ಕೃತಿ ಹೇರಿಕೆಯ ಹುನ್ನಾರ ಎಂಬ ಆರೋಪ ಇದೆ. ಆದರೆ ಈ ಆರೋಪದಲ್ಲಿ ಹುರುಳಿಲ್ಲ. ಇದು ಭಾರತದಲ್ಲೇ ಇರುವ ಒಂದು ಮೂಲಗುಣ. ಈ ಮೂಲಗುಣ ಎನ್ನುವಂಥದ್ದು ಬದುಕಿನ ಎಲ್ಲಾ ಹಂತಗಳಲ್ಲಿಯೂ ಇದೆ. ಕುವೆಂಪು ಅವರು 'ನೀರೆಲ್ಲವೂ ತೀರ್ಥ' ಎಂದು ಹೇಳಿದ್ದಾರೆ. ಅದು ಒಂದು ದೊಡ್ಡ ಮೌಲ್ಯ. ನೀರನ್ನು ತೀರ್ಥ ಎಂದು ನೋಡುವುದರಲ್ಲೇ ಎಲ್ಲಾ ನೀರಿಗೂ ಒಂದು ಉನ್ನತ ಸ್ಥಾನ ನೀಡಿದ್ದೇವೆ ಎಂಬ ಅರ್ಥವಿದೆ. ಅವರು ಬ್ರಾಹ್ಮಣ್ಯವನ್ನು ಹೇರಿದರು ಎಂದೇನಿಲ್ಲ. ವಿವೇಕಾನಂದರು ವ್ಯಕ್ತಿತ್ವ ರೂಪಿಸುವ ಶಿಕ್ಷಣದ ಬಗ್ಗೆ ಹೇಳಿದ್ದಾರೆ. ಅವರು ಸಹ ಬ್ರಾಹ್ಮಣರಲ್ಲ. ವ್ಯಕ್ತಿತ್ವವನ್ನು ರೂಪಿಸುವಂತಹ ಇಂತಹ ಹೆಚ್ಚು ವಿಚಾರಗಳನ್ನು ಹೇಳಿದ್ದು ವಿವೇಕಾನಂದರೇ. ವ್ಯಕ್ತಿತ್ವ ರೂಪಿಸುವ ಶಿಕ್ಷಣದ ಬಗ್ಗೆ ವಿವೇಕಾನಂದರು ಮಾತನಾಡುವಾಗ ಅದರಲ್ಲಿ ಎಲ್ಲಿಯೂ ಬ್ರಾಹ್ಮಣ್ಯವಾಗಲೀ, ವೈದಿಕತೆಯಾಗಲೀ ಕಾಣುವುದಿಲ್ಲ. ಇವೆಲ್ಲವನ್ನೂ ಒಳಗೊಂಡ ಒಂದು ಸಮಗ್ರ ಶಿಕ್ಷಣ ಪದ್ಧತಿ ಜಾರಿಗೆ ಬರಬೇಕು ಎಂದು ಅವರು ಹೇಳಿದ್ದಾರೆ. ಹಾಗಾಗಿ ನೈತಿಕ ಮೌಲ್ಯ ಶಿಕ್ಷಣದಲ್ಲಿ ಯಾವುದೇ ಬ್ರಾಹ್ಮಣೀಕರಣದ ಪ್ರಯತ್ನವಿಲ್ಲ.

ಕಾಲ್ ಮಾರ್ಕ್ಸ್ 'ಧರ್ಮ ಅಫೀಮು' ಎಂದು ಹೇಳಿದ್ದಾನೆ. ಧಾರ್ಮಿಕ ಮುಖಂಡರು ಹೇಳಿದ್ದೆಲ್ಲವನ್ನೂ ಮಾರ್ಕ್ಸ್‌ನ ಈ ಹೇಳಿಕೆಯ ದೃಷ್ಟಿಕೋನದಲ್ಲೇ ನೋಡಿದರೆ, ಅದು ವೈದಿಕ ಸಂಸ್ಕೃತಿಯ ಹೇರಿಕೆ ಎನಿಸುತ್ತದೆ. ವೈದಿಕಶಾಹಿಯನ್ನು ವಿರೋಧಿಸುವಂತಹ ಮಠಮಾನ್ಯಗಳೂ ಸಾಕಷ್ಟಿವೆ. ನೈತಿಕ ಮೌಲ್ಯ ಶಿಕ್ಷಣ ಪದ್ಧತಿ ರೂಪಿಸುವಲ್ಲಿ ಅಂತಹ ಮಠಮಾನ್ಯಗಳು ಸಹ ಸಲಹೆಗಳನ್ನು ನೀಡಿವೆ.

ದೇಶದಲ್ಲಿ ಈಗ ವೃತ್ತಿ ಸಂಸ್ಕೃತಿ ಎಂಬುದು ಕಡಿಮೆಯಾಗುತ್ತಿದೆ. ದುಡಿಯದೆಯೇ ಹಣಗಳಿಸಬೇಕು ಎಂಬ ಮನಸ್ಥಿತಿ ಹೆಚ್ಚಾಗುತ್ತಿದೆ. ಒಂದು ಕಡೆ ನಮಗೆ ವೇತನ ಬರುತ್ತಿದ್ದರೂ ಬೇರೊಂದು ಮೂಲದಿಂದಲೂ ಹಣ ಬರಲಿ ಎಂಬ ಮನಸ್ಥಿತಿಯಲ್ಲಿ ಜನರಿದ್ದಾರೆ. ಇದರಿಂದ ಬಹಳ ದೊಡ್ಡಮಟ್ಟದ ಭ್ರಷ್ಟಾಚಾರವನ್ನು ಕಾಣುತ್ತಿದ್ದೇವೆ. ಶಿಕ್ಷಣದಲ್ಲಿ ನೈತಿಕ ಮೌಲ್ಯಗಳ ಕೊರತೆ ಇರುವುದೇ ಇದಕ್ಕೆ ಕಾರಣ. ವಿಶ್ವೇಶ್ವರಯ್ಯನವರ 'ವೃತ್ತಿಜೀವನದ ನೆನಪುಗಳು' ಆತ್ಮಕತೆಯನ್ನು ಇಲ್ಲಿ ಉದಾಹರಿಸಬಹುದು. ವೃತ್ತಿಜೀವನದಲ್ಲಿ ನೈತಿಕತೆ ಎಷ್ಟು ಮುಖ್ಯ ಎಂಬುದನ್ನು ಆ ಕೃತಿಯಲ್ಲಿ ಕಾಣಬಹುದು. ಆದರೆ ಇಂದು ಅಂತಹ ನೈತಿಕತೆ ಕಾಣಿಸುತ್ತದೆಯೇ? ವಿಶ್ವೇಶ್ವರಯ್ಯನವರ ಕಾಲದಲ್ಲಿ ಭದ್ರಾವತಿಯಲ್ಲಿ ನಿರ್ಮಿಸಲಾದ ಕಾಂಕ್ರೀಟ್ ರಸ್ತೆ ಇನ್ನೂ ಸುಸ್ಥಿತಿಯಲ್ಲಿ ಇದೆ. ಆದರೆ, ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ದೊಡ್ಡ-ದೊಡ್ಡ ಎಂಜಿನಿಯರ್‌ಗಳು ನಿರ್ಮಿಸಿದ ರಸ್ತೆಗಳು ಆರು ತಿಂಗಳಲ್ಲೇ ಏಕೆ ಹಾಳಾಗಿ ಹೋಗುತ್ತವೆ? ನೈತಿಕತೆಯ ಕೊರತೆ ಮತ್ತು ವೃತ್ತಿಪರತೆಯ ಕೊರತೆ ಇದೆ ಎಂಬುದನ್ನು ಇದು ತೋರಿಸುತ್ತದೆ. ಹಾಗಾಗಿ ಶಿಕ್ಷಣದಲ್ಲಿ ನೈತಿಕ ಮೌಲ್ಯಗಳನ್ನು ತರುವ ಅವಶ್ಯಕತೆ ಇದೆ. ವೈಯಕ್ತಿಕ ಬದುಕಿನಲ್ಲಿ ಮತ್ತು ಸಮುದಾಯದ ಒಟ್ಟಿಗೂ ಹೇಗೆ ಇರಬೇಕು ಎಂಬುದನ್ನು ನೈತಿಕ ಮೌಲ್ಯಗಳು ಕಲಿಸುತ್ತವೆ.

ನೈತಿಕ ಮೌಲ್ಯ ಎಂಬುದು ಅತ್ಯಂತ ವಿಸ್ತಾರವಾದ ವಿಷಯ. ಇದನ್ನು ವೈದಿಕತೆ ಎಂದೋ, ಸ್ವಾಮೀಜಿಗಳು ಮಾಂಸಾಹಾರದ ಬಗ್ಗೆ ಮಾತನಾಡಿದರು ಎಂದೋ ಇದನ್ನು ವಿರೋಧಿಸುವುದಲ್ಲ. ಬಹುತ್ವವನ್ನು ಪ್ರೀತಿಸುವುದೂ ಒಂದು ಜೀವನ ಮೌಲ್ಯ. ಇದನ್ನು ಭಾರತೀಯ ಸಂಸ್ಕೃತಿಯಲ್ಲಿ ಎಲ್ಲಾ ಸಂದರ್ಭದಲ್ಲೂ ಹೇಳಿಕೊಂಡು ಬರಲಾಗಿದೆ. ಇಂದು ಮಕ್ಕಳು ತಮ್ಮ ಅಪ್ಪ-ಅಮ್ಮನನ್ನು ನೋಡಿಕೊಳ್ಳುವುದಿಲ್ಲ. ಮೌಲ್ಯಗಳು ಇಲ್ಲದೇ ಇರುವಂತಹ ಸ್ಥಿತಿ ಇರುವುದರಿಂದಲೇ ವೃದ್ಧಾಶ್ರಮಗಳು ಮತ್ತು ಅನಾಥಾಶ್ರಮಗಳು ಹೆಚ್ಚಾಗುತ್ತಿವೆ. ಸಣ್ಣ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿಂದೆ ಕೂಡು ಕುಟುಂಬ ಪದ್ಧತಿ ಎಂಬುದು ಸಹ ನಮ್ಮ ಜೀವನ ಮೌಲ್ಯವಾಗಿತ್ತು. ಇಂದು ನಾವು ಅದನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದೇವೆಯೇ? ಈ ಎಲ್ಲಾ ಸಂಗತಿಗಳು ಸಹ ಶಿಕ್ಷಣದಲ್ಲಿ ಬರಬೇಕು. ಭಾರತೀಸುತರು ತಮ್ಮ ಮೋಚಿ ಎಂಬ ಕತೆಯಲ್ಲಿ ಜೀವನ ಮೌಲ್ಯಗಳ ಬಗ್ಗೆ ಬರೆದಿದ್ದಾರೆ. ಒಬ್ಬ ಚಪ್ಪಲಿ ಹೊಲಿಯುವವನು ಸಹ ತನ್ನ ಬದುಕನ್ನು ಹೇಗೆ ಉನ್ನತೀಕರಿಸಿಕೊಳ್ಳಬಹುದು ಎಂಬುದನ್ನು ಆ ಕತೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಸ್ವರೂಪದ ಉಪಕತೆಗಳು, ನೈತಿಕ ಕತೆಗಳು ನಮ್ಮ ಪಠ್ಯದ ಒಳಕ್ಕೆ ಬರಬೇಕು. ನೈತಿಕ ಮೌಲ್ಯ ಶಿಕ್ಷಣ ಈ ಕೆಲಸವನ್ನು ಮಾಡುತ್ತದೆ. ಹಾಗಾಗಿಯೇ ಅದು ಅನಿವಾರ್ಯ.

ಲೇಖಕ: ರಾಜ್ಯ ಕಾರ್ಯದರ್ಶಿ, ಬಿಜೆಪಿ

ಪದಬಂಧ 5199


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ದರ್ಜಿಯನ್ನು ಹೀಗೂ ಕರೆಯುತ್ತಾರೆ (3)
6. ಹಲ್ಲುಗಳನ್ನು ತೊಳೆಯುವುದು (5)
7. ನಾಗಸ್ವರ ಅಥವಾ ರಾಜ ಸಭೆ (3)
8. ಸಮ್ಮುಖದಲ್ಲೇ ಗೆಳೆಯನಿದ್ದಾನಲ್ಲಾ! (2)
10. ಧಾನ್ಯ ಒಕ್ಕುವ ಸ್ಥಳ (2)
11. ನಾದಿನಿಯ ಧ್ವನಿ! (3)
13. ಅಜ್ಜನ ಹತ್ತಿರವಿರುವ ಆಡು (2)
14. ಮಗ ಇಲ್ಲಿದ್ದಾನೆ (2)
18. ಈತ ಯೋಜನೆ ಮಾಡುವವನು (3)
19. ವಾದವನ್ನು ಮಂಡಿಸುವ ಕ್ರಮ (5)
20. ವಿದ್ಯೆಯನ್ನು ಕಲಿಸುವಿಕೆ (3)

ಮೇಲಿಂದ ಕೆಳಕ್ಕೆ

1. ಈತ ಚಿನ್ನದ ವ್ಯಾಪಾರಿ (4)
2. ಮರವನ್ನು ಕೊಯ್ಯುವ ಸಾಧನ (4)
3. ದಂಪತಿ ಹರಡುತ್ತಿರುವ ಗಾಳಿ ಸುದ್ದಿ (3)
4. ನಡುವೆ ಮಂತ್ರ ಹಾಕಿ ನೀಡಿದ ಆಹ್ವಾನ (4)
5. ಸಸ್ಯಗಳಿಂದ ತೆಗೆದ ಜಿಡ್ಡು (4)
9. ಖನಿಯಲ್ಲಿ ಸಿಕ್ಕಿದುದುದು (3)
10. ಕದಕ್ಕೆ ಒರಗಿಸಿರುವ ಕೆನ್ನೆ (3)
12. ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
13. ಸರ ತರಲು ಈ ಅರ್ಜೆಂಟು! (4)
15. ದ್ವಾದಶಿ ನಂತರದ ತಿಥಿ (4)
16. ನಡುವೆ ಕರವನ್ನಿಟ್ಟಿರುವ ಘಟನೆ (4)
17. ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)



5198ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನಸಿಜ
3.ತಾರಾಪುಂಜ
5.ನಿಯತ್ತು 6.ಕ್ಷಿತಿಜ
8.ಮಾದರಿ 9.ಪತ್ತಲ
10.ಕಲಹ 12.ಬಸದಿ
14.ನವರಂಗ 15.ಕಸರತ್ತು

ಮೇಲಿಂದ ಕೆಳಕ್ಕೆ:
1.ಮನಸ್ಸಾಕ್ಷಿ 2.ಜನನಿ
3.ತಾಕತ್ತು 4.ಜರತಾರಿ
7.ಜಟಿಲ 8.ಮಾದಕ
9.ಪರಿಧಾನ
11.ಹಕೀಕತ್ತು 12.ಬಳಗ
13.ದಿನಾಂಕ

ಸುಡೊಕು 5585

	6		8				1	
2							7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

5584ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 14, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಸಪ್ತಮಿ ಗಂ. 19-23 ನಕ್ಷತ್ರ: ಹಸ್ತ ಗಂ. 18-14 ಯೋಗ: ಅತಿಗಂಡ ಗಂ. 12- 33 ಕರಣ: ವಿಷ್ಟಿ ಗಂ. 06-55, ಧನುರ್ ಮಾಸದ 29 ನೇ ದಿನ. ರಾಹುಕಾಲ : ಬೆಳಿಗ್ಗೆ 09-00–10-30 ಸೂರ್ಯೋದಯ : 07-01 ಸೂರ್ಯಾಸ್ತ : 06-18, ಮುಸ್ಲಿಂ ದಿನಾಂಕ : 21 ಜುಮಾದುಸ್ಸಾನಿ ದಿನ ವಿಶೇಷ : ಸ್ವಾಮಿ ವಿವೇಕಾನಂದರ ಜನ್ಮದಿನ (ತಿಥಿಗೆ ಅನುಸಾರವಾಗಿ), ಸಂತ ಪರಮಾನಂದರ ಜನ್ಮದಿನ(ಸಿಂಧಿ)
ಅದೃಷ್ಟ ಸಂಖ್ಯೆ : 3, 9

ಮೇಷ: ಮೇಲಧಿಕಾರಿಗಳ ವಿರುದ್ಧ ವಾದವನ್ನು ಮಾಡಿ ಸಮಯ ಹಾಳು ಮಾಡುವ ಬದಲು ಸಮಾಧಾನದಿಂದ ಕೆಲಸ ಮಾಡಿ. ನಿಮ್ಮ ಈಗಿನ ವಾಸ್ತವ ಪರಿಸ್ಥಿತಿ ನಿಮ್ಮ ರಕ್ಷಾ ಕವಚದಂತಿದೆ.

ವೃಷಭ: ಮನಸ್ಸಿನ ಭಾವನೆಗಳನ್ನು ಸ್ನೇಹಿತರಲ್ಲಿ ಹೇಳಿಕೊಳ್ಳುವಿರಿ. ಬಹಳ ದಿನದಿಂದ ಇದ್ದ ನಿಮ್ಮ ಆತಂಕ ದೂರಾಗುವುದು. ಮಕ್ಕಳ ವಿಚಾರದಲ್ಲಿ ಮನೆಯವರು ಹೇಳಿಕೊಂಡಿರುವ ಹರಕೆ ತೀರಿಸುವ ಬಗ್ಗೆ ನೆನಪಿರಲಿ.

ಮಿಥುನ: ನಿಮ್ಮಲ್ಲಿರುವ ಮಾತಿನ ಚತುರತೆಯಿಂದ ನೀವಾಡುವ ಮಾತಿಗೆ ಮರುಳಾಗುವರು. ಕೆಲಸಗಳು ಸರಾಗವಾಗಿ ನೆರವೇರುವುದು. ಸ್ವಾರ್ಥಕ್ಕಾಗಿ ಅಥವಾ ಇಷ್ಟಾರ್ಥದ ಈಡೇರಿಕೆಗಾಗಲಿ ಪರರಿಗೆ ಹಿಂಸೆ ಮಾಡಬೇಡಿ.

ಕರ್ಕಾಟಕ: ಈ ದಿನ ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿರುತ್ತೀರಿ. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿದೆ. ಸ್ಪರ್ಧಾ ಮನೋಭಾವದಿಂದ ಉನ್ನತ ಸ್ಥಾನಕ್ಕೆ ಏರಬಹುದು.

ಸಿಂಹ: ಚರ್ಮಸಂಬಂಧ ಅನಾರೋಗ್ಯವು ಕಾಣಿಸಿದಲ್ಲಿ ಆಯುರ್ವೇದದ ಮೊರೆ ಹೋಗುವುದರಿಂದ ಸಮಸ್ಯೆಗೆ ಶಾಶ್ವತವಾಗಿ ಉತ್ತರ ದೊರಕಲಿದೆ. ಪಾನೀಯ ಮಾರಾಟಗಾರರಿಗೆ ಮಹಾಲಕ್ಷ್ಮಿಯ ಅನುಗ್ರಹ ಸಿಗಲಿದೆ.

ಕನ್ಯಾ: ಅನ್ವೇಷಣೆಯ ಹಾದಿಯಲ್ಲಿ ಮತ್ತಷ್ಟು ದೂರ ಸಾಗಿದಲ್ಲಿ ಯಶಸ್ಸಿನ ಛಾಯೆ ಕಾಣಲಿದೆ. ಸಂತಸದ ಕ್ಷಣಗಳನ್ನು ತಂದುಕೊಳ್ಳುವ ಪ್ರಯತ್ನ ಮಾಡಿ. ಕರಕುಶಲ ವಸ್ತು ತಯಾರಕರಿಗೆ ಆದಾಯದಲ್ಲಿ ಹೆಚ್ಚಳವಾಗಲಿದೆ.

ತುಲಾ: ಆರ್ಥಿಕ ವಿಚಾರದಲ್ಲಿ ಉದಾರತೆ ತೋರಿ ಸಮಸ್ಯೆ ಸೃಷ್ಟಿಸಿಕೊಳ್ಳಬೇಡಿ. ಬಹಳ ಬೇಗ ಗುರಿ ತಲುಪಬೇಕೆಂಬ ಹಂಬಲ ಈಡೇರುವುದು. ಮರದ ವ್ಯಾಪಾರಿಗಳಿಗೆ ಹೆಚ್ಚಿನ ಅವಕಾಶಗಳೊಂದಿಗೆ ಉತ್ತಮ ಲಾಭವೂ ಇರುವುದು.

ವೃಶ್ಚಿಕ: ಈ ದಿನ ವ್ಯಕ್ತಿ ಗೌರವ ಕಾಪಾಡಿಕೊಳ್ಳಲು ಸುತ್ತಲಿನ ವಾತಾವರಣಕ್ಕೆ ಹೊಂದಿಕೊಳ್ಳಲೇ ಬೇಕಾದ ಅನಿವಾರ್ಯತೆ ಬರಲಿದೆ. ಪುತ್ರ ಮುಖಾಂತರ ಹೆಚ್ಚುವರಿ ಆದಾಯ ಹಾಗೂ ಗೌರವ ಸಿಗಲಿದೆ. ಆರೋಗ್ಯದ ಕಡೆ ಗಮನವಿರಲಿ.

ಧನು: ಈ ದಿನದ ಸಂದಿಗ್ಧ ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ಹಾಗೂ ಮಾರ್ಗದರ್ಶಕರ ಮಾತಿನಂತೆ ಬಗ್ಗೆಹರಿಸಿಕೊಳ್ಳುವುದು ಉತ್ತಮ. ರಾಜಕೀಯ ವಲಯದಲ್ಲಿ ಗೌಪ್ಯತೆಯಿಂದ ಮುಖ್ಯವಾದ ಮಾತುಕತೆ ನಡೆಸಬೇಕಾಗುವುದು.

ಮಕರ: ಇಂದು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಮನೆಯಲ್ಲಿ ಸಂತಸದ ವಾತಾವರಣ ಸೃಷ್ಟಿಯಾಗಲಿದೆ. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಲಾಭ

ಕುಂಭ: ಹೆಚ್ಚಿನ ಕೆಲಸದ ಬಗ್ಗೆ ಪ್ರೀತಿ ಪಾತ್ರರೊಡನೆ ಸಮಾಲೋಚನೆ ನಡೆಸುವಿರಿ. ಗೃಹ ನಿರ್ಮಾಣದಂತಹ ವಿಚಾರವನ್ನು ಅವಲೋಕಿಸಲು ಇದು ಒಳ್ಳೆಯ ದಿನ. ಕಬ್ಬಿಣ ಸಿಮೆಂಟ್ ದಾಸ್ತಾನುದಾರರಿಗೆ ಉತ್ತಮ ಆದಾಯ.

ಮೀನ: ವ್ಯಾಪಾರವೃತ್ತಿಯಲ್ಲಿ ಆರೋಗ್ಯಕರ ಪೈಪೋಟಿ ಕಂಡುಬಂದರೂ ಸಮಾಧಾನಕರ ಲಾಭ ಇರುವುದು. ಮಗನ ಕೆಲಸದ ವಿಚಾರದಲ್ಲಿ ವಿದೇಶದಲ್ಲಿರುವ ಸ್ನೇಹಿತ ನೆರವಿಗೆ ಬರಲಿದ್ದಾರೆ. ಗೋವಿನ ಸೇವೆಯಿಂದ ಶುಭವಾಗುವುದು.

ಪರೀಕ್ಷಾರ್ಥ ಸಂಚಾರ ಯಶಸ್ವಿ: ಫೆ. 15ರೊಳಗೆ 50 ಬಸ್ ಕಾರ್ಯಾಚರಣೆ

16ರಿಂದ ಮೈಸೂರು–ಬೆಂಗಳೂರು ಮಧ್ಯೆ ಎಲೆಕ್ಟ್ರಿಕ್ ಬಸ್ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿಗೆ ಬಂದಿರುವ ಮೊದಲ ಎಲೆಕ್ಟ್ರಿಕ್ ಬಸ್ (ಪವರ್ ಪ್ಲಸ್) ಪರೀಕ್ಷಾರ್ಥ ಸಂಚಾರ ಯಶಸ್ವಿಯಾಗಿದ್ದು, ಸೋಮವಾರದಿಂದ ಮೈಸೂರು–ಬೆಂಗಳೂರು ಮಧ್ಯೆ ಕಾರ್ಯಾಚರಣೆ ಮಾಡಲಿದೆ.

ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್ ಕಂಪನಿಯಿಂದ ಜಿಸಿಸಿ (ಗ್ರಾಸ್ ಕಾಸ್ಟ್ ಕಾಂಟ್ರ್ಯಾಕ್ಟ್) ಮಾದರಿಯಲ್ಲಿ 50 ಬಸ್‌ಗಳನ್ನು ಪಡೆಯಲಾಗುತ್ತಿದ್ದು, ಅದರಲ್ಲಿ ಮೊದಲ ಬಸ್ ಡಿಸೆಂಬರ್ 31ರಂದು ಬಂದಿತ್ತು. ಈ ಬಸ್ ಪರೀಕ್ಷಾರ್ಥ ಸಂಚಾರ ನಡೆಸಿದ್ದು, ಕಾರ್ಯಾಚರಣೆಗೆ ಇಳಿಸಲು ಸೂಕ್ತವಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತೀರ್ಮಾನಿಸಿದ್ದಾರೆ.

'ಫೆಬ್ರುವರಿ 15ರ ವೇಳೆಗೆ ಬಾಕಿ 49 ಬಸ್‌ಗಳನ್ನು ಹಂತ–ಹಂತವಾಗಿ ಒದಗಿಸಲು ಒಲೆಕ್ಟ್ರಾ ಕಂಪನಿ ಒಪ್ಪಿಕೊಂಡಿದೆ. ರಾಜಧಾನಿಯಿಂದ ಮೈಸೂರು, ಮಡಿಕೇರಿ, ವಿರಾಜಪೇಟೆ, ದಾವಣಗೆರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರಿಗೆ ಈ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬು ಕುಮಾರ್ ತಿಳಿಸಿದರು.

ಈ ಬಸ್‌ನ ಬ್ಯಾಟರಿಯನ್ನು ಒಮ್ಮೆ ಚಾರ್ಜ್ ಮಾಡಿದರೆ 320 ಕಿಲೋ ಮೀಟರ್ ಸಂಚರಿಸುತ್ತದೆ. ಅರ್ಧ ಕಡೆ ಚಾರ್ಜಿಂಗ್ ಘಟಕಗಳನ್ನು ತೆರೆಯಲಾಗಿದ್ದು, ಅಲ್ಲಿ ಒಂದು ಗಂಟೆ ಚಾರ್ಜ್ ಮಾಡಿಕೊಂಡು ಮತ್ತೆ ರಾಜಧಾನಿಗೆ ವಾಪಸ್ ಬರಲಿದೆ ಎಂದು ವಿವರಿಸಿದರು.

ಕರ್ನಾಟಕ ಸಾರಿಗೆಗಿಂತ (ಕೆಂಪು ಬಸ್) ಐಷಾರಾಮಿ ಮತ್ತು ಮಲ್ಟಿ ಆಕ್ಸೆಲ್ ವೋಲ್ವೊ ಬಸ್‌ಗಳಿಗಿಂತ ಕಡಿಮೆ ದರ್ಜೆಯ ಬಸ್ ಇದಾಗಿದೆ.



ಮೈಸೂರು ರಸ್ತೆಯಲ್ಲಿ ಶುಕ್ರವಾರ ಪರೀಕ್ಷಾರ್ಥ ಸಂಚಾರ ನಡೆಸಿದ ಎಲೆಕ್ಟ್ರಿಕ್ ಬಸ್

ಕರ್ನಾಟಕ ಸಾರಿಗೆ ಬಸ್‌ಗಳಲ್ಲಿ (ನಾನ್ ಸ್ಟಾಪ್) ಪ್ರಯಾಣ ದರ ₹ 250 ಇದೆ. ಎಲೆಕ್ಟ್ರಿಕ್ ಬಸ್‌ನಲ್ಲಿ ಪ್ರಯಾಣಕ್ಕೆ ₹ 300 ದರ ನಿಗದಿ ಮಾಡಲಾಗಿದೆ. ಇದು ಪ್ರಯಾಣಿಕರಿಗೆ ಅಷ್ಟೇನೂ ಹೊರೆಯಾಗದು ಎಂದರು.

ಸದ್ಯಕ್ಕೆ ಜಿಸಿಸಿ ಮಾದರಿಯಲ್ಲಿ ವಾಹನ ಪಡೆಯಲಾಗಿದೆ. ಎಲೆಕ್ಟ್ರಿಕ್ ಬಸ್‌ಗಳನ್ನು ನಿರ್ವಹಣೆ ಮಾಡುವ ವಿಭಾಗ ನಿಗಮದಲ್ಲಿ ಇಲ್ಲ. ಮುಂದಿನ ದಿನಗಳಲ್ಲಿ ಕೆಎಸ್‌ಆರ್‌ಟಿಸಿ ಸಿಬ್ಬಂದಿಯೇ ತರಬೇತಿ ಪಡೆದು ಚಾಲನೆ ಮತ್ತು ನಿರ್ವಹಣೆ ಮಾಡಲು ಶಕ್ತರಾಗಬಹುದು. ಆಗ ಗುತ್ತಿಗೆ ಪಡೆಯದೆ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿ ಮಾಡುವ ಬಗ್ಗೆ ಆಲೋಚನೆ ನಡೆಸಲಾಗುತ್ತದೆ ಎಂದೂ ಅವರು ಹೇಳಿದರು.

ಶೀಘ್ರವೇ 20 ವೋಲ್ವೊ ಬಸ್



ಅನ್ಬುಕುಮಾರ್

ಅತ್ಯಂತ ಐಷಾರಾಮಿ ಬಸ್ ಆಗಿರುವ 'ವೋಲ್ವೊ 9600' ದರ್ಜೆಯ 50 ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಖರೀದಿಸುತ್ತಿದ್ದು, ಈ ತಿಂಗಳ ಅಂತ್ಯದೊಳಗೆ 20 ಬಸ್‌ಗಳು ಕಾರ್ಯಾಚರಣೆಗೆ ಇಳಿಯಲಿವೆ.

ವೋಲ್ವೊ ಬಸ್‌ಗಳಲ್ಲೇ ಐಷಾರಾಮಿ ಬಸ್ ಇದಾಗಿದೆ. ಸದ್ಯ ಕೆಎಸ್‌ಆರ್‌ಟಿಸಿಯಲ್ಲಿರುವ ಅಂಬಾರಿ ಡ್ರೀಮ್ ಕ್ಲಾಸ್ ಬಸ್‌ಗಿಂತಲೂ ಐಷಾರಾಮಿ(ಅಂಬಾರಿ 2.0) ಆಗಿರಲಿದೆ. ಇದಕ್ಕೆ ಇನ್ನೂ ಹೆಸರು ಅಂತಿಮಗೊಳಿಸಿಲ್ಲ. ಈ ವರ್ಷದ ಅಂತ್ಯದೊಳಗೆ 50 ಬಸ್‌ಗಳು ಸೇವೆಗೆ ಲಭ್ಯವಾಗಲಿವೆ ಎಂದು ವಿ.ಅನ್ಬುಕುಮಾರ್ ಹೇಳಿದರು.

ಕೆಎಸ್‌ಆರ್‌ಟಿಸಿ ಬಸ್‌ಗಳ ಕೊರತೆ ಎದುರಿಸುತ್ತಿದ್ದು, 650 ಡೀಸೆಲ್ ಬಸ್‌ಗಳ(ಕರ್ನಾಟಕ ಸಾರಿಗೆ) ಖರೀದಿಗೆ ಟೆಂಡರ್ ಕರೆಯಲಾಗಿದೆ. ಮಾರ್ಚ್ ಅಂತ್ಯದ ವೇಳೆಗೆ ಅವು ನಿಗಮಕ್ಕೆ ಸೇರ್ಪಡೆಯಾಗಲಿವೆ. ಗ್ರಾಮೀಣ ಪ್ರದೇಶದಲ್ಲಿ ಬಸ್‌ಗಳಿಲ್ಲ ಎಂಬ ಸಮಸ್ಯೆಗೆ ಕೊಂಚ ಪರಿಹಾರ ದೊರಕಲಿದೆ ಎಂದರು.

ಗಾಂಜಾ ಮಾರಾಟ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಪೂರ್ಣೇಶ್ವರಿ ನಗರ, ತಿಗಳರಪಾಳ್ಯ ರಸ್ತೆ ಹಾಗೂ ಕೃಷ್ಣವೇಣಿ ಲೇಕ್‌ವ್ಯೂ ಬಡಾವಣೆಯಲ್ಲಿ ಗಾಂಜಾ ಮಾರುತ್ತಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುನೇಶ್ವರ ದೇವಸ್ಥಾನ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ವೇಳೆ ಮಹಮದ್ ಅತ್ಕೂರ್ ಸಂಪ್ಯೂ ಬಿನ್ ನಜ್ರೂಲ್ ಸಂಪ್ಯೂ (32) ಎಂಬ ಆರೋಪಿಯನ್ನು ಬಂಧಿಸಲಾಗಿದೆ.

ಆರೋಪಿಯಿಂದ 3 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ. ಈತ ಟೆಕಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದರೋಡೆ: ಅಂತರರಾಜ್ಯ ಆರೋಪಿಗಳ ಬಂಧನ

ಬೆಂಗಳೂರು: ನಗರ ಹೊರವಲಯದ ಒಂಟಿ ಮನೆಗಳನ್ನು ಹಗಲು ವೇಳೆ ಗುರುತಿಸಿ, ರಾತ್ರಿ ಮನೆಗೆ ನುಗ್ಗಿ ದರೋಡೆ ನಡೆಸು ತ್ತಿದ್ದ 7 ಮಂದಿ ಅಂತರರಾಜ್ಯ ಆರೋಪಿಗಳನ್ನು ತಲಘಟ್ಟಪುರ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಶೇಖ್ ಕಲೀಂ, ಬಿಹಾರದ ನಿಜಾಮ್, ಉತ್ತರ ಪ್ರದೇಶ ಮೊಹಮ್ಮದ್ ಇಮ್ರಾನ್ ಶೇಕ್ ಹಾಗೂ ಸೈಯದ್ ಫೈಜಲ್ ಅಲಿ, ರಾಜಸ್ಥಾನದ ಜಾಲ್‌ವಾಡ್ ಜಿಲ್ಲೆಯ ತಾಣ ತಾಲ್ಲೂಕಿನ ರಾಮ್ ಬಿಲಾಸ್, ಮಧ್ಯಪ್ರದೇಶದ ಸುನಿಲ್ ಡಾಂಗಿ, ಒಡಿಶಾದ ಬಲ್ಲೇಶ್ವರ್ ಜಿಲ್ಲೆ ಭುವನೇಶ್ವರ ಗ್ರಾಮದ ರಜತ್ ಮಲ್ಲಿಕ್ ಬಂಧಿತ ಆರೋಪಿಗಳು.

'ಹಗಲು ವೇಳೆಯಲ್ಲಿ ಮನೆಯವರ ಚಲನವಲನ ಗಮನಿಸುತ್ತಿದ್ದ ಆರೋಪಿಗಳು ರಾತ್ರಿ ವೇಳೆ, ಕಿಟಕಿ ಮೇಲಿನ ಸಜ್ಜಾದ ಸಹಾಯದಿಂದ ಮನೆಯ ಟೆರೇಸ್ ಮೇಲೆ ಹತ್ತಿ ಅಲ್ಲಿನ ಕೊಠಡಿಯ ಬೀಗ ಒಡೆದು ಮನೆಯ ಒಳಕ್ಕೆ ಪ್ರವೇಶಿಸುತ್ತಿದ್ದರು. ಮನೆಯವರನ್ನು ಬೆದರಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿ ಪರಾರಿಯಾಗುತ್ತಿದ್ದರು. ಇದನ್ನೇ ಪ್ರವೃತ್ತಿ ಮಾಡಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

ಮೃತದೇಹ ಪತ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯ ಸುಂಕದಕಟ್ಟೆಯ 'ಡಿ' ಮಾರ್ಟ್ ಬಳಿಯ ಚರಂಡಿಯಲ್ಲಿ ಸುಮಾರು 45 ವರ್ಷದ ಪುರುಷನ ಮೃತ ದೇಹ ಪತ್ತೆಯಾಗಿದೆ. ಮೃತರ ಗುರುತು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ನಿರ್ದೇಶಕ ಗುರುಪ್ರಸಾದ್ ಬಂಧನ, ಬಿಡುಗಡೆ

ಬೆಂಗಳೂರು: ಸಾಲ ವಾಪಸು ನೀಡದ ಪ್ರಕರಣದಲ್ಲಿ ಸಿನಿಮಾ ನಿರ್ದೇಶಕ, ನಟ ಗುರುಪ್ರಸಾದ್ ಅವರನ್ನು ಶುಕ್ರವಾರ ಮಧ್ಯಾಹ್ನ ಬಂಧಿಸಿದ್ದ ಗಿರಿನಗರ ಠಾಣೆ ಪೊಲೀಸರು, ನ್ಯಾಯಾಲಯದ ಷರತ್ತು ಜಾಮೀನು ಮೇಲೆ ಸಂಜೆ ಬಿಡುಗಡೆ ಮಾಡಿದ್ದಾರೆ.

'ಮಠ', 'ಎದ್ದೇಳು ಮಂಜುನಾಥ', 'ಡೈರೆಕ್ಟರ್ ಸ್ಪೆಷಲ್' ಸೇರಿದಂತೆ ಹಲವು ಸಿನಿಮಾಗಳನ್ನು ಗುರುಪ್ರಸಾದ್ ನಿರ್ದೇಶನ ಮಾಡಿದ್ದರು. ಸ್ನೇಹಿತ ಶ್ರೀನಿವಾಸ್ ಅವರಿಂದ ಸಾಲ ಪಡೆದಿದ್ದ ಗುರುಪ್ರಸಾದ್, ಅದನ್ನು ವಾಪಸು ನೀಡಿರಲಿಲ್ಲ. ಇದನ್ನು ಪ್ರಶ್ನಿಸಿದ್ದ ಶ್ರೀನಿವಾಸ್, ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು.

ವಿಚಾರಣೆ ನಡೆಸಿದ್ದ ನ್ಯಾಯಾಲಯ, ಗುರುಪ್ರಸಾದ್ ಅವರಿಗೆ ನೋಟಿಸ್ ನೀಡಿತ್ತು. ಆದರೆ, ಅವರು ವಿಚಾರಣೆಗೆ ಗೈರಾಗಿದ್ದರು. ಅದನ್ನು ಗಂಭೀರವಾಗಿ ಪರಿಗಣಿಸಿದ್ದ ನ್ಯಾಯಾಲಯ, ಗುರುಪ್ರಸಾದ್ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಹೊರಡಿಸಿತ್ತು. ತ್ವರಿತವಾಗಿ ಬಂಧಿಸಿ ನ್ಯಾಯಾಲಯದ ಎದುರು ಹಾಜರುಪಡಿಸುವಂತೆ ಗಿರಿನಗರ ಠಾಣೆ ಪೊಲೀಸರಿಗೆ ಸೂಚಿಸಿತ್ತು.

ಹೊಸಕೆರೆಹಳ್ಳಿ ಕ್ರಾಸ್ ಬಳಿಯ ತಮ್ಮ ಮನೆಯಲ್ಲಿದ್ದ ಗುರುಪ್ರಸಾದ್ ಅವರನ್ನು ಶುಕ್ರವಾರ ಮಧ್ಯಾಹ್ನ ಬಂಧಿಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ಹಾಜರುಪಡಿಸಿದರು. ವಿಚಾರಣೆ ನಡೆಸಿದ ನ್ಯಾಯಾಲಯ, ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು.



ಸಾಲ ವಾಪಸ್ ಕೇಳಿದ್ದಕ್ಕೆ ಹಲ್ಲೆ

ಬೆಂಗಳೂರು: ಅಂಗಡಿಯಲ್ಲಿ ಮಾಡಿದ್ದ ಸಾಲ ನೀಡುವಂತೆ ಕೇಳಿದ್ದಕ್ಕೆ ಮಾಲೀಕ ಹಾಗೂ ಅವರ ಪತ್ನಿ, ಪುತ್ರನಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದ ಆರೋಪಿ ಸಲ್ಮಾನ್ ಟಿಪ್ಪು ಎಂಬಾತನನ್ನು ಕೆಂಗೇರಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಸಹಚರರು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಿವಕುಮಾರ್ ಅವರು ಕೆಂಗೇರಿ ಉಪ ನಗರದಲ್ಲಿ ಚೌಡೇಶ್ವರಿ ಕಾಂಡಿಮೆಂಟ್ಸ್ ನಡೆಸುತ್ತಿದ್ದರು. ಅವರ ಮೇಲೆ ಟಿಪ್ಪು ಹಾಗೂ ಜತೆಗಿದ್ದವರು ಹಲ್ಲೆ ನಡೆಸಿದ್ದರು.

'ನಿತ್ಯ ಅಂಗಡಿಗೆ ಬರುತ್ತಿದ್ದ ಟಿಪ್ಪು, ಟೀ ಹಾಗೂ ಸಿಗರೇಟ್ ಅನ್ನು ಸಾಲದ ರೂಪದಲ್ಲಿ ಪಡೆದುಕೊಳ್ಳುತ್ತಿದ್ದ. ಜ.10ರಂದು ಅಂಗಡಿಗೆ ಟಿಪ್ಪು ಬಂದಾಗ ಹಿಂದಿನ ಸಾಲ ₹ 950 ಅನ್ನು ನೀಡುವಂತೆ ಮನವಿ ಮಾಡಿದ್ದೆ. ಆಗ ನನ್ನ ಹತ್ತಿರವೇ ಸಾಲ ಕೇಳುತ್ತೀಯಾ ಎಂದು ಬೆದರಿಸಿ ಅಲ್ಲಿಂದ ತೆರಳಿದ್ದ. ಅಂದು ಸಂಜೆ ಮೂವರು ಸಹಚರರ ಜತೆಗೆ ಬಂದ ಟಿಪ್ಪು ಮತ್ತೆ ಟೀ ಕೊಡುವಂತೆ ಕೇಳಿದ. ಆಗಲೂ ಮತ್ತೊಮ್ಮೆ ಹಿಂದಿನ ಸಾಲ ಮರು ಪಾವತಿ ಮಾಡುವಂತೆ ಕೇಳಿದೆ. ಆಗ ಅಂಗಡಿಯಲ್ಲಿದ್ದ ಜಗ್‌ನಿಂದ ಹಲ್ಲೆ ನಡೆಸಿದ್ದ. ಪತ್ನಿ ಹಾಗೂ ಪುತ್ರನ ಮೇಲೂ ಹಲ್ಲೆ ನಡೆಸಿದ್ದ' ಎಂದು ಶಿವಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದರು.

ಪ್ರಧಾನಿ ಜೊತೆಗಿನ ಫೋಟೊ ತೋರಿಸಿ ವಂಚನೆಗೆ ಯತ್ನ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಜೊತೆಗಿನ ಫೋಟೊ ಬಳಸಿ ಸೈನಿಕರ ಹೆಸರಿನಲ್ಲಿ ವಂಚನೆಗೆ ಯತ್ನಿಸಲಾಗಿದ್ದು, ಈ ಸಂಬಂಧ ವ್ಯಕ್ತಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

ಫೇಸ್‌ಬುಕ್ ಪೋಸ್ಟ್ ಪ್ರಕಟಿಸಿರುವ ನಗರದ ನಿವಾಸಿ ಎಂ.ಎಸ್. ಪ್ರಸಾದ್, 'ಭಾರತೀಯ ಸೈನಿಕರ ಹೆಸರಿನಲ್ಲಿ ಕೆಲವರು ವಂಚಿಸುತ್ತಿದ್ದು, ಕೀಳುಮಟ್ಟಕ್ಕೆ ಇಳಿಯುತ್ತಿದ್ದಾರೆ. ಇಂಥ ನಕಲಿ ಖಾತೆಗಳ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು' ಎಂದಿದ್ದಾರೆ.

'ಮೈಸೂರು ಪಾಕ್ ಮಾರಾಟಕ್ಕಾಗಿ ಫೇಸ್‌ಬುಕ್‌ನಲ್ಲಿ ಜಾಹೀರಾತು ನೀಡಲಾಗಿತ್ತು. ಸೈನಿಕನೆಂದು ಹೇಳಿಕೊಂಡು ಸಂದೇಶ ಕಳುಹಿಸಿದ್ದ ರಂಜಿತ್ ಸಿಂಗ್ ಎಂಬಾತ 30 ಕೆ.ಜಿ ಮೈಸೂರು ಪಾಕ್ ಬೇಕೆಂದು ತಿಳಿಸಿದ್ದ. ಜ. 15ರಂದು ವಿಮಾನ ನಿಲ್ದಾಣದಲ್ಲಿ ಡೆಲಿವರಿ ನೀಡುವಂತೆ ಕೋರಿದ್ದ. ವಿಳಾಸ ಸಹ ಕಳುಹಿಸಿದ್ದ. ಕರೆ ಮಾಡಿಯೂ ಮಾತನಾಡಿದ್ದ.' 'ಮುಂಗಡವಾಗಿ ಹಣ ನೀಡು ವುದಾಗಿ ಹೇಳಿದ್ದ ರಂಜಿತ್, ಕ್ಯೂಆರ್ ಕೋಡ್ ಕಳುಹಿಸಿ ಸ್ಕ್ಯಾನ್ ಮಾಡುವಂತೆ ತಿಳಿಸಿದ್ದ. ಈತನ ನಡೆಯಿಂದ ಅನುಮಾನಗೊಂಡು ಸ್ಕ್ಯಾನ್ ಮಾಡಲಿಲ್ಲ. ₹ 1 ರೂಪಾಯಿ ಕಳುಹಿ ಸುವಂತೆ ಆತನಿಗೆ ಹೇಳಲಾಗಿತ್ತು. ಅಷ್ಟಕ್ಕೆ ಆತ, ಕರೆ ಕಡಿತಗೊಳಿಸಿದ' ಎಂದು ಪ್ರಸಾದ್ ಬರೆದುಕೊಂಡಿದ್ದಾರೆ.



ರಂಜಿತ್ ಸಿಂಗ್ ತನ್ನ ವಾಟ್ಸ್‌ಆ್ಯಪ್ ಡಿ.ಪಿ ಇಟ್ಟುಕೊಂಡಿದ್ದ ಫೋಟೊ

'ಪ್ರಧಾನಿ ನರೇಂದ್ರ ಮೋದಿ ಜೊತೆಗಿನ ಸೈನಿಕರೊಬ್ಬರ ಫೋಟೊವನ್ನು ಈತ ತನ್ನ ವಾಟ್ಸ್‌ಆ್ಯಪ್ ಡಿ.ಪಿ ಆಗಿ ಹಾಕಿಕೊಂಡಿದ್ದ.ಈತ ನನ್ನ ಫೇಸ್‌ಬುಕ್ ಹಾಗೂ ಜಿ–ಮೇಲ್ ಖಾತೆಗಳನ್ನು ಹ್ಯಾಕ್ ಮಾಡಲು ಯತ್ನಿಸಿದ್ದ. ಅದಕ್ಕೂ ಮುನ್ನವೇ ನಾನು ಪಾಸ್‌ವರ್ಡ್ ಬದಲಾಯಿಸಿದೆ. ಆರೋಪಿಯ ವಂಚನೆ ಯತ್ನದ ಬಗ್ಗೆ ಪೊಲೀಸರಿಗೂ ದೂರು ನೀಡಿದ್ದೇನೆ' ಎಂದು ಉಲ್ಲೇಖಿಸಿದ್ದಾರೆ.

'ಗಸ್ತು ಪೊಲೀಸರಿಂದಲೇ ಸುಲಿಗೆ'

ಬೆಂಗಳೂರು: 'ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದಾಗ ತಪಾಸಣೆ ನೆಪದಲ್ಲಿ ಅಡ್ಡಗಟ್ಟಿದ್ದ ಇಬ್ಬರು ಪೊಲೀಸರು ₹ 2,500 ಸುಲಿಗೆ ಮಾಡಿದ್ದಾರೆ' ಎಂದು ಆರೋಪಿಸಿ ವೈಭವ್ ಪಟೇಲ್ ಎಂಬುವವರು ಟ್ವೀಟ್ ಮೂಲಕ ಪೊಲೀಸ್ ಕಮಿಷನರ್ ಅವರಿಗೆ ದೂರು ನೀಡಿದ್ದಾರೆ.

'ಹಿಮಾಚಲ ಪ್ರದೇಶದ ವೈಭವ್, ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಸಂಪರ್ಕಿಸಿ ಮಾಹಿತಿ ಪಡೆಯಲಾಗಿದೆ. ಘಟನೆ ನಡೆದಿರುವ ಪ್ರದೇಶ ವ್ಯಾಪ್ತಿಯ ಬಂಡೇಪಾಳ್ಯ ಠಾಣೆಗೆ ದೂರು ನೀಡುವಂತೆ ತಿಳಿಸಲಾಗಿದೆ' ಎಂದು ಪೊಲೀಸ್ ಕಮಿಷನರೇಟ್ ಕಚೇರಿ ಮೂಲಗಳು ಹೇಳಿವೆ. ದೂರಿಗೆ ಪ್ರತಿಕ್ರಿಯಿಸಿ ಟ್ವೀಟ್ ಮಾಡಿರುವ ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ. ಬಾಬಾ, 'ನಿಮ್ಮ ಭಯ ಹಾಗೂ ಆತಂಕ ಅರ್ಥವಾಗಿದೆ. ದೂರು ನೀಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದಿದ್ದಾರೆ.

ಗಾಂಜಾ ಪ್ರಕರಣದಲ್ಲಿ ಸಿಲುಕಿಸಲು ಯತ್ನ: 'ಜ. 11ರಂದು ತಡರಾತ್ರಿ ಕೆಲಸ ಮುಗಿಸಿ ರ‍್ಯಾಪಿಡೊ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದೆ. ಎಚ್‌ಎಸ್‌ಆರ್ ಲೇಔಟ್‌ನ ಅಯ್ಯಪ್ಪಸ್ವಾಮಿ ದೇವಸ್ಥಾನದ ಬಳಿ ಗಸ್ತಿನಲ್ಲಿದ್ದ ಇಬ್ಬರು ಪೊಲೀಸರು (ಬಂಡೇಪಾಳ್ಯ ಠಾಣೆ), ಬೈಕ್ ಅಡ್ಡಗಟ್ಟಿದ್ದರು. ಎಲ್ಲಿಗೆ ಹೊರಟಿದ್ದೀರಾ ಎಂದು ಪ್ರಶ್ನಿಸಿ ಬ್ಯಾಗ್ ಪರಿಶೀಲಿಸಿದ್ದರು. ಇದೇ ವೇಳೆ ಗಮನಕ್ಕೆ ಬಾರದಂತೆ ಬ್ಯಾಗ್‌ನಲ್ಲಿ ಯಾವುದೋ ಸೊಪ್ಪು ಇರಿಸಿದ್ದರು' ಎಂದು ವೈಭವ್ ಅವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

'ಬ್ಯಾಗ್‌ನಿಂದ ಸೊಪ್ಪು ಹೊರಗೆ ತೆಗೆದಂತೆ ನಟಿಸಿದ್ದ ಪೊಲೀಸರು, ಗಾಂಜಾ ಸೇವನೆ ಮಾಡುತ್ತೀಯಾ? ಎಂದು ಬೆದರಿಸಿದ್ದರು. ಗಾಂಜಾ ಸೇವಿಸುವುದಿಲ್ಲ ಎಂದು ಬೇಡಿಕೊಂಡಿದ್ದೆ. ರ‍್ಯಾಪಿಡೊ ಬೈಕ್ ಸವಾರನಿಗೆ ನನ್ನಿಂದ ₹100 ಕೊಡಿಸಿ ಆತನನ್ನು ಸ್ಥಳದಿಂದ ಕಳುಹಿಸಿದ್ದರು. ನನ್ನನ್ನು ಹಿಡಿದುಕೊಂಡಿದ್ದ ಪೊಲೀಸರು, 'ನಿನ್ನನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಜೈಲಿಗೆ ಹಾಕಿದರೆ, ನಮಗೆ ತಲಾ ₹ 15 ಸಾವಿರ ಬಹುಮಾನ ಬರಲಿದೆ' ಎಂದಿದ್ದರು. ನಾನು ಗಾಂಜಾ ಸೇವಿಸಿಲ್ಲವೆಂದರೂ ತಪ್ಪೊಪ್ಪಿಕೊಳ್ಳುವಂತೆ ಪೀಡಿಸಿದರು. ಸುಲಿಗೆ ಮಾಡುವುದೇ ಪೊಲೀಸರ ಉದ್ದೇಶವಾಗಿತ್ತು. ಹೀಗಾಗಿಯೇ ಅವರು ಪ್ರಕರಣ ದಾಖಲಿಸುವ ಬೆದರಿಕೆಯೊಡುತ್ತಿದ್ದರು. ನನ್ನನ್ನು ಬಿಡಲು ಏನು ಮಾಡಬೇಕೆಂದು ಕೇಳಿದ್ದೆ. ಆಗ ಅವರು, ಜೇಬಿನಲ್ಲಿದ್ದ ಪರ್ಸ್ ತೆಗೆದುಕೊಂಡು ₹ 2,500 ಕಿತ್ತುಕೊಂಡರು. ಎಟಿಎಂ ಘಟಕಕ್ಕೆ ಹೋಗಿ ಪುನಃ ₹ 4 ಸಾವಿರ ತರುವಂತೆ ಹೇಳಿದರು. ಖಾತೆಯಲ್ಲಿ ಹಣವಿಲ್ಲವೆಂದು ಹೇಳಿ ಗೋಗರೆದ ಬಳಿಕವೇ ನನ್ನನ್ನು ಬಿಟ್ಟು ಕಳುಹಿಸಿದರು' ಎಂದೂ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಠಾಣೆ ಮೆಟ್ಟಿಲೇರಿದ ಯುವತಿಯರ ಜಟಾಪಟಿ

ಬೆಂಗಳೂರು: ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರಲ್ಲಿ ಇಬ್ಬರು ಯುವತಿಯರ ನಡುವೆ ಜಟಾಪಟಿ ನಡೆದಿದ್ದು, ಈ ಪ್ರಕರಣ ಮೈಕೊ ಲೇಔಟ್ ಠಾಣೆ ಮೆಟ್ಟಿಲೇರಿದೆ.

'ಬಿಟಿಎಂ ಲೇಔಟ್‌ನಲ್ಲಿರುವ ಪಿ.ಜಿ. ಕಟ್ಟಡವೊಂದರಲ್ಲಿ ನೆಲೆಸಿರುವ ವೈದ್ಯೆಯೊಬ್ಬರು ದೂರು ನೀಡಿದ್ದಾರೆ. ಅವರ ಜೊತೆಗೇ ವಾಸವಿದ್ದ ಕೇರಳದ ಯುವತಿ ವಿರುದ್ಧ ಸಾಮರಸ್ಯ ಹಾಳು ಮಾಡಿದ (ಐಪಿಸಿ 153–ಎ), ಹಲ್ಲೆ (ಐಪಿಸಿ 323) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸದ್ಯ ಆರೋಪಿ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಹಲವು ತಿಂಗಳಿನಿಂದ ಇಬ್ಬರೂ ಯುವತಿಯರು ಒಂದೇ ಕೊಠಡಿಯಲ್ಲಿ ಉಳಿದುಕೊಂಡಿದ್ದಾರೆ. ಅವರಿಬ್ಬರ ನಡುವೆ ವೈಮನಸ್ಸು ಉಂಟಾಗಿ ಜಟಾಪಟಿ ನಡೆದಿದೆ. ಈ ಬಗ್ಗೆ ಕಟ್ಟಡದ ಇತರೆ ಯುವತಿಯರಿಂದ ಮಾಹಿತಿ ಪಡೆಯಲಾಗುತ್ತಿದೆ' ಎಂದು ತಿಳಿಸಿದರು.

ವಿವರ: 'ಬೆಳಿಗ್ಗೆ 8ಕ್ಕೆ ಕೆಲಸಕ್ಕೆ ಹೋದರೆ ರಾತ್ರಿ 9.30 ಗಂಟೆಗೆ ವಾಪಸು ಬರುತ್ತೇನೆ. ಸ್ವಲ್ಪ ವಿಶ್ರಾಂತಿ ಪಡೆದು ರಾತ್ರಿ 11 ಗಂಟೆಗೆ ಮಲಗುತ್ತೇನೆ. ನನ್ನ ಜೊತೆಗೆ ಕೊಠಡಿಯಲ್ಲಿರುವ ಆರೋಪಿ, ರಾತ್ರಿಯಿಡೀ ಜೋರಾಗಿ ಮಾತನಾಡುತ್ತಾರೆ. ಈ ಬಗ್ಗೆ ಹಲವು ಬಾರಿ ಬುದ್ಧಿವಾದ ಹೇಳಿದರೂ ಸುಧಾರಿಸಿಲ್ಲ' ಎಂದು ವೈದ್ಯೆ ದೂರಿನಲ್ಲಿ ತಿಳಿಸಿದ್ದಾರೆ.

'ಅಪರಿಚಿತ ವ್ಯಕ್ತಿಯೊಂದಿಗೆ ವಿಡಿಯೊ ಕರೆ ಮಾಡಿ ಮಾತನಾಡುವ ಆರೋಪಿ, ರಾತ್ರಿ ಉಡುಗೆಯಲ್ಲಿರುವ ನನ್ನನ್ನೂ ಆ ವ್ಯಕ್ತಿಗೆ ತೋರಿಸುತ್ತಾರೆ. ಈ ಮೂಲಕ ಅಶ್ಲೀಲವಾಗಿ ನನ್ನನ್ನು ಬಿಂಬಿಸಿ ಕಿರುಕುಳ ನೀಡುತ್ತಾರೆ. ಇದನ್ನು ಪ್ರಶ್ನಿಸಿದ್ದಕ್ಕೆ, 'ನನ್ನದು ಕೇರಳ. ಹೆಚ್ಚು ಮಾತನಾಡಿದರೆ, ನಿನ್ನ ಮೇಲೆ ಮಾಮಾಚಾರ ಮಾಡಿಸಿ ನಿರ್ನಾಮ ಮಾಡುತ್ತೇನೆ' ಎಂದು ಬೆದರಿಕೆಯೊಡ್ಡಿದ್ದಾರೆ. ನಮ್ಮಿಂದಲೇ ಕರ್ನಾಟಕ. ಇನ್ನಷ್ಟು ವರ್ಷಗಳಲ್ಲಿ ಕನ್ನಡವೇ ಇಲ್ಲದಂತೆ ಮಾಡುತ್ತೇವೆ ಎಂದಿದ್ದಾರೆ. ಈ ಮೂಲಕ ಕನ್ನಡ ಹಾಗೂ ಕನ್ನಡಿಗರನ್ನು ಹೀಯಾಳಿಸಿದ್ದಾರೆ' ಎಂದೂ ವೈದ್ಯೆ ದೂರಿದ್ದಾರೆ.

ನೀರಿನ ಸೋರಿಕೆ ಜಾಡುಹಿಡಿದು ಕಾರಣ ಹುಡುಕಾಟ

ರಸ್ತೆ ಕುಸಿತ: ಕಾರಣ ನಿಗೂಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಸುರಂಗ ಮಾರ್ಗದ ಕಾಮಗಾರಿ ನಡೆಯುತ್ತಿರುವ ಬ್ರಿಗೇಡ್ ರಸ್ತೆಯಲ್ಲಿ ರಸ್ತೆ ಕುಸಿತಕ್ಕೆ ಕಾರಣ ಏನು ಎಂಬುದು ನಿಗೂಢವಾಗಿದ್ದು, ಬಿಎಂಆರ್‌ಸಿಎಲ್ ಮತ್ತು ಜಲಮಂಡಳಿ ಅಧಿಕಾರಿಗಳು ಕಾರಣ ಪತ್ತೆಗೆ ಹುಡುಕಾಟ ಮುಂದುವರಿಸಿದ್ದಾರೆ.

ಮೆಟ್ರೊ ಕಾಮಗಾರಿ ನಡೆಯುತ್ತಿರುವ ಜಾಗದಲ್ಲಿ ಕುಸಿದ ರಸ್ತೆಯಲ್ಲಿ ನೀರು ತುಂಬಿಕೊಂಡಿತ್ತು. ಅದನ್ನು ಹೊರಹಾಕಿ, ಕಾಂಕ್ರಿಟ್ ಮಿಶ್ರಣ ಸುರಿದು ಮುಚ್ಚಲಾಗಿದೆ. ಮೆಟ್ರೊ ಸುರಂಗ ಮಾರ್ಗ 10.5 ಮೀಟರ್ ಆಳದಲ್ಲಿ ಕಲ್ಲು ಬಂಡೆಗಳ ನಡುವೆ ಸಾಗುತ್ತಿದ್ದು, ಸುತ್ತಲೂ ಬಂಡೆ ಇದೆ. ಮೇಲಿನ ಮಣ್ಣು ಕುಸಿಯಲು ಯಾವುದೇ ಸಾಧ್ಯತೆ ಇಲ್ಲ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ಅಭಿಪ್ರಾಯ.

ಐದು ದಿನಗಳ ಹಿಂದೆಯೇ ಆ ಸ್ಥಳದಿಂದ ಸುರಂಗ ಕೊರೆಯುವ ಯಂತ್ರ (ಟಿಬಿಎಂ) ಹಾದುಹೋಗಿದೆ. ಮಣ್ಣು ಸಡಿಲಗೊಂಡು ಕುಸಿದಿದ್ದರೆ ಸುರಂಗದೊಳಗೆ ಮಣ್ಣು ಸುರಿಯಬೇಕಿತ್ತು. ಆದರೆ, ಸುರಂಗದೊಳಗೆ ಎಲ್ಲೂ ಮಣ್ಣು ಕಾಣಿಸುತ್ತಿಲ್ಲ. ನೀರು ತುಂಬಿಕೊಂಡಿರುವುದರಿಂದ ಯಾವುದೋ ಪೈಪ್‌ಲೈನ್ ಸೋರಿಕೆ ಆಗಿರಬಹುದು ಎಂಬುದು ಅವರ ಅಂದಾಜು.

ಜಲಮಂಡಳಿ ಅಧಿಕಾರಿಗಳು ಎರಡು ದಿನಗಳಿಂದ ಪರಿಶೀಲನೆ ನಡೆಸುತ್ತಿದ್ದು, ನೀರಿನ ಪೈಪ್‌ಲೈನ್ ಸೋರಿಕೆ ಆಗಿದೆಯೇ ಎಂಬುದನ್ನು ಹುಡುಕುತ್ತಿದ್ದಾರೆ. ಆದರೆ, ಅದು ಕೂಡ ಖಾತ್ರಿಯಾಗುತ್ತಿಲ್ಲ.

'ನೀರು ಹೊರಹಾಕಿ ಕಾಂಕ್ರಿಟ್ ಮಿಶ್ರಣ ಸುರಿದ ನಂತರ ಮತ್ತೆ ಸೋರಿಕೆಯಾಗುತ್ತಿಲ್ಲ. ಪೈಪ್‌ಲೈನ್ ಒಡೆದಿದ್ದರೆ ನೀರು ಸೋರಿಕೆ ಮುಂದುವರಿಯಬೇಕಿತ್ತು. ಅಲ್ಲಿರುವ ಪೈಪ್‌ಲೈನ್‌ನಲ್ಲಿ ನೀರು ಸರಾಗವಾಗಿ ಹರಿಯುತ್ತಿದೆಯೇ ಎಂಬುದನ್ನೂ ಪರಿಶೀಲಿಸಲಾಗಿದ್ದು, ಎಲ್ಲವೂ ಸರಿಯಾಗಿದೆ. ಜಲಮಂಡಳಿ ಪೈಪ್‌ಲೈನ್‌ನಿಂದ ತೊಂದರೆಯಾಗಿಲ್ಲ. ಸುರಂಗ ಕೊರೆಯುವ ಯಂತ್ರ ಸಾಗುವಾಗ ಅಲ್ಲಲ್ಲಿ ಗುಳಿ ಬೀಳುವ ಸಾಧ್ಯತೆ ಇರುತ್ತದೆ. ರಸ್ತೆ ಕುಸಿಯಲು ಇದೇ ಕಾರಣ ಇರಬಹುದು' ಎಂದು ಜಲ ಮಂಡಳಿ ಅಧಿಕಾರಿಗಳು ಹೇಳುತ್ತಾರೆ.

ಜಲಮಂಡಳಿ ಮತ್ತು ಬಿಎಂಆರ್‌ಸಿಎಲ್ ಅಧಿಕಾರಿಗಳು ಈ ನಿಗೂಢ ಭೇದಿಸಲು ತಲೆಕೆಡಿಕೊಂಡಿದ್ದು, ಈ ಸ್ಥಳದ ಮೇಲೆ ವಿಶೇಷ ನಿಗಾ ಇರಿಸಿದ್ದಾರೆ.



ರಸ್ತೆಯಲ್ಲಿ ಬಿದ್ದಿದ್ದ ಗುಂಡಿ ಮುಚ್ಚಿದ ಬಳಿಕ ವಾಹನ ಸಂಚಾರಕ್ಕೆ ಮುಕ್ತವಾಗಿರುವ ಬ್ರಿಗೇಡ್ ರಸ್ತೆ —ಪ್ರಜಾವಾಣಿ ಚಿತ್ರ

ಸಂಚಾರ ಸುಗಮ

ರಸ್ತೆ ಕುಸಿದ ಕೂಡಲೇ ನೀರು ಹೊರಹಾಕಿ, ಕಾಂಕ್ರೀಟ್ ಭರ್ತಿ ಮಾಡಲಾಗಿದ್ದು, ಶುಕ್ರವಾರ ಮಧ್ಯಾಹ್ನದ ಬಳಿಕ ವಾಹನ ಸಂಚಾರಕ್ಕೆ ಅನುವು ಮಾಡಲಾಯಿತು.

'ಭರ್ತಿ ಮಾಡಿದ ಬಳಿಕವೂ ಮತ್ತೆ ಕುಸಿಯುವ ಸಾಧ್ಯತೆ ಇದೆಯೇ ಎಂಬುದನ್ನು ಪರಿಶೀಲಿಸಿ ಯಾವುದೇ ತೊಂದರೆ ಇಲ್ಲ ಎಂಬುದನ್ನು ಖಾತ್ರಿ ಮಾಡಿಕೊಂಡ ಬಳಿಕ ವಾಹನ ಸಂಚಾರಕ್ಕೆ ಮುಕ್ತ ಮಾಡಲಾಗಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮಾರ್ಗಸೂಚಿ ಬದಲಾವಣೆ ಸಾಧ್ಯತೆ

ಬೆಂಗಳೂರು: ಮೆಟ್ರೊ ರೈಲು ಮಾರ್ಗದ ಪಿಲ್ಲರ್ ನಿರ್ಮಾಣ ಕಾಮಗಾರಿಗೆ ಮಾರ್ಗಸೂಚಿ ಬದಲಾವಣೆ ಬಗ್ಗೆ ಹೈಕೋರ್ಟ್ ನಿರ್ದೇಶನ ನೋಡಿಕೊಂಡು ಮುಂದುವರಿಯಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ವಿಮಾನ ನಿಲ್ದಾಣ ಮಾರ್ಗದಲ್ಲಿ 12 ಮೀಟರ್ ಎತ್ತರದ ಪಿಲ್ಲರ್‌ಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಅದಕ್ಕಿಂತ ಹೆಚ್ಚಿನ ಎತ್ತರದ ಪಿಲ್ಲರ್‌ಗಳ ನಿರ್ಮಾಣ ವಿಷಯದಲ್ಲಿ ಮಾರ್ಗಸೂಚಿ ಬದಲಿಸಬೇಕು ಎಂಬ ಆಲೋಚನೆಯನ್ನು ಬಿಎಂಆರ್‌ಸಿಎಲ್ ನಡೆಸಿತ್ತು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿರುವುದರಿಂದ ಪೀಠದ ನಿರ್ದೇಶನಕ್ಕೆ ಕಾಯಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

'12 ಮೀಟರ್‌ಗೂ ಕಡಿಮೆ ಎತ್ತರದ ಪಿಲ್ಲರ್‌ಗಳ ನಿರ್ಮಾಣ ಕಾಮಗಾರಿಗೆ ಯಾವುದೇ ಅಡಚಣೆ ಇಲ್ಲ. ಸದ್ಯದ ಮಾರ್ಗಸೂಚಿಯನ್ನೇ ಅನುಸರಿಸಲಾಗುತ್ತಿದೆ. ಅದಕ್ಕೂ ಎತ್ತರ ಇರುವು ಕಡೆ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ನ್ಯಾಯಾಲಯ ಮತ್ತು ತಜ್ಞರ ತಂಡದಿಂದ ಯಾವ ಅಭಿಪ್ರಾಯ ಬರಲಿದೆ ಎಂಬುದನ್ನು ನೋಡಿಕೊಂಡು ಮುಂದುವರಿಯಲಾಗುವುದು' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

ಇದರ ಹೊರತಾಗಿ ವಿಮಾನ ನಿಲ್ದಾಣ ಮಾರ್ಗದ ಮೆಟ್ರೊ ರೈಲು ಕಾಮಗಾರಿ ಮುಂದುವರಿಯುತ್ತಿದೆ ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ವೈಟ್‌ಫೀಲ್ಡ್‌ಗೆ ಮೆಟ್ರೊ: ಬೋಗಿ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್.ಪುರ ವೈಟ್ ಫೀಲ್ಡ್ ನಡುವಿನ ಮೆಟ್ರೊ ರೈಲು ಮಾರ್ಗದ ಪರಿಶೀಲನೆಗೆ ಮೆಟ್ರೊ ರೈಲು ಸುರಕ್ಷತಾ ಆಯುಕ್ತರನ್ನು ಫೆಬ್ರುವರಿಯಲ್ಲಿ ಆಹ್ವಾನಿಸಲು ಬಿಎಂಆರ್‌ಸಿಎಲ್ ಸಜ್ಜಾಗಿದ್ದು, ಈ ಮಾರ್ಗಕ್ಕೆ ಮತ್ತೊಂದು ಹೊಸ ರೈಲನ್ನು ಸ್ಥಳಾಂತರಿಸಿದೆ.

ಆರು ಬೋಗಿಗಳನ್ನು ದೊಡ್ಡ ಟ್ರಕ್‌ಗಳಲ್ಲಿ ತರಲಾಗಿದ್ದು, ಶುಕ್ರವಾರ ಸಂಜೆ ವೈಟ್‌ಫೀಲ್ಡ್ ಡಿಪೊಗೆ ಬಂದಿವೆ. ಸದ್ಯ ಒಂದು ರೈಲು ಅಕ್ಟೋಬರ್ 21ರಿಂದಲೇ ಪರೀಕ್ಷಾರ್ಥ ಸಂಚಾರ ನಡೆಸುತ್ತಿದೆ.

ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ಮಾರ್ಗದಲ್ಲಿ ಮೊದಲ ಹಂತದಲ್ಲಿ ಕೆ.ಆರ್.ಪುರ–ವೈಟ್‌ಫೀಲ್ಡ್ ನಡುವೆ ಮೆಟ್ರೊ ರೈಲು ಸಂಚಾರ ಆರಂಭವಾಗಲಿದೆ. ಫೆಬ್ರುವರಿ 15ರಿಂದ 20ರ ನಡುವೆ ರೈಲು ಸುರಕ್ಷತಾ ಆಯುಕ್ತರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

ಪರಿಶೀಲನೆ ನಡೆಸಿ ಸುರಕ್ಷತೆ ಬಗ್ಗೆ ಹಸಿರು ನಿಶಾನೆ ದೊರೆತರೆ ಕೆಲವೇ ದಿನಗಳಲ್ಲಿ ವೈಟ್‌ಫೀಲ್ಡ್–ಕೆ.ಆರ್.ಪುರ ನಡುವೆ ಮೆಟ್ರೊ ರೈಲು ಸಂಚರಿಸಲಿದೆ. ಈ ಮಾರ್ಗವನ್ನು ಬೈಯಪ್ಪನಹಳ್ಳಿ ತನಕ ಜೋಡಿಸಲು ಬೆನ್ನಿಗಾನಹಳ್ಳಿ ಬಳಿ ವೆಬ್ ಗರ್ಡರ್ ಅಳವಡಿಕೆ ಕಾಮಗಾರಿ ಸವಾಲಾಗಿದ್ದು, ಈ ಕಾಮಗಾರಿಯೂ ಈಗ ಪ್ರಗತಿಯಲ್ಲಿದೆ. ಜೂನ್ ವೇಳೆಗೆ ಈ ಮಾರ್ಗದಲ್ಲೂ ರೈಲು ಕಾರ್ಯಾಚರಣೆ ಮಾಡಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.



ವೈಟ್‌ಫೀಲ್ಡ್ ಮೆಟ್ರೊ ರೈಲು ಡಿಪೊಗೆ ಬಂದಿರುವ ಮೆಟ್ರೊ ರೈಲು ಬೋಗಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ. ಬಿಐಎಪಿಎ/ಟಿಪಿ/ಭೂಉನಿ/30/2022–23/2327 ದಿನಾಂಕ: 13.01.2023

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ : 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ : 29–01–2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಾಣಿಜ್ಯ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	ಶ್ರೀ ಕೆ.ವಿ.ಜಯರಾಮು ಬಿನ್ ಕೃಷ್ಣಯ್ಯ	ದೇವನಹಳ್ಳಿ	ಕಸಬಾ	ಹಿರೇ ಅಮಾನಿಕೆರೆ	112/4	0–24	ಉದ್ಯಾನವನ	ವಾಣಿಜ್ಯ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/4080/ಆಕಾರ್/2022–23

ಐಐಟಿ ತಜ್ಞರ ಭೇಟಿ, ಮಾದರಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಕ್ರಾಸ್ ಬಳಿ ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿ ಬಿದ್ದಿದ್ದ ಸ್ಥಳಕ್ಕೆ ಹೈದರಾಬಾದ್‌ನ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ತಜ್ಞರು ಶುಕ್ರವಾರ ಭೇಟಿ ನೀಡಿ, ಪರಿಶೀಲಿಸಿದರು.

ತಾಯಿ–ಮಗು ಸಾವು ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿರುವ ಪೊಲೀಸರು, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಪುರಾವೆಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಹೈದರಾಬಾದ್ ಐಐಟಿ ತಜ್ಞರನ್ನು ಸಂಪರ್ಕಿಸಿದ್ದ ಪೊಲೀಸರು, ಸ್ಥಳ ಪರಿಶೀಲನೆ ನಡೆಸಿ ವೈಜ್ಞಾನಿಕ ವರದಿ ನೀಡುವಂತೆ ಕೋರಿದ್ದರು.

ಅದಕ್ಕೆ ಒಪ್ಪಿದ ಐಐಟಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಎಸ್. ಸುರಿಯಾ ಪ್ರಕಾಶ್ ಹಾಗೂ ಪ್ರಾಧ್ಯಾಪಕ ಡಾ. ಸುಬ್ರಮಣಿಯಂ ನೇತೃತ್ವದ ತಂಡ ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾದರಿ ಸಂಗ್ರಹಿಸಿತು.

ಬಿಎಂಆರ್‌ಸಿಎಲ್ ಹಾಗೂ ನಾಗಾರ್ಜುನ್ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಅಧಿಕಾರಿಗಳು ಸ್ಥಳದಲ್ಲಿದ್ದರು. ಉರುಳಿಬಿದ್ದ ಕಬ್ಬಿಣದ ಚೌಕಟ್ಟು ಬಳಿ ಸಿಕ್ಕ ಕೆಲ ಮಾದರಿಗಳನ್ನು ಪರಿಶೀಲಿಸಿದ ತಜ್ಞರು, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಸ್ಥಳದ ಅಳತೆ ಹಾಗೂ ಇತರೆ ತಾಂತ್ರಿಕ ಮಾಹಿತಿಗಳನ್ನು ತಜ್ಞರು ದಾಖಲಿಸಿಕೊಂಡರು. ಘಟನೆ ಹೇಗಾಯಿತು ? ಎಂಬ ಬಗ್ಗೆ ಡಿಸಿಪಿ ಭೀಮಾಶಂಕರ್ ಗುಳೇದ್ ಅವರು ತಜ್ಞರಿಗೆ ವಿವರಣೆ ನೀಡಿದರು.

'ಪ್ರಕರಣಕ್ಕೆ ಸಂಬಂಧಪಟ್ಟಂತೆ ವೈಜ್ಞಾನಿಕ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಘಟನೆಗೆ ಕಾರಣವೇನು ಎಂಬುದನ್ನು ತಿಳಿಯಲು ಹೈದರಾಬಾದ್ ಐಐಟಿ ತಜ್ಞರಿಂದ ಪರಿಶೀಲನೆ ಮಾಡಿಸಲಾಗಿದೆ. ತ್ವರಿತವಾಗಿ ವರದಿ ನೀಡುವಂತೆ ಕೋರಲಾಗಿದೆ. ವರದಿ ಕೈ ಸೇರಿದ ಕೂಡಲೇ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಡಿಸಿಪಿ ಭೀಮಾಶಂಕರ್ ತಿಳಿಸಿದರು.

₹ 1 ಕೋಟಿ ಪರಿಹಾರಕ್ಕೆ ಒತ್ತಾಯ: 'ಅವಘಡದಲ್ಲಿ ಮೃತಪಟ್ಟ ತಾಯಿ ತೇಜಸ್ವಿನಿ ಹಾಗೂ ಮಗು ವಿಹಾನ್ ಅವರ ಕುಟುಂಬಕ್ಕೆ ₹ 1 ಕೋಟಿ ಪರಿಹಾರ ನೀಡಬೇಕು' ಎಂದು ಅಖಿಲ ಭಾರತೀಯ ಭಾವಸಾರ ಕ್ಷತ್ರೀಯ ಸಮಾಜ ಒತ್ತಾಯಿಸಿದೆ.

ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದ ಸಮಾಜದ ಮುಖಂಡರು, 'ಅವಘಡಕ್ಕೆ ಕಾರಣವಾದ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಗುತ್ತಿಗೆದಾರರನ್ನು ಇದುವರೆಗೂ ಬಂಧಿಸಿಲ್ಲ. ಈ ಕ್ರಮ ಖಂಡನೀಯ. ಕೂಡಲೇ ಎಲ್ಲರನ್ನೂ ಬಂಧಿಸಿ, ಕಠಿಣ ಶಿಕ್ಷೆ ಕೊಡಿಸಬೇಕು' ಎಂದು ಆಗ್ರಹಿಸಿದರು.



ಅವಘಡ ಸ್ಥಳದಲ್ಲಿ ಉರುಳಿಬಿದ್ದಿದ್ದ ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಮಾದರಿಗಳನ್ನು ಐಐಟಿ ತಜ್ಞರು ಶುಕ್ರವಾರ ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

ಆತ್ಮಹತ್ಯೆಗೆ ಪ್ರಚೋದನೆ ಆರೋಪ: ಮೃತ್ಯುಂಜಯ ಸ್ವಾಮೀಜಿಗೆ ಜಾಮೀನು

ಬೆಂಗಳೂರು: ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿಯ ಬಂಡೆಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಮೃತ್ಯುಂಜಯ ಸ್ವಾಮೀಜಿ ಅಲಿಯಾಸ್ ರೇಣುಕಾರಾಧ್ಯ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.



ಈ ಸಂಬಂಧ ಪ್ರಕರಣದಲ್ಲಿ ಮೊದಲನೆ ಆರೋಪಿಯಾಗಿರುವ ಮೃತ್ಯುಂಜಯ ಸ್ವಾಮೀಜಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ವಿಚಾರಣೆ ವೇಳೆ ಮೃತ್ಯುಂಜಯ ಸ್ವಾಮೀಜಿ ಪರ ವಕೀಲರು, 'ಪ್ರಕರಣಕ್ಕೆ ಸಂಬಂಧಿಸಿದ ಎಫ್‌ಐಆರ್ ಮತ್ತು ಮೃತ ಸ್ವಾಮೀಜಿ ಬರೆದ ಮರಣ ಪತ್ರದಲ್ಲಿ ಅರ್ಜಿದಾರರ ಹೆಸರು ಉಲ್ಲೇಖವಾಗಿಲ್ಲ. ಪ್ರಕರಣಕ್ಕೂ ಅರ್ಜಿದಾರರಿಗೂ ಯಾವುದೇ ರೀತಿಯ ನೇರ ಸಂಬಂಧವಿಲ್ಲ. ಆದ್ದರಿಂದ, ಜಾಮೀನು ನೀಡಬೇಕು' ಎಂದು ಕೋರಿದರು. ನ್ಯಾಯಪೀಠ ಇದನ್ನು ಮಾನ್ಯ ಮಾಡಿದೆ. ಈ ಪ್ರಕರಣದಲ್ಲಿ ಮೂರನೇ ಆರೋಪಿಯಾದ ನಿವೃತ್ತ ಶಿಕ್ಷಕ ಎಂ.ಮಹದೇವಯ್ಯ ಅವರಿಗೆ ಹೈಕೋರ್ಟ್ ಇತ್ತೀಚೆಗಷ್ಟೇ ಜಾಮೀನು ಮಂಜೂರು ಮಾಡಿ ಆದೇಶಿಸಿತ್ತು.

ಪ್ರಕರಣವೇನು?: ಬಸವಲಿಂಗ ಸ್ವಾಮೀಜಿ ಬಂಡೆಮಠದ ತಮ್ಮ ಕೊಠಡಿಯಲ್ಲಿ 2022ರ ಅಕ್ಟೋಬರ್ 23ರಂದು ರಾತ್ರಿ ಕಿಟಕಿಗೆ ನೇಣುಹಾಕಿಕೊಂಡು ಮೃತಪಟ್ಟಿದ್ದರು. ಮರುದಿನ (ಅ.24) ಬೆಳಿಗ್ಗೆ 7 ಗಂಟೆಗೆ ಘಟನೆ ಬೆಳಕಿಗೆ ಬಂದಿತ್ತು.

ಪ್ರಕರಣ ದಾಖಲಿಸಿಕೊಂಡಿದ್ದ ಕುದೂರು ಠಾಣೆ ಪೊಲೀಸರು, ಮೃತ ಸ್ವಾಮೀಜಿಯ ಮರಣ ಪತ್ರ ಆಧರಿಸಿ ರೇಣುಕಾರಾಧ್ಯ (ಮೃತ್ಯುಂಜಯ ಸ್ವಾಮಿ), ಜೆ.ಚಂದು ಅಲಿಯಾಸ್ ನೀಲಾಂಬಿಕೆ, ನಿವೃತ್ತ ಶಿಕ್ಷಕ ಎಂ.ಮಹದೇವಯ್ಯ ಮತ್ತು ಸಹಾಯಕ ಪ್ರಾಧ್ಯಾಪಕ ಬಿ.ಸಿ. ಸುರೇಶ್ ಅವರನ್ನು ಬಂಧಿಸಿದ್ದರು.

ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಮತ್ತು ಅಪರಾಧಿಕ ಒಳಸಂಚು ರೂಪಿಸಿದ ಆರೋಪವನ್ನು ಬಂಧಿತರ ಮೇಲೆ ಹೊರಿಸಲಾಗಿದೆ. 2022ರ ಅಕ್ಟೋಬರ್ 30ರಿಂದ ನ್ಯಾಯಾಂಗ ಬಂಧನದಲ್ಲಿರುವ ಮೃತ್ಯುಂಜಯ ಸ್ವಾಮೀಜಿ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಫೆ. 13ರಿಂದ ಸೇವಾಲಾಲ್ ಜಯಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತ ಸೇವಾಲಾಲ್ ಅವರ 284ನೇ ಜಯಂತಿಯನ್ನು ಫೆಬ್ರುವರಿ 13ರಿಂದ ಮೂರು ದಿನಗಳು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಸಂತ ಸೇವಾಲಾಲ್ ಜಯಂತೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ ಅವರು ಈ ವಿಷಯ ತಿಳಿಸಿದರು. ದಾವಣಗೆರೆ ಜಿಲ್ಲೆ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪ ಭಾಯಾಘಡ್‌ನಲ್ಲಿ ಕಾರ್ಯಕ್ರಮ ಆಚರಿಸಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಹ್ವಾನಿಸಲಾಗುವುದು ಎಂದರು.

ಸೋಂಪುರದಲ್ಲಿ ಇಂದಿನಿಂದ ಆರಂಭ ● ರಾಜ್ಯಮಟ್ಟದ ಕುಸ್ತಿ ಪಂದ್ಯ ಆಯೋಜನೆ

ಬಸವೇಶ್ವರ ಸ್ವಾಮಿ ಕಡಲೆಕಾಯಿ ಪರಿಷೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸೋಂಪುರ ಬಸವೇಶ್ವರ ಸ್ವಾಮಿ ಕಡಲೆಕಾಯಿ ಪರಿಷೆ ಹಾಗೂ ರಥೋತ್ಸವ ಜ.14 ಮತ್ತು 15ರಂದು ನಡೆಯಲಿದೆ.

ಕೋವಿಡ್ ಕಾರಣಕ್ಕಾಗಿ ಮೂರು ವರ್ಷಗಳಿಂದ ಸರಳವಾಗಿ ಕಡಲೆಕಾಯಿ ಪರಿಷೆ ಆಯೋಜಿಸಲಾಗಿತ್ತು. ಪ್ರಸ್ತುತ ಎರಡು ದಿನಗಳ ಕಾಲ ಆಯೋಜಿಸಿರುವ ಪರಿಷೆಯನ್ನು ವಿಜೃಂಭಣೆಯಿಂದ ಆಚರಿಸಲು ದೇವಾಲಯದ ಆಡಳಿತ ಮಂಡಳಿ ಸಿದ್ಧತೆ ನಡೆಸಿದೆ.

ಜ.14ರಂದು ರಾಜ್ಯಮಟ್ಟದ ಕುಸ್ತಿ ಪಂದ್ಯ ಆಯೋಜಿಸಲಾಗಿದ್ದು, ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಲಿರುವ 400ರಿಂದ 500 ಕುಸ್ತಿಪಟುಗಳು ಪಾಲ್ಗೊಳ್ಳಲಿದ್ದಾರೆ. ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಗುವುದು. ಹಲವು ಚಲನಚಿತ್ರ ನಟರು ಪರಿಷೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಜ. 15ರಂದು ಬಸವೇಶ್ವರ ಸ್ವಾಮಿ ರಥೋತ್ಸವ ನಡೆಯಲಿದ್ದು, ಲಕ್ಷಾಂತರ ಮಂದಿ ಭಾಗವಹಿಸುವ ನಿರೀಕ್ಷೆಯಿದೆ.

'ಸೋಂಪುರ ಬಸವಣ್ಣ ದೇವಾಲಯ ಚೋಳರ ಕಾಲಕ್ಕೆ ಸೇರಿದೆ. ಸ್ಥಳೀಯರ ಬೆಂಬಲದಿಂದ ಜೀರ್ಣೋದ್ಧಾರಗೊಳಿಸಿ ದಶಕಗಳಿಂದ ಜಾತ್ರಾ ಮಹೋತ್ಸವ ಆಚರಿಸಿಕೊಂಡು ಬರಲಾಗುತ್ತಿದೆ. ಈ ನೆಲದ ಅಸ್ಮಿತೆ, ಗ್ರಾಮೀಣ ಸೊಗಡು ಹಾಗೂ ಕೃಷಿ ಚಟುವಟಿಕೆ ಉತ್ತೇಜಿಸಲು, ರಕ್ಷಿಸಿಕೊಳ್ಳಲು ಇಂತಹ ಆಚರಣೆಗಳೂ ಸಹಾಯಕವಾಗಿವೆ. ರಥವನ್ನು ಬಿ.ವೈ. ವಿಜಯೇಂದ್ರ ಕುಟುಂಬದವರು ದೇಣಿಗೆಯಾಗಿ ನೀಡಿದ್ದಾರೆ' ಎಂದು ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಜ.15ಕ್ಕೆ ನಡೆಯಲಿರುವ ರಥೋತ್ಸವಕ್ಕೆ ವಿಜಯೇಂದ್ರ ಚಾಲನೆ ನೀಡಲಿದ್ದಾರೆ. ಅಂದು ಬೆಳಿಗ್ಗೆಯಿಂದ ಸಂಜೆಯವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಜಾತ್ರೆ ಬರುವ ಭಕ್ತರಿಗೆ ಗಿಣ್ಣು, ಕಡಲೆಕಾಯಿ ಹಾಗೂ ಪ್ರಸಾದ ವಿನಿಯೋಗ ಮಾಡಲಾಗುವುದು' ಎಂದು ಹೇಳಿದರು.



ಬಸವ ಉತ್ಸವದ ಕೈಪಿಡಿಯನ್ನು ದೇವಾಲಯದ ಆಡಳಿತ ಮಂಡಳಿ ಸದಸ್ಯರು ಪ್ರದರ್ಶಿಸಿದರು. ಮುಖಂಡ ರುದ್ರೇಶ್, ಪರಮಶಿವಯ್ಯ ಇದ್ದಾರೆ

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/91/2022–23 ದಿನಾಂಕ: 13.01.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಕೊಂಡಾರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	14	0–19	ಕೃಷಿ	ವಸತಿ	
2	ಶ್ರೀ ಮುನಿಸ್ವಾಮಿ ಬಿನ್ ಲೇ. ಚಿಕ್ಕನಂಜಪ್ಪ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	15/1	0–16	ಕೃಷಿ	ವಸತಿ	
3	ಶ್ರೀ ಚಂದ್ರಪ್ಪ ಬಿನ್ ಪಾಪರೆಡ್ಡಿ, ಶ್ರೀ ಕೃಷ್ಣಾರೆಡ್ಡಿ ಬಿನ್ ಪಾಪರೆಡ್ಡಿ, ಶ್ರೀ ಕೆ. ರಾಮರೆಡ್ಡಿ ಬಿನ್ ಕೊಂಡಾರೆಡ್ಡಿ ಮತ್ತು ಶ್ರೀ ರಾಮಚಂದ್ರನ್ ಬಿನ್ ಎಲ್. ಲಕ್ಷ್ಮಯ್ಯ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	15/2	2–07	ಕೃಷಿ	ವಸತಿ	
4	ಶ್ರೀ ಜೆ.ಸಿ. ಕುಮಾರಸ್ವಾಮಿ ಬಿನ್ ಚಂದ್ರಪ್ಪ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	15/3	0–11	ಕೃಷಿ	ವಸತಿ	
5	ಶ್ರೀಮತಿ ಚೆನ್ನಮ್ಮ, ಶ್ರೀ ತಿಮ್ಮರಾಯಪ್ಪ, ಶ್ರೀ ಮುನಿಯಪ್ಪ ಬಿನ್ ಯಂಗಾರೆಡ್ಡಿ, ಶ್ರೀ ನಾಗಪ್ಪ ಬಿನ್ ರಾಮಯ್ಯ, ಶ್ರೀ ಮುನಿಶಾಮಿರೆಡ್ಡಿ ಬಿನ್ ರಾಮಯ್ಯ, ಶ್ರೀಮತಿ ವೆಂಕಟಮ್ಮ ಕೋಂ. ಲೇ. ತಿಮ್ಮರಾಯಪ್ಪ, ಶ್ರೀ ಆನಂದರೆಡ್ಡಿ ನಂಜ ಬಿನ್ ನಂಜಾರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	15/6	1–11	ಕೃಷಿ	ವಸತಿ	
6	ಶ್ರೀಮತಿ ಯಲ್ಲಮ್ಮ ಕೋಂ. ಲೇ. ಪಾಪಯ್ಯ, ಶ್ರೀ ಮುನಿಯಪ್ಪ ಬಿನ್ ಲೇ. ಪಾಪಯ್ಯ, ಶ್ರೀ ರವಿಕುಮಾರ್ ಬಿನ್ ಲೇ. ಚಿನ್ನಪ್ಪ, ಶ್ರೀ ಮುನಿಯಲ್ಲಪ್ಪ ನಾರಾಯಣಪ್ಪ ಬಿನ್ ಲೇ. ಪುಳ್ಳಪ್ಪ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	16	0–21	ಕೃಷಿ	ವಸತಿ	
7	ಶ್ರೀಮತಿ ಮುನೇಮ್ಮ, ಶ್ರೀ ಕಾವೇರಮ್ಮ, ಶ್ರೀ ಮುನಿಶಾಮಿ, ಶ್ರೀ ಮುನಿಯಪ್ಪ, ಶ್ರೀ ಮುನೆಪ್ಪ, ಶ್ರೀ ಮುನಿಯಪ್ಪ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	17	0–10.08	ಕೃಷಿ	ವಸತಿ	
8	ಶ್ರೀ ಚಂದ್ರಪ್ಪ ಬಿನ್ ಪಾಪರೆಡ್ಡಿ ಮತ್ತು ಶ್ರೀ ರಾಮರೆಡ್ಡಿ ಬಿನ್ ಕೊಂಡಾರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	18	0–13	ಕೃಷಿ	ವಸತಿ	
9	ಶ್ರೀ ಚಂದ್ರಾರೆಡ್ಡಿ ಬಿನ್ ಆವಲಪ್ಪ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	19/1	0–17	ಕೃಷಿ	ವಸತಿ	
10	ಶ್ರೀ ಉದಯಕುಮಾರ್ ಬಿನ್ ಎ. ವೆಂಕಟಸ್ವಾಮಿ ರೆಡ್ಡಿ, ಶ್ರೀ ಮನೋಜ್ ಕುಮಾರ್ ಬಿನ್ ಲೇ. ವೆಂಕಟೇಶ ನಾಯ್ಡು ಆರ್.ಜಿ.	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	32	1–10	ಕೃಷಿ	ವಸತಿ	
11	ಶ್ರೀ ಕೆ. ರಾಮಕೃಷ್ಣ ಬಿನ್ ಕೊಂಡಾರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	33/1	0–18	ಕೃಷಿ	ವಸತಿ	
12	ಶ್ರೀ ಆರ್. ಜಯ್ಯಪ್ಪ ಬಿನ್ ಲೇ. ರಾಮಯ್ಯ ಹೆಚ್.ಎಂ.	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	33/2	0–12.12	ಕೃಷಿ	ವಸತಿ	
13	ಶ್ರೀ ಕೃಷ್ಣಾರೆಡ್ಡಿ ಬಿನ್ ಲೇ. ವಿ. ರಾಮಾರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನಹಳ್ಳಿ	33/5	0–05.04	ಕೃಷಿ	ವಸತಿ	
14	ಶ್ರೀ ಕೆ. ನಾರಾಯಣ ಬಿನ್ ಕೊಂಡಾರೆಡ್ಡಿ ಮತ್ತು ಶ್ರೀ ಚಂದ್ರಪ್ಪ, ಕೃಷ್ಣಾರೆಡ್ಡಿ ಬಿನ್ ಲೇ. ಪಾಪರೆಡ್ಡಿ	ಆನೇಕಲ್	ಸರ್ಜಾಪುರ	ನಾಗೇನ ಅಗ್ರಹಾರ	6/1	1–03	ಕೃಷಿ	ವಸತಿ	
15	ಶ್ರೀ ವಾಸುದೇವ ಬಿನ್ ಎಲ್. ಲಕ್ಷ್ಮಯ್ಯ	ಆನೇಕಲ್	ಸರ್ಜಾಪುರ	ನಾಗೇನ ಅಗ್ರಹಾರ	6/2	0–18	ಕೃಷಿ	ವಸತಿ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರಕುತ್ತದೆ. ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ದೊರಕುತ್ತವೆ ಹಾಗೂ ಕಾನೂನುಬದ್ಧ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/4088/2022–23

ಮಲ್ಲೇಶ್ವರ: ಅಭಿವೃದ್ಧಿಯೋ ಜಾತಿ ಸಮೀಕರಣವೋ

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

● ಎಸ್. ರವಿಪ್ರಕಾಶ್

ಬೆಂಗಳೂರಿನ ಪ್ರತಿಷ್ಠಿತ ವಿಧಾನಸಭಾ ಕ್ಷೇತ್ರಗಳಲ್ಲಿ ಒಂದಾಗಿರುವ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ 'ಹ್ಯಾಟ್ರಿಕ್' ಗೆಲುವು ಸಾಧಿಸಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತೆ ಕಣಕ್ಕೆ ಇಳಿಯಲು ಭರ್ಜರಿ ತಯಾರಿ ನಡೆಸಿದ್ದಾರೆ. ಇದಕ್ಕೆ ಪೂರಕವಾಗಿ ಉದ್ಯೋಗ ಮೇಳ, ಕೌಶಲ ತರಬೇತಿ ಮೇಳಗಳನ್ನು ಹಮ್ಮಿಕೊಳ್ಳುತ್ತಲೇ ಬಂದಿದ್ದಾರೆ. ಯುವ ಸಮೂಹವನ್ನು ಸೆಳೆಯಲು ಪ್ರಯತ್ನ ನಡೆಸಿದ್ದಾರೆ.

ಕ್ಷೇತ್ರ ಸ್ಥಿತಿ–ಗತಿ


ಮಧ್ಯಮ ವರ್ಗದ ಜನರೇ ಅಧಿಕ ಸಂಖ್ಯೆಯಲ್ಲಿರುವ ಈ ಕ್ಷೇತ್ರದಲ್ಲಿ ತಮ್ಮ ಚೊಚ್ಚಲ ಚುನಾವಣೆಯಲ್ಲಿ (2004) ಸೋಲಿನ ಕಹಿ ಅನುಭವಿಸಿದ್ದರು. ಆ ಬಳಿಕ ಅವರು ಹಿಂತಿರುಗಿ ನೋಡಲಿಲ್ಲ. ಕಳೆದ ಮೂರೂ ವಿಧಾನಸಭಾ ಚುನಾವಣೆಗಳಲ್ಲಿ ಅಧಿಕ ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಹಾಗೆ ನೋಡಿದರೆ, ಅಶ್ವತ್ಥನಾರಾಯಣ ಅವರಿಗೆ ಪ್ರಬಲ ಸವಾಲೊಡ್ಡುವ ಹುರಿಯಾಳುಗಳು ಕಾಂಗ್ರೆಸ್, ಜೆಡಿಎಸ್‌ನಲ್ಲಿ ಕಾಣಿಸುತ್ತಿಲ್ಲ. ಮೂಲತಃ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಈ ಕ್ಷೇತ್ರವನ್ನು ಅಶ್ವತ್ಥನಾರಾಯಣ ಅವರು ತಮ್ಮ ಸುರಕ್ಷಿತ ಕ್ಷೇತ್ರವಾಗಿ ಮಾಡಿಕೊಂಡಿದ್ದಾರೆ.

ಹಿಂದೆ ಕಾಂಗ್ರೆಸ್‌ನ ಎಂ.ಆರ್.ಸೀತಾರಾಮ್ ಅವರು ಎರಡು ಬಾರಿ ಈ ಕ್ಷೇತ್ರದಲ್ಲಿ ಗೆದ್ದಿದ್ದರು. ಪರಂಪರಾಗತವಾಗಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ಸೇತರ ಪಕ್ಷಗಳೇ ಗೆಲುವು ಸಾಧಿಸುತ್ತಾ ಬಂದಿವೆ. ಹಿಂದಿನ ಚುನಾವಣೆಯಲ್ಲಿ, ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಮೊಮ್ಮಗ ಶ್ರೀಪಾದರೇಣು ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಕೊನೆಗಳಿಗೆಯಲ್ಲಿ ಟಿಕೆಟ್ ನೀಡಿದ್ದರಿಂದಾಗಿ ತಯಾರಿ ನಡೆಸಲು ಸಾಕಷ್ಟು ಸಮಯ ಸಿಕ್ಕಿರಲಿಲ್ಲ. ಈ ಬಾರಿ ಅವರೂ ಆಕಾಂಕ್ಷಿಯಾಗಿದ್ದಾರೆ. ಅಲ್ಲದೇ, ಈಸ್ಟ್‌ವೆಸ್ಟ್ ಸಮೂಹ ಸಂಸ್ಥೆಯ ರವಿಕಿರಣ್ ಅವರ ಪತ್ನಿ ರಶ್ಮಿರವಿಕಿರಣ್, ಕೆಪಿಸಿಸಿ ಪ್ರಧಾನಕಾರ್ಯದರ್ಶಿ ಶಫಿವುಲ್ಲಾ, ಮಾಜಿ ಮೇಯರ್ ಲಕ್ಕಣ್ಣ ಅವರ ಪುತ್ರ ಗಿರೀಶ್ ಲಕ್ಕಣ್ಣ ಅವರು ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾರೆ.

ಈ ಕ್ಷೇತ್ರದಲ್ಲಿ ಬಿಜೆಪಿಗೆ ಭದ್ರ ನೆಲೆ ಒದಗಿಸಲು ಒಂದು ಕಾಲದಲ್ಲಿ ಶ್ರಮ ಹಾಕಿದ್ದ ಪ್ರಕಾಶ್ ಅಯ್ಯಂಗಾರ್ ಅವರ ಹತ್ತಿರದ ಸಂಬಂಧಿ ಅನೂಪ್ ಅಯ್ಯಂಗಾರ್ ಈ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಅರ್ಜಿ ಹಾಕಿದ್ದಾರೆ. ಇದು ಕುತೂಹಲಕಾರಿ ಬೆಳವಣಿಗೆ.

ಅಭಿವೃದ್ಧಿ ಹೊಂದಿ ಕ್ಷೇತ್ರವಾಗಿರುವ ಇಲ್ಲಿ ಜಾತಿ ಸಮೀಕರಣವೇ ಗೆಲುವನ್ನು ನಿರ್ಧರಿಸುವ ಪ್ರಧಾನ ಅಂಶ. ಸಂಚಾರದಟ್ಟಣೆ, ರಸ್ತೆಯಲ್ಲಿ ವಾಹನ ನಿಲುಗಡೆ ಸಮಸ್ಯೆಯೂ ಈ ಕ್ಷೇತ್ರವನ್ನು ಕಾಡುತ್ತಿದೆ.

ಮಲ್ಲೇಶ್ವರ


ಅಶ್ವತ್ಥ ನಾರಾಯಣ
ಹಾಲಿ ಶಾಸಕ (ಬಿಜೆಪಿ)



ಹಾಲಿ ಮತದಾರರ ವಿವರ

1,08,812 ಪುರುಷರು
1,07,958 ಮಹಿಳೆಯರು
4 ಇತರರು
2,16,774 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	83,130	57,609	53,794
ಕಾಂಗ್ರೆಸ್	29,130	36,543	45,611
ಜೆಡಿಎಸ್	7,884	2,827	2,291

ಇದೇ 16ಕ್ಕೆ ಅಂಚೆ ಪರಂಪರೆ ಜಾಡು ನಡಿಗೆ

ಬೆಂಗಳೂರು: 'ಹೆರಿಟೇಜ್ ಬೇಕು' ಸಹಯೋಗದಲ್ಲಿ ಅಂಚೆ ಇಲಾಖೆ ಬೆಂಗಳೂರು ನಗರದಲ್ಲಿ ಜ.16ರಂದು ಅಂಚೆ ಪರಂಪರೆ ಜಾಡು ನಡಿಗೆ (ಪೋಸ್ಟಲ್ ಹೆರಿಟೇಜ್ ವಾಕಥಾನ್) ಆಯೋಜಿಸಿದೆ.

ಅಂದು ಮಧ್ಯಾಹ್ನ 3ಕ್ಕೆ ಮಿಲ್ಲರ್ಸ್ ರಸ್ತೆಯಿಂದ ಹೊರಟು ದೇಶದ ಅತ್ಯಂತ ಹಳೆಯ ಅಂಚೆ ಪೆಟ್ಟಿಗೆ ಇರುವ ತಾಜ್ ವೆಸ್ಟ್ ಎಂಡ್ ಹೋಟೆಲ್, ಅರಮನೆ ರಸ್ತೆಯ ಮುಖ್ಯ ಅಂಚೆ ಮಹಾನಿರ್ದೇಶಕರ ಕಚೇರಿ, ವಿಧಾನಸೌಧದ ಮುಂಭಾಗದ ರೋಸ್ ಗಾರ್ಡನ್ ಅಂಚೆಕಚೇರಿ, ಕಬ್ಬನ್‌ಪಾರ್ಕ್, ಸರ್ಕಾರಿ ವಸ್ತು ಸಂಗ್ರಹಾಲಯದ ಬಳಿ ನಡಿಗೆ ಕೊನೆಗೊಳ್ಳುತ್ತದೆ.

ನಂತರ ವಸ್ತು ಸಂಗ್ರಹಾಲಯ ರಸ್ತೆಯ ಅಂಚೆ ಕಚೇರಿ ಆವರಣದಲ್ಲಿ 'ಸಂಜೆ ಅಂಚೆ ಕಚೇರಿ' ಉದ್ಘಾಟನೆಯಾಗಲಿದೆ. ಮುಖ್ಯ ಅಂಚೆ ಮಹಾ ನಿರ್ದೇಶಕ ಎಸ್.ರಾಜೇಂದ್ರಕುಮಾರ್ ಅವರು ರಿಯಾಲಿಟಿ ಅಂಚೆ ಕಾರ್ಡ್‌ಗಳನ್ನು ಬಿಡುಗಡೆ ಮಾಡುವರು. ಅಂಚೆ ನಿರ್ದೇಶನಾಲಯದ ನಿವೃತ್ತ ಸದಸ್ಯ ಡಾ.ಚಾರ್ಲ್ಸ್ ಲೋಬೊ ಅವರು ರಚಿಸಿದ ಕೊಡಗಿನ ಅಂಚೆ ಕಚೇರಿ ಮತ್ತು ವಿಪತ್ತು ನಿರ್ವಹಣೆ ಕುರಿತ ಇ-ಪುಸ್ತಕ ಬಿಡುಗಡೆ ಮಾಡುವರು.

ತುಮಕೂರು ದೇವಾಲಯಗಳು ಕೃತಿ ಬಿಡುಗಡೆ

'ಮೌಲ್ಯಗಳ ಪುನರ್‌ಪ್ರತಿಷ್ಠಾಪನೆ ಆಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದಲ್ಲಿ ಕುಸಿಯುತ್ತಿರುವ ಮೌಲ್ಯಗಳನ್ನು ಪುನರ್‌ಪ್ರತಿಷ್ಠಾಪಿಸುವ ಕೇಂದ್ರಗಳಾಗಿ ದೇವಾಲಯಗಳು ಬಳಕೆಯಾಗಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಹೇಳಿದರು.

ನಗರದಲ್ಲಿ ಶುಕ್ರವಾರ ಉದಯ ಪ್ರಕಾಶನ ಹಮ್ಮಿಕೊಂಡಿದ್ದ ಕೆ.ಜಿ. ಲಕ್ಷ್ಮೀನಾರಾಯಣಪ್ಪ ಅವರ 'ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳು' ಸಂಶೋಧನಾ ಗ್ರಂಥ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮಂದಿರಗಳನ್ನು ವಿದೇಶಿಯರು ಕಲೆ, ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡುತ್ತಾರೆ. ಭಕ್ತಿ ಕೇಂದ್ರಗಳಿಗೆ ತೆರಳುವ ಭಾರತೀಯರು ಸಹ ಧಾರ್ಮಿಕ ಮನೋಭಾವನೆ ಇಟ್ಟುಕೊಳ್ಳುವುದಲ್ಲದೆ, ನಮ್ಮ ನೆಲದ ಸಂಸ್ಕೃತಿ, ಪರಂಪರೆ, ಜ್ಞಾನ ದಾಸೋಹದ ತಾಣಗಳಂತೆ ಅವನ್ನು ಕಾಣಬೇಕು. ದೇವಾಲಯಗಳಿಗೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ಬರುತ್ತಾರೆ. ಹಾಗಾಗಿ, ಅಲ್ಲೇ ನೈತಿಕ ಮೌಲ್ಯಗಳನ್ನು ರೂಢಿಸಬೇಕು ಎಂದರು.

ಶಾಲೆ, ಕಾಲೇಜುಗಳ ಪಠ್ಯಗಳಲ್ಲಿ ನೀತಿ ಶಾಸ್ತ್ರ ಅಳವಡಿಸಬೇಕು. ಬಾಲ್ಯದಿಂದಲೇ ನೈತಿಕ ಮೌಲ್ಯಗಳನ್ನು ಕಲಿಸಬೇಕು. ಪುಸ್ತಕ ಓದುವ ಹವ್ಯಾಸ ಬೆಳೆಸಬೇಕು. ಓದಿದ ಪುಸ್ತಕ ಕುರಿತು ಇತರರ ಜತೆ ಮಾಹಿತಿ ಹಂಚುವ ಪರಿಪಾಟ ಇರಬೇಕು. ನಶಿಸುತ್ತಿರುವ ಪುಸ್ತಕ ಸಂಸ್ಕೃತಿ ಉಳಿಸಬೇಕು ಎಂದು ಸಲಹೆ ನೀಡಿದರು.

ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್, ಸಂಶೋಧಕ ಎಂ.ಚಿದಾನಂದಮೂರ್ತಿ ಅವರ ಆಶಯದಂತೆ ಲಕ್ಷ್ಮೀನಾರಾಯಣಪ್ಪ ಅವರು ದೇಗುಲಗಳ ಕುರಿತು ಅತ್ಯುತ್ತಮ ಸಂಶೋಧನೆ ಮಾಡಿದ್ದಾರೆ. ಜೈನ, ಶೈವ, ವೀರಶೈವ ಪರಂಪರೆಯ ದೇಗುಲಗಳ ಮಾಹಿತಿ ಒಗ್ಗೂಡಿಸಿದ್ದಾರೆ ಎಂದು ಮಾಹಿತಿ ನೀಡಿದರು.

ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ತುಮಕೂರು ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ವೈ.ಎಸ್. ಸಿದ್ದೇಗೌಡ, ಹಿರಿಯ ಸಾಹಿತಿ ಅರಳುಮಲ್ಲಿಗೆ ಪಾರ್ಥಸಾರಥಿ, ಮಾಜಿ ಸಂಸದ ಕೆ.ಸಿ.ಕೊಂಡಯ್ಯ, ಕೇಂದ್ರ ತೆರಿಗೆ ಇಲಾಖೆ ಹೆಚ್ಚುವರಿ ಮಹಾನಿರ್ದೇಶಕ ನಾರಾಯಣಸ್ವಾಮಿ, ಉದಯ ಪ್ರಕಾಶನದ ಶೈಲಜಾ ಹೆಗಡೆ, ಸಂಶೋಧಕ ಕೆ.ಜಿ.ನಾರಾಯಣಪ್ಪ ಉಪಸ್ಥಿತರಿದ್ದರು.


ನಗರದಲ್ಲಿ ಶುಕ್ರವಾರ ಉದಯ ಪ್ರಕಾಶನ ಹಮ್ಮಿಕೊಂಡಿದ್ದ 'ತುಮಕೂರು ಜಿಲ್ಲೆಯ ಪ್ರಮುಖ ದೇವಾಲಯಗಳು' ಸಂಶೋಧನಾ ಗ್ರಂಥವನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಬಿಡುಗಡೆ ಮಾಡಿದರು. ಅರಳುಮಲ್ಲಿಗೆ ಪಾರ್ಥಸಾರಥಿ, ಕೆ.ಜಿ.ಲಕ್ಷ್ಮೀನಾರಾಯಣಪ್ಪ, ಎನ್‌ಕುಮಾರ್ ಇದ್ದರು. – ಪ್ರಜಾವಾಣಿ ಚಿತ್ರ.


ಮರಗಳ ಬುಡಕ್ಕೆ ಹಾಕಿರುವ ಡಾಂಬರು ತೆರವುಗೊಳಿಸಿ ನೀರುಣಿಸಿರುವುದು

ಮರದ ಸುತ್ತ ಕಾಂಕ್ರಿಟ್ ತೆರವು

ಪ್ರಜಾವಾಣಿ ವಾರ್ತೆ

ವರದಿ ಫಲಶ್ರುತಿ

ರಾಜರಾಜೇಶ್ವರಿನಗರ: ಉಲ್ಲಾಳು ವಾರ್ಡ್‌ನ ಡಿ.ದೇವರಾಜ ಅರಸು ಬಡಾವಣೆ ಹಾಗೂ ನಾಗದೇವನಹಳ್ಳಿಯ ಹಲವು ರಸ್ತೆಗಳಿಗೆ ಬಿಬಿಎಂಪಿ ಬೃಹತ್ ರಸ್ತೆ ಕಾಮಗಾರಿ ವಿಭಾಗದ ವತಿಯಿಂದ ಡಾಂಬರೀಕರಣ ನಡೆದಾಗ, ರಸ್ತೆ ಬದಿಯ ಮರಗಳ ಬುಡಕ್ಕೂ ಕಾಂಕ್ರಿಟ್ ಹಾಕಿದ್ದರು. ಬಿಬಿಎಂಪಿ ವಾರ್ಡ್‌ಮಟ್ಟದ ಕಾಮಗಾರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ರಾಜಣ್ಣ ಬೊಮ್ಮೇಗೌಡ ಅವರೇ ಮುಂದೆ ನಿಂತು ಮರಗಳ ಬುಡಕ್ಕೆ ಹಾಕಿದ ಡಾಂಬರು ತೆರವುಗೊಳಿಸಿದರು.

'ರಸ್ತೆಬದಿಯ ಮರಗಳ ಬುಡಕ್ಕೆ ಡಾಂಬರು' ಎಂಬ ಶೀರ್ಷಿಕೆಯ ವರದಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿತ್ತು.

ಎಂಜಿನಿಯರ್ ರಾಜಣ್ಣ ಬೊಮ್ಮೇಗೌಡ ಮಾತನಾಡಿ, 'ನಾಗರಿಕರಿಗೆ ಮೂಲಸೌಲಭ್ಯ ನೀಡುವ ಸಮಯದಲ್ಲಿ ಗುತ್ತಿಗೆದಾರರು ಮರಗಳ ಬುಡಕ್ಕೆ ಡಾಂಬರು ಹಾಕಬಾರದು. ಪರಿಸರ, ಉತ್ತಮ ಗಾಳಿ ಬೇಕು. ಪತ್ರಿಕೆಯಲ್ಲಿ ವರದಿ ನೋಡಿ ನಾನೇ ಖುದ್ದಾಗಿ ನಿಂತು ಮರಗಳ ಬುಡಕ್ಕೆ ಹಾಕಿರುವ ಡಾಂಬರು ತೆರವುಗೊಳಿಸಿ, ಬೇರು, ಕಾಂಡಗಳಿಗೆ ಮಳೆ ನೀರು ಸೇರುವಂತೆ ಮಾಡಿಸಿದೆ' ಎಂದರು.

ವಿದ್ಯಾರ್ಥಿನಿ ಸಿ.ವೇದ ಮಾತನಾಡಿ, 'ಅಭಿವೃದ್ಧಿ ಕಾಮಗಾರಿ ನೆಪದಲ್ಲಿ ಮರಗಳನ್ನು ಗುತ್ತಿಗೆದಾರರು, ಅಧಿಕಾರಿಗಳು ನಾಶ ಮಾಡಬಾರದು. ಬಿಬಿಎಂಪಿ ಬೃಹತ್ ಕಾಮಗಾರಿ ವಿಭಾಗದ ವತಿಯಿಂದ ನಡೆದಿರುವ ಕಾಮಗಾರಿಯಾಗಿದ್ದರೂ ತಮಗೆ ಸಂಬಂಧಪಡದಿದ್ದರೂ ವಾರ್ಡ್ ಮಟ್ಟದ ಎಂಜಿನಿಯರ್ ರಾಜಣ್ಣ ಬಿ. ಅವರು ಮರಗಳ ಬುಡದಲ್ಲಿದ್ದ ಡಾಂಬರು ತೆರಳುಗೊಳಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಎರಡು ತಿಂಗಳೊಳಗೆ ಅನಾವರಣ: ಮುಖ್ಯಮಂತ್ರಿ ಬೊಮ್ಮಾಯಿ

ಬಸವಣ್ಣ, ಕೆಂಪೇಗೌಡ ಪ್ರತಿಮೆ: ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಮುಂಭಾಗದಲ್ಲಿ ಜಗಜ್ಯೋತಿ ಬಸವೇಶ್ವರ ಮತ್ತು ನಾಡಪ್ರಭು ಕೆಂಪೇಗೌಡರ ಪ್ರತಿಮೆಗಳ ಸ್ಥಾಪನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಮತ್ತು ಸಂವಿಧಾನ ರಚನಾ ಸಮಿತಿ ಅಧ್ಯಕ್ಷರಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗಳು ವಿಧಾನಸೌಧದ ಮುಂಭಾಗದಲ್ಲಿವೆ. ಅವುಗಳ ಮಧ್ಯದಲ್ಲಿರುವ ಜಾಗದಲ್ಲಿ ಈ ಬಸವೇಶ್ವರ ಮತ್ತು ಕೆಂಪೇಗೌಡರ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತಿದೆ.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ, ಚಿತ್ರದುರ್ಗ ಮಾದಾರ ಚೆನ್ನಯ್ಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ ಉಪಸ್ಥಿತಿಯಲ್ಲಿ ಪ್ರತಿಮೆಗಳ ಸ್ಥಾಪನೆಗೆ ಭೂಮಿಪೂಜೆ ನೆರವೇರಿತು.

ಸಚಿವರಾದ ಆರ್. ಅಶೋಕ, ಸಿ.ಸಿ. ಪಾಟೀಲ, ಗೋವಿಂದ ಕಾರಜೋಳ, ಕೆ. ಗೋಪಾಲಯ್ಯ, ಎಸ್.ಟಿ. ಸೋಮಶೇಖರ್, ಮುನಿರತ್ನ, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಸಿ.ಟಿ. ರವಿ, ಎಂ. ಕೃಷ್ಣಪ್ಪ (ಬೆಂಗಳೂರು ದಕ್ಷಿಣ), ರಿಜ್ವಾನ್ ಅರ್ಷದ್ ಉಪಸ್ಥಿತರಿದ್ದರು.

ಎರಡು ತಿಂಗಳೊಳಗೆ ಅನಾವರಣ: ಭೂಮಿಪೂಜೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ಬಸವಣ್ಣನವರ ಆಧ್ಯಾತ್ಮಿಕ ಚಿಂತನೆಗಳು ಮತ್ತು ಕೆಂಪೇಗೌಡರ ಆಡಳಿತಕ್ಕೆ ಸಂಬಂಧಿಸಿದ ತತ್ವಗಳನ್ನು ನಾಡಿನ ಉದ್ದಗಲಕ್ಕೆ ತಲುಪಿಸಬೇಕಿದೆ. ಅದಕ್ಕೆ ಪೂರಕವಾಗಿ ಈ ಇಬ್ಬರೂ ಮಹನೀಯರ ಪ್ರತಿಮೆಗಳನ್ನು ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸುತ್ತಿದ್ದೇವೆ. ಕರ್ನಾಟಕವು ಸಮಗ್ರವಾಗಿ ಅಭಿವೃದ್ಧಿ ಹೊಂದಿದ, ಸಾಮರಸ್ಯವಿರುವ, ಶ್ರೇಷ್ಠ ರಾಜ್ಯವಾಗುವುದಕ್ಕೆ ಈ ಇಬ್ಬರೂ ಮಹನೀಯರು ಪ್ರೇರಣೆಯಾಗಬೇಕು' ಎಂದರು.

ಇಬ್ಬರು ಕೂಡ ನಾಡು ಕಟ್ಟಿದ ಮಹನೀಯರು. ಕಂದಾಯ ಸಚಿವ ಆರ್. ಅಶೋಕ ನೇತೃತ್ವದ ಉಪ ಸಮಿತಿಯು ಪ್ರತಿಮೆ ಸ್ಥಾಪನೆಯ ಕೆಲಸಗಳನ್ನು ವೇಗವಾಗಿ ಮಾಡುತ್ತಿದೆ. ಎರಡು ತಿಂಗಳೊಳಗೆ ಈ ಪ್ರತಿಮೆಗಳನ್ನು ಅನಾವರಣಗೊಳಿಸುವ ಗುರಿ ಇದೆ ಎಂದು ತಿಳಿಸಿದರು.


ವಿಧಾನಸಧದ ಮುಂಭಾಗದಲ್ಲಿ ಜಗಜ್ಯೋತಿ ಬಸವೇಶ್ವರ ಮತ್ತು ನಾಡಪ್ರಭು ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕಾಗಿ ಶುಕ್ರವಾರ ನಡೆದ ಭೂಮಿಪೂಜೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಬಿ.ಎಸ್. ಯಡಿಯೂರಪ್ಪ ಹಾಲು ಅರ್ಪಿಸಿದರು. ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಮಾದಾರ ಚೆನ್ನಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ ಹಾಗೂ ಸಚಿವ ಆರ್. ಅಶೋಕ ಇದ್ದರು

ಆಕ್ಷೇಪಾರ್ಹ ಹೇಳಿಕೆ: ಕೆಜಿಎಫ್ ಬಾಬುಗೆ ಕೋರ್ಟ್ ನಿರ್ಬಂಧ

ಬೆಂಗಳೂರು: ಯೂಸುಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಅವರು, ಮಾಜಿ ಶಾಸಕ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಆರ್.ವಿ. ದೇವರಾಜ್ ವಿರುದ್ಧ ಯಾವುದೇ ತೆರನಾದ ಹೇಳಿಕೆ ನೀಡದಂತೆ ಸಿಟಿ ಸಿವಿಲ್ ಕೋರ್ಟ್‌ನ ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ಆರ್.ವಿ. ದೇವರಾಜ್ ಸಲ್ಲಿಸಿರುವ ಅಸಲು ದಾವೆ ವಿಚಾರಣೆ ನಡೆಸಿದ 39ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶ ಯಶವಂತ್ ಈ ಕುರಿತಂತೆ ಆದೇಶಿಸಿದ್ದು, 'ಮುಂದಿನ ವಿಚಾರಣೆಯವರೆಗೆ ಈ ಏಕಪಕ್ಷೀಯ ತಾತ್ಕಾಲಿಕ ಪ್ರತಿಬಂಧಕ ಆದೇಶ ಜಾರಿಯಲ್ಲಿರುತ್ತದೆ' ಎಂದು ಸೂಚಿಸಿದೆ.

ವಿಚಾರಣೆ ವೇಳೆ ದೇವರಾಜ್ ಪರ ವಾದ ಮಂಡಿಸಿದ ಹೈಕೋರ್ಟ್ ವಕೀಲ ಎಚ್.ಸುನಿಲ್ ಕುಮಾರ್, 'ಕೆಜಿಎಫ್ ಬಾಬು ಅವರು ದೇವರಾಜ್ ವಿರುದ್ಧ ಖಾಸಗಿ ಟಿವಿ ಚಾನೆಲ್‌ಗಳಿಗೆ ನೀಡಿರುವ ಸಂದರ್ಶನಗಳಲ್ಲಿ ಅವರು ಆಕ್ಷೇಪಾರ್ಹ ಪದಗಳನ್ನು ಬಳಕೆ ಮಾಡಿದ್ದು, ಇದರ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಲಭ್ಯವಿದೆ. ಇಂತಹ ಆಧಾರರಹಿತ ಹೇಳಿಕೆಗಳಿಂದ ದೇವರಾಜ್ ಅವರ ರಾಜಕೀಯ ಬದುಕು ಮತ್ತು ಗೌರವಕ್ಕೆ ಹಾನಿಯಾಗುತ್ತಿದೆ. ಆದ್ದರಿಂದ, ಇದನ್ನು ಪ್ರತಿಬಂಧಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು, ಪ್ರತಿವಾದಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿದ್ದಾರೆ.

ದಾವೆಯಲ್ಲಿ ಏನಿದೆ?: 'ದೇವರಾಜ್ ಅವರನ್ನು ಕೆಜಿಎಫ್ ಬಾಬು ಕಳ್ಳ, ಗೂಂಡಾ, ಮಾರ್ಕೆಟ್ ದೇವಿ, ತರಕಾರಿ ಮಾರುವವರಿಂದ, ಬಿಲ್ಡರ್ಸ್‌ಗಳಿಂದ ಮಾಮೂಲಿ ವಸೂಲಿ ಮಾಡುತ್ತಿದ್ದಾರೆ. ಈತ ಈಡಿಯಟ್, ನೀಚ ವ್ಯಕ್ತಿ, ಭಯೋತ್ಪಾದಕ, ಆರೋಗ್ಯ ಕೆಟ್ಟಿದ್ದು, ಅವರನ್ನು ಹಿಡಿದು ಎತ್ತಲು ಇಬ್ಬರು ಬೇಕು. ಎಂಎಲ್‌ಎ ಆಗಲು ನಾಲಾಯಕ್, ಕೆಲಸಕ್ಕೆ ಬಾರದ ವ್ಯಕ್ತಿ, ಅವರಿಗೆ ಮತ ಹಾಕಬಾರದು... ಇತ್ಯಾದಿ ಅವಮಾನಕಾರಿ ಪದಗಳನ್ನು ಬಳಕೆ ಮಾಡುತ್ತಿದ್ದಾರೆ' ಎಂದು ಆಕ್ಷೇಪಿಸಲಾಗಿದೆ.

ದಾಖಲೆಯಿಲ್ಲದ ₹10 ಲಕ್ಷ ವಶ

ಆನೇಕಲ್: ತಾಲ್ಲೂಕಿನ ಹುಸ್ಕೂರು ಬಳಿಯ ನಿರ್ಜನ ಪ್ರದೇಶದಲ್ಲಿ ಕಾರೊಂದರಲ್ಲಿ ದಾಖಲೆ ಇಲ್ಲದ ₹10ಲಕ್ಷ ಹೊಂದಿದ್ದ ಇಬ್ಬರನ್ನು ಹೆಬ್ಬಗೋಡಿ ಪೊಲೀಸರು ಶುಕ್ರವಾರ ಬಂಧಿಸಿ, ಹಣವನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಹುಸ್ಕೂರು ಗ್ರಾ.ಪಂ. ಬಿಲ್ ಕಲೆಕ್ಟರ್ ಮಲ್ಲೇಶ್ ಮತ್ತು ನೆಲಮಂಗಲದ ರಾಜೇಶ್ ಬಂಧಿತರು. ಕಾರಿನಲ್ಲಿ ಇಬ್ಬರೂ ಹಣ ಎಣಿಸುತ್ತಿದ್ದರು. ರೌಂಡ್ಸ್‌ನಲ್ಲಿದ್ದ ಪೊಲೀಸರು ಅನುಮಾನಗೊಂಡು ಪರಿಶೀಲನೆ ನಡೆಸಿ ಹಣದ ಬಗ್ಗೆ ವಿಚಾರಿಸಿದಾಗ ದಾಖಲೆ ನೀಡದ ಹಿನ್ನೆಲೆಯಲ್ಲಿ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.

ಚಿತ್ರಾವಳಿ


ಕೆ.ಆರ್‌ಪುರದ ಶ್ರೀವೆಂಕಟೇಶ್ವರ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಂಸ್ಥೆಯ ಪದವಿಪೂರ್ವ ಹಾಗೂ ಪದವಿ ಕಾಲೇಜು ವಿದ್ಯಾರ್ಥಿಗಳ ನಿವೃತ್ತ ತಹಶಿಲ್ದಾರ್ ನಾರಾಯಣಸ್ವಾಮಿ ಅವರು ವಿದ್ಯಾರ್ಥಿಗಳಿಗೆ ಚೆಕ್ ವಿತರಿಸಿದರು. ಉದ್ಯಮಿ ವೆಂಕಟೇಶ್ ಬಾಬು, ಶ್ರೀವೆಂಕಟೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷ ಡಾ.ಕೆ.ವಿ.ಮುನಿಸ್ವಾಮಿ, ನಿರ್ದೇಶಕ ಪ್ರೊ ವಿ.ಎಂ.ರವಿ, ಪುಟ್ಟರಾಜು, ಪ್ರಾಂಶುಪಾಲ ಡಾ. ಜಿ.ಇ.ಪ್ರಕಾಶ್, ಚಂದ್ರಯ್ಯ, ಗೀತಾಂಜಲಿ, ರಮೇಶ್, ಮಂಜುನಾಥ್ ಇದ್ದರು.



ಪೀಣ್ಯ ದಾಸರಹಳ್ಳಿ ಸಮೀಪದ ಮಲ್ಲಸಂದ್ರದ ಪೈಪ್‌ಲೈನ್ ರಸ್ತೆಯ ಕೆಂಪೇಗೌಡ ವೃತ್ತದಲ್ಲಿ ಆಯೋಜಿಸಿದ್ದ ಬಾಲಗಂಗಾಧರನಾಥ ಸ್ವಾಮೀಜಿ ಅವರ ಪುಣ್ಯಸ್ಮರಣೆಯಲ್ಲಿ ಮಾಜಿ ಶಾಸಕ ಎಸ್‌ಮುನಿರಾಜು, ಮುಖಂಡರಾದ ಜಿ.ಎಲ್‌ ನಂಜಪ್ಪ, ಎನ್‌ ಲೋಕೇಶ್‌ ರವಿ ಎಂ.ಎಸ್‌ ಗೌಡ, ಗಂಗರಾಜು, ನರಸಿಂಹ ನಾಯಕ, ಗಿರೀಶ್‌ ಬಲರಾಮ್‌ ಲೇಖಕ ವೈಬಿಎಚ್ ಜಯದೇವ್‌ ದೀಪಕ್‌ ತಿಮ್ಮೇಗೌಡ ಭಾಗವಹಿಸಿದ್ದರು.



ವಚನಜ್ಯೋತಿ ಬಳಗವು ನಗರದಲ್ಲಿ ಆಯೋಜಿಸಿದ್ದ 'ಮಕ್ಕಳ ವಚನ ಮೇಳ'ದಲ್ಲಿ ಬಸವಣ್ಣ ಅವರ ವೇಷಭೂಷಣದೊಂದಿಗೆ ಮಕ್ಕಳು ಪ್ರವಚನ ನೀಡಿದರು.

ಅಭಿವೃದ್ಧಿಶೀಲ ರಾಷ್ಟ್ರಗಳ ನೆರವಿಗೆ 'ಆರೋಗ್ಯ ಮೈತ್ರಿ'

ನವದೆಹಲಿ: ನೈಸರ್ಗಿಕ ವಿಕೋಪಗಳು ಅಥವಾ ಮಾನವೀಯ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಭಾರತವು ಅಗತ್ಯ ವೈದ್ಯಕೀಯ ನೆರವು ಒದಗಿಸುವ 'ಆರೋಗ್ಯ ಮೈತ್ರಿ' ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಘೋಷಿಸಿದ್ದಾರೆ.

ಈ ದೇಶಗಳ ಸಮಸ್ಯೆಗಳ ಪರಿಹಾರಕ್ಕಾಗಿ 'ಉತ್ಕೃಷ್ಟತಾ ಕೇಂದ್ರ'ವನ್ನೂ ಸ್ಥಾಪಿಸಲಾಗುವುದು ಎಂದೂ ಹೇಳಿದ್ದಾರೆ.

'ವಾಯ್ಸ್ ಆಫ್ ಗ್ಲೋಬಲ್ ಸೌತ್ ವರ್ಚುವಲ್' ಶೃಂಗಸಭೆಯ ಮುಕ್ತಾಯದ ಅಧಿವೇಶನದಲ್ಲಿ ಮಾತನಾಡಿದ ಅವರು, 'ಭಾರತವು ತನ್ನ ಪರಿಣತಿಯನ್ನು ಇತರ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಹಂಚಿಕೊಳ್ಳಲು 'ವಿಜ್ಞಾನ ಮತ್ತು ತಂತ್ರಜ್ಞಾನ ಉಪಕ್ರಮ'ವನ್ನು ಪ್ರಾರಂಭಿಸುತ್ತದೆ ಎಂದು ಹೇಳಿದ್ದಾರೆ.

'ಅಭಿವೃದ್ಧಿಶೀಲ ರಾಷ್ಟ್ರಗಳ ವಿದ್ಯಾರ್ಥಿಗಳು ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ 'ಗ್ಲೋಬಲ್ ಸೌತ್ ಸ್ಕಾಲರ್‌ಶಿಪ್' ಅನ್ನೂ ಸ್ಥಾಪಿಸಲಾಗುವುದು ಎಂದು ಮೋದಿ ಇದೇ ಸಂದರ್ಭದಲ್ಲಿ ಪ್ರಕಟಿಸಿದ್ದಾರೆ.

ಕೃಷ್ಣಾ ಜಲವಿವಾದ: ಹಿಂದಿನ ಪೀಠದಿಂದಲೇ ವಿಚಾರಣೆ

ನವದೆಹಲಿ: ಕೃಷ್ಣಾ ಜಲವಿವಾದ ನ್ಯಾಯಮಂಡಳಿ-2ರ (ಕೆಡಬ್ಲ್ಯೂಡಿಟಿ) ಅಂತಿಮ ತೀರ್ಪಿನ ಅಧಿಸೂಚನೆಗೆ ಸಂಬಂಧಿಸಿ ಈ ಹಿಂದೆ ವಿಚಾರಣೆ ನಡೆಸಿದ್ದ ನ್ಯಾಯಪೀಠವೇ ಜನವರಿ 20ರಿಂದ ವಿಚಾರಣೆ ಮುಂದುವರಿಸುವಂತೆ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಅರ್ಜಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿಗೆ ನೀಡಿದೆ.

ಕರ್ನಾಟಕದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹಿರಿಯ ವಕೀಲರಾದ ಶ್ಯಾಮ್ ದಿವಾನ್ ಮತ್ತು ಮೋಹನ್ ಕಾತರಕಿ ಅವರು, ಹಿಂದೆ ವಿಚಾರಣೆ ನಡೆಸಿದ್ದ ಪೀಠವೇ ವಿಚಾರಣೆ ಮುಂದುವರಿಸುವ ಅಗತ್ಯದ ಬಗ್ಗೆ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠಕ್ಕೆ ಮನವರಿಕೆ ಮಾಡಿದರು.

21ರಿಂದ ವಿಜ್ಞಾನ ಹಬ್ಬ

ಬೆಂಗಳೂರು: 'ಅಂತರರಾಷ್ಟ್ರೀಯ ವಿಜ್ಞಾನ ಹಬ್ಬವನ್ನು ಭೋಪಾಲ್‌ನಲ್ಲಿ ಇದೇ 21ರಿಂದ 24ರವರೆಗೆ ಹಮ್ಮಿಕೊಳ್ಳಲಾಗಿದೆ. 'ಒಂದು ಭೂಮಿ, ಒಂದು ಕುಟುಂಬ, ಒಂದೇ ಭವಿಷ್ಯ' ಈ ವರ್ಷದ ಘೋಷವಾಕ್ಯವಾಗಿದೆ' ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಎ.ಎಂ. ರಮೇಶ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ವಿಜ್ಞಾನ ಹಬ್ಬವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು ವಿವಿಧ ಇಲಾಖೆ ಹಾಗೂ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸುತ್ತಿದೆ. ದೇಶ-ವಿದೇಶದ ವಿಜ್ಞಾನಿಗಳು, ತಂತ್ರಜ್ಞರು, ನೀತಿ ನಿರೂಪಕರು, ಕುಶಲಕರ್ಮಿಗಳು, ನವೋದ್ಯಮಿಗಳು, ರೈತರು, ಸಂಶೋಧಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. 'ವಿಜ್ಞಾನ, ತಂತ್ರಜ್ಞಾನ ಹಾಗೂ ಆವಿಷ್ಕಾರಗಳ ನಡಿಗೆ ಅಮೃತಕಾಲದೆಡೆಗೆ' ಎಂಬ ವಿಷಯದ ಮೇಲೆ ವಿಜ್ಞಾನದ ಹಬ್ಬ ನಡೆಯಲಿದೆ. ವಿಜ್ಞಾನಕ್ಕೆ ಸಂಬಂಧಿಸಿದ ಚಲನಚಿತ್ರಗಳ ಪ್ರದರ್ಶನಗಳನ್ನೂ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

'ಹಬ್ಬದಲ್ಲಿ 1,500 ಯುವ ವಿಜ್ಞಾನಿಗಳು ಪಾಲ್ಗೊಳ್ಳಲಿದ್ದಾರೆ. ಭಾರತದ ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳನ್ನು ಅನಾವರಣ ಮಾಡುವ ವಿಜ್ಞಾನ ವಸ್ತು ಪ್ರದರ್ಶನವೂ ನಡೆಯಲಿದೆ. ವಿದ್ಯಾರ್ಥಿಗಳು ರೂಪಿಸುವ ವಿಜ್ಞಾನ ಗ್ರಾಮವು ಹಬ್ಬದ ಆಕರ್ಷಣೆ ಆಗಿರಲಿದೆ. ವಿಜ್ಞಾನ ಸಾಹಿತ್ಯಕ್ಕೆ ವೇದಿಕೆ ಒದಗಿಸಲು 'ವಿಜ್ಞಾನಿಕಾ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು. ವಿಜ್ಞಾನಿ ಕಿಂಕಣಿ ದಾಸ್ ಗುಪ್ತಾ, 'ವಿಜ್ಞಾನದ ಮಹತ್ವವನ್ನು ಸಾರುವುದು ಹಾಗೂ ಈ ಕ್ಷೇತ್ರದ ಇತ್ತೀಚಿನ ಆವಿಷ್ಕಾರಗಳ ಬಗ್ಗೆ ತಿಳಿಯುವುದು ಈ ಹಬ್ಬದ ಉದ್ದೇಶವಾಗಿದೆ. ವಿಜ್ಞಾನಿಗಳ ಸಮ್ಮುಖದಲ್ಲಿ ಚರ್ಚೆಗಳನ್ನೂ ನಡೆಸಲಾಗುತ್ತದೆ. 2015ರಲ್ಲಿ ಈ ಹಬ್ಬ ಪ್ರಾರಂಭವಾಗಿದ್ದು, ಇದು 8ನೇ ಆವೃತ್ತಿಯಾಗಿದೆ' ಎಂದು ಹೇಳಿದರು.

ವಿಜ್ಞಾನ ಬರಹಗಾರ ಕೊಳ್ಳೇಗಾಲ ಶರ್ಮ ಇದ್ದರು.

ಗುರು ಸಿದ್ಧರಾಮೇಶ್ವರರ ಜಯಂತಿ ಮಹೋತ್ಸವ ಇಂದಿನಿಂದ

ಬೆಂಗಳೂರು: ನೊಳಂಬ ಲಿಂಗಾಯತ ಸಂಘವು ಗುರು ಸಿದ್ಧರಾಮೇಶ್ವರರ 850ನೇ ಜಯಂತಿ ಮಹೋತ್ಸವವನ್ನು ತುಮಕೂರಿನ ಸಿದ್ಧರಾಮೇಶ್ವರ ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಇದೇ ಶನಿವಾರ ಹಾಗೂ ಭಾನುವಾರ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, 'ಗುರುಪರದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ಜಯಂತಿ ಮಹೋತ್ಸವ ನಡೆಯಲಿದೆ. ರಾಜ್ಯ ಮಟ್ಟದ ಕೃಷಿ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನವನ್ನೂ ಹಮ್ಮಿಕೊಳ್ಳಲಾಗಿದೆ. 12ನೇ ಶತಮಾನದಲ್ಲಿ ಜಾತಿ, ಮತ, ಪಂಥಗಳನ್ನು ಮೀರಿ, ಕಲ್ಯಾಣ ರಾಜ್ಯದ ಪರಿಕಲ್ಪನೆ ನೀಡಿದ ಬಸವಾದಿ ಶರಣರಲ್ಲಿ ಅಗ್ರಗಣ್ಯರಾಗಿ ಸಿದ್ಧರಾಮೇಶ್ವರರು ನಿಲ್ಲುತ್ತಾರೆ. ಅವರ ಜಯಂತ್ಯುತ್ಸವವನ್ನು ತಿಪಟೂರಿನಲ್ಲಿ ಈ ವರ್ಷ ಆಚರಿಸಲಾಗುತ್ತಿದೆ. ಅವರ ಸಂದೇಶಗಳನ್ನು ಜಗತ್ತಿಗೆ ಸಾರಲು ಈ ಜಯಂತಿ ಮಹೋತ್ಸವ ಸಹಕಾರಿ' ಎಂದುಹೇಳಿದರು.


ಬಿ.ಸಿ.ನಾಗೇಶ್

ಸಂಸದ ಜಿ.ಎಸ್. ಬಸವರಾಜು, 'ಸಿರಿಗೆರೆಯ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಚಿಕ್ಕನಾಯಕನ ಹಳ್ಳಿಯ ಮೃತ್ಯುಂಜಯ ದೇಶಿಕೇಂದ್ರ ಸ್ವಾಮೀಜಿ ಅವರು ಸಮಾರಂಭದ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಬಿ.ಎಸ್. ಯಡಿಯೂರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ' ಎಂದರು.

'ಶನಿವಾರ ಮಧ್ಯಾಹ್ನ 1.30ಕ್ಕೆ ಕೃಷಿ ಗೋಷ್ಠಿ, 2.30ಕ್ಕೆ ಸಿದ್ಧರಾಮ ಸಾಹಿತ್ಯ ಗೋಷ್ಠಿ, ಸಂಜೆ 6.30ಕ್ಕೆ ಅಭಿನಂದನಾ ಸಮಾರಂಭ ಹಾಗೂ ಜಾನಪದ ಸಂಗೀತ ರಸಸಂಜೆ ಕಾರ್ಯಕ್ರಮ ನಡೆಯಲಿದೆ. ಭಾನುವಾರ ಬೆಳಿಗ್ಗೆ 11 ಗಂಟೆಗೆ 'ನೊಳಂಬ ಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ, ಮಧ್ಯಾಹ್ನ 1.30ಕ್ಕೆ ಮಹಿಳಾ ಗೋಷ್ಠಿ ನಡೆಯಲಿದೆ' ಎಂದರು.

ಚುನಾವಣೆ ಪೂರ್ವ ಸಿದ್ಧತೆ ಸಭೆ

ಬೆಂಗಳೂರು: ಸೂಕ್ಷ್ಮ ಪ್ರದೇಶಗಳ ಮ್ಯಾಪಿಂಗ್‌ಗಾಗಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಸಹಾಯಕ ಚುನಾವಣಾಧಿಕಾರಿ ಹಾಗೂ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಲು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಸಾರ್ವತ್ರಿಕ ವಿಧಾನಸಭಾ ಚುನಾವಣೆ- 2023ರ ಪೂರ್ವ ಸಿದ್ಧತೆ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ಆದೇಶಿಸಿದರು.

ಕಾನೂನು, ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪಾಲಿಕೆ, ಇಲಾಖೆ ತೆಗೆದುಕೊಳ್ಳಬೇಕಾದ ಕ್ರಮ, ಸೂಕ್ಷ್ಮ ವಿಧಾನಸಭಾ ಕ್ಷೇತ್ರ ಹಾಗೂ ಸೂಕ್ಷ್ಮ ಮತಗಟ್ಟೆಗಳ ಬಗ್ಗೆ ಚರ್ಚಿಸಲಾಯಿತು. ಚುನಾವಣಾ ವಿಭಾಗದ ವಿಶೇಷ ಆಯುಕ್ತರಾದ ಉಜ್ವಲ್ ಕುಮಾರ್ ಘೋಷ್, ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳಾದ ದಯಾ ನಂದ್ (ಬೆಂಗಳೂರು ನಗರ), ಡಾ. ಹರೀಶ್ ಕುಮಾರ್ (ಕೇಂದ್ರ), ವೆಂಕಟಾ ಚಲಪತಿ (ಉತ್ತರ), ಜಗದೀಶ್ ನಾಯ್ಕ್ (ದಕ್ಷಿಣ), ಜಂಟಿ ಪೊಲೀಸ್ ಆಯುಕ್ತ ಶರಣಪ್ಪ ಇದ್ದರು.

ನಗರದಲ್ಲಿ ಇಂದು

ಸಿರಿಧಾನ್ಯ ವಾಕಥಾನ್: ಸಿರಿಧಾನ್ಯದ ಬಗ್ಗೆ ಜಾಗೃತಿ, ಆಯೋಜನೆ: ಕೃಷಿ ಇಲಾಖೆ, ಸ್ಥಳ: ಕಬ್ಬನ್ ಉದ್ಯಾನ, ಬೆಳಿಗ್ಗೆ 5.30

ಮಕರ ಸಂಕ್ರಾಂತಿ ಹಬ್ಬ ಆಚರಣೆ ಹಾಗೂ ಕ್ಯಾಲೆಂಡರ್ ಬಿಡುಗಡೆ: ರಾಜೇಂದ್ರ ಕುಮಾರ್ ಕಟಾರಿಯಾ, ಸೋನಿಕಾ ಗೌಡ, ಉಪಸ್ಥಿತಿ: ಬಾಲಕೃಷ್ಣ, ರೇಖಾ ಸತೀಶ್, ಗೌತಮ್ ಕುಮಾರ್, ಆಯೋಜನೆ: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ಸಿ. ಅಶ್ವತ್ಥ 83, ಕನ್ನಡವೇ ಸತ್ಯ: ಉದ್ಘಾಟನೆ: ಎಚ್.ಎಸ್. ವೆಂಕಟೇಶಮೂರ್ತಿ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಟಿ.ಎಸ್. ನಾಗಾಭರಣ, ಆಯೋಜನೆ: ಭಾವರೂಪಕ ಪ್ರತಿಷ್ಠಾನ ಟ್ರಸ್ಟ್, ಸ್ಥಳ: ಎಬಿಸಿಡಿ ಆಟದ ಮೈದಾನ, ಪ್ರಮೀಳಾ ಬಾಯಿ ಶಾಲೆ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 10


ಯಶಸ್ವಿನಿ ಜೋಶಿ


ಉಪನ್ಯಾಸ-ಯಕ್ಷಗಾನ ನೃತ್ಯ-ಭರತನಾಟ್ಯ ಕಾರ್ಯಕ್ರಮ: ಉಪನ್ಯಾಸ: ಲಕ್ಷ್ಮೀಕಾಂತ ಹೆಗಡೆ, ಯಕ್ಷಗಾನ ನೃತ್ಯ: ಸ್ವಾತಿ ಎಸ್. ಪಂಡಿತ್, ಭರತನಾಟ್ಯ: ಯಶಸ್ವಿನಿ ಜೋಶಿ, ಆಯೋಜನೆ ಹಾಗೂ ಸ್ಥಳ: ಬೆಳ್ಳಿ ಭವನ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸಂಘ, ಆನಂದರಾವ್ ವೃತ್ತದ ಸಮೀಪ, ಬೆಳಿಗ್ಗೆ 10

ಕರಕುಶಲ ವಸ್ತುಗಳ ಪ್ರದರ್ಶನ: ಆಯೋಜನೆ: ಚರಕ ವುಮೆನ್ಸ್ ಮಲ್ಟಿಪರ್ಪಸ್ ಇಂಡಸ್ಟ್ರಿಯಲ್ ಕೋ–ಆಪರೇಟಿವ್ ಸೊಸೈಟಿ, ದೇಸಿ ಟ್ರಸ್ಟ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ರೂಪಾ ಜಿ.ಎಂ. ಅವರ 'ಮನದ ಚಿಪ್ಪಲಿ ಬಿರಿದ ಮುತ್ತುಗಳು' ಕೃತಿ ಲೋಕಾರ್ಪಣೆ: ನಾಗೇಂದ್ರ ಪ್ರಸಾದ್, ಕಾರ್ಯಕ್ರಮ ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಜಾಣಗೆರೆ ವೆಂಕಟರಾಮಯ್ಯ, ಆಯೋಜನೆ: ಸೃಷ್ಟಿ ಪಬ್ಲಿಕೇಷನ್ಸ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 10


ವಿ. ನಾಗೇಂದ್ರ ಪ್ರಸಾದ್

'ಗಂಧರ್ವಗಾನ' ಪುಸ್ತಕ ಬಿಡುಗಡೆ: ರಾಘವೇಂದ್ರ ರಾಜ್‌ಕುಮಾರ್, ಅಧ್ಯಕ್ಷತೆ: ದೊಡ್ಡರಂಗೇಗೌಡ, ಅತಿಥಿಗಳು: ವಿ. ಮನೋಹರ್, ಪುಸ್ತಕದ ಬಗ್ಗೆ ಮಾತು: ಮಂಜುನಾಥ ಅಜ್ಜಂಪುರ, ಉಪಸ್ಥಿತಿ: ಬೀ.ಸಿ. ಜಗನ್ನಾಥ ಜೋಯಿಸ್, ಆಯೋಜನೆ: ಚಿತ್ತ ಪ್ರಕಾಶನ, ಸ್ಥಳ: ಯುವಕ ಸಂಘ, ಯುವಪಥ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 10.30


ರಾಘವೇಂದ್ರ ರಾಜ್‌ಕುಮಾರ್

ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್‌ಎಸ್‌ಎಸ್ ಚಟುವಟಿಕೆ ಉದ್ಘಾಟನೆ: ಮುಖ್ಯ ಅತಿಥಿಗಳು: ಟಿ.ಎಂ. ಸತೀಶ್, ಎಚ್. ಪ್ರಕಾಶ್, ಅಧ್ಯಕ್ಷತೆ: ಬಿ.ಸಿ. ಶಿವಲಿಂಗೇಗೌಡ, ಆಯೋಜನೆ ಹಾಗೂ ಸ್ಥಳ: ಬಿಇಎಸ್ ಕಾಲೇಜು, ಜಯನಗರ, ಬೆಳಿಗ್ಗೆ 11

ಸ್ವರ ಸಾಮ್ರಾಟ್ ಉತ್ಸವ: ಗಾಯನ: ಪಂ.ವೆಂಕಟೇಶ ಕುಮಾರ್, ತಬಲಾ: ಪಂ. ರವೀಂದ್ರ ಯಾವಗಲ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ಜುಗಲ್‌ಬಂದಿ: ಪುರ್ಬಯನ್ ಚಟರ್ಜಿ, ಶಶಾಂಕ್ ಸುಬ್ರಮಣ್ಯಂ, ಓಜಸ್ ಅಧಿಯಾ, ಪರುಪಳ್ಳಿ ಫಲ್ಗುಣ್, ಅಭಿಷೇಕ್ ರಘುರಾಮ್, ಸೌಗತ್ ರಾಯ್ ಚೌಧರಿ, ಇಂದ್ರನೀಲ್ ಮಲ್ಲಿಕ್, ಆಯೋಜನೆ: ಶ್ರೀ ರಂಜನಿ ಟ್ರಸ್ಟ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 4


ಪಂ. ವೆಂಕಟೇಶ ಕುಮಾರ್

ಉತ್ಸವ ಹಾಗೂ ಸಂಗೀತ ಕಲಾನಿಧಿ ಆರ್.ಕೆ. ಶ್ರೀಕಂಠನ್ ಅವರ 103ನೇ ಜನ್ಮ ದಿನಾಚರಣೆ: 'ಶ್ರೀಕಂಠಶಂಕರ' ಬಿರುದು ಪ್ರದಾನ: ತ್ರಿಶೂರ್ ವಿ. ರಾಮಚಂದ್ರನ್ ಅವರಿಗೆ, 'ಶಂಕರಾದ್ವೈತ ತತ್ವಜ್ಞ' ಬಿರುದು ಪ್ರದಾನ: ಅಕ್ಷರಾನಂದೇಂದ್ರ ಸರಸ್ವತಿ ಸ್ವಾಮೀಜಿ ಅವರಿಗೆ, ಅತಿಥಿಗಳು: ವಿದ್ಯೇಶತೀರ್ಥ ಸ್ವಾಮೀಜಿ, ಪಾವಗಡ ಪ್ರಕಾಶ ರಾವ್, ಗಾಯನ: ತ್ರಿಶೂರ್ ವಿ. ರಾಮಚಂದ್ರನ್, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ವಿ. ಪ್ರವೀಣ್, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ವಿದ್ವಾನ್ ಆರ್.ಕೆ. ಶ್ರೀಕಂಠನ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5


ಆರ್‌ಕೆ. ಶ್ರೀಕಂಠನ್

ಉಪನ್ಯಾಸ ಸರಣಿ: 'ಲೋಲಕದ ಆವರ್ತನ-ಮಾದರಿಗಳು ಮತ್ತು ರೂಪಕಗಳು', ಉಪನ್ಯಾಸಕ: ಆರ್ಥರ್ ಐಸೆನ್‌ಕ್ರಾಫ್ಟ್, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಮದರ್ ಟೆಕ್ಲಾ ಆಡಿಟೋರಿಯಂ, ಅಶೋಕನಗರ, ಸಂಜೆ 4.30

ಅಕ್ಷತಾ ಕೃಷ್ಣಮೂರ್ತಿ ಅವರ 'ಇಸ್ಕೂಲು' ಪುಸ್ತಕ ಲೋಕಾರ್ಪಣೆ: ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿ: ರಾಜಪ್ಪ ದಳವಾಯಿ, ಅಧ್ಯಕ್ಷತೆ: ಸುಕನ್ಯಾ ಮಾರುತಿ, ಉಪಸ್ಥಿತಿ: ಸುಂದರರಾಜ ಅರಸು, ಬೆಳಕೆರೆ ಲಿಂಗರಾಜಯ್ಯ, ಆಯೋಜನೆ: ಜನ ಪ್ರಕಾಶನ, ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಅಧ್ಯಾಪಕರ ಸಂಘ, ಸ್ಥಳ: ಬಿ.ಎಂ. ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4.30

27ನೇ ವಾರ್ಷಿಕ ಸಂಕ್ರಾಂತಿ ಸಂಗೀತ ಕಪ್ಪಣ್ಣ 75, ಸಾಂಸ್ಕೃತಿಕ ಸಂಭ್ರಮ: ಆಲಾಪ ಶಾಸ್ತ್ರೀಯ ಸಂಗೀತೋತ್ಸವ: ಆರ್.ಎ. ರಮಾಮಣಿ, ಉಸ್ತಾದ್ ಹಫೀಜ್ ಬಾಲೇಖಾನ್, ಆಯೋಜನೆ ಹಾಗೂ ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ ಮೊದಲ ಹಂತ, ಸಂಜೆ 6

'ವೇದಿಕೆ' 40, ಸಿ.ಆರ್. ಸಿಂಹ 80 ವರ್ಷವಿಡೀ ನಾಟಕೋತ್ಸವ: 'ತುಘಲಕ್' ನಾಟಕ ಪ್ರದರ್ಶನ: ರಚನೆ: ಗಿರೀಶ ಕಾರ್ನಾಡ, ನಿರ್ದೇಶನ: ಸಿ.ಆರ್. ಸಿಂಹ, ಆಯೋಜನೆ: ವೇದಿಕ್ ಫೌಂಡೇಷನ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7



> ಕೋವಿಡೋತ್ತರ ಕಾಲಘಟ್ಟವು ಉದ್ಯಮ ಕ್ಷೇತ್ರದಲ್ಲಿ ಮಹಿಳೆಯರ ಬಲವನ್ನು ಹೆಚ್ಚಿಸಿದೆ. ಉದ್ಯಮ ಕ್ಷೇತ್ರದಲ್ಲಿ ಹೊಸ ಚಂಬೆಳಕು ಕಾಣುತ್ತಿದೆ. ವರ್ಷಾರಂಭದ ಸುಗ್ಗಿಯ ಹಬ್ಬ 'ಸಂಕ್ರಾಂತಿ' ಮಹಿಳಾ ಉದ್ಯಮ ಲೋಕದಲ್ಲಿ ಮತ್ತಷ್ಟು ಹೊಸ ಭರವಸೆ ಮೂಡಿಸಲಿ.

ಮಹಿಳಾ ಲೋಕದಲ್ಲಿ ಉದ್ಯಮ ಸುಗ್ಗಿ



ಶಾಂತಾಕುಮಾರಿ

ಯುದ್ಧವೇ ಇರಲಿ, ಸಾಂಕ್ರಾಮಿಕ ರೋಗಗಳ ಕಾಲಘಟ್ಟವೇ ಬರಲಿ. ಅವು ತನ್ನ ಕರಾಳ ಮುಖವನ್ನು ಬಿಚ್ಚಿಟ್ಟು, ಶ್ರೀಸಾಮಾನ್ಯರ ಬದುಕನ್ನು ಅಸಹನೀಯಗೊಳಿಸುತ್ತವೆ ಎನ್ನುವುದು ಸತ್ಯ. ಹಾಗೆಯೇ, ಇವು ಹೊಸ ಆವಿಷ್ಕಾರ, ಹೊಸ ಆಲೋಚನೆಯನ್ನು ಕಾರ್ಯರೂಪಕ್ಕೆ ತರಲು ಹಾದಿ ತೋರಿಸುತ್ತವೆ ಎಂಬುದೂ ಅಷ್ಟೆ ನಿಜ.

ಕೊರೊನೋತ್ತರ ಕಾಲಘಟ್ಟ ಹಾಗೂ ಅದೇ ಸಮಯ ದಲ್ಲಿ ಮಹಿಳಾ ಉದ್ಯಮ ಕ್ಷೇತ್ರದಲ್ಲಾಗುತ್ತಿರುವ ಸಕಾರಾತ್ಮಕ ಬೆಳವಣಿಗೆಗಳು ಈ ಮಾತುಗಳಿಗೆ ಸಾಕ್ಷಿಯಾಗಿವೆ. ಕೋವಿಡ್ ತಂದೊಡ್ಡಿದ್ದ ಬಿಕ್ಕಟ್ಟಿನಿಂದ ಜಗತ್ತೇ ಪತರಗುಟ್ಟುತ್ತಿದ್ದಾಗ, ಮನೆಯವರು ಉದ್ಯೋಗ ಕಳೆದುಕೊಂಡಾಗ ಕೆಲವು ಹೆಣ್ಣುಮಕ್ಕಳು ತಮಗೆ ಗೊತ್ತಿರುವ ಜ್ಞಾನವನ್ನೇ ಬಂಡವಾಳವಾಗಿಸಿಕೊಂಡು ಉದ್ಯಮ ಕಟ್ಟಿದರು. ತಾವು ಬೆಳೆದ ಬೆಳೆಗಳು, ತಯಾರಿಸಿದ ಸಿಹಿತಿಂಡಿ, ಹಪ್ಪಳ, ಸಂಡಿಗೆ ಸಾಂಬಾರು ಪುಡಿಯಂತಹ ದಿನ ಬಳಕೆಯ ಅವಶ್ಯಕ ಎನಿಸುವ ಸಾಮಗ್ರಿಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡಿ ಹಣ ಸಂಪಾದಿಸಿದರು. ಮಾಸ್ಕ್ ತಯಾರಿಕೆಯೇ ಇರಲಿ, ಬಟ್ಟೆ, ಒಡವೆ, ಪೂಜಾ ಸಾಮಗ್ರಿ, ಅಲಂಕಾರಿಕ ಸಾಧನ ಹೀಗೆ ನಿತ್ಯೋಪಯೋಗಿ ವಸ್ತುಗಳನ್ನೇ ಗ್ರಾಹಕರಿಗೆ ತಲುಪಿಸಲು ಮುಂದಾದರು. ಕಿರು ಮಹಿಳಾ ಉದ್ಯಮಿಗಳ ಸಂಖ್ಯೆ ನೋಡ ನೋಡುತ್ತಲೇ ಹತ್ತು ನೂರಾಗಿ, ನೂರು ಸಾವಿರವಾಯಿತು.

ನವೋದ್ಯಮಿಗಳ ಪರ್ವ...

ಗೀತಾ ಬ್ಯೂಟಿಷಿಯನ್. ಆಕೆಯ ಪತಿ ಒಂದು ಫ್ಯಾಕ್ಟರಿಯಲ್ಲಿ ಉದ್ಯೋಗ ಮಾಡುತ್ತಿದ್ದರು. ಕೊರೊನಾ ಕಾಲದಲ್ಲಿ ಅವರ ಫ್ಯಾಕ್ಟರಿ ಮುಚ್ಚಿಹೋಯಿತು. ಲಾಕ್‌ಡೌನ್‌ನಿಂದ ಪಾರ್ಲರ್ ಸಹ ಮುಚ್ಚಬೇಕಾಯಿತು. ಮನೆಯಲ್ಲಿ ಮಕ್ಕಳು, ವಯಸ್ಸಾದ ಅತ್ತೆ–ಮಾವ. ದಿನನಿತ್ಯದ ಊಟಕ್ಕೂ ಪರಿತಪಿಸುವಂತಹ ಸ್ಥಿತಿ. ಆಗ ಆಕೆಗೆ ತೋಚಿದ್ದು ಅಪಾರ್ಟ್‌ಮೆಂಟ್‌ಗಳಲ್ಲಿ ವಯಸ್ಸಾದವರಿಗೆ ಹಾಗೂ ಮನೆಯಿಂದಲೇ ಕಚೇರಿ ಕೆಲಸ ಮಾಡುತ್ತಿದ್ದ (ವರ್ಕ್ ಫ್ರಂ ಹೋಮ್ ಮಾಡುತ್ತಿದ್ದ) ಬ್ಯಾಚುಲರ್ಸ್‌ಗಳಿಗೆ ಊಟದ ಡಬ್ಬಿ ಕಳಿಸುವ ಕೆಲಸ. ಅದಕ್ಕೆಷ್ಟು ಬೇಡಿಕೆ ಬಂತೆಂದರೆ, ಈಗ ಅವರು 'ಡಬ್ಬಿ' ಕಳಿಸುವ ಕೆಲಸವನ್ನು ಕೇಟರಿಂಗ್ ಉದ್ಯಮವಾಗಿ ಬೆಳೆಸಿದ್ದಾರೆ. ಇದು ಸುಮಾರು ಹದಿನೈದು ಜನರಿಗೆ ಕೆಲಸ ನೀಡಿದ್ದಾರೆ.

ರೋಹಿಣಿ ಒಂದು ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕೊರೊನಾ ನಂತರ ಸಭೆ ಸಮಾರಂಭ ರದ್ದಾದವು. ಕಂಪನಿ ನಷ್ಟದೊಂದಿಗೆ ಮುಚ್ಚಿ ಹೋಯಿತು. ಪತಿಯು ಮಾರ್ಕೆಟಿಂಗ್ ಫೀಲ್ಡ್‌ನಲ್ಲಿದ್ದುದರಿಂದ ಅವರೂ ಕೆಲಸ ಕಳೆದುಕೊಂಡರು. ಮನೆ ಬಾಡಿಗೆ, ಇಎಂಐಗಳು, ಮಕ್ಕಳ ವಿದ್ಯಾಭ್ಯಾಸ ನಿಭಾಯಿಸಲು ಸೋತಾಗ ರೋಹಿಣಿ ಧೃತಿಗೆಡದೆ ಮದುವೆಗಳ ಇವೆಂಟ್ ಮ್ಯಾನೇಜ್ಮೆಂಟ್ ಹೊಣೆ ಹೊತ್ತರು. ಅದೇ ವೃತ್ತಿಯಲ್ಲಿ ಅನುಭವವಿದ್ದ ಆಕೆಗೆ ಕಷ್ಟವೆನಿಸಲಿಲ್ಲ. ದೊಡ್ಡ ದೊಡ್ಡ ಸಮಾರಂಭಗಳಿಗೂ ಅವರ ಸೇವೆ ವಿಸ್ತರಿಸಿತು. ಈಗ ಅವರು ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ನಡೆಸುತ್ತಿದ್ದಾರೆ.

ಇವೆರಡೂ ಕೊರೊನಾ ದುರಿತ ಕಾಲದಲ್ಲಿಯೂ ಆಶಾ ಭಾವನೆ ಹುಟ್ಟಿಸುವ ಕಥೆಗಳು. ಇಂಥ ಹಲವು ಸ್ಫೂರ್ತಿದಾಯಕ ಕಥೆಗಳ ನಾಯಕಿಯರು ನಮ್ಮ ನಡುವೆ ಇದ್ದಾರೆ. ಮಾತ್ರವಲ್ಲ, ಸಂಘಟಿತವಾಗಿ, ಉದ್ಯಮಕ್ಕೆ ಸಾಂಸ್ಥಿಕ ರೂಪ ಕೊಟ್ಟು ಯಶಸ್ವಿಯಾದ ಮಹಿಳೆಯರೂ ಇದ್ದಾರೆ.

ಸಾಂಸ್ಥಿಕ – ಸಾಂಘಿಕ ಸ್ವರೂಪ

ಮಹಿಳೆಯರದ್ದು ಅನುತ್ಪಾದಕ ದುಡಿತ ಎಂದೇ ಒಂದು ಕಾಲದಲ್ಲಿ ಹೇಳಲಾಗಿತ್ತು. ಮಹಿಳೆಯರ ದುಡಿತ ದೇಶದ ಆರ್ಥಿಕ ಪ್ರಗತಿಪಥದಲ್ಲಿ ಹೆಜ್ಜೆ ಗುರುತು ಮೂಡಿಸಬೇಕಾದರೆ ಅದಕ್ಕೊಂದು ಸಾಂಸ್ಥಿಕ ಸಾಂಘಿಕ ಸ್ವರೂಪ ನೀಡಬೇಕು. ಆ ಮೂಲಕ ಅವಳು ತನ್ನ ಅಸ್ಮಿತೆಯನ್ನು ಬಲಪಡಿಸಿಕೊಳ್ಳಬೇಕು. ಉದ್ಯಮಿಯಾಗಿ ತನ್ನನ್ನು ಗುರುತಿಸಿಕೊಳ್ಳಬೇಕು. ಇಂಥ ಬದಲಾವಣೆಯ ಗಾಳಿ ಬೀಸಿದ್ದು ಮಾತ್ರ ಕಳೆದೆರಡು ವರ್ಷಗಳಲ್ಲಿ.

ಹಳ್ಳಿಯ ಮೂಲೆಯಲ್ಲಿದ್ದುಕೊಂಡು ತಮ್ಮ ಉತ್ಪನ್ನವನ್ನು ಮಾರಾಟ ಮಾಡಬಹುದು ಎಂದು ಧೈರ್ಯ ಮಾಡಿ, ಅದಕ್ಕಾಗಿ ಒಂದು ಫೇಸ್‌ಬುಕ್ ಪುಟ ತೆರೆದ ಬೆಂಗಳೂರಿನ ಅಪರ್ಣಾ ರಾವ್ 'ಧೃತಿ ಮಹಿಳಾ ಮಾರುಕಟ್ಟೆ' ಎಂಬ ಹೆಸರಿನಡಿಯಲ್ಲಿ ಧೃತಿಗೆಡದಂತೆ ನಡೆಯಲು ಬದುಕಿನ ಹಾದಿ ತೋರಿದ್ದಾರೆ. ಇತ್ತೀಚೆಗೆ ಮಾರಾಟಮೇಳವೊಂದನ್ನು ಹಮ್ಮಿಕೊಂಡದ್ದಲ್ಲದೇ 'ಧೃತಿಗೆಡದ ಹೆಜ್ಜೆಗಳು' ಎಂಬ ಪುಸ್ತಕವನ್ನು ಹೊರತರಲಾಗಿದೆ.

ಸುನೀತಾ ಮಹಿಳಾ ಮಾರುಕಟ್ಟೆ (ಸುಮಾ)ಎಂಬ ಫೇಸ್‌ಬುಕ್ ಪೇಜ್ ಅನ್ನು ಸೌಪರ್ಣಿಕಾ ಹೊಳ್ಳ ಎಂಬುವವರು ನಡೆಸುತ್ತಿದ್ದು ಉದ್ಯಮಕ್ಕೆ ಸಂಬಂಧಿಸಿದ ಆನ್‌ಲೈನ್ ಪತ್ರಿಕೆ ಸಹ ನಡೆಸುತ್ತಿದ್ದಾರೆ. ಇವರೆಲ್ಲ ಉದಾಹರಣೆಗಳಷ್ಟೇ. ಇಂಥ ಸಾವಿರಾರು ಮಹಿಳೆಯರು ಸ್ವ ಉದ್ಯೋಗ ಆರಂಭಿಸಿದ್ದಾರೆ. ಪ್ರಾರಂಭದಲ್ಲಿ ಇವರೆಲ್ಲರ ಉದ್ದೇಶ ಒಂದಷ್ಟು ವಹಿವಾಟು ನಡೆಸುವುದಾಗಿತ್ತು. ಆದರೆ, ಕೆಲವು ಉದ್ಯಮಗಳು ಈಗ ತರಹೇವಾರಿ ಉತ್ಪನ್ನಗಳೊಂದಿಗೆ ಲಕ್ಷಾಂತರ ರೂಪಾಯಿಗಳ ವಹಿವಾಟು ನಡೆಸುತ್ತಿದ್ದಾರೆ. ಇದರ ಜೊತೆಗೆ, ಸೋಪು, ಹೇರ್‌ಆಯಿಲ್, ಸಿರಿಧಾನ್ಯ, ಬ್ಯಾಗುಗಳು, ಅಡಕೆ ಹಾಳೆ ಉತ್ಪನ್ನ, ಒಳ ಉಡುಪು, ಸಿದ್ಧ ಉಡುಪು, ಪೇಪರ್ ಬ್ಯಾಗ್.. ಇನ್ನೂ ನೂರಾರು ಬಗೆಯ ಉತ್ಪನ್ನಗಳನ್ನು ತಯಾರಿಸುತ್ತಾ ಮಾರಾಟ ಮಾಡುತ್ತಾ ಸ್ವಾವಲಂಬಿ ಬದುಕನ್ನು ಕಂಡುಕೊಂಡ ಮಹಿಳೆಯರೂ ಇದ್ದಾರೆ.

ಕೊನೆಯದಾಗಿ..

90ರ ದಶಕದಲ್ಲಿ ತಂತ್ರಜ್ಞಾನದ ದೆಸೆಯಿಂದ ಹಲವು ಮಹಿಳಾ ಉದ್ದಿಮೆದಾರರು ಚಾಲ್ತಿಗೆ ಬಂದರು. ಕಂಪ್ಯೂಟರ್, ಮಹಿಳೆಯರ ಜೀವನ ಪ್ರವೇಶಿಸಿದ ನಂತರ ಆರ್ಥಿಕ ಸ್ವಾವಲಂಬನೆ ಹೆಚ್ಚಿ, ಆಕೆಯೂ ಉದ್ಯಮಶೀಲೆ ಎಂಬ ಹೊಸ ದೃಷ್ಟಿಕೋನದಿಂದ ನೋಡುವಂತಾಯಿತು. ನಾಲ್ಕೈದು ದಶಕಗಳ ಹಿಂದಿನ ಬದುಕನ್ನೊಮ್ಮೆ ಅವಲೋಕಿಸಿ ನೋಡಿದರೆ ಅಲ್ಲಿ, ಹೈನುಗಾರಿಕೆ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ಮಹಿಳೆಯೇ ಸ್ವತಂತ್ರವಾಗಿ ಉದ್ಯಮ ನಡೆಸುತ್ತಿದ್ದಿದ್ದನ್ನು ಗಮನಿಸಬಹುದು. ಅಷ್ಟು ಮಾತ್ರವಲ್ಲ, ಹೊಲಿಗೆ, ಸೀರೆ ನೇಯ್ಗೆ ವ್ಯಾಪಾರದಿಂದ ಹಿಡಿದು, ಹಪ್ಪಳ ಸಾಂಬಾರುಪುಡಿ ಚಟ್ನಿಪುಡಿ ಮುಂತಾದ ಆಹಾರೋತ್ಪನ್ನಗಳ ಮಾರಾಟದಿಂದ ಕುಟುಂಬಕ್ಕೆ ಆರ್ಥಿಕ ನೆರವು ನೀಡುತ್ತಿದ್ದನ್ನು ಗುರುತಿಸಬಹುದು. ಇಷ್ಟಾದರೂ ಆಕೆಯನ್ನು ಉದ್ಯಮಿಯೆಂದು ಪರಿಗಣಿಸಿದ್ದು ಕಡಿಮೆ. ಆದರೆ, ಈಗ ಕಾಲ ಬದಲಾಗಿದೆ. ಉದ್ಯಮ ಕ್ಷೇತ್ರದಲ್ಲೂ ಮಹಿಳೆ ತನ್ನ ಹೆಗ್ಗುರುತುಗಳನ್ನು ಮೂಡಿಸುತ್ತಿದ್ದಾಳೆ.

ಈಗ ಮಹಿಳಾ ಉದ್ಯಮದಲ್ಲಿ ಚಂಬೆಳಕು ಕಾಣುತ್ತಿದೆ. ವರ್ಷಾರಂಭದಲ್ಲಿ ಬರುವ ಸುಗ್ಗಿ ಹಬ್ಬ ಸಂಕ್ರಾಂತಿ ಮಹಿಳಾ ಉದ್ಯಮ ಲೋಕದಲ್ಲಿ ಹೊಸ ಭರವಸೆ ಮೂಡಿಸಲಿ.

ಸರ್ಕಾರದ ಕೆಲ ಯೋಜನೆಗಳು

- **ಅನ್ನಪೂರ್ಣ :** ಹೆಸರೇ ಹೇಳುವಂತೆ ಇದು ಕ್ಯಾಟರಿಂಗ್ ದರ್ಶಿನಿ ಮುಂತಾದ ವ್ಯಾಪಾರ ಸ್ಥಾಪನೆಗಾಗಿ ಕೊಡುವಂತಹ ಕೇಂದ್ರ ಸರ್ಕಾರದ ಸಾಲ. ₹50 ಸಾವಿರ ಹಣವನ್ನು ವರ್ಕಿಂಗ್ ಕ್ಯಾಪಿಟಲ್ ಆಗಿ ಬಳಸಲು ನೀಡುತ್ತಾರೆ. ಪಾತ್ರೆ, ಗ್ಯಾಸ್ ಅಗತ್ಯ ಪೀಠೋಪಕರಣಗಳಿಗಾಗಿ ಬಳಸಬಹುದು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಭಾರತೀಯ ಮಹಿಳಾ ಬ್ಯಾಂಕ್‌ನಲ್ಲಿ ಮಾತ್ರ ದೊರೆಯುತ್ತದೆ.
- **ಸ್ತ್ರೀ ಶಕ್ತಿ ಪ್ಯಾಕೇಜ್:** ಇದರಲ್ಲಿ ಕಂಪನಿ/ವ್ಯಾಪಾರದಲ್ಲಿ ಮಹಿಳೆಯರ ಓನರ್ ಶಿಪ್ ಶೇ 50ಕ್ಕಿಂತ ಜಾಸ್ತಿ ಇದ್ದಲ್ಲಿ 0.05 ದರದಲ್ಲಿ ₹2 ಲಕ್ಷದಿಂದ ₹5 ಲಕ್ಷದವರೆಗೆ ಸಾಲವನ್ನು ನೀಡಲಾಗುತ್ತದೆ.
- **ಸೆಂಟ್ ಕಲ್ಯಾಣಿ ಸ್ಕೀಮ್:** ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಈ ಯೋಜನೆಯಲ್ಲಿ ಗಾರ್ಮೆಂಟ್, ಬ್ಯೂಟಿ ಪಾರ್ಲರ್, ಎಸ್‌ಟಿಡಿ, ಜೆರಾಕ್ಸ್, ಫಾರ್ಮಿಂಗ್ ಮುಂತಾದ ವ್ಯವಹಾರಗಳನ್ನು ನಡೆಸಲು ಮಹಿಳೆಯರಿಗಾಗಿಯೇ ಶೇ 20ರಷ್ಟು ಮಾರ್ಜಿನ್ ಹಣದ ಜೊತೆ ₹1 ಕೋಟಿವರೆಗೂ ಸಾಲ ನೀಡುತ್ತಾರೆ.

ಒಂದಂತೂ ನಿಜ; ಏನೇ ಯೋಜನೆಗಳಿದ್ದರೂ ಬ್ಯಾಂಕ್ ವಿಧಿಸುವ ನಿಯಮಗಳು ಕಠಿಣವಾಗಿಯೇ ಇರುತ್ತವೆ. ಆದರೆ, ಮಹಿಳೆಯರಲ್ಲಿ ಬೇಕಿರುವುದು ಉದ್ಯಮಶೀಲತೆಯ ಮೈಂಡ್‌ಸೆಟ್. ಜತೆಗೆ ತನ್ನನ್ನು ತಾನು ಉದ್ಯಮಶೀಲಳು ಎಂದು ಬಿಂಬಿಸುವಕೊಳ್ಳುವ ರೀತಿ. ಇವುಗಳನ್ನು ಸರಿಯಾಗಿ ಅಳವಡಿಸಿಕೊಂಡಾಗ ಮಾತ್ರ ಮಧ್ಯವರ್ತಿಗಳ ಕಮಿಷನ್ ಉಪಟಳದಿಂದ ಪಾರಾಗಬಹುದು.

ಸಂಕ್ರಾಂತಿ ಸಿಹಿ

ಸುಗ್ಗಿ ಹಬ್ಬ ಸಂಕ್ರಾಂತಿಯಂದು ಕೆಲವು ಕಡೆ, ಸಿಹಿ ಪೊಂಗಲ್, ಖಾರ ಪೊಂಗಲ್, ಅವಲಕ್ಕಿ ಪೊಂಗಲ್ ಎನ್ನುತ್ತಾ ವೈವಿಧ್ಯಮಯ ಪೊಂಗಲ್ ಖಾದ್ಯಗಳನ್ನು ತಯಾರಿಸುತ್ತಾರೆ. ಅದೇ ರೀತಿ ಉತ್ತರ ಕರ್ನಾಟಕದಲ್ಲಿ ಶೇಂಗಾ ಹೋಳಿಗೆ, ಮಾದಲಿ(ಮಾದ್ಲಿ), ಗೋಧಿ ಹುಗ್ಗಿಯಂತಹ ವೈವಿಧ್ಯಮಯ ವಿಶೇಷ ಖಾದ್ಯಗಳನ್ನು ತಯಾರಿಸುತ್ತಾರೆ. ಈ ಬಾರಿ 'ನಳಪಾಕ'ದಲ್ಲಿ ಉತ್ತರ ಕರ್ನಾಟಕದಲ್ಲಿ ಸಂಕ್ರಾಂತಿ ಹಬ್ಬಕ್ಕಾಗಿ ತಯಾರಿಸುವ ಈ ಮೂರು ಖಾದ್ಯಗಳ ರೆಸಿಪಿಗಳನ್ನು ಪರಿಚಯಿಸುತ್ತಿದ್ದಾರೆ **ತ್ರಿವೇಣಿ ಪಾಟೀಲ್**

ಶೇಂಗಾ ಹೋಳಿಗೆ



ನಳಪಾಕ

ಬೇಕಾಗುವ ಸಾಮಗ್ರಿಗಳು: ಶೇಂಗಾ ಒಂದು ಕಪ್, ಎಳ್ಳು ಅರ್ಧ ಕಪ್, ಮೈದಾಹಿಟ್ಟು ಮುಕ್ಕಾಲು ಕಪ್, ರವೆ ಕಾಲು ಕಪ್, ಅರ್ಧಕಪ್ ನೀರು, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಒಂದು ಚಮಚ ಏಲಕ್ಕಿ ಪುಡಿ.

ಮಾಡುವ ವಿಧಾನ: ಒಂದು ಅಗಲವಾದ ಪಾತ್ರೆಗೆ ಮೈದಾ, ರವೆ ಮತ್ತು ಉಪ್ಪು ಹಾಕಿಕೊಂಡು ಮಿಶ್ರಣ ಮಾಡಿ. ಇದಕ್ಕೆ ಸ್ವಲ್ಪ ನೀರು ಸೇರಿಸಿ, ಮೃದುವಾದ ಹಿಟ್ಟಿನ ಹದಕ್ಕೆ ಬೆರೆಸಿಕೊಳ್ಳಿ. ಐದು ನಿಮಿಷಗಳ ಕಾಲ ನೆನೆಯಲು ಬಿಡಿ.

ಇದೇ ವೇಳೆ ಒಂದು ಪ್ಯಾನ್‌ನಲ್ಲಿ ಶೇಂಗಾ, ಎಳ್ಳನ್ನೂ ಪ್ರತ್ಯೇಕವಾಗಿ ಹುರಿದಿಟ್ಟುಕೊಳ್ಳಿ. ಈಗ ಶೇಂಗಾ ಎಳ್ಳು ಹಾಗೂ ಬೆಲ್ಲ, ಏಲಕ್ಕಿ ಸೇರಿಸಿ ಎಲ್ಲವನ್ನು ಪೂರ್ಣವಾಗಿ ಪುಡಿಮಾಡಿಕೊಳ್ಳಿ. ಇದೇ ಹೂರಣ.

ಮೈದಾಹಿಟ್ಟು ಮಿಶ್ರಣವನ್ನು ಚೆನ್ನಾಗಿ ಮಿದ್ದಿ, ನಿಂಬೆ ಗಾತ್ರದ ಸಣ್ಣ ಉಂಡೆಗಳನ್ನಾಗಿ ಮಾಡಿ. ಒಂದೊಂದೇ ಉಂಡೆಯನ್ನು ಚಪಾತಿಯಂತೆ ಲಟ್ಟಿಸಿ. ಆ ಹಾಳೆಯ ಮೇಲೆ ಶೇಂಗಾ ಮಿಶ್ರಣ (ಹೂರಣ) ತುಂಬಿ. ಹಾಳೆಯನ್ನು ವೃತ್ತಕಾರವಾಗಿ ಮುಚ್ಚಿ. ಅದನ್ನು ಚಪಾತಿಯಂತೆ ನಯವಾಗಿ ಲಟ್ಟಿಸಿಕೊಳ್ಳಿ. ಅದನ್ನು ತವಾ ಮೇಲೆ ಸಣ್ಣ ಉರಿಯಲ್ಲಿ ಎರಡೂ ಬದಿಗಳನ್ನು ಬೇಯಿಸಿಕೊಳ್ಳಿ. ಈಗ ರುಚಿ ರುಚಿಯಾಗಿರುವ ಶೇಂಗಾ ಹೋಳಿಗೆ ಸವಿಯಲು ರೆಡಿ.

ಮಾದ್ಲಿ



ಬೇಕಾಗಿರುವ ಸಾಮಗ್ರಿಗಳು : ಅರ್ಧ ಕೆಜಿ ಗೋಧಿ ಹಿಟ್ಟು, ಕಾಲು ಕಪ್ ರವೆ. ಅರ್ಧ ಕೆಜಿ ಬೆಲ್ಲ, ರುಚಿಗೆ ತಕ್ಕಷ್ಟು ಉಪ್ಪು, ಏಲಕ್ಕಿ ಪುಡಿ, ಬಿಳಿ ಎಳ್ಳು, ಒಣಕೊಪ್ಪರಿ ತುರಿ ಮತ್ತು ಗಸೆಗಸೆ

ಮಾಡುವ ವಿಧಾನ

ಅಗಲವಾದ ಪಾತ್ರೆಯಲ್ಲಿ ಗೋಧಿ ಹಿಟ್ಟು, ರವೆ, ಚಿಟಿಕೆ ಉಪ್ಪು ಹಾಕಿ ಸ್ವಲ್ಪ ಸ್ವಲ್ಪ ನೀರು ಹಾಕುತ್ತಾ ಗಟ್ಟಿ ಹದದಲ್ಲಿ ನಾದಿಕೊಳ್ಳಿ(ಚಪಾತಿ ಹಿಟ್ಟಿಗಿಂತ ಸ್ವಲ್ಪ ಗಟ್ಟಿಯಾಗಿರಲಿ). ಈ ಹಿಟ್ಟನ್ನು 5 ನಿಮಿಷ ನೆನೆಸಿ. ನಂತರ ಚಪಾತಿ ಆಕಾರದಲ್ಲಿ ದಪ್ಪಗೆ ಲಟ್ಟಿಸಿ, ಬೇಯಿಸಿಕೊಳ್ಳಿ. ಬಿಸಿ ಇರುವಾಗಲೇ ಹಂಚಿನಿಂದ ತಗೆದು ಲಟ್ಟಣಿಗೆಯಿಂದ ಪುಡಿ ಮಾಡಿಕೊಳ್ಳಿ. ನಂತರ ಈ ಪುಡಿ ಹಾಗೂ ಬೆಲ್ಲ ಎರಡನ್ನು ಸೇರಿಸಿ ಮಿಕ್ಸಿಯಲ್ಲಿ ಒಮ್ಮೆ ಮಿಶ್ರಮಾಡಿಕೊಳ್ಳಿ. ನಂತರ ಇದಕ್ಕೆ ಏಲಕ್ಕಿ ಪುಟಾಣಿ ಒಣ ಕೊಬ್ಬರಿ ತುರಿ ಹಾಕಿ ಎಳ್ಳು ಗಸಗಸೆ ಸ್ವಲ್ಪ ಹುರಿದು ಹಾಕಿದರೆ ರುಚಿ ರುಚಿಯಾಗಿರುವ ಮಾದ್ಲಿ ಸವಿಯಲು ರೆಡಿ.

ಗೋಧಿ ಹುಗ್ಗಿ

ಬೇಕಾದ ಸಾಮಗ್ರಿಗಳು: ಗೋಧಿ ಅರ್ಧ ಕೆ.ಜಿ, ಬೆಲ್ಲ ಅರ್ಧ ಕೆ.ಜಿ, ಅರ್ಧ ಲೀಟರ್ ಹಾಲು, ರುಚಿಗೆ ತಕ್ಕಷ್ಟು ಉಪ್ಪು, ಒಣ ಕೊಬ್ಬರಿ, ಗೋಡಂಬಿ, ಒಣ ದ್ರಾಕ್ಷಿ, ಬಾದಾಮಿ ಮತ್ತು ತುಪ್ಪ.

ಮಾಡುವ ವಿಧಾನ:

ಗೋಧಿಯನ್ನು ಒರಳಿನಲ್ಲಿ ಹಾಕಿ ಸ್ವಲ್ಪ ನೀರು ಹಾಕಿಕೊಂಡು ಕುಟ್ಟಿಕೊಳ್ಳಿ. ಇದರ ಉದ್ದೇಶ ಗೋಧಿ ಕಾಳಿನಿಂದ ಹೊಟ್ಟನ್ನು(ತವಡು) ತೆಗೆಯಬೇಕು. ಈಗ ಒಂದು ಪಾತ್ರೆಯಲ್ಲಿ ಗೋಧಿ ಹಾಕಿ, ನೀರು ಬೆರೆಸಿ ಮೆತ್ತಗಾಗುವವರೆಗೆ ಬೇಯಿಸಿ. ಜೊತೆಗೆ ಸ್ವಲ್ಪ ಉಪ್ಪು ಹಾಕಿ ಚೆನ್ನಾಗಿ ಮುಗುಚಿಕೊಳ್ಳಿ. ನಂತರ ಹಾಲು, ಬೆಲ್ಲ ಮತ್ತು ತುಪ್ಪದಲ್ಲಿ ಹುರಿದ ಡ್ರೈ ಫ್ರೂಟ್ಸ್ ಹಾಕಿ. ಮತ್ತೆ ಮಿಶ್ರಮಾಡಿ. ಈಗ ರುಚಿ ರುಚಿಯಾದ ಬಿಸಿ ಬಿಸಿ ಗೋಧಿ ಹುಗ್ಗಿ ಸಿದ್ಧವಾಯತು.



ವೃತ್ತಿ ಶಿಕ್ಷಣಕ್ಕೆ 'ವಿ ತಾರ'

ಶುಭ ಕೆ.ಬಿ.

ಮನೆಯಲ್ಲೇ ಕೂರಲು ಬೋರ್ ಹೊಡಿತಾ ಇದೆ... ನಾನು ಕೆಲಸಕ್ಕೆ ಹೋಗುವಾಗಲೇ ಜೀವನ ಚೆನ್ನಾಗಿತ್ತು, ಮಕ್ಕಳು–ಮನೆ ಅಂತ ಕೆಲಸ ಬಿಟ್ಟು ತಪ್ಪು ಮಾಡಿದೆ. ಈಗ ಕೆಲಸಕ್ಕೆ ಸೇರೋಣ ಎಂದರೆ ಕಲಿತಿದ್ದೆಲ್ಲ ಗುಡ್ಡ ಹತ್ತಿ ಹೋಗಿದೆ... ಎಂದು ಪರಿತಪಿಸುವ ಮಹಿಳೆಯರಿಗಾಗಿ 'ವಿ-ಮಿನ್‌ಕ್ಲೂಷನ್ ತಾರ' ಎನ್ನುವ ವಿಶೇಷ ತರಬೇತಿ ಕಾರ್ಯಕ್ರಮ ಇದೆ.

ಬೆಂಗಳೂರಿನ ಜಯನಗರದಲ್ಲಿರುವ ವಿಎಂವೇರ್ ಸಂಸ್ಥೆಯು 2019ರಲ್ಲಿ ಮಹಿಳೆಯರಿಗಾಗಿ ಉಚಿತ ಟೆಕ್ನಾಲಜಿ ತರಬೇತಿ ಕಾರ್ಯಕ್ರಮ ಆರಂಭಿಸಿದೆ. ಈಗಷ್ಟೇ ವಿದ್ಯಾಭ್ಯಾಸ ಮುಗಿಸಿದ ಹಾಗೂ ಈಗಾಗಲೇ ಉದ್ಯೋಗ ಪಡೆದು, ಕೆಲ ಕಾರಣದಿಂದ ಉದ್ಯೋಗ ತೊರೆದು, ಈಗ ಮತ್ತೆ ಉದ್ಯೋಗ ಪಡೆಯಬೇಕು ಎಂದು ಬಯಸುತ್ತಿರುವ ಮಹಿಳೆಯರಿಗಾಗಿ ಮಾತ್ರ ಈ ವೃತ್ತಿ ಕೌಶಲ ತರಬೇತಿ ಇದ್ದು, ಯಾವುದೇ ವಯೋಮಿತಿಯ ನಿರ್ಬಂಧ ಇಲ್ಲ.

ತರಬೇತಿಯನ್ನು ಆನ್‌ಲೈನ್‌ನಲ್ಲೇ ನೀಡಲಾಗುತ್ತಿದೆ. ವಿ-ಮಿನ್‌ಕ್ಲೂಷನ್ ತಾರ ಸರ್ಕಾರದಿಂದ ಮಾನ್ಯತೆ ಪಡೆದಿದ್ದು, ತರಬೇತಿ ಪಡೆದವರಿಗೆ ಸರ್ಕಾರದಿಂದಮಾನ್ಯತೆಪಡೆದ ಪ್ರಮಾಣಪತ್ರಗಳನ್ನೇ ನೀಡಲಾಗುವುದು. ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ತರಬೇತಿ ನೀಡಲಾಗುವುದರಿಂದ, ಯಾರು ಯಾವಾಗ ಬೇಕಾದರೂ ತರಬೇತಿ ಪಡೆದುಕೊಳ್ಳಬಹುದಾಗಿದ್ದು, ನೋಂದಣಿಗೆ ಕೊನೆದಿನ ಎನ್ನುವುದು ಇಲ್ಲಿಲ್ಲ. ಈ ತರಬೇತಿಯ ಬಗ್ಗೆ ಹೆಚ್ಚಿನ ಮಾಹಿತಿಗಾಗಿ https://www.vmware.com/taara/ ವೆಬ್‌ಸೈಟ್‌ಗೆ ಭೇಟಿ ನೀಡಿ.



ಈವರೆಗೂ ಸುಮಾರು 15 ಸಾವಿರ ಮಹಿಳೆಯರು ತರಬೇತಿ ಪಡೆದು, ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. ಪ್ರಸ್ತುತ 22 ಸಾವಿರಕ್ಕೂ ಹೆಚ್ಚು ನೋಂದಣಿ ಆಗಿದೆ. ಕಾಶ್ಮೀರ, ಅಂಡಮಾನ್, ಕಾರ್ಗಿಲ್‌ನಿಂದಲೂ ಮಹಿಳೆಯರು ತರಬೇತಿ ಪಡೆಯುತ್ತಿದ್ದಾರೆ.

ಸೀತಾ ಲಕ್ಷ್ಮೀ, ಸೀನಿಯರ್ ಪ್ರೋಗ್ರಾಮ್ ಮ್ಯಾನೇಜರ್, ವಿ ತಾರಾ

ಮದುವೆಯಾದ ಬಳಿಕ ಕುಟುಂಬ ನಿರ್ವಹಣೆ ಹಾಗೂ ಜವಾಬ್ದಾರಿ ಕಾರಣದಿಂದ 10 ವರ್ಷ ಉದ್ಯೋಗ ತೊರೆದಿದ್ದೆ. ಮತ್ತೆ ಕೆಲಸಕ್ಕೆ ಸೇರಬೇಕು ಎಂದುಕೊಂಡಾಗ ಸಾಕಷ್ಟು ತಂತ್ರಜ್ಞಾನ ಮುಂದುವರಿದಿತ್ತು. ಅದರ ಕಲಿಕೆಗೆ ಹುಡುಕಾಡುತ್ತಿದ್ದಾಗ ವಿ-ಮಿನ್‌ಕ್ಲೂಷನ್ -ತಾರಾ' ತರಬೇತಿಯ ಕುರಿತು ತಿಳಿಯಿತು. ಇಲ್ಲಿ 3 ತಿಂಗಳ ಆನ್‌ಲೈನ್ ತರಬೇತಿ ಪಡೆಯುತ್ತಿದ್ದಾಗಲೇ ಉದ್ಯೋಗ ದೊರೆಯಿತು.

ನಿತ್ಯಾ, 'ತಾರಾ' ಗ್ಯಾಜುಯೇಟ್

ತರಬೇತಿಯ ವಿಶೇಷತೆ

ಈ ತರಬೇತಿ ಅಡಿಯಲ್ಲಿ ಡೇಟಾಸೆಂಟರ್, ನೆಟ್‌ವರ್ಕಿಂಗ್, ಬ್ಯಾಂಕಿಂಗ್, ಅಡ್ಮಿನಿಸ್ಟ್ರೇಟಿವ್, ಕ್ಲೌಡ್ ಮತ್ತು ಕ್ಲೌಡ್ ಮ್ಯಾನೇಜ್‌ಮೆಂಟ್ ತಂತ್ರಜ್ಞಾನಗಳ ತರಬೇತಿಯನ್ನು ನೀಡಲಾಗುತ್ತದೆ. ಈ ತರಬೇತಿಯೂ ಸಂಪೂರ್ಣ ಉಚಿತವಾಗಿದ್ದು, ಕನಿಷ್ಠ 3 ರಿಂದ 6 ತಿಂಗಳ ಅವಧಿಯದ್ದಾಗಿದೆ. ಕೋರ್ಸ್‌ನನ್ನು ಮೂರು ಹಂತದಲ್ಲಿ ವಿಂಗಡಿಸಲಾಗಿದೆ. ಈಗಾಗಲೇ ಕೆಲಸದ ಅನುಭವ ಇರುವವರಿಗೆ ತಮ್ಮ ವೃತ್ತಿಯನ್ನು ಉನ್ನತೀಕರಿಸಿಕೊಳ್ಳುವವರಿಗೆ ಮಧ್ಯಮದ ಹಂತದ ತರಬೇತಿ, ಈಗಷ್ಟೇ ಉದ್ಯೋಗ ಪ್ರಾರಂಭಿಸುವವರಿಗೆ ನೂತನವಾಗಿ ತರಬೇತಿ ಹಾಗೂ ಈಗಾಗಲೇ ಉದ್ಯೋಗದಲ್ಲಿ ಉನ್ನತ ಸ್ಥಾನದಲ್ಲಿದ್ದವರಿಗೆ ಅತ್ಯುನ್ನತ ಮಟ್ಟದ ತರಬೇತಿ ನೀಡಲಾಗುವುದು. ಈ ತರಬೇತಿಗೆ ಸೇರಿಕೊಳ್ಳುವವರು ಕಡ್ಡಾಯವಾಗಿ ಕೆಲಸದಲ್ಲಿರಬಾರದು ಹಾಗೂ 18 ವರ್ಷ ಮೇಲ್ಪಟ್ಟಿರಬೇಕು.

ಮುಟ್ಟು ಮುಂದೂಡುವ ಮಾತ್ರೆಗಳಿಂದ ತೊಂದರೆಯೇ?

ಸ್ಪಂದನ



ಡಾ. ವೀಣಾ ಎಸ್. ಭಟ್

• ನನಗೆ ಇಬ್ಬರು ಮಕ್ಕಳು. ಮಕ್ಕಳಾಗದ ಹಾಗೆ ಶಸ್ತ್ರ ಚಿಕಿತ್ಸೆಯೂ ಆಗಿದೆ. ಕೆಲವೊಮ್ಮೆ ಅನಿವಾರ್ಯ ಕಾರಣಗಳಿಗಾಗಿ ಹಲವು ಬಾರಿ ಮುಟ್ಟು ಮುಂದೂಡುವ ಮಾತ್ರೆ ತೆಗೆದುಕೊಂಡಿದ್ದೇನೆ. ದೀರ್ಘಾವಧಿಯಲ್ಲಿ ಈ ರೀತಿ ಮಾತ್ರೆ ತೆಗೆದುಕೊಂಡಾಗ ತೊಂದರೆ ಎಂದು ಹೇಳುತ್ತಾರೆ. ಇದರಿಂದ ಏನಾದರು ಕ್ಯಾನ್ಸರ್ ಬರುತ್ತದೆಯೇ?

ನಾಗವೇಣಿ, ತುಮಕೂರು

ಉತ್ತರ: ನಾಗವೇಣಿಯವರೇ ನಿಮಗಷ್ಟೇ ಅಲ್ಲ, ಹೆಚ್ಚಿನವರಿಗೆ ಮುಟ್ಟಾಗುವುದು ಒಂದು ವೈಜ್ಞಾನಿಕ ಪ್ರಕ್ರಿಯೆ ಎಂಬುದು ತಿಳಿದಿಲ್ಲ. ಇದೊಂದು ಸಂಕೀರ್ಣ ಕ್ರಿಯೆಯಾಗಿದ್ದು, ಹಾರ್ಮೋನುಗಳ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಹೆಣ್ತನದ ಹಾರ್ಮೋನುಗಳಾದ ಈಸ್ಟ್ರೋಜನ್ ಮತ್ತು ಪ್ರೊಜೆಸ್ಟ್ರಾನ್ ಋತುಚಕ್ರದಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಪ್ರತಿ ತಿಂಗಳೂ ನಾಲ್ಕೈದು ದಿನ ಮುಟ್ಟಿನ ಋತುಸ್ರಾವವಾಗುತ್ತದೆ. ಅದರ ನಂತರ ಮೆದುಳಿನ ಹೈಪೋಥಲಾಮಸ್‌ಗೆ ಈಸ್ಟ್ರೋಜನ್ ಹಾರ್ಮೋನುಗಳ ಮಟ್ಟ ಕಡಿಮೆಯಾದ ಮಾಹಿತಿ ರವಾನೆಯಾಗಿ ಅದರಿಂದ ಬಿಡುಗಡೆಯಾಗುವ ಹಾರ್ಮೋನುಗಳ ಮೂಲಕ ಪಿಟ್ಯೂಟರಿ ಗ್ರಂಥಿಯು ಪ್ರಚೋದಿಸಲ್ಪಡುತ್ತದೆ. ಈ ಮೂಲಕ ಅಂಡಾಶಯದಿಂದ ಅಂಡಾಣು ಉತ್ಪತ್ತಿಯಾಗುವಂತೆ ಅದು ಪ್ರಚೋದಿಸುತ್ತದೆ. ಈ ಸಂದರ್ಭದಲ್ಲಿ ಈಸ್ಟ್ರೋಜನ್ ಹಾರ್ಮೋನುಗಳೂ ಹೆಚ್ಚಾಗಿರುತ್ತವೆ. ನಂತರ ಅಂಡಾಶಯದಿಂದ ಅಂಡಾಣು ಉತ್ಪತ್ತಿಯಾಗಿ ಪ್ರೊಜೆಸ್ಟ್ರಾನ್ ಹಾರ್ಮೋನುಗಳು ಹೆಚ್ಚಾಗುತ್ತವೆ. ಪ್ರತಿ ಋತುಚಕ್ರದಲ್ಲಿಯೂ ಅಂಡಾಣು ಉತ್ಪತ್ತಿಯಾಗುವ ಸಮಯದಲ್ಲಿ ಗಂಡು ಹೆಣ್ಣಿನ ಮಿಲನವಾಗಿ ಈ ಮೂಲಕ ಅಂಡಾಣು ಮತ್ತು ವೀರ್ಯಾಣುಗಳ ಸಮಾಗಮದಿಂದ ಗರ್ಭಧರಿಸಿದರೆ ಈ ಎರಡು ಹಾರ್ಮೋನುಗಳ ಮಟ್ಟ ಹೆಚ್ಚಾಗುತ್ತಲೇ ಹೋಗುತ್ತದೆ ಮತ್ತು ಗರ್ಭಧಾರಣೆ ಮುಂದುವರೆಯುತ್ತದೆ.

ಮಗುವಾಗುವವರೆಗೂ (ಒಂಬತ್ತು ತಿಂಗಳು) ಮುಟ್ಟು ಬರುವುದಿಲ್ಲ. ಗರ್ಭಧಾರಣೆಯಾಗದಿದ್ದಲ್ಲಿ ಮೆದುಳಿನ ಸಂದೇಶದ ಮೇರೆಗೆ ಪ್ರಚೋದಕ ಹಾರ್ಮೋನುಗಳು ಬಿಡುಗಡೆಯಾಗದೇ ಈಸ್ಟ್ರೋಜನ್ ಮತ್ತು ಪ್ರೊಜೆಸ್ಟ್ರಾನ್ ಹಾರ್ಮೋನುಗಳ ಮಟ್ಟ ಕಡಿಮೆಯಾಗುತ್ತದೆ. ಗರ್ಭಧಾರಣೆಗಾಗಿ ಪ್ರತಿ ತಿಂಗಳೂ ಸಿದ್ಧವಾಗುವ ಗರ್ಭಕೋಶದ ಒಳಪದರ ಕಳಚಿ ಹೊರಬರುವದೇ ಮಾಸಿಕ ಋತುಸ್ರಾವ ಅಥವಾ ಮುಟ್ಟು ಎನಿಸಿಕೊಳ್ಳುತ್ತದೆ. ಇದು ಮುಟ್ಟು ಹಾಗೂ ಗರ್ಭಧಾರಣೆಯ ವೈಜ್ಞಾನಿಕ ವಿಶ್ಲೇಷಣೆ.

ಹಾಗಾದರೆ ಮುಟ್ಟು ಮುಂದೂಡಲು ಹೇಗೆ ಸಾಧ್ಯ?: ಮಹಿಳೆಯರು ಕೃತಕವಾಗಿ ಈಸ್ಟ್ರೋಜನ್ ಅಥವಾ ಪ್ರೊಜೆಸ್ಟ್ರೋಜನ್ ಹಾರ್ಮೋನುಗಳನ್ನು ಒಳಗೊಂಡಿರುವ ಮಾತ್ರೆಗಳನ್ನು ನಿಗದಿತ ಋತುಚಕ್ರಕ್ಕಿಂತ ನಾಲ್ಕೈದು ದಿನಗಳ ಮೊದಲೇ ಸೇವಿಸಲು ಆರಂಭಿಸುತ್ತಾರೆ. ಆಗ ರಕ್ತದಲ್ಲಿ ಈ ಹಾರ್ಮೋನುಗಳ ಮಟ್ಟ ಸಾಕಷ್ಟು ಇದ್ದರೆ ಮೆದುಳಿನ ಹೈಪೋಥಲಾಮಸ್‌ಗೆ ಹಾರ್ಮೋನ್ ಮಟ್ಟ ಕಡಿಮೆಯಾದ ಸಂದೇಶ ಹೋಗುವುದಿಲ್ಲ. ಹಾಗಾಗಿ ಕೃತಕ ಹಾರ್ಮೋನುಗಳಿರುವ ಮಾತ್ರೆಗಳನ್ನು ಸೇವಿಸುತ್ತಿರುವವರೆಗೆ ಋತುಚಕ್ರ ಆರಂಭವಾಗುವುದಿಲ್ಲ. ಅಂದರೆ ಮಾತ್ರೆಗಳಿಂದ ನಾವು ನಮ್ಮ ಮೆದುಳನ್ನು ಮೋಸಗೊಳಿಸಿ ಮುಟ್ಟು ಮುಂದುಹಾಕುತ್ತಿದ್ದೇವೆ ಎಂಬುದನ್ನ ಅರ್ಥ ಮಾಡಿಕೊಳ್ಳಬೇಕು. ಮಾತ್ರೆ ತೆಗೆದುಕೊಳ್ಳುವುದನ್ನು ಬಿಟ್ಟಮೇಲೆ ಮೆದುಳಿಗೆ ಹೋಗುವ ಸಂದೇಶ ನಿಂತುಹೋಗಿ ಋತುಚಕ್ರ ಆರಂಭವಾಗುತ್ತದೆ.

ಸಂತಾನ ನಿರೋಧಕ ಮಾತ್ರೆಗಳಲ್ಲೂ ಇದೇ ತತ್ವ ಅನ್ವಯವಾಗುತ್ತದೆ. ಈ ಹಾರ್ಮೋನುಗಳಮಟ್ಟ ಕಡಿಮೆಯಾಗಿ ಮೆದುಳಿಗೆ ಸಂದೇಶ ಹೋಗುವ ಮೊದಲೇ ಮುಟ್ಟು ಮುಂದೂಡುವ ಮಾತ್ರೆಗಳನ್ನು ತೆಗೆದುಕೊಳ್ಳಲು ಆರಂಭಿಸಿದ್ದರೆ ಮುಟ್ಟು ಬಂದುಹೋಗುತ್ತದೆ. ಹಾಗಾಗಿ ತುರ್ತಾಗಿ ಮುಟ್ಟನ್ನು ಹಿಂದೆ–ಮುಂದೆ ಮಾಡಲು ಬರುವುದಿಲ್ಲ. ನೀವು ಈ ಪ್ರಕ್ರಿಯೆಯಲ್ಲಿ ವ್ಯತ್ಯಾಸ ಮಾಡಿರುವುದರಿಂದ ಮಾತ್ರೆ ತೆಗೆದುಕೊಂಡರೂ ಮುಟ್ಟಾಗಿರಬಹುದು. ಈ ಮಾತ್ರೆಗಳನ್ನು ಸೇವಿಸುವುದರಿಂದ ಕ್ಯಾನ್ಸರ್ ಕಾಯಿಲೆ ಬರುವುದರ ಬಗ್ಗೆ ವರದಿಗಳಿಲ್ಲ. ಆದರೆ ಮುಟ್ಟಿನ ಸ್ರಾವದಲ್ಲಿ ಏರುಪೇರಾಗಬಹುದು. ಕೆಲವರು ಮುಟ್ಟನ್ನ ಪ್ರೀಪೋನ್(ಹಿಂದಕ್ಕೆ) ಮಾಡಿ ಎಂದು ಕೇಳುತ್ತಾರೆ. ಇಲ್ಲಿಯೂ ಮಾತ್ರೆಗಳನ್ನೇ ಕೆಲವು ದಿನಗಳ ಕಾಲ ಕೊಟ್ಟು ನಿಲ್ಲಿಸಿದಾಗ ಋತುಚಕ್ರ ಆರಂಭವಾಗುತ್ತದೆ. ಅವಶ್ಯವಿದ್ದರಷ್ಟೇ ವೈದ್ಯರ ಸಲಹೆಯ ಮೇರೆಗೆ ಇಂತಹ ಕೃತಕ ಹಾರ್ಮೋನು ಮಾತ್ರೆಗಳನ್ನು ತೆಗೆದುಕೊಳ್ಳಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು


‘ಭಾರತಕ್ಕೆ ಜಿ–20 ಅಧ್ಯಕ್ಷತೆ ಮಹತ್ವದ್ದು’

ವಾಷಿಂಗ್ಟನ್ (ಪಿಟಿಐ): ಜಗತ್ತು ಆರ್ಥಿಕ ಹಿಂಜರಿತವನ್ನು ಎದುರಿಸುತ್ತಿರುವ ಹಾಗೂ ಹಲವೆಡೆ ಸಾಮಾಜಿಕ ಸಮಸ್ಯೆಗಳು ಇರುವ ಸಂದರ್ಭದಲ್ಲಿ ಭಾರತಕ್ಕೆ ಜಿ–20 ಅಧ್ಯಕ್ಷತೆ ಸಿಕ್ಕಿದ್ದು, ಅಂತರರಾಷ್ಟ್ರೀಯ ಸಮುದಾಯದ ಪಾಲಿಗೆ ಇದು ಮಹತ್ವದ್ದು ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲೀನಾ ಜಾರ್ಜಿವಾ ಹೇಳಿದ್ದಾರೆ.

‘ಜಿ–20 ನಾಯಕತ್ವವನ್ನು ಭಾರತ ವಹಿಸಿಕೊಂಡಿರುವ ನಮಗೆ ಮಹತ್ವದ್ದು. ಜಾಗತಿಕ ಅರ್ಥ ವ್ಯವಸ್ಥೆಯನ್ನು ರಕ್ಷಿಸುವ ಮೂಲಕ ಜಗತ್ತು ತನ್ನ ಒಳಿತನ್ನು ರಕ್ಷಿಸಿಕೊಳ್ಳಬೇಕಿದೆ. ನಮ್ಮನ್ನು ಒಂದಾಗಿ ಇರಿಸುವ ಆ ಮಹಾನ್ ಜಾಗತಿಕ ಸೇವೆಯನ್ನು ಭಾರತವು ಮಾಡಲಿದೆ ಎಂಬುದು ನನ್ನ ಬಯಕೆ’ ಎಂದು ಅವರು ಹೇಳಿದ್ದಾರೆ.

ಭಾರತವು ಕೆಲವು ಕಷ್ಟದ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿದೆ. ಅವು ಈಗ ಪ್ರಯೋಜನ ತಂದುಕೊಡುತ್ತಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,858
ಇಂದಿನ ಅಂತ್ಯ	17,956
▲	98
ದಿನದ ಗರಿಷ್ಠ	17,999

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1240 (1240)
ಸೂರ್ಯಕಾಂತಿ (ರಿಫೈನ್ಡ್)	₹1280 (1280)
ಪಾಮೋಲಿನ್	₹920 (928)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1700
ಮಧ್ಯಮ	₹1000-1200
ಸಣ್ಣ	₹500-700

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹505-690
ದ್ವಿತಳಿ (ಬಿ.ವಿ)	₹511-823

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹136.50
ಆರ್‌ಎಸ್‌ಎಸ್-5	₹131
ಗುಡ್ ಲಾಟ್	₹124

ಹೆಚ್ಚಿನ ವಹಿವಾಟು ನಿರೀಕ್ಷೆಯಲ್ಲಿರುವ ಉದ್ದಿಮೆಗಳಿಗೆ ದುಬಾರಿಯಾದ ಸಾಲ

ಎಂಎಸ್‌ಎಂಇ: ಬಂಡವಾಳದ ಸಮಸ್ಯೆ

• ವಿಜಯ್ ಜೋಷಿ

ಬೆಂಗಳೂರು: ಕೋವಿಡ್–19 ಸಾಂಕ್ರಾಮಿಕದ ಅವಧಿಯಲ್ಲಿ ವಹಿವಾಟು ಇಲ್ಲದೆ ಬಸವಳಿದಿದ್ದ ರಾಜ್ಯದ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಉದ್ದಿಮೆಗಳು ಈಗ ಬಂಡವಾಳದ ಕೊರತೆಯನ್ನು ಎದುರಿಸುತ್ತಿವೆ.

ಹಣದುಬ್ಬರ ಏರಿಕೆಯನ್ನು ನಿಯಂತ್ರಿಸಲು ಭಾರತೀಯ ರಿಸರ್ವ್ ಬ್ಯಾಂಕ್ 2022ರ ಮೇ ತಿಂಗಳಿನಿಂದ ರೆಪೊ ದರವನ್ನು ಹೆಚ್ಚಿಸುತ್ತ ಬಂದಿದೆ. ಇದರ ಪರಿಣಾಮವಾಗಿ ಸಾಲದ ಮೇಲಿನ ಬಡ್ಡಿ ದರವು ಹೆಚ್ಚಾಗಿದೆ. ಇದು ಕೂಡ ಎಂಎಸ್‌ಎಂಇ ವಲಯದ ಉದ್ದಿಮೆಗಳ ಪಾಲಿಗೆ ಬಂಡವಾಳ ಸಂಗ್ರಹವನ್ನು ದುಬಾರಿಯಾಗಿಸಿದೆ.

‘ಕೋವಿಡ್‌ನಿಂದಾಗಿ ಸೃಷ್ಟಿಯಾಗಿದ್ದ ಹಲವು ಅನಿಶ್ಚಿತತೆಗಳು ಈಗ ಮರೆಗೆ ಸರಿದಿವೆ. ಮುಂದಿನ ದಿನಗಳಲ್ಲಿ ವಹಿವಾಟು ಚೆನ್ನಾಗಿ ಆಗಲಿದೆ ಎಂಬ ನಿರೀಕ್ಷೆಯಲ್ಲಿ ಎಂಎಸ್‌ಎಂಇ ವಲಯದ ಹಲವು ಉದ್ದಿಮೆಗಳು ಈಗ ಆಧುನೀಕರಣಕ್ಕೆ ಮುಂದಾಗುತ್ತಿವೆ. ಇದಕ್ಕೆ ಹೆಚ್ಚಿನ ಬಂಡವಾಳದ ಅಗತ್ಯ ಇದೆ. ಆದರೆ, ಬ್ಯಾಂಕ್‌ಗಳು, ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳು, ಸಾಲ ನೀಡಲು ಹಿಂದೆ–ಮುಂದೆ ನೋಡುತ್ತಿವೆ’ ಎಂದು ರಾಷ್ಟ್ರೀಯ ಎಂಎಸ್‌ಎಂಇ ಮಂಡಳಿಯ ಸದಸ್ಯ ಜೆ.ಆರ್. ಬಂಗೇರ ‘ಪ್ರಜಾವಾಣಿ’ಗೆ ತಿಳಿಸಿದರು.

‘2022ರ ಡಿಸೆಂಬರ್‌ವರೆಗಿನ ಮಾಹಿತಿ ಪ್ರಕಾರ, ರಾಜ್ಯದ ಎಂಎಸ್‌ಎಂಇ ವಲಯಕ್ಕೆ ದೊರೆತಿರುವ ಸಾಲದಲ್ಲಿ ಶೇಕಡ 73ರಷ್ಟು ಸಾಲವು ಖಾಸಗಿ ಬ್ಯಾಂಕ್‌ಗಳಿಂದ ಬಂದಿದೆ. ಸಾಲದಲ್ಲಿ ಶೇ 13ರಷ್ಟು ಪಾಲು ಮಾತ್ರ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಬಂದಿದೆ. ಇನ್ನುಳಿದ ಪಾಲು ವೆಂಚರ್ ಕ್ಯಾಪಿಟಲಿಸ್ಟ್‌ಗಳಿಂದ (ವಿ.ಸಿ) ಹಾಗೂ ಖಾಸಗಿ ಮೂಲಗಳಿಂದ ಬಂದಿದೆ’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಮಾಜಿ ಅಧ್ಯಕ್ಷ, ಉದ್ಯಮಿ ಜೆ. ಕ್ರಾಸ್ತ ಮಾಹಿತಿ ನೀಡಿದರು.



ಬಡ್ಡಿ ದರ ಹೆಚ್ಚುತ್ತಿರುವುದು ಎಂಎಸ್‌ಎಂಇ ಪಾಲಿಗೆ ಹೊರೆಯಾಗಿದೆ. ಸಾಲ ಮಂಜೂರು ವಿಳಂಬ ಹಾಗೂ ಮಾರ್ಜಿನ್ ಜಾಸ್ತಿ ಇರುವುದು ಸಮಸ್ಯೆಯಾಗಿದೆ
ಬಿ.ವಿ. ಗೋಪಾಲ ರೆಡ್ಡಿ, ಅಧ್ಯಕ್ಷ, ಎಫ್‌ಕೆಸಿಸಿಐ

‘ಕರ್ನಾಟಕದ ವಾಣಿಜ್ಯೋದ್ಯಮಗಳಿಗೆ ಬ್ಯಾಂಕ್‌ಗಳಿಂದ ಸಿಗುವ ಸಾಲದ ಪಾಲು ಅವುಗಳ ಆರ್ಥಿಕ ಗಾತ್ರಕ್ಕೆ ಹೋಲಿಸಿದರೆ ಕಡಿಮೆ ಇದೆ’ ಎಂದು 2021–22ನೇ ಸಾಲಿನ ರಾಜ್ಯ ಆರ್ಥಿಕ ಸಮೀಕ್ಷೆಯು ಹೇಳಿದೆ. ಅಲ್ಲದೆ, ‘ರಾಜ್ಯ ಸರ್ಕಾರವು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯ ಮೂಲಕ, ತುರ್ತು ಸಾಲ ಖಾತರಿ ಯೋಜನೆಯ (ಇಸಿಎಲ್‌ಜಿಎಸ್) ಅಡಿಯಲ್ಲಿ ಕೋವಿಡ್‌ನಿಂದ ತೊಂದರೆಗೆ ಒಳಗಾದ ಉದ್ದಿಮೆಗಳಿಗೆ ಸಾಲ ಕೊಡುವಂತೆ ಬ್ಯಾಂಕ್‌ಗಳಿಗೆ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಉತ್ತೇಜನ ನೀಡಬೇಕು’ ಎಂದು ಸಮೀಕ್ಷೆ ಹೇಳಿದೆ.

ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಸಿಗುವ ಸಾಲದ ಮೇಲಿನ ಬಡ್ಡಿಯು ಈಗ ಶೇ 9.15ರಿಂದ ಶೇ 10ರವರೆಗೂ ಇದೆ. ‘ಇಸಿಎಲ್‌ಜಿಎಸ್ ಯೋಜನೆಯನ್ನು ಜಾರಿಗೆ ತಂದಿದೆಯಾದರೂ, ಅದರ ಅಡಿಯಲ್ಲಿಯೂ ಸಾಲ ಸುಲಭವಾಗಿ ಸಿಗುತ್ತಿಲ್ಲ ಎಂದು ಉದ್ಯಮಿಗಳು ದೂರುತ್ತಾರೆ.

‘ಉದ್ದಿಮೆಗಳು ಹೊಸ ಉಪಕರಣ ಖರೀದಿಗೆ ಸಾಲ ಪಡೆಯಬೇಕಾದರೆ, ಉಪಕರಣದ ಮೌಲ್ಯದ ಶೇಕಡ 25ರಷ್ಟನ್ನು ತಾವೇ ಹೊಂದಿಸಬೇಕು. ಇನ್ನುಳಿದ ಶೇ 75ರಷ್ಟು ಮೊತ್ತವನ್ನು ಬ್ಯಾಂಕ್‌ಗಳು ಸಾಲದ ರೂಪದಲ್ಲಿ ನೀಡುತ್ತವೆ. ಉದ್ದಿಮೆಗಳು ತಾವೇ ಹೊಂದಿಸಿಕೊಡಬೇಕಿರುವ ಮೊತ್ತವು ಈಗಿನ ಸಂದರ್ಭದಲ್ಲಿ ಹೊರೆಯಂತೆ ಆಗುತ್ತಿದ್ದು, ಅದನ್ನು ಈಗ ಶೇ 5ಕ್ಕೆ ‘ಇಳಿಸುವುದು ಸೂಕ್ತ’ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಬಿ.ವಿ. ಗೋಪಾಲ ರೆಡ್ಡಿ ಅಭಿಪ್ರಾಯಪಟ್ಟರು.


‘ಕೋವಿಡ್‌ನಿಂದಾಗಿಆದತೊಂದರೆಗಳು ಹಾಗೂ ಈಗಿನ ನಗದು ಲಭ್ಯತೆಯ ಕೊರತೆಯು ಶೇ 25ರಷ್ಟು ಮಾರ್ಜಿನ್ ಹಣ ಹೊಂದಿಸುವುದನ್ನು ಕಷ್ಟವಾಗಿಸಿದೆ’ ಎಂದು ಬಂಗೇರ ವಿವರಿಸಿದರು. ಸಾಲ ಮರುಪಾವತಿಯಲ್ಲಿ ವಿಫಲವಾಗಿಲ್ಲದ, ಐದು ವರ್ಷಗಳಿಂದ ಕಾರ್ಯಾಚರಿಸುತ್ತಿರುವ ಹಾಗೂ 3 ವರ್ಷಗಳಿಂದ ಲಾಭದಲ್ಲಿರುವ ಉದ್ದಿಮೆಗಳಿಂದ ಶೇ 5ರ ಮಾರ್ಜಿನ್ ಪಡೆದು ಸಾಲ ನೀಡಿದರೆ ಒಳಿತು ಎಂದರು.

ಸುದ್ದಿ 2 ನಿಮಿಷ

ವಿಪ್ರೊ ಲಾಭ ಶೇ 2.8ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ/ ರಾಯಿಟರ್ಸ್): ಐ.ಟಿ. ಸೇವೆಗಳನ್ನು ನೀಡುವ ವಿಪ್ರೊ ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ಮಾರುಕಟ್ಟೆ ನಿರೀಕ್ಷೆಯನ್ನೂ ಮೀರಿ ಲಾಭ ಗಳಿಸಿದೆ. ಡಿಸೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ಕಂಪನಿಯು ₹ 2,900 ಕೋಟಿ ಲಾಭ ಗಳಿಸಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಂದಾಜು ಮಾಡಿದ್ದರು. ಆದರೆ, ಕಂಪನಿಯು ಅಂದಾಜನ್ನು ಮೀರಿದ್ದು, ₹ 3,053 ಕೋಟಿ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭ ₹ 2,969 ಕೋಟಿ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 2.8ರಷ್ಟು ಹೆಚ್ಚಾಗಿದೆ ಎಂದು ಕಂಪನಿ ತಿಳಿಸಿದೆ.



ಕಂಪನಿಯ ವರಮಾನ ಹಿಂದಿನ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 14.3ರಷ್ಟು ಹೆಚ್ಚಾಗಿ ₹ 23,229 ಕೋಟಿಗೆ ತಲುಪಿದೆ. ತ್ರೈಮಾಸಿಕದಲ್ಲಿ, ₹ 8,150 ಕೋಟಿಗೂ ಹೆಚ್ಚಿನ ದೊಡ್ಡ ಪ್ರಮಾಣದ ಒಪ್ಪಂದಗಳಿಗೆ ಸಹಿ ಹಾಕಿರುವುದನ್ನೂ ಒಳಗೊಂಡು ಒಟ್ಟು ₹ 35,045 ಕೋಟಿ ಮೊತ್ತದ ಒಪ್ಪಂದ ನಡೆದಿದೆ ಎಂದು ಕಂಪನಿಯ ಸಿಇಒ ಥಿಯರಿ ಡೆಲಾಪೋರ್ಟ್ ತಿಳಿಸಿದ್ದಾರೆ.

ಗ್ರಾಹಕರೊಂದಿಗಿನ ಸಂಬಂಧವು ಇನ್ನಷ್ಟು ಬಲಗೊಳ್ಳುತ್ತಿದೆ. ಹೀಗಾಗಿ ಕಂಪನಿಯ ಮಾರುಕಟ್ಟೆ ಪಾಲು ಗಳಿಕೆಯು ಮುಂದುವರಿಯಲಿದೆ ಎಂದು ಹೇಳಿದ್ದಾರೆ.

ಕಂಪನಿಯು ಪ್ರತಿ ಷೇರಿಗೆ ₹ 1ರಷ್ಟು ಮಧ್ಯಂತರ ಲಾಭಾಂಶ ಘೋಷಿಸಿದೆ.

ದಿನಕ್ಕೆ 60 ಸಾವಿರ ಲೀಟರ್ ಎಥೆನಾಲ್ ಉತ್ಪಾದನೆ ಗುರಿ: ಎಂಆರ್‌ಪಿಎಲ್

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊ ಕೆಮಿಕಲ್ ಲಿಮಿಟೆಡ್ (ಎಂಆರ್‌ಪಿಎಲ್) ಹತ್ತಿ, ಜೋಳ ಮೊದಲಾದ ಕೃಷಿ ತ್ಯಾಜ್ಯ ಬಳಸಿ ಎಥೆನಾಲ್ ಉತ್ಪಾದಿಸಲು ಮುಂದಾಗಿದೆ. ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ 2ಜಿ ಎಥೆನಾಲ್ ಘಟಕ ಸ್ಥಾಪಿಸಿ, 2025ರ ವೇಳೆಗೆ ಪ್ರತಿನಿತ್ಯ 60 ಸಾವಿರ ಲೀಟರ್ ಎಥೆನಾಲ್ ಉತ್ಪಾದಿಸುವ ಗುರಿ ಹೊಂದಿದೆ.

ಶುಕ್ರವಾರ ಮಾಧ್ಯಮ ಸಂವಾದದಲ್ಲಿ ಈ ಕುರಿತು ಮಾಹಿತಿ ನೀಡಿದ ಎಂಆರ್‌ಪಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ವೆಂಕಟೇಶ್ ಅವರು, ‘ಡೀಸೆಲ್ ಹಾಗೂ ಪೆಟ್ರೋಲ್ ಬಳಕೆಯನ್ನು ಕಡಿಮೆ ಮಾಡಿ, ಎಥೆನಾಲ್ ಮತ್ತಿತರ ಪರ್ಯಾಯ ಇಂಧನ ಉತ್ಪಾದನೆ ಬಗ್ಗೆ ಗಮನ ಹರಿಸುವಂತೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಕೋವಿಡ್ ಸಂದರ್ಭದಲ್ಲಿ ಎರಡು ವರ್ಷ ವೈದ್ಯಕೀಯ ಕ್ಷೇತ್ರದ ಕೆಲವು ಅಗತ್ಯಗಳಿಗೆ ವಿದೇಶಿ ಉತ್ಪನ್ನಗಳನ್ನು ಅವಲಂಬಿಸಬೇಕಾದ ಸ್ಥಿತಿ ಬಂದಿತ್ತು. ಈ ಅನುಭವವು ಪೆಟ್ರೊ ಕೆಮಿಕಲ್ ಕ್ಷೇತ್ರದಲ್ಲಿ ಸ್ವಾವಲಂಬನೆಯ ಅಗತ್ಯವನ್ನು ತಿಳಿಸಿದೆ’ ಎಂದರು.

‘ಮುಂದಿನ ಐದು ವರ್ಷಗಳಲ್ಲಿ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಲ್ಲಿ ಡೀಸೆಲ್, ಪೆಟ್ರೋಲ್ ಮಾರಾಟದ 500 ಹೊಸ ರಿಟೇಲ್ ಔಟ್‌ಲೆಟ್ ಆರಂಭಿಸಲು ಕಂಪನಿ ಯೋಚಿಸಿದೆ. ಈಗಾಗಲೇ ವಿವಿಧೆಡೆಗಳಲ್ಲಿ 47 ರಿಟೇಲ್ ಔಟ್‌ಲೆಟ್‌ಗಳು ಕಾರ್ಯನಿರ್ವಹಿಸುತ್ತಿವೆ’ ಎಂದು ಹೇಳಿದರು.



ಬಂಡವಾಳ ವೆಚ್ಚ ಹೆಚ್ಚಳ ಸಾಧ್ಯತೆ

ಮುಂಬೈ (ರಾಯಿಟರ್ಸ್): ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರವು ಮುಂದಿನ ಹಣಕಾಸು ವರ್ಷಕ್ಕೆ ಬಂಡವಾಳ ವೆಚ್ಚವನ್ನು ಶೇಕಡ 30ರಷ್ಟು ಹೆಚ್ಚಿಸುವ ಸಾಧ್ಯತೆ ಇದ್ದು, ಒಟ್ಟು ವೆಚ್ಚವು ₹ 9 ಲಕ್ಷ ಕೋಟಿಗೆ ತಲುಪಲಿದೆ ಎಂದು ಬರ್ಕ್‌ಲೇಸ್ ಸಂಸ್ಥೆ ಹೇಳಿದೆ.


ಕೇಂದ್ರ ಸರ್ಕಾರವು ಫೆಬ್ರುವರಿ 1ರಂದು ಬಜೆಟ್ ಮಂಡಿಸಲಿದೆ. 2024ರಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ವರಮಾನ ವೆಚ್ಚ ಒಟ್ಟಾರೆಯಾಗಿ ಸ್ಥಿರವಾಗಿ ಇರುವುದರಿಂದ ಸರ್ಕಾರವು ಬಂಡವಾಳ ವೆಚ್ಚ ಮಾಡುವುದನ್ನು ಮುಂದುವರಿಸುವ ಸಾಧ್ಯತೆ ಇದೆ ಎಂದು ತಿಳಿಸಿದೆ. ಕೇಂದ್ರವು ಮುಂದಿನ ಹಣಕಾಸು ವರ್ಷಕ್ಕೆ ವಿತ್ತೀಯ ಕೊರತೆಯನ್ನು ಶೇ 5.8ರಲ್ಲಿ ನಿಯಂತ್ರಿಸುವ ಗುರಿ ಹೊಂದುವ ನಿರೀಕ್ಷೆ ಇದೆ ಎಂದು ಸಂಸ್ಥೆಯು ಹೇಳಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.4ರಷ್ಟು ಆಗುವ ಅಂದಾಜು ಇದೆ.

ಜ. 31ರಿಂದ ಬಜೆಟ್ ಅಧಿವೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನವು ಇದೇ 31ರಿಂದ ಆರಂಭವಾಗಲಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮರುದಿನ, ಫೆಬ್ರುವರಿ 1ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡಿಸಲಿದ್ದಾರೆ.

ಬಜೆಟ್ ಅಧಿವೇಶನವು ಸಂಸತ್ತಿನ ಹೊಸ ಕಟ್ಟಡದಲ್ಲಿ ನಡೆಯಲಿದೆಯೇ ಇಲ್ಲವೇ ಎನ್ನುವುದು ಈವರೆಗೂ ಖಚಿತವಾಗಿಲ್ಲ. ಆದರೆ, ಕಾರ್ಮಿಕರು ಕಾಮಗಾರಿ ಪೂರ್ಣಗೊಳಿಸಲು ಹಗಲಿರುಳು ಕೆಲಸ ಮಾಡುತ್ತಿದ್ದಾರೆ. ಸಂಸತ್ತಿನ ಹೊಸ ಕಟ್ಟಡದಲ್ಲಿ ಬಜೆಟ್ ಅಧಿವೇಶನ ನಡೆಯಬಹುದು ಎಂದು ನಿರೀಕ್ಷಿಸಲಾಗಿತ್ತು.



ಪ್ರಲ್ಹಾದ್ ಜೋಶಿ

‘ಅಧಿವೇಶನವು ಎರಡು ಭಾಗಗಳಲ್ಲಿ ನಡೆಯಲಿದೆ. ಮೊದಲ ಭಾಗವು ಜನವರಿ 31ರಿಂದ ಫೆಬ್ರುವರಿ 14ರ ವರೆಗೆ ನಡೆಯಲಿದೆ. ಎರಡನೇ ಭಾಗವು ಮಾರ್ಚ್ 12ರಿಂದ ಏಪ್ರಿಲ್ 6ರ ವರೆಗೆ ನಡೆಯಲಿದೆ’ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಮಾಹಿತಿ ನೀಡಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ‘ಭಾರತ್ ಜೋಡೊ ಯಾತ್ರೆ’ಯು ಇದೇ 30ರಂದು ಕೊನೆಗೊಳ್ಳಲಿದೆ. ಇದರ ಮರುದಿನವೇ ಅಧಿವೇಶನ ಪ್ರಾರಂಭವಾಗಲಿದೆ. ಈ ಅಂತರದಲ್ಲಿ ಕಾಂಗ್ರೆಸ್ ತನ್ನ ಸರ್ವಸದಸ್ಯರ ಸಭೆ ನಡೆಸಲಿದೆ. ಮಲ್ಲಿಕಾರ್ಜುನ ಖರ್ಗೆ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿರುವುದಕ್ಕೆ ಈ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗುವುದು. ಜೊತೆಗೆ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ.

ಸಂವಿಧಾನದ ಮೂಲ ಸ್ವರೂಪದ ಕುರಿತು ಉಪ ರಾಷ್ಟ್ರಪತಿ ಹಾಗೂ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರ ‘ದಾಳಿ’, ಭಾರತ–ಚೀನಾ ಗಡಿ ವಿವಾದ, ಬೆಲೆ ಏರಿಕೆ, ನಿರುದ್ಯೋಗದ ಕುರಿತು ಅಧಿವೇಶನದಲ್ಲಿ ವಿರೋಧ ಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಸಾಧ್ಯತೆ ಇದೆ.

‘ಗಂಗಾ ವಿಲಾಸ್’ ಯಾನ ಆರಂಭ

ಒಂದನೇ ಪುಟದಿಂದ

ವಾರಾಣಸಿಯಲ್ಲಿ ನಿರ್ಮಾಣವಾಗಿರುವ ಟೆಂಟ್ ನಗರವನ್ನೂ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ₹1000 ಕೋಟಿಗೂ ಹೆಚ್ಚು ವೆಚ್ಚದ ವಿವಿಧ ಒಳನಾಡು ಜಲಸಾರಿಗೆ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಪವಿತ್ರ ನಗರದ ಗಂಗಾ ನದಿಯ ದಡದಲ್ಲಿರುವ ಪ್ರಸಿದ್ಧ ಘಾಟ್‌ಗಳ ಎದುರು ಟೆಂಟ್ ನಗರವನ್ನು ನಿರ್ಮಿಸಲಾಗಿದೆ.

ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ವಾರಾಣಸಿ ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಈ ಟೆಂಟ್ ಸಿಟಿಯು, ಪ್ರವಾಸಿಗರಿಗೆ ವಸತಿ ಸೌಕರ್ಯವನ್ನು ಒದಗಿಸುತ್ತದೆ. ಇಲ್ಲಿ ಶಾಸ್ತ್ರೀಯ ಸಂಗೀತ, ಯೋಗ ಮತ್ತಿತರ ಮನರಂಜನಾ ಕಾರ್ಯಕ್ರಮಗಳೂ ಇರಲಿವೆ. ಪ್ರವಾಸಿಗರು ಬೋಟ್‌ಗಳ ಮೂಲಕ ಈ ನಗರವನ್ನು ತಲುಪಬಹುದು.

ಟೆಂಟ್ ನಗರವು ಅಕ್ಟೋಬರ್‌ನಿಂದ ಜೂನ್‌ವರೆಗೆ ಪ್ರವಾಸಿಗರಿಗೆ ಲಭ್ಯವಿರಲಿದೆ. ಅನಂತರ ಮಳೆಗಾಲದಲ್ಲಿ ನದಿಯ ನೀರಿನ ಮಟ್ಟ ಏರಿಕೆಯಾಗುವ ಕಾರಣ ಮೂರು ತಿಂಗಳು ಈ ಸೌಲಭ್ಯ ಲಭ್ಯವಿರುವುದಿಲ್ಲ.

ಮುಂಬೈ ಧಾರಣೆ

ಶೇಂಗಾ

13–1–2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	--- (1170)
ಪಾಮ್ ವಾರದ ಡೆಲಿವರಿ	918 (926)
ಸೂರ್ಯಕಾಂತಿ ಎಣ್ಣೆ ಕಚ್ಚಾ	1150 (1150)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,250 (55,900)
ಬೆಳ್ಳಿ ಕೆ.ಜಿ 68,150 (67,975)

ಆವರಣದಲ್ಲಿ ಹಿಂದಿನ ದಿನದ ಧಾರಣೆ





ಜಮ್ಮು–ಕಾಶ್ಮೀರದಲ್ಲಿನ ಭದ್ರತೆ ಕುರಿತು ಪರಿಶೀಲಿಸಲು ಜಮ್ಮುವಿನ ರಾಜಭವನದಲ್ಲಿ ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಯಿತು. ಲೆಫ್ಟಿನೆಂಟ್ ಜನರಲ್ ಮನೋಜ್ ಸಿನ್ಹಾ ಇದ್ದರು –ಪಿಟಿಐ ಚಿತ್ರ

‘ರಜೌರಿ ಉಗ್ರರ ದಾಳಿ ಪ್ರಕರಣ: ತನಿಖೆ ಎನ್‌ಐಎಗೆ’

ಜಮ್ಮು(ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಢಂಗ್ರಿ ಗ್ರಾಮದಲ್ಲಿ ಈಚೆಗೆ ಭಯೋತ್ಪಾದಕರು ನಾಗರಿಕರ ಮೇಲೆ ನಡೆಸಿದ ದಾಳಿ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಹಸ್ತಾಂತರಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ತಿಳಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಒಂದೂವರೆ ವರ್ಷದಲ್ಲಿ ಇಲ್ಲಿ ಉಗ್ರರು ನಡೆಸಿರುವ ದಾಳಿಗಳ ಬಗ್ಗೆ ಎನ್‌ಐಎ ತನಿಖೆ ನಡೆಸಲಿದೆ. ಜಮ್ಮು ಮತ್ತು ಕಾಶ್ಮೀರ ಪೊಲೀಸರು ಅವರಿಗೆ ಸಹಕಾರ ನೀಡಲಿದ್ದಾರೆ ಎಂದು ಹೇಳಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿನ ಭದ್ರತೆ ಕುರಿತು ಪರಿಶೀಲಿಸಲು ಜಮ್ಮುವಿನ ರಾಜಭವನದಲ್ಲಿ ಶಾ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಯಿತು. ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಭಾಗವಹಿಸಿದ್ದರು.

‘ಮುಂದೆ ಇಂತಹ ದಾಳಿಗಳು ನಡೆಯದಂತೆ ಕಟ್ಟೆಚ್ಚರ ವಹಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದೇವೆ’ ಎಂದು ಅಮಿತ್ ಶಾ ಅವರು ತಿಳಿಸಿದ್ದಾರೆ.

‘ಉಗ್ರರನ್ನು ಸುಮ್ಮನೆ ಬಿಡುವುದಿಲ್ಲ’(ಶ್ರೀನಗರ ವರದಿ): ಢಂಗ್ರಿ ಗ್ರಾಮದಲ್ಲಿ ನಾಗರಿಕರ ಮೇಲೆ ನಡೆದ ದಾಳಿಯಲ್ಲಿ ಶಾಮೀಲಾಗಿರುವ ಉಗ್ರರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಶಾ ಅವರು ಎಚ್ಚರಿಕೆ ನೀಡಿದ್ದಾರೆ.

ಹವಾಮಾನ ವೈಪರೀತ್ಯದಿಂದಾಗಿ ಶಾ ಅವರಿಗೆ ಢಂಗ್ರಿ ಗ್ರಾಮಕ್ಕೆ ಭೇಟಿ ನೀಡಲು ಸಾಧ್ಯವಾಗಿಲ್ಲ. ದಾಳಿಯಲ್ಲಿ ಮೃತಪಟ್ಟವರ ಕುಟುಂಬದವರ ಜೊತೆ ಅವರು ದೂರವಾಣಿ ಮೂಲಕ ಮಾತನಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಜ್ಞಾನಿ ದಾಮೋದರನ್ ನಿಧನ

ತಿರುವನಂತಪುರ (ಪಿಟಿಐ): ಖ್ಯಾತ ವಿಜ್ಞಾನಿ, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್) ಮಾಜಿ ನಿರ್ದೇಶಕ ಎ.ಡಿ.ದಾಮೋದರನ್ (87) ಅವರು ಶುಕ್ರವಾರ ನಿಧನರಾದರು.

ಇಲ್ಲಿನ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುತ್ತದೆ. ಶನಿವಾರ ‘ಶಾಂತಿ ಕಾವದಂ’ನಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಇವರಿಗೆ ಪತ್ನಿ ಇ.ಎಂ ಮಾಲತಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಮಾಲತಿ ಅವರು ಕೇರಳದ ಮೊದಲ ಮುಖ್ಯಮಂತ್ರಿ ಇ.ಎಂ.ಎಸ್. ನಂಬೂದರಿಪಾಡ್ ಅವರ ಪುತ್ರಿ.

ದಾಮೋದರನ್ ಅವರ ನಿಧನಕ್ಕೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.



ಭಾರತ–ಚೀನಾ ವಹಿವಾಟು: ಹೆಚ್ಚಿದ ವ್ಯಾಪಾರ ಕೊರತೆ

ಬೀಜಿಂಗ್ (ಪಿಟಿಐ): ಭಾರತ ಮತ್ತು ಚೀನಾ ನಡುವಿನ ವ್ಯಾಪಾರ ವಹಿವಾಟಿನ ಮೊತ್ತವು 2022ರಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 135.98 ಬಿಲಿಯನ್ ಡಾಲರ್‌ಗೆ (₹ 11.04 ಲಕ್ಷ ಕೋಟಿ) ತಲುಪಿದೆ.

ಆದರೆ ಚೀನಾದ ಜೊತೆಗಿನ ಭಾರತದ ವ್ಯಾಪಾರ ಕೊರತೆಯು ಇದೇ ಮೊದಲ ಬಾರಿಗೆ 100 ಬಿಲಿಯನ್ ಡಾಲರ್ (₹ 8.12 ಲಕ್ಷ ಕೋಟಿ) ಗಡಿಯನ್ನು ದಾಟಿದೆ.

ಚೀನಾದ ಕಸ್ಟಮ್ಸ್ ಇಲಾಖೆ ಬಿಡುಗಡೆ ಮಾಡಿರುವ ಅಂಕಿ–ಅಂಶಗಳಲ್ಲಿ ಈ ವಿವರಣೆ ಇದೆ. ಭಾರತ ಮತ್ತು ಚೀನಾ ನಡುವಿನ ವಹಿವಾಟಿನ ಒಟ್ಟು ಮೊತ್ತವು ಶೇಕಡ 8.4ರಷ್ಟು ಬೆಳವಣಿಗೆ ಕಂಡಿದೆ. ಚೀನಾದಿಂದ ಭಾರತಕ್ಕೆ ಆಗುವ ರಫ್ತುಗಳ ಪ್ರಮಾಣವು ಶೇ 21.7ರಷ್ಟು ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಭಾರತದಿಂದ ಚೀನಾಕ್ಕೆ ಆಗುವ ರಫ್ತಿನ ಪ್ರಮಾಣವು ಶೇ 37.9ರಷ್ಟು ಕಡಿಮೆ ಆಗಿದೆ.

ಚೀನಾ ಜೊತೆಗಿನ ವಹಿವಾಟಿನಲ್ಲಿ ಭಾರತದ ವ್ಯಾಪಾರ ಕೊರತೆ ಅಂತರವು 2021ರಲ್ಲಿ 69.38 ಬಿಲಿಯನ್ ಡಾಲರ್ (₹ 5.63 ಲಕ್ಷ ಕೋಟಿ) ಆಗಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಚಿತ್ರದುರ್ಗ	
ಆಪಿ	45200-45600
ಬೆಟ್ಟೆ	33800-34200
ಕೆಂಪುಗೋಟು	29400-29800
ರಾಶಿ	44700-45100
ಹೊಸನಗರ	
ಚಾಲಿ	25899-32199
ಕೆಂಪುಗೋಟು	31899-35469
ರಾಶಿ	44855-46689
ಸಿಪ್ಪೆಗೋಟು	10699-10699
ಕಾರ್ಕಳ	
ಹೊಸತು	30000-40000
ಹಳತು	40000-54500
ಕುಮಟ	
ಚಿಪ್ಪು	27089-32999
ಕೋಕ	17019-29999
ಫ್ಯಾಕ್ಟರಿ	11869-19829
ಹಳೆಚಾಲಿ	37609-41209
ಹೊಸಚಾಲಿ	33699-36569
ಶಿವಮೊಗ್ಗ	
ಬೆಟ್ಟೆ	47299-53709
ಗೊರಬಲು	18000-35809
ರಾಶಿ	39669-46299
ಸರಕು	46299-75300
ಸಿದ್ದಾಪುರ	
ಬಿಳಿಗೋಟು	30909-34289
ಚಾಲಿ	39199-42299
ಕೋಕ	27249-31282
ಕೆಂಪುಗೋಟು	30099-33119
ರಾಶಿ	43109-46609
ತಟ್ಟಿಬೆಟ್ಟೆ	39109-42909
ಶಿರಸಿ	
ಬೆಟ್ಟೆ	33299-43699
ಬಿಳಿಗೋಟು	23799-37399
ಚಾಲಿ	34699-44500
ಕೆಂಪುಗೋಟು	30669-33990
ರಾಶಿ	34069-46799
ಯಲ್ಲಾಪುರ	
ಬಿಳಿಗೋಟು	24899-34777
ಹಳೆಚಾಲಿ	36799-43599
ಹೊಸಚಾಲಿ	30899-35599
ಕೋಕ	16899-31899
ಕೆಂಪುಗೋಟು	26099-35609
ರಾಶಿ	45699-52899
ತಟ್ಟಿಬೆಟ್ಟೆ	37070-45200

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13750	13700	13700	149.40 ಸೆಂಟ್ಸ್
ಎಸಿ	6580	6700	6000	
ಆರ್‌ಪಿ	8000	8200	7925	ಲಂಡನ್
ಆರ್‌ಸಿ	4500	160 on OT	4200	1881 ಡಾಲರ್ಸ್

ಆತಿಥೇಯ ಭಾರತ ತಂಡದ ಶುಭಾರಂಭ; 'ಡಿ' ಗುಂಪಿನ ಪಂದ್ಯದಲ್ಲಿ ಸ್ಪೇನ್‌ಗೆ ನಿರಾಸೆ

ರೋಹಿದಾಸ್, ಹಾರ್ದಿಕ್ ಮಿಂಚು

ರೂರ್ಕೆಲಾ (ಪಿಟಿಐ): ಆತಿಥೇಯ ಭಾರತ ತಂಡವು ಶುಕ್ರವಾರ ಆರಂಭವಾದ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರ ಮುಂದೆ ನಡೆದ ಪಂದ್ಯದಲ್ಲಿ ಉಪನಾಯಕ ಅಮಿತ್ ರೋಹಿದಾಸ್ (12ನೇ ನಿಮಿಷ) ಮತ್ತು ಹಾರ್ದಿಕ್ ಸಿಂಗ್ (26ನೇ ನಿಮಿಷ) ಹೊಡೆದ ಗೋಲುಗಳ ಬಲದಿಂದ ಭಾರತವು ಡಿ ಗುಂಪಿನ ಪಂದ್ಯದಲ್ಲಿ 2–0ಯಿಂದ ಸ್ಪೇನ್ ವಿರುದ್ಧ ಗೆದ್ದಿತು.

ಪೆನಾಲ್ಟಿ ಕಾರ್ನರ್‌ನಲ್ಲಿ ರೋಹಿದಾಸ್ ರಿಬೌಂಡ್ ಆದ ಚೆಂಡನ್ನು ಗೋಲುಪೆಟ್ಟಿಗೆ ಸೇರಿಸುವಲ್ಲಿ ಯಶಸ್ವಿಯಾದರು. ಅದರೊಂದಿಗೆ ತಂಡದ ಖಾತೆ ತೆರೆದರು. ಅದೇ ಹಾರ್ದಿಕ್ ಅವರು ಫೀಲ್ಡ್ ಗೋಲ್ ಗಳಿಸಿದರು.

ಭಾರತ ತಂಡಕ್ಕೆ ಒಟ್ಟು ಐದು ಪೆನಾಲ್ಟಿ ಕಾರ್ನರ್‌ಗಳು ಲಭಿಸಿದವು. ಅದರಲ್ಲಿ ನಾಲ್ಕು ಪೆನಾಲ್ಟಿಗಳನ್ನು ಗೋಲುಗಳನ್ನಾಗಿ ಪರಿವರ್ತಿಸುವಲ್ಲಿ ತಂಡ ಯಶಸ್ವಿಯಾಗಲಿಲ್ಲ.

ಇನ್ನೊಂದೆಡೆ ಸ್ಪೇನ್ ತಂಡವು ತನಗೆ ಸಿಕ್ಕ ಮೂರು ಪೆನಾಲ್ಟಿ ಕಾರ್ನರ್‌ಗಳಲ್ಲಿಯೂ ವಿಫಲವಾಯಿತು.

ಇಡೀ ಪಂದ್ಯದಲ್ಲಿ ಚೆಂಡು ಹೆಚ್ಚಿನ ಸಮಯ ಭಾರತದ ನಿಯಂತ್ರಣದಲ್ಲಿತ್ತು. ರಕ್ಷಣಾ ವಿಭಾಗದ ಆಟಗಾರರು ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿದರು. ಇದರಿಂದಾಗಿ ಸ್ಪೇನ್ ಆಟಗಾರರ ಗೋಲು ಗಳಿಕೆಯ ಪ್ರಯತ್ನಗಳು ವ್ಯರ್ಥವಾದವು. ಭಾರತ ತಂಡವು ಎರಡನೇ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಆಡಲಿದೆ.

ಹಬ್ಬದ ಸಂಭ್ರಮ: ಭವ್ಯವಾದ ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ಹಬ್ಬದ ವಾತಾವರಣ ನೆಲೆಸಿತ್ತು.

21 ಸಾವಿರ ಆಸನ ಸಾಮರ್ಥ್ಯವಿರುವ ಈ ಕ್ರೀಡಾಂಗಣವು ಸಂಪೂರ್ಣ ಭರ್ತಿಯಾಗಿತ್ತು. ಅಲ್ಲದೇ ಕ್ರೀಡಾಂಗಣದ ಹೊರಗೂ ಸಾವಿರಾರು ಜನರು ಸೇರಿದ್ದರು.

ಸಂಗೀತ, ನೃತ್ಯ ಮತ್ತು ವಿವಿಧ ವೇಷಧಾರಿಗಳ ಸಂಭ್ರಮ ಮುಗಿಲುಮುಟ್ಟಿತ್ತು. ತ್ರಿವರ್ಣ ಧ್ವಜಗಳನ್ನು ಹಿಡಿದು ಘೋಷಣೆಗಳನ್ನು ಕೂಗುತ್ತಿದ್ದವರು.

ಸುಂದರಗಢ ವಲಯದಲ್ಲಿ ರೂರ್ಕೆಲಾ ಅತಿ ದೊಡ್ಡ ನಗರವಾಗಿದೆ. ಈ ಊರು ಭಾರತ ಹಾಕಿಯ 'ತೊಟ್ಟಿಲು' ಎನಿಸಿಕೊಂಡಿದೆ. ಇಲ್ಲಿಂದ 60ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಹಾಕಿ ಪಟುಗಳು ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಆಡಿದ್ದಾರೆ. ಈ ಹಿಂದೆ ಪಂಜಾಬ್‌ನ ಸಂಸಾರಪುರವನ್ನು ಭಾರತ ಹಾಕಿಯ ಕಣಜ ಎಂದು ಹೇಳಲಾಗುತ್ತಿತ್ತು.

ಸದ್ಯ ಹಾಕಿ ಇಂಡಿಯಾದ ಅಧ್ಯಕ್ಷ ಹಾಗೂ ಭಾರತ ತಂಡದ ಮಾಜಿ ನಾಯಕ ದಿಲೀಪ್ ಟರ್ಕಿ ಕೂಡ ಇದೇ ಪ್ರದೇಶದವರು.



ರೂರ್ಕೆಲಾದಲ್ಲಿ ಶುಕ್ರವಾರ ನಡೆದ ಹಾಕಿ ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಸ್ಪೇನ್ ವಿರುದ್ಧ ಜಯಿಸಿದ ಭಾರತದ ಆಟಗಾರರ ಸಂಭ್ರಮ –ಪಿಟಿಐ ಚಿತ್ರ

ಎಫ್‌ಐಎಚ್ ವಿಶ್ವಕಪ್ ಹಾಕಿ 2023 ಭುವನೇಶ್ವರ್–ರೂರ್ಕೆಲಾ ಒಡಿಶಾ

ಮುಖ್ಯಾಂಶಗಳು

- ಸ್ಪೇನ್ ವಿರುದ್ಧ 2–0 ಗೋಲುಗಳ ಗೆಲುವು
- 12, 26ನೇ ನಿಮಿಷದಲ್ಲಿ ಭಾರತಕ್ಕೆ ಗೋಲು
- ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ಹಬ್ಬದ ಸಂಭ್ರಮ

ಇಂದಿನ ಪಂದ್ಯಗಳು

ನ್ಯೂಜಿಲೆಂಡ್–ಚಿಲಿ ಆರಂಭ: ಮಧ್ಯಾಹ್ನ 1
ನೆದರ್ಲೆಂಡ್ಸ್–ಮಲೇಷ್ಯಾ ಆರಂಭ: ಮಧ್ಯಾಹ್ನ 3
ಬೆಲ್ಜಿಯಂ–ಕೊರಿಯಾ ಆರಂಭ: ಸಂಜೆ 5
ಜರ್ಮನಿ–ಜಪಾನ್ ಆರಂಭ: ಸಂಜೆ 7

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಆಸ್ಟ್ರೇಲಿಯಾದ ಆಟಗಾರರು ಫ್ರಾನ್ಸ್ ತಂಡದ ವಾನ್ ಸ್ಟ್ರಾಟೆನ್ ಅವರನ್ನು ತಡೆಯಲು ಯತ್ನಿಸಿದರು –ಪಿಟಿಐ ಚಿತ್ರ

ಹಾಕಿ ವಿಶ್ವಕಪ್: ಆಸ್ಟ್ರೇಲಿಯಾಕ್ಕೆ ಭರ್ಜರಿ ಜಯ

ಹೇವರ್ಡ್, ಕ್ರೇಗ್ ಹ್ಯಾಟ್ರಿಕ್

ಭುವನೇಶ್ವರ (ಪಿಟಿಐ): ಜೆರೆಮಿ ಹೇವರ್ಡ್ ಮತ್ತು ಟಾಮ್ ಕ್ರೇಗ್ ಅವರ ಹ್ಯಾಟ್ರಿಕ್ ನೆರವಿನಿಂದ ಆಸ್ಟ್ರೇಲಿಯಾ ತಂಡ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಭರ್ಜರಿ ಗೆಲುವಿನೊಂದಿಗೆ ಶುಭಾರಂಭ ಮಾಡಿತು.

ಭುವನೇಶ್ವರದ ಕಳಿಂಗಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ 8–0 ಗೋಲುಗಳಿಂದ ಫ್ರಾನ್ಸ್ ತಂಡವನ್ನು ಮಣಿಸಿತು.

ಕ್ರೇಗ್ ಅವರು 8, 31 ಮತ್ತು 44ನೇ ನಿಮಿಷಗಳಲ್ಲಿ ಮೂರು ಫೀಲ್ಡ್ ಗೋಲುಗಳನ್ನು ಗಳಿಸಿದರೆ, ಹೇವರ್ಡ್ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಮೂರು ಸಲ ಚೆಂಡನ್ನು ಗುರಿ ಸೇರಿಸಿದರು. ಅವರು 26, 28 ಮತ್ತು 38ನೇ ನಿ.ದಲ್ಲಿ ಗೋಲು ಹೊಡೆದರು.

ಇತರ ಗೋಲುಗಳನ್ನು ಫ್ಲಿನ್ ಒಗಿಲ್ವಿ (26ನೇ ನಿ.) ಹಾಗೂ ಟಾಮ್ ವಿಕ್‌ಹ್ಯಾಂ (53ನೇ ನಿ.) ತಂದುಕೊಟ್ಟರು.

'ಎ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಅರ್ಜೆಂಟೀನಾ 1–0 ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಪ್ರಯಾಸದಿಂದ ಗೆದ್ದಿತು. ಪಂದ್ಯದ ಮೊದಲ ಎರಡು ಕ್ವಾರ್ಟರ್‌ಗಳು ಗೋಲುರಹಿತವಾಗಿದ್ದವು.

ಕ್ಯಾಸೆಲಾ ಮೈಕೊ ಅವರು 42ನೇ ನಿಮಿಷದಲ್ಲಿ ಗೋಲು ಗಳಿಸಿ ಅರ್ಜೆಂಟೀನಾ ಗೆಲುವಿಗೆ ಕಾರಣರಾದರು. ಆಕ್ರಮಣಕಾರಿ ಆಟ ಪ್ರದರ್ಶಿಸಿದ ದಕ್ಷಿಣ ಆಫ್ರಿಕಾ ತಂಡ 2016ರ ಒಲಿಂಪಿಕ್ಸ್ ಚಾಂಪಿಯನ್ನರಿಗೆ ತಕ್ಕ ಪೈಪೋಟಿ ನೀಡುವಲ್ಲಿ ಯಶಸ್ವಿಯಾಯಿತು. ಮೊದಲ ಕ್ವಾರ್ಟರ್‌ನಲ್ಲಿ ಗೋಲು ಗಳಿಸಲು ಲಭಿಸಿದ್ದ ಕೆಲವು ಉತ್ತಮ ಅವಕಾಶಗಳನ್ನು ದಕ್ಷಿಣ ಆಫ್ರಿಕಾ ಆಟಗಾರರು ಕೈಚೆಲ್ಲಿದರು.

ಅರ್ಜೆಂಟೀನಾ ತನ್ನ ಮುಂದಿನ ಪಂದ್ಯದಲ್ಲಿ ಜ.16 ರಂದು ಆಸ್ಟ್ರೇಲಿಯಾವನ್ನು ಎದುರಿಸಲಿದ್ದರೆ, ದಕ್ಷಿಣ ಆಫ್ರಿಕಾ ತಂಡ ಫ್ರಾನ್ಸ್ ಸವಾಲು ಎದುರಿಸಲಿದೆ.

ಇಂಗ್ಲೆಂಡ್‌ಗೆ ಗೆಲುವು: ರೂರ್ಕೆಲಾದಲ್ಲಿ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ಇಂಗ್ಲೆಂಡ್ 5–0 ಗೋಲುಗಳಿಂದ ವೇಲ್ಸ್ ತಂಡವನ್ನು ಮಣಿಸಿತು.

ಪಾರ್ಕ್ ನಿಕೊಲಸ್ ಪಂದ್ಯ ಆರಂಭವಾದ ಕೆಲವೇ ಸೆಕೆಂಡುಗಳಲ್ಲಿ ಇಂಗ್ಲೆಂಡ್‌ಗೆ ಮುನ್ನಡೆ ತಂದಿತ್ತರು. ಅನ್ಸೆಲ್ ಲಿಯಾಮ್ (27 ಮತ್ತು 37ನೇ ನಿ.), ಫಿಲ್ ರೋಪರ್ (41) ಮತ್ತು ಬ್ಯಾಂಡುರಕ್ ನಿಕೊಲಸ್ (57ನೇ ನಿ.) ಅವರು ಇತರ ಗೋಲುಗಳನ್ನು ಗಳಿಸಿದರು.

ಅಂಧ ಮಹಿಳೆಯರ ಕ್ರಿಕೆಟ್: ಒಡಿಶಾ ಚಾಂಪಿಯನ್

ಕರ್ನಾಟಕ ತಂಡ ರನ್ನರ್ಸ್ ಅಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡದವರು ಇಲ್ಲಿ ನಡೆದ ಇಂಡಸ್ ಇಂಡ್ ಬ್ಯಾಂಕ್ ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಸೋತು 'ರನ್ನರ್ಸ್ ಅಪ್' ಆದರು.

ಶುಕ್ರವಾರ ನಡೆದ ಫೈನಲ್‌ನಲ್ಲಿ ಕರ್ನಾಟಕ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದ ಒಡಿಶಾ ಚಾಂಪಿಯನ್ ಆಯಿತು. ಟೂರ್ನಿಯ ಉದ್ದಕ್ಕೂ ಉತ್ತಮವಾಗಿ ಆಡಿದ್ದ ಆತಿಥೇಯ ಮಹಿಳೆಯರು ಅಂತಿಮ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು.

ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಕರ್ನಾಟಕ 16.3 ಓವರ್‌ಗಳಲ್ಲಿ 80 ರನ್‌ಗಳಿಗೆ ಆಲೌಟಾಯಿತು. ಒಡಿಶಾ ತಂಡ 12.2 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 81 ರನ್ ಗಳಿಸಿ ಗೆದ್ದಿತು. ಅಜೇಯ ಆಟವಾಡಿದ ಫುಲಾ ಸೊರೇನ್ (34) ಮತ್ತು ಬಸಂತಿ ಹನ್ಸ್‌ದಾ (25) ಅವರು ಒಡಿಶಾ ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸಿದರು.

ಇದಕ್ಕೂ ಮುನ್ನ ಕಳೆದ ಬಾರಿಯ ಚಾಂಪಿಯನ್ ಕರ್ನಾಟಕ ತಂಡ ಬ್ಯಾಟಿಂಗ್‌ನಲ್ಲಿ ಪೂರ್ಣ ವೈಫಲ್ಯ ಅನುಭವಿಸಿತು. ಒಡಿಶಾ ತಂಡ ಅತ್ಯುತ್ತಮ ಕ್ಷೇತ್ರರಕ್ಷಣೆ ಮೂಲಕ ಕೆಲವು ರನೌಟ್‌ಗಳನ್ನು ಮಾಡಿತು. ಆತಿಥೇಯ ತಂಡದ ವರ್ಷಾ (18) ಮತ್ತು ರೇಣುಕಾ (12) ಮಾತ್ರ ಎರಡಂಕಿಯ ಮೊತ್ತ ತಲುಪಿದರು.

ಬಸಂತಿ 'ಪಂದ್ಯಶ್ರೇಷ್ಠ' ಪ್ರಶಸ್ತಿ ಪಡೆದುಕೊಂಡರೆ, ಕರ್ನಾಟಕದ ವರ್ಷಾ, ಗಂಗಾ ಹಾಗೂ ಮಧ್ಯಪ್ರದೇಶದ ಸುಶಾಮಾ ಪಟೇಲ್ ಅವರು ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಆಟಗಾರ್ತಿ ಗೌರವ ತಮ್ಮದಾಗಿಸಿಕೊಂಡರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 16.3 ಓವರ್‌ಗಳಲ್ಲಿ 80 (ವರ್ಷಾ 18, ರೇಣುಕಾ 12, ಪಾರ್ವತಿ ಟುಡು 22ಕ್ಕೆ 2, ಪಾರ್ವತಿ ಮಾರಂಡಿ 10ಕ್ಕೆ 2).

ಒಡಿಶಾ: 12.2 ಓವರ್‌ಗಳಲ್ಲಿ 2 ವಿಕೆಟ್ ಗೆ 81 (ಫುಲಾ ಸೊರೇನ್ ಔಟಾಗದೆ 34, ಬಸಂತಿ ಔಟಾಗದೆ 25)



ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆದ ಕರ್ನಾಟಕ ತಂಡ

ರಣಜಿ ಕ್ರಿಕೆಟ್: ಜಲಜ್ ಮಿಂಚು, ಕೇರಳಕ್ಕೆ ಜಯ

ತುಂಬಾ (ಪಿಟಿಐ): ಎಂಟು ವಿಕೆಟ್‌ಗಳನ್ನು ಗಳಿಸಿದ ಜಲಜ್ ಸಕ್ಸೆನಾ ಅವರ ಆಟದ ನೆರವಿನಿಂದ ಕೇರಳ ತಂಡವು ರಣಜಿ ಟ್ರೋಫಿ ಸಿ ಗುಂಪಿನ ಪಂದ್ಯದಲ್ಲಿ ಜಯಿಸಿತು.

ಶುಕ್ರವಾರ ಇಲ್ಲಿ ಮುಕ್ತಾಯವಾದ ಪಂದ್ಯದಲ್ಲಿ ಕೇರಳ ತಂಡವು 204 ರನ್‌ಗಳಿಂದ ಸರ್ವಿಸಸ್ ವಿರುದ್ಧ ಗೆದ್ದಿತು. ಕೇರಳ ತಂಡವು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದೆ. ಅಗ್ರಸ್ಥಾನದಲ್ಲಿರುವ ಕರ್ನಾಟಕ ತನ್ನ ಮುಂದಿನ ಪಂದ್ಯದಲ್ಲಿ ಕೇರಳವು ಎದುರಿಸಲಿದೆ.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಜಾರ್ಖಂಡ್ ತಂಡವು 44 ರನ್‌ಗಳಿಂದ ಛತ್ತೀಸಗಢದ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರು: (ತುಂಬಾ): ಮೊದಲ ಇನಿಂಗ್ಸ್: ಕೇರಳ: 327, ಸರ್ವಿಸಸ್: 229. ಎರಡನೇ ಇನಿಂಗ್ಸ್: ಕೇರಳ: 60 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 242 (ಸಚಿನ್ ಬೇಬಿ 93, ದಿವೇಶ್ ಪಠಾಣಿಯಾ 13ಕ್ಕೆ2) ಸರ್ವಿಸಸ್: 46.4 ಓವರ್‌ಗಳಲ್ಲಿ 136 (ಶುಭಂ ರೊಹಿಲಾ 28, ಸೂಫಿಯಾನ್ ಆಲಂ 52, ಜಲಜ್ ಸಕ್ಸೆನಾ 36ಕ್ಕೆ8)



ಜಲಜ್ ಸಕ್ಸೆನಾ

ಫಲಿತಾಂಶ: ಕೇರಳ ತಂಡಕ್ಕೆ 204 ರನ್ ಜಯ.

(ಜೆಮ್ಶೆಡ್‌ಪುರ್): ಮೊದಲ ಇನಿಂಗ್ಸ್: ಜಾರ್ಖಂಡ್: 103, ಛತ್ತೀಸಗಢ 113, ಎರಡನೇ ಇನಿಂಗ್ಸ್: ಜಾರ್ಖಂಡ್: 366. ಛತ್ತೀಸಗಢ: 114.3 ಓವರ್‌ಗಳಲ್ಲಿ 312 (ಅಮನದೀಪ್ ಖರೆ 151, ಆಶುತೋಷ್ ಸಿಂಗ್ 30, ಅಜಯ್ ಜಾಧವ್ ಮಂಡಲ್ 29, ವಾಸುದೇವ್ 26, ಶಹಬಾಜ್ ನದೀಂ 87ಕ್ಕೆ3, ಅನುಕೂಲ್ ರಾಯ್ 45ಕ್ಕೆ5) ಫಲಿತಾಂಶ:ಜಾರ್ಖಂಡ್ ತಂಡಕ್ಕೆ 44 ರನ್ ಜಯ.

ಬ್ಯಾಡ್ಮಿಂಟನ್: ಪ್ರಣಯ್ ಸವಾಲು ಅಂತ್ಯ

ಸೆಮಿಗೆ ಸಾತ್ವಿಕ್– ಚಿರಾಗ್

ಕ್ವಾಲಾಲಂಪುರ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ಮತ್ತು ಚಿರಾಗ್ ಶೆಟ್ಟಿ ಜೋಡಿ ಮಲೇಷ್ಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು. ಆದರೆ ಎಚ್.ಎಸ್.ಪ್ರಣಯ್ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಸೋತರು.

ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಸಾತ್ವಿಕ್– ಚಿರಾಗ್ 17–21, 22–20, 21–9 ರಲ್ಲಿ ಚೀನಾದ ಲಿಯು ಯು ಚೆನ್– ಕ್ಸುವಾನ್ ಯಿ ಅವರನ್ನು ಮಣಿಸಿದರು. ಮೊದಲ ಗೇಮ್‌ನಲ್ಲಿ ಸೋತರೂ ಭಾರತದ ಜೋಡಿ ತಿರುಗೇಟು ನೀಡುವಲ್ಲಿ ಯಶಸ್ವಿಯಾಯಿತು.

ಪ್ರಣಯ್‌ಗೆ ನಿರಾಸೆ: 30 ವರ್ಷದ ಪ್ರಣಯ್ 16–21, 21–19, 10–21 ರಲ್ಲಿ ಜಪಾನ್‌ನ ಕೊಡೈ ನರವೊಕಾ ಕೈಯಲ್ಲಿ ಪರಾಭವಗೊಂಡರು. 84 ನಿಮಿಷಗಳ ಹೋರಾಟದಲ್ಲಿ ಜಪಾನ್‌ನ ಆಟಗಾರ ವೇಗದ ಸ್ಮ್ಯಾಷ್ ಮತ್ತು ಚುರುಕಿನ ಡ್ರಾಪ್ ಶಾಟ್‌ಗಳ ಮೂಲಕ ಗಮನ ಸೆಳೆದರು.

ಈ ಗೆಲುವಿನೊಂದಿಗೆ ಕೊಡೈ ಅವರು ಪ್ರಣಯ್ ವಿರುದ್ಧ ಅಜೇಯ ಸಾಧನೆ ಮುಂದುವರಿಸಿದ್ದಾರೆ. ಇವರಿಬ್ಬರು ಇದುವರೆಗೆ ಮೂರು ಸಲ ಪೈಪೋಟಿ ನಡೆಸಿದ್ದು, ಪ್ರಣಯ್ ಒಮ್ಮೆಯೂ ಗೆದ್ದಿಲ್ಲ. ಈ ಹಿಂದೆ ಸಿಂಗಪುರ ಓಪನ್ ಮತ್ತು ವಿಶ್ವ ಟೂರ್ ಫೈನಲ್ಸ್‌ನಲ್ಲಿ ಕೊಡೈ ಅವರು ಭಾರತದ ಆಟಗಾರನನ್ನು ಮಣಿಸಿದ್ದರು.



ಜಪಾನ್‌ನ ಕೊಡೈ ನರವೊಕಾ ಆಟದ ವೈಖರಿ –ಎಎಫ್‌ಪಿ ಚಿತ್ರ

ಮೊದಲ ಗೇಮ್‌ನಲ್ಲಿ ಸೋತ ಪ್ರಣಯ್, ಎರಡನೇ ಗೇಮ್‌ನಲ್ಲಿ ಉತ್ತಮ ಲಯದಲ್ಲಿ ಆಡಿ ಗೆದ್ದರು. ಆದರೆ ನಿರ್ಣಾಯಕ ಗೇಮ್‌ನಲ್ಲಿ ಜಪಾನ್‌ನ ಆಟಗಾರನ ಕೈಮೇಲಾಯಿತು. ಕೊಡೈ ಅವರು ಕಳೆದ ಎರಡು ಪಂದ್ಯಗಳನ್ನು ಮ್ಯಾರಥಾನ್ ಹೋರಾಟದಲ್ಲಿ ಜಯಿಸಿದ್ದರು. ಲೀ ಜಿ ಜಿಯಾ ಮತ್ತು ಎಂಗ್ ತ್ಸೆ ಯೊಂಗ್ ವಿರುದ್ಧದ ಪಂದ್ಯಗಳಲ್ಲಿ ಕ್ರಮವಾಗಿ 73 ಹಾಗೂ 72 ನಿಮಿಷ ಆಡಿದ್ದರು.

ಕ್ವಾರ್ಟರ್ ಫೈನಲ್‌ನ ಮೊದಲ ಗೇಮ್‌ನಲ್ಲಿ ಇಬ್ಬರೂ 7–7 ರಲ್ಲಿ ಸಮಬಲ ಸಾಧಿಸಿದ್ದರು. ಆ ಬಳಿಕ ನರವೊಕಾ ಮೇಲುಗೈ ಪಡೆದು ಗೇಮ್ ಗೆದ್ದುಕೊಂಡರು.

ಎರಡನೇ ಗೇಮ್‌ನಲ್ಲಿ ತುರುಸಿನ ಹೋರಾಟ ನಡೆಯಿತು. ಪ್ರಣಯ್ 13–9 ರಲ್ಲಿ ಮುನ್ನಡೆ ಗಳಿಸಿದ್ದರಾದರೂ ಮರುಹೋರಾಟ ನಡೆಸಿದ ನರವೊಕಾ 13–13 ರಲ್ಲಿ ಸಮಬಲ ಸಾಧಿಸಿದರು. ಆ ಬಳಿಕ 16–16, 18–18 ರಲ್ಲಿ ಸಮಬಲ ಕಂಡುಬಂತು. ಆದರೆ ಚುರುಕಿನ ರಿಟರ್ನ್ ಮತ್ತು ಕ್ರಾಸ್‌ಕೋರ್ಟ್ ಸ್ಮ್ಯಾಷ್ ಮೂಲಕ ಪಾಯಿಂಟ್ಸ್ ಕಲೆಹಾಕಿದ ಪ್ರಣಯ್, ಗೇಮ್ ಗೆದ್ದರು.

ನಿರ್ಣಾಯಕ ಗೇಮ್‌ನ ಆರಂಭದಲ್ಲಿ 5–3 ರಲ್ಲಿ ಮುನ್ನಡೆ ಪಡೆದ ನರವೊಕಾ ಎದುರಾಳಿಯ ಮೇಲೆ ಒತ್ತಡ ಹೇರಿದರು. ಸಾಕಷ್ಟು ಸ್ವಯಂಕೃತ ತಪ್ಪುಗಳನ್ನು ಮಾಡಿದ ಪ್ರಣಯ್, ಜಪಾನ್‌ನ ಆಟಗಾರನಿಗೆ 14–6ರ ಭಾರಿ ಮುನ್ನಡೆ ಗಳಿಸಲು ಅವಕಾಶ ನೀಡಿದರು. ಆ ಬಳಿಕ ಮರುಹೋರಾಟ ನಡೆಸಲು ಪ್ರಣಯ್ ವಿಫಲರಾದರು.

ರಣಜಿ ಆಟಗಾರ ಸಿದ್ಧಾರ್ಥ್ ಶರ್ಮಾ ಸಾವು

ನವದೆಹಲಿ (ಪಿಟಿಐ): ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುತ್ತಿರುವ ಹಿಮಾಚಲಪ್ರದೇಶ ತಂಡದ ಯುವವೇಗಿ ಸಿದ್ಧಾರ್ಥ್ ಶರ್ಮಾ ಅಲ್ಪಕಾಲದ ಅನಾರೋಗ್ಯದಿಂದಾಗಿ ಸಾವನ್ನಪ್ಪಿದರು.

ವಡೋದರಾದ ಆಸ್ಪತ್ರೆಯಲ್ಲಿ ಅವರು ದಾಖಲಾಗಿದ್ದರು. 28 ವರ್ಷದ ಸಿದ್ಧಾರ್ಥ್ ಅವರು ಹೋದ ವರ್ಷ ವಿಜಯ್ ಹಜಾರೆ ಟ್ರೋಫಿ ಗೆದ್ದ ಹಿಮಾಚಲ ತಂಡದಲ್ಲಿ ಆಡಿದ್ದರು. ಅವರು ಆರು ಪ್ರಥಮ ದರ್ಜೆ, ಒಂದು ಟಿ20 ಮತ್ತು ಆರು ಲಿಸ್ಟ್ ಎ ಪಂದ್ಯಗಳನ್ನು ಆಡಿದ್ದರು. ಒಟ್ಟು 33 ವಿಕೆಟ್ ಗಳಿಸಿದ್ದರು.



ಸಿದ್ಧಾರ್ಥ್

'ಗುರುವಾರ ರಾತ್ರಿ ಸಿದ್ಧಾರ್ಥ್ ನಿಧನರಾದರು. ಅವರಿಗೆ ಕಳೆದ ಕೆಲವು ದಿನಗಳಿಂದ ವೆಂಟಿಲೇಟರ್ ನೆರವಿನೊಂದಿಗೆ ಚಿಕಿತ್ಸೆ ನೀಡಲಾಗಿತ್ತು. ಈ ಋತುವಿನಲ್ಲಿ ಬರೋಡಾ ವಿರುದ್ಧದ ಪಂದ್ಯದಲ್ಲಿ ಅವರು ನಮ್ಮ ತಂಡದಲ್ಲಿದ್ದರು. ಆ ಪಂದ್ಯಕ್ಕೂ ಮುನ್ನ ಅವರು ವಾಂತಿ ಮಾಡಲಾರಂಭಿಸಿದ್ದರು. ಜೊತೆಗೆ ಇನ್ನಿತರ ಆರೋಗ್ಯ ಸಮಸ್ಯೆಗಳೂ ಕಂಡುಬಂದವು. ಆದ್ದರಿಂದ ಕೂಡಲೇ ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಯಿತು' ಎಂದು ಎಚ್‌ಪಿಸಿಎ ಕಾರ್ಯದರ್ಶಿ ಅವಿನಾಶ್ ಪರಮಾರ್ ತಿಳಿಸಿದರು.

ಸಿದ್ಧಾರ್ಥ್ ಅವರ ಪಾಲಕರು ಮತ್ತು ಅಣ್ಣ ವಿದೇಶದಲ್ಲಿ ನೆಲೆಸಿದ್ದಾರೆ. 'ವಿಷಯ ತಿಳಿದು ಕೆನಡಾದಿಂದ ಅವರ ಅಣ್ಣ ಬಂದಿದ್ದಾರೆ. ಇಂದು ಸಿದ್ಧಾರ್ಥ್ ಅವರ ಅಂತಿಮ ಸಂಸ್ಕಾರ ನೆರವೇರಿಸಿದರು' ಎಂದು ಪರಮಾರ್ ತಿಳಿಸಿದರು.

ಚೆನ್ನೈ ಡರ್ಬಿ ರೇಸ್

ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ

ವೂಲ್ಫ್ 777 ಸೌತ್ ಇಂಡಿಯಾ ಡರ್ಬಿ ಶನಿವಾರದ ಚೆನ್ನೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಲೈಂಟ್ 2, ಅಟೆನ್‌ಬೊರೊ 1, ಟರ್ಫ್ ಮೆಲೋಡಿ 3
2ನೇ ರೇಸ್: ಕಟಾನ 6, ಪ್ರೊಪೊಸ್ಟ್ 4, ಲಾರ್ಡ್ ಆಫ್ ದಿ ಟರ್ಫ್ 7
3ನೇ ರೇಸ್: ಹಲ್ಲುಸಿನೇಟ್ 3, ಅಲೆಕ್ಸಾಂಡರ್ 1, ವ್ಯಾಲೆಸ್ಕ 4
4ನೇ ರೇಸ್: ಜಾರ್ಜ್ ಎವರೆಸ್ಟ್ 7, ಇಬ್ರಾಹಿಮೊವಿಕ್ 1, ಸಿಲ್ವರ್ ಎಲಿಗೆನ್ಸ್ 4
5ನೇ ರೇಸ್: ಇನ್‌ಟುದಿಸ್ಟಾರ್ಮ್ 4, ಫೋರ್ಟ್ ನೆಲ್ಸನ್ 3, ಅರಾಲಿನ 5
6ನೇ ರೇಸ್: ಸೀಝ್ ಪೆರಿಲಸ್ 2, ಲೆಪಾರ್ಡ್ ರಾಕ್ 1, ವಾಚ್‌ಮೈಸ್ಟಾರ್ಸ್ 7
7ನೇ ರೇಸ್: ಶ್ಯಾಮ್‌ರಾಕ್ 6, ಕಿಂಗ್ ಲೂಯಿಸ್ 3, ಡಿಫ್ 1
8ನೇ ರೇಸ್: ಲೇಡಿ ಕೆಡೆಟ್ 7, ಸ್ವೆಕ್ಟಾಕಲ್ 3, ಲಕ್ಷನಮ್ 2

ಉತ್ತಮ ಬೆಟ್: ಸ್ಲೈಂಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	4,5,6	6,7,8

ವಿಶ್ವಕಪ್: ಭಾರತಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಬೆನೊನಿ, ದಕ್ಷಿಣ ಆಫ್ರಿಕಾ (ಪಿಟಿಐ): ಯುವ ಕ್ರಿಕೆಟ್ ಆಟಗಾರ್ತಿಯರಿಗೆ ಈಗ ವಿಶ್ವಮಟ್ಟದಲ್ಲಿ ಮಿಂಚುವ ಅವಕಾಶ ಒದಗಿಬಂದಿದೆ.

ಇದೇ ಮೊದಲ ಬಾರಿಗೆ 19 ವರ್ಷದೊಳಗಿನವರ ಮಹಿಳಾ ಟಿ20 ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿದೆ. ಬಹುದಿನಗಳಿಂದ ಇಂತಹದೊಂದು ಅವಕಾಶಕ್ಕಾಗಿ ಕಾದಿದ್ದ ಯುವ ಆಟಗಾರ್ತಿಯರು ಕಣಕ್ಕಿಳಿಯಲಿದ್ದಾರೆ. ಒಟ್ಟು 16 ತಂಡಗಳು ಸೆಣಸಲಿವೆ. 41 ಪಂದ್ಯಗಳು ನಡೆಯಲಿವೆ.

ಭಾರತ ತಂಡವು ತನ್ನ ಗುಂಪಿನಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ, ಸ್ಕಾಟ್ಲೆಂಡ್ ಮತ್ತು ಯುಎಇ ತಂಡಗಳನ್ನು ಎದುರಿಸಲಿದೆ.

ಭಾರತ ತಂಡದಲ್ಲಿ ಆಡಿರುವ ಅನುಭವಿ ಶಫಾಲಿ ವರ್ಮಾ ಇಲ್ಲಿ ಬಳಗವನ್ನು ಮುನ್ನಡೆಸುವರು. ಶನಿವಾರ ಮೊದಲ ಪಂದ್ಯದಲ್ಲಿ ಆತಿಥೇಯ ತಂಡವನ್ನು ಶಫಾಲಿ ಬಳಗವು ಎದುರಿಸಲಿದೆ. ಅವರೊಂದಿಗೆ ರಿಚಾ ಘೋಷ್ ಕೂಡ ಇದ್ದಾರೆ.

ಪಂದ್ಯ ಆರಂಭ: ಸಂಜೆ 5.15

ಬೈಡನ್ ನಿವಾಸ: ಪತ್ತೆಯಾದ ರಹಸ್ಯ ಕಡತಗಳ ತನಿಖೆಗೆ ಎಜಿ ನೇಮಕ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ತಮ್ಮ ಖಾಸಗಿ ನಿವಾಸ ಮತ್ತು ಕಚೇರಿಯ ಗ್ಯಾರೇಜ್‌ನಲ್ಲಿ ಪತ್ತೆಯಾದ ಕೆಲವು ವರ್ಗೀಕೃತ ಕಡತಗಳು ಮತ್ತು ರಹಸ್ಯ ಕಾಗದಪತ್ರಗಳ ಕುರಿತು ತನಿಖೆ ನಡೆಸಲು ಅಟಾರ್ನಿ ಜನರಲ್ ಮೆರಿಕ್ ಗಾರ್ಲ್ಯಾಂಡ್ ರಾಬರ್ಟ್ ಹರ್ ಅವರನ್ನು ವಿಶೇಷ ಸಲಹೆಗಾರರನ್ನಾಗಿ ನೇಮಿಸಲಾಗಿದೆ.

ಈ ಗೋಪ್ಯ ಕಾಗದಪತ್ರಗಳಲ್ಲಿ ಏನಿದೆ ಎನ್ನುವುದು ಬೈಡನ್ ಅವರಿಗೆ ತಿಳಿದಿಲ್ಲ. ಈ ಕಡತಗಳ ವಿಚಾರವನ್ನು ಬೈಡನ್ ಅವರು ತುಂಬಾ ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂದು ಶ್ವೇತಭವನ ಹೇಳಿದೆ.

ವಾಷಿಂಗ್ಟನ್ ಡಿ.ಸಿಯ ಪೆನ್ ಬೈಡನ್ ಸೆಂಟರ್ ಮತ್ತು ಡೆಲಾವರ್‌ನ ವಿಲ್ಮಿಂಗ್ಟನ್‌ನಲ್ಲಿರುವ ಬೈಡೆನ್ ಖಾಸಗಿ ನಿವಾಸದಲ್ಲಿ ವರ್ಗೀಕೃತ ದಾಖಲೆಗಳು ಪತ್ತೆಯಾದ ನಂತರ ಭುಗಿಲೆದ್ದ ರಾಜಕೀಯ ಕೋಲಾಹಲದ ನಡುವೆ ಶ್ವೇತಭವನವು ಬೈಡನ್ ಅವರ ಬೆಂಬಲಕ್ಕೆ ನಿಂತಿದೆ.



ಜೋ ಬೈಡನ್

'ಅಮೆರಿಕದ ಜನ ವರ್ಗೀಕೃತ ದಾಖಲೆಗಳು ಮತ್ತು ಮಾಹಿತಿಯನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತಾರೆಂದು ಬೈಡನ್ ಹೇಳಿರುವುದು ಬಹಳ ಮುಖ್ಯ. ಇದು ಅವರಿಗೂ ಅಚ್ಚರಿ ಉಂಟು ಮಾಡಿದೆ. ಹಾಗಾಗಿಯೇ ತನಿಖೆಗೆ ವಹಿಸಿದ್ದಾರೆ' ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೀನ್ ಜೀನ್-ಪಿಯರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಂದಿನ ವರ್ಷ 'ರಾಮಲಲ್ಲಾ' ಸ್ಥಾಪನೆ

ಲಖನೌ: 'ಮುಂದಿನ ವರ್ಷದ ಮಕರ ಸಂಕ್ರಾಂತಿ ವೇಳೆಗೆ ಅಯೋಧ್ಯೆಯ ನಿರ್ಮಾಣದ ಹಂತದಲ್ಲಿರುವ ರಾಮಮಂದಿರದ ಗರ್ಭಗುಡಿಯಲ್ಲಿ ರಾಮಲಲ್ಲಾ ವಿಗ್ರಹವನ್ನು ಸ್ಥಾಪಿಸಲಾಗುವುದು' ಎಂದು ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ಶುಕ್ರವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಮಲಲ್ಲಾ ವಿಗ್ರಹ ಸ್ಥಾಪನೆ ಬಳಿಕ ಮಂದಿರವನ್ನು ಭಕ್ತರಿಗಾಗಿ ತೆರೆಯಲಾಗುವುದು. ಇಲ್ಲಿಯವರೆಗೆ ಮಂದಿರ ನಿರ್ಮಾಣ ಕಾರ್ಯ ಶೇಕಡಾ 70ರಷ್ಟು ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ಈಸ್ಟರ್ ಸಂಡೇ ದಾಳಿ: ಸುಪ್ರೀಂ ಆದೇಶಕ್ಕೆ ಸ್ವಾಗತ

ಕೊಲಂಬೊ (ಪಿಟಿಐ): 2019ರ 'ಈಸ್ಟರ್ ಭಾನುವಾರ'ದಂದು ನಡೆದ ದಾಳಿಯ ಸಂತ್ರಸ್ತರಿಗೆ ಶ್ರೀಲಂಕಾ ಮಾಜಿ ಅಧ್ಯಕ್ಷ ಮೈತ್ರಿಪಾಲ ಸಿರಿಸೇನಾ ಅವರು 100 ಮಿಲಿಯನ್ ರೂಪಾಯಿಯನ್ನು ಪರಿಹಾರವಾಗಿ ನೀಡಬೇಕು ಎಂದು ಇಲ್ಲಿನ ಸುಪ್ರೀಂಕೋರ್ಟ್ ತೀರ್ಪು ನೀಡಿರುವುದನ್ನು ಸ್ಥಳೀಯ ಕ್ಯಾಥೋಲಿಕ್ ಚರ್ಚ್ ಮುಖ್ಯಸ್ಥ ಕಾರ್ಡಿನಲ್ ಮಾಲ್ಕಮ್ ರಂಜಿತ್ ಸ್ವಾಗತಿಸಿದ್ದಾರೆ.

ದೇಶದ ಅತಿ ಕೆಟ್ಟ ಭಯೋತ್ಪಾದಕ ದಾಳಿಯನ್ನು ತಡೆಯುವಲ್ಲಿ ವಿಫಲರಾದ ಕಾರಣ ಸಿರಿಸೇನಾ ಮತ್ತು ಇತರ ನಾಲ್ವರು ಮಾಜಿ ಉನ್ನತ ಅಧಿಕಾರಿಗಳು ಸಂತ್ರಸ್ತರಿಗೆ ಒಟ್ಟು ₹310 ಮಿಲಿಯನ್ ಪರಿಹಾರ ನೀಡಬೇಕು ಎಂದು ಗುರುವಾರ ಕೋರ್ಟ್ ಆದೇಶಿಸಿತ್ತು.

2019 ಏಪ್ರಿಲ್ 21ರಂದು ಎನ್‌ಟಿಜೆ ಮತ್ತು ಐಎಸ್ ಉಗ್ರ ಸಂಘಟನೆಗೆ ಸೇರಿದ 9 ಮಂದಿ, ಕ್ಯಾಥೋಲಿಕ್ ಚರ್ಚ್ ಮತ್ತು ಐಷಾರಾಮಿ ಹೋಟೆಲ್‌ಗಳ ಮೇಲೆ ಆತ್ಮಾಹುತಿ ಬಾಂಬ್ ದಾಳಿ ನಡೆಸಿದ್ದರು. ಘಟನೆಯಲ್ಲಿ 11 ಮಂದಿ ಭಾರತೀಯರು ಸೇರಿ 270 ಮಂದಿ ಮೃತಪಟ್ಟಿದ್ದರು. 500 ಜನರು ಗಾಯಗೊಂಡಿದ್ದರು.

ಸ್ವಾಮಿನಾರಾಯಣ ದೇವಸ್ಥಾನ ವಿರೂಪಗೊಳಿಸಿದ ಕಿಡಿಗೇಡಿಗಳು

ಮೆಲ್ಬರ್ನ್ (ಪಿಟಿಐ): ಇಲ್ಲಿನ ಪ್ರಸಿದ್ಧ 'ಬಿಎಪಿಎಸ್' ಸ್ವಾಮಿನಾರಾಯಣ ಮಂದಿರಕ್ಕೆ ನುಗ್ಗಿದ ದುಷ್ಕರ್ಮಿಗಳು ದೇವಸ್ಥಾನವನ್ನು ವಿರೂಪಗೊಳಿಸಿದ್ದಾರೆ. ಜೊತೆಗೆ ದೇವಸ್ಥಾನದ ಗೇಟುಗಳ ಮೇಲೆ ಭಾರತ ವಿರೋಧಿ ಬರಹವನ್ನೂ ಬರೆದಿದ್ದಾರೆ ಎಂದು ವರದಿಯಾಗಿದೆ.

ದೇವಸ್ಥಾನವು ರಾಜಧಾನಿಯ ಉತ್ತರ ಭಾಗದಲ್ಲಿರುವ ಮಿಲ್ ಪಾರ್ಕ್‌ನಲ್ಲಿದೆ. ಘಟನೆ ಎಷ್ಟೊತ್ತಿಗೆ ನಡೆದಿದೆ ಎಂಬುದು ಇನ್ನೂ ಗೊತ್ತಾಗಿಲ್ಲ.

'ಈ ಘಟನೆಯಿಂದ ಮನಸ್ಸಿಗೆ ತೀವ್ರ ನೋವಾಗಿದೆ. ಶಾಂತಿ ಬಯಸುವ ಹಿಂದೂ ಸಮುದಾಯದವರ ದೇವಾಲಯಕ್ಕೆ ಹೀಗಾಗಿರುವುದು ದುಃಖತರಿಸಿದೆ' ಎಂದು ಇಲ್ಲಿನ ಲಿಬರಲ್ ಪಕ್ಷದ ಸಂಸದ ಇವಾನ್ ಹೇಳಿಕೆ ನೀಡಿದ್ದಾರೆ.

'ಉದ್ದೇಶಪೂರ್ವಕವಲ್ಲದ ನರಹತ್ಯೆ ಆರೋಪ'

ಸೋಲ್ (ಎಪಿ): ದಕ್ಷಿಣ ಕೊರಿಯಾದ ರಾಜಧಾನಿ ಸೋಲ್‌ನಲ್ಲಿ ಸಂಭವಿಸಿದ್ದ ಕಾಲ್ತುಳಿತ ಅವಘಡಕ್ಕೆ ಸಂಬಂಧಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದ ಆರೋಪದಲ್ಲಿ 23 ಅಧಿಕಾರಿಗಳ ವಿರುದ್ಧ ನಿರ್ಲಕ್ಷ್ಯ ಮತ್ತು ಉದ್ದೇಶಪೂರ್ವಕವಲ್ಲದ ನರಹತ್ಯೆ ಆರೋಪ ಹೊರಿಸಬೇಕೆಂದು ಪೊಲೀಸರ ವಿಶೇಷ ತನಿಖಾ ತಂಡ ಶುಕ್ರವಾರ ಶಿಫಾರಸು ಮಾಡಿದೆ.

ನೈಟ್‌ಲೈಫ್ ಜಿಲ್ಲೆಯಲ್ಲಿ ವಾರಾಂತ್ಯಕ್ಕೆ 1 ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದ್ದರೂ ಕಾಲ್ತುಳಿತ ಸಂಭವಿಸಿದ್ದ ದಿನ ಸೋಲ್ ಪೊಲೀಸರು 137 ಅಧಿಕಾರಿಗಳನ್ನು ಮಾತ್ರ ಭದ್ರತೆಗಾಗಿ ನಿಯೋಜಿಸಿದ್ದರು ಎಂದೂ ತನಿಖಾ ತಂಡ ಹೇಳಿದೆ.

ಹ್ಯಾಲೋವಿನ್ ಉತ್ಸವ ಆಚರಣೆಯ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ 160 ಮಂದಿ ಮೃತಪಟ್ಟಿದ್ದರು.

2030ರ ವೇಳೆಗೆ ಅರ್ಧದಷ್ಟು ಸೇನೆ ಕಡಿತ: ಶ್ರೀಲಂಕಾ

ಕೊಲಂಬೊ (ಪಿಟಿಐ): ತೀವ್ರ ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿರುವ ಶ್ರೀಲಂಕಾ 2030ರ ವೇಳೆಗೆ ತನ್ನ ಸೇನಾ ಸಾಮರ್ಥ್ಯವನ್ನು ಈಗ ಇರುವುದಕ್ಕಿಂತ ಅರ್ಧಕ್ಕೆ ಇಳಿಸುವುದಾಗಿ ಶುಕ್ರವಾರ ಘೋಷಿಸಿದೆ.

2023ರ ಬಜೆಟ್‌ನಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕಿಂತ ಹೆಚ್ಚಿನ ಅನುದಾನವನ್ನು ರಕ್ಷಣಾ ಕ್ಷೇತ್ರಕ್ಕೆ ಮೀಸಲಿಟ್ಟಿದ್ದಕ್ಕೆ ಬಾರಿ ಟೀಕೆ ವ್ಯಕ್ತವಾದ ಬೆನ್ನಲ್ಲೇ ಶ್ರೀಲಂಕಾ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಸದ್ಯ ಶ್ರೀಲಂಕಾದ ಸೇನಾ ಸಾಮರ್ಥ್ಯ 2,00,783. ಇದನ್ನು ಮುಂದಿನ ವರ್ಷದ ವೇಳೆಗೆ 1.35 ಲಕ್ಷಕ್ಕೆ ಮತ್ತು 2030ರ ವೇಳೆ 1 ಲಕ್ಷಕ್ಕೆ ತಗ್ಗಿಸಲಾಗುವುದು ಎಂದು ರಕ್ಷಣಾ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಶ್ರೀಲಂಕಾ 2023ರ ಬಜೆಟ್‌ನಲ್ಲಿ ರಕ್ಷಣಾ ಇಲಾಖೆಗೆ 539 ಬಿಲಿಯನ್ ರೂಪಾಯಿ ಮೀಸಲಿಟ್ಟಿದ್ದರೆ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ 300 ಬಿಲಿಯನ್ ರೂಪಾಯಿ ಅನುದಾನ ಒದಗಿಸಿದೆ.

'ಹಳೆ ಪಿಂಚಣಿ ಯೋಜನೆಗೆ ಒಪ್ಪಿಗೆ'

ಶಿಮ್ಲಾ: ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖು ನೇತೃತ್ವದ ಹಿಮಾಚಲ ಪ್ರದೇಶ ಸರ್ಕಾರವು ಶುಕ್ರವಾರ ನಡೆದ ಮೊದಲ ಸಂಪುಟ ಸಭೆಯಲ್ಲಿ ಸರ್ಕಾರಿ ನೌಕರರ ಹಳೆ ಪಿಂಚಣಿ ಯೋಜನೆ ಮರುಸ್ಥಾಪನೆಗೆ ಅನುಮೋದನೆ ನೀಡಿದೆ.

ಹಳೆ ಪಿಂಚಣಿ ಯೋಜನೆ ಮರುಸ್ಥಾಪನೆ ಮಾಡುವುದಾಗಿ ಚುನಾವಣಾ ಪ್ರಚಾರದ ವೇಳೆ ಕಾಂಗ್ರೆಸ್ ಭರವಸೆ ನೀಡಿತ್ತು.

ಇಂದಿನಿಂದ ಹಳೆ ಪಿಂಚಣಿ ಯೋಜನೆಯ ಲಾಭವನ್ನು ಪಡೆಯಬಹುದು. ಈ ಕುರಿತ ಅಧಿಸೂಚನೆಯನ್ನು ಶೀಘ್ರ ಹೊರಡಿಸಲಾಗುವುದು ಎಂದು ಸುಖು ಅವರು ಹೇಳಿದ್ದಾರೆ.

ಟ್ರಂಪ್ ಸಂಸ್ಥೆಗಳಿಗೆ ₹13 ಕೋಟಿ ದಂಡ ಹೇರಿಕೆ

ನ್ಯೂಯಾರ್ಕ್ (ಎಪಿ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒಡೆತನದ ಕಂಪನಿಗಳ ಉನ್ನತ ಅಧಿಕಾರಿಗಳು ವೇತನ ಮತ್ತು ಐಷಾರಾಮಿ ಸೌಲಭ್ಯಗಳಿಗೆ ಸೂಕ್ತ ಆದಾಯ ತೆರಿಗೆ ಸಲ್ಲಿಸದೇ ವಂಚಿಸಿರುವುದಕ್ಕೆ ಅಮೆರಿಕದ ನ್ಯಾಯಾಲಯ ಭಾರಿ ಮೊತ್ತದ ದಂಡ ವಿಧಿಸಿದೆ.

ಕಳೆದ ತಿಂಗಳು ಟ್ರಂಪ್ ಅವರ ಸಂಸ್ಥೆಗೆ ಸಂಬಂಧಿಸಿದ 17 ತೆರಿಗೆ ಅಪರಾಧಗಳಿಗೆ, ವಹಿವಾಟಿನ ದಾಖಲೆಗಳಲ್ಲಿ ತಪ್ಪು ಮಾಹಿತಿ ಸಲ್ಲಿಸಿರುವುದು ಮತ್ತು ವಂಚನೆ ಮಾಡಿರುವುದಕ್ಕೆ ನ್ಯಾಯಮೂರ್ತಿ ಜುಹಾನ್ ಮ್ಯಾನ್ಯುಯೆಲ್ ಮರ್ಚನ್ ಅವರು ಸುಮಾರು ₹13 ಕೋಟಿ ದಂಡ ವಿಧಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ಹಿಂಸಾಚಾರ: ವೈದ್ಯಗೆ ಜಾಮೀನು

ನವದೆಹಲಿ (ಪಿಟಿಐ): ಮಧ್ಯಪ್ರದೇಶದಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಪ್ರಕರಣದಲ್ಲಿ, ವ್ಯಾಪಂ ಹಗರಣದ ಬಗ್ಗೆ ಧ್ವನಿ ಎತ್ತಿದ್ದ ವೈದ್ಯ ಆನಂದ್ ರೈ ಅವರಿಗೆ ಸುಪ್ರೀಂಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾ. ಪಿ.ಎಸ್ ನರಸಿಂಹ ಅವರನ್ನು ಒಳಗೊಂಡ ನ್ಯಾಯಪೀಠವು ಹಿರಿಯ ವಕೀಲ ಕಪಿಲ್ ಸಿಬಲ್ ಮತ್ತು ವಿವೇಕ್ ತಂಖ ಅವರ ವಾದವನ್ನು ಆಲಿಸಿ, ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು.

ಬಳಿಕ, 'ಜಿಲ್ಲಾಧಿಕಾರಿ ಮೇಲೆ ಆಕ್ರಮಣ ನಡೆಸಿದ ಗುಂಪಿನಲ್ಲಿದ್ದ ಆರೋಪ ಸಂಬಂಧ ಆನಂದ್ ಅವರು ಕಳೆದ 60 ದಿನಗಳಿಂದ ಜೈಲಿನಲ್ಲಿದ್ದಾರೆ. ಇನ್ನೆಷ್ಟು ದಿನ ಅವರನ್ನು ಸೆರೆವಾಸದಲ್ಲಿ ಇಡುತ್ತೀರಿ' ಎಂದು ಮಧ್ಯಪ್ರದೇಶ ಸರ್ಕಾರದ ಪರ ವಕೀಲ ಸಾಲಿಟರಿ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿತು.

ರೈ ಅವರನ್ನು ಕಳೆದ ನ.15ರಂದು ಬಂಧಿಸಲಾಗಿತ್ತು.

ಆಸ್ಟ್ರೇಲಿಯಾ ವಿರುದ್ಧದ 'ಬಾರ್ಡರ್– ಗಾವಸ್ಕರ್ ಟ್ರೋಫಿ' ಟೆಸ್ಟ್ ಸರಣಿ

ಸೂರ್ಯ, ಇಶಾನ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಸೂರ್ಯಕುಮಾರ್ ಯಾದವ್ ಮತ್ತು ಇಶಾನ್ ಕಿಶನ್ ಅವರಿಗೆ ಆಸ್ಟ್ರೇಲಿಯಾ ವಿರುದ್ಧದ ಮುಂಬರುವ ಬಾರ್ಡರ್– ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಗೆ ಭಾರತ ತಂಡದಲ್ಲಿ ಸ್ಥಾನ ನೀಡಲಾಗಿದೆ.

ಪೃಥ್ವಿ ಶಾ ಅವರು ರಾಷ್ಟ್ರೀಯ ತಂಡದಲ್ಲಿ ಮತ್ತೆ ಅವಕಾಶ ಪಡೆದಿದ್ದು, ನ್ಯೂಜಿಲೆಂಡ್ ಎದುರಿನ ಟಿ20 ಸರಣಿಯಲ್ಲಿ ಆಡಲಿದ್ದಾರೆ. ಅಸ್ಸಾಂ ವಿರುದ್ಧದ ರಣಜಿ ಪಂದ್ಯದಲ್ಲಿ ಪೃಥ್ವಿ 379 ರನ್ ಕಲೆಹಾಕಿ ಆಯ್ಕೆಗಾರರ ಗಮನ ಸೆಳೆದಿದ್ದರು.


ಮಂಡಿಯ ನೋವಿನಿಂದ ಚೇತರಿಸಿಕೊಳ್ಳುತ್ತಿರುವ ರವೀಂದ್ರ ಜಡೇಜ ಅವರ ಹೆಸರನ್ನೂ 17 ಸದಸ್ಯರ ಟೆಸ್ಟ್ ತಂಡದಲ್ಲಿ ಸೇರಿಸಲಾಗಿದೆ. ಆದರೆ ಫಿಟ್‌ನೆಸ್ ಮರಳಿ ಪಡೆದರೆ ಮಾತ್ರ ಅವರು ಆಡಲಿದ್ದಾರೆ. ಬೆನ್ನುನೋವಿನಿಂದ ಸಂಪೂರ್ಣವಾಗಿ ಚೇತರಿಸಿಕೊಳ್ಳದ ಜಸ್‌ಪ್ರೀತ್ ಬೂಮ್ರಾ ಅವರನ್ನು ಪರಿಗಣಿಸಿಲ್ಲ.

ಕೆ.ಎಲ್.ರಾಹುಲ್ ಮತ್ತು ಅಕ್ಷರ್ ಪಟೇಲ್ ಅವರು ವೈಯಕ್ತಿಕ ಕಾರಣದಿಂದ ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲಿ ಆಡುತ್ತಿಲ್ಲ.

ರಿಷಭ್ ಪಂತ್ ಅವರು ಅಲಭ್ಯರಾಗಿರುವುದರಿಂದ ಚೇತನ್ ಶರ್ಮ ನೇತೃತ್ವದ ಆಯ್ಕೆ ಸಮಿತಿಯು ಮಧ್ಯಮ ಕ್ರಮಾಂಕಕ್ಕೆ ಬಲ ನೀಡಲು ಸೂರ್ಯಕುಮಾರ್ ಅವರಿಗೆ ಟೆಸ್ಟ್ ತಂಡದಲ್ಲಿ ಅವಕಾಶ ನೀಡಿದೆ. ಸೂರ್ಯ ಅವರು ಈ ಹಿಂದೆ 2021 ರಲ್ಲಿ ಭಾರತದಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಗೆ ತಂಡದಲ್ಲಿ ಸ್ಥಾನ ಪಡೆದಿದ್ದರು.

'ರೋಹಿತ್ ಶರ್ಮ, ವಿರಾಟ್ ಕೊಹ್ಲಿ, ಮೊಹಮ್ಮದ್ ಶಮಿ ಮತ್ತು ಆರ್.ಅಶ್ವಿನ್ ಅವರು ಆಸ್ಟ್ರೇಲಿಯಾ ವಿರುದ್ಧದ ಸರಣಿಗೆ ಸಜ್ಜಾಗಲು ರಣಜಿ ಪಂದ್ಯದಲ್ಲಿ ಆಡುವ ಸಾಧ್ಯತೆಯೂ ಇದೆ' ಎಂದು ಬಿಸಿಸಿಐ ಮೂಲಗಳು ಹೇಳಿವೆ.


ಇಶಾನ್ ಕಿಶನ್


ಸೂರ್ಯಕುಮಾರ್ ಯಾದವ್

ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಗೆ ತಂಡ: ರೋಹಿತ್ ಶರ್ಮ (ನಾಯಕ), ಕೆ.ಎಲ್.ರಾಹುಲ್, ಶುಭಮನ್ ಗಿಲ್, ಚೇತೇಶ್ವರ ಪೂಜಾರ, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಸ್.ಭರತ್, ಇಶಾನ್ ಕಿಶನ್, ಆರ್.ಅಶ್ವಿನ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ರವೀಂದ್ರ ಜಡೇಜ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಜಯದೇವ್ ಉನದ್ಕತ್, ಸೂರ್ಯಕುಮಾರ್ ಯಾದವ್

ನ್ಯೂಜಿಲೆಂಡ್ ಎದುರಿನ ಏಕದಿನ ಸರಣಿ: ರೋಹಿತ್ (ನಾಯಕ), ಗಿಲ್, ಇಶಾನ್, ಕೊಹ್ಲಿ, ಅಯ್ಯರ್, ಸೂರ್ಯಕುಮಾರ್, ಭರತ್, ಹಾರ್ದಿಕ್ ಪಾಂಡ್ಯ, ವಾಷಿಂಗ್ಟನ್ ಸುಂದರ್, ಶಹಬಾಜ್ ಅಹ್ಮದ್, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಕುಲದೀಪ್, ಶಮಿ, ಸಿರಾಜ್, ಉಮ್ರಾನ್ ಮಲಿಕ್

ನ್ಯೂಜಿಲೆಂಡ್ ಎದುರಿನ ಟಿ20 ಸರಣಿ: ಹಾರ್ದಿಕ್ ಪಾಂಡ್ಯ (ನಾಯಕ), ಸೂರ್ಯಕುಮಾರ್, ಇಶಾನ್, ಋತುರಾಜ್ ಗಾಯಕವಾಡ್, ಗಿಲ್, ದೀಪಕ್ ಹೂಡಾ, ರಾಹುಲ್ ತ್ರಿಪಾಠಿ, ಜಿತೇಶ್ ಶರ್ಮ, ವಾಷಿಂಗ್ಟನ್, ಕುಲದೀಪ್, ಚಾಹಲ್, ಅರ್ಷದೀಪ್ ಸಿಂಗ್, ಉಮ್ರಾನ್, ಶಿವಂ ಮಾವಿ, ಪೃಥ್ವಿ ಶಾ, ಮುಕೇಶ್ ಕುಮಾರ್

ದೇಹದಾರ್ಢ್ಯ ಸ್ಪರ್ಧೆ: ಶಂಕರ್‌ಗೆ ಬೆಳ್ಳಿ ಪದಕ


ಶಂಕರ್

ಬೆಂಗಳೂರು: ಕರ್ನಾಟಕದ ಮಲ್ಲಿಕಾರ್ಜುನ ಶಂಕರ್ ಅವರು ಕ್ವಾಲಾಲಂಪುರದಲ್ಲಿ ಇತ್ತೀಚೆಗೆ ನಡೆದ ಫಿಟ್‌ನೆಸ್ ಇಂಟರ್‌ನ್ಯಾಷನಲ್ ಫೆಡರೇಷನ್ (ಎಫ್‌ಐಇ) ಮಿ.ಏಷ್ಯಾ ಬಾಡಿಬಿಲ್ಡಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.

ಶಂಕರ್ ಅವರು ಮಹಾಲಕ್ಷ್ಮಿ ಬಡಾವಣೆ ರೆಸಿಡೆಂಟ್ಸ್ ಫೋರಂನಲ್ಲಿ ತರಬೇತಿ ನಡೆಸುತ್ತಿದ್ದಾರೆ. ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತದ 12 ಸ್ಪರ್ಧಿಗಳು ಪಾಲ್ಗೊಂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ಕಿಂಗ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಪ್ರತ್ಯಾನ್ಶು ತೋಮರ್ (30) ಅವರ ಉತ್ತಮ ಆಟದ ನೆರವಿನಿಂದ ಬೆಂಗಳೂರು ಕಿಂಗ್ಸ್ ತಂಡ, ಐಎನ್‌ಬಿಎಲ್ ಬ್ಯಾಸ್ಕೆಟ್‌ಬಾಲ್ ಲೀಗ್ ಟೂರ್ನಿಯಲ್ಲಿ ಗೆಲುವು ಪಡೆಯಿತು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬೆಂಗಳೂರು ಕಿಂಗ್ಸ್ ತಂಡ 93– 72 ರಲ್ಲಿ ಮುಂಬೈ ಟೈಟನ್ಸ್ ವಿರುದ್ಧ ಗೆದ್ದಿತು. ವಿಜಯಿ ತಂಡದ ಅನಿಲ್ 27 ಪಾಯಿಂಟ್ಸ್ ತಂದಿತ್ತರು.

ಬಿನ್ನಿ ಹಿತಾಸಕ್ತಿ ಸಂಘರ್ಷ ಅರ್ಜಿ ವಜಾ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ರೋಜರ್ ಬಿನ್ನಿ ಅವರ ವಿರುದ್ಧ ದಾಖಲಾಗಿದ್ದ ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆ ದೂರನ್ನು ನೀತಿ ಅಧಿಕಾರಿ ವಜಾಗೊಳಿಸಿದ್ದಾರೆ.

ರೋಜರ್ ಅವರ ಸೊಸೆ ಮಯಾಂತಿ ಲ್ಯಾಂಗರ್ ಬಿನ್ನಿ ಅವರು ಸ್ಟಾರ್ ಸ್ಪೋರ್ಟ್ಸ್ ವಾಹಿನಿಯಲ್ಲಿ ಕ್ರಿಕೆಟ್ ನಿರೂಪಕಿಯಾಗಿದ್ದಾರೆ. ಈ ವಾಹಿನಿಯು ಬಿಸಿಸಿಐನೊಂದಿಗೆ ಪ್ರಚಾರ ಗುತ್ತಿಗೆ ಹೊಂದಿದೆ. ಆದ್ದರಿಂದ ಆದ್ದರಿಂದ ರೋಜರ್ ನಿಯಮ ಉಲ್ಲಂಘನೆ ಮಾಡಿದ್ದಾರೆಂದು ಈಚೆಗೆ ಮಧ್ಯಪ್ರದೇಶ ಕ್ರಿಕೆಟ್ ಸಂಸ್ಥೆಯ ಅಪೆಕ್ಸ್ ಕೌನ್ಸಿಲ್‌ನ ಮಾಜಿ ಸದಸ್ಯ ಸಂಜೀವ್ ಗುಪ್ತಾ ದೂರು ನೀಡಿದ್ದರು.

ಈ ದೂರನ್ನು ಪರಿಶೀಲಿಸಿದ ನೀತಿ ಅಧಿಕಾರಿ, ವಿಶ್ರಾಂತ ನ್ಯಾಯಮೂರ್ತಿ ವಿನೀತ್ ಸರನ್ ಅವರು 11 ಪುಟಗಳಲ್ಲಿ 20 ಅಂಶಗಳನ್ನು ಉಲ್ಲೇಖಿಸಿದ್ದಾರೆ. ಇದನ್ನು ಬಿಸಿಸಿಐ ಡಾಟ್ ಟಿವಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

'ಅವರು (ಮಯಾಂತಿ) ಸ್ಟಾರ್ ಸ್ಪೋರ್ಟ್ಸ್ ವಾಹಿನಿಯಲ್ಲಿ ಕ್ರಿಕೆಟ್ ನೇರಪ್ರಸಾರ ಮತ್ತು ಪ್ಯಾನೆಲ್ ಸಂವಾದಗಳನ್ನು ನಡೆಸಿಕೊಡುತ್ತಾರೆ. ಬಿಸಿಸಿಐ ಮತ್ತು ಐಪಿಎಲ್ ಪ್ರಸಾರ ಹಕ್ಕುಗಳನ್ನು ವಾಹಿನಿಗೆ 2018ರ ಏಪ್ರಿಲ್ 5 ಗಾಗೂ 2022ರ ಜೂನ್ 27ರಂದು ಲಭಿಸಿವೆ. ಮಯಾಂತಿ ಲ್ಯಾಂಗರ್ ಅವರು ಈ ವಾಹಿನಿಯ ಉದ್ಯೋಗಿಯಲ್ಲ. ಅವರು ಒಪ್ಪಂದದ ಮೇರೆಗೆ ನಿರೂಪಕಿಯಾಗಿ ಕಾರ್ಯನಿರ್ವಹಿಸುತ್ತಾರೆ. ಅಲ್ಲದೇ ಬಿನ್ನಿ ಅವರು ತಮ್ಮ ಅಧ್ಯಕ್ಷ ಸ್ಥಾನದ ಮೂಲಕ ಮಯಾಂತಿ ನೇಮಕಕ್ಕೆ ಪ್ರಭಾವ ಬೀರಿದ್ದಾರೆ ಎಂದೂ ಹೇಳಲಾಗದು. ಇದಕ್ಕೆ ಪೂರಕ ಸಾಕ್ಷ್ಯಾಧಾರಗಳಿಲ್ಲ. ಅವರು ಮಾವ–ಸೊಸೆ ಆಗಿರುವ ಮಾತ್ರಕ್ಕೇ ಹಿತಾಸಕ್ತಿ ಸಂಘರ್ಷ ನಿಯಮ ಉಲ್ಲಂಘನೆ ಆರೋಪ ಸಾಬೀತಾಗುವುದಿಲ್ಲ' ಎಂದು ಸರನ್ ಉಲ್ಲೇಖಿಸಿದ್ದಾರೆ.


ರೋಜರ್ ಬಿನ್ನಿ

'ದೂರಿನೊಂದಿಗೆ ಸಲ್ಲಿಸಿದ ದಾಖಲೆಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಬಾರದು. ತಾವು ಯಾರ ವಿರುದ್ಧ ದೂರು ಸಲ್ಲಿಸಿರುವರೋ ಆ ವ್ಯಕ್ತಿಗೆ ಮಾತ್ರ ಪ್ರತಿಗಳನ್ನು ಕಳಿಸಬಹುದು' ಎಂದು ಸರನ್ ಅವರು ಸಂಜೀವ್ ಗುಪ್ತಾ ಅವರಿಗೆ ಎಚ್ಚರಿಕೆ ನೀಡಿದೆ.

ಈ ಹಿಂದೆ ಗುಪ್ತಾ ಅವರು ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಸೌರವ್ ಗಂಗೂಲಿ, ವಿವಿಎಸ್ ಲಕ್ಷ್ಮಣ್, ವಿರಾಟ್ ಕೊಹ್ಲಿ ಸೇರಿದಂತೆ ಹಲವು ಖ್ಯಾತನಾಮರ ವಿರುದ್ಧ ಇಂತಹ ದೂರುಗಳನ್ನು ಸಲ್ಲಿಸಿದ್ದರು. ಪ್ರತಿ ಸಲವೂ ಬಿಸಿಸಿಐನ ಪ್ರಮುಖರು, ಸದಸ್ಯರು ಮತ್ತು ಮಾಧ್ಯಮಗಳಿಗೂ ದೂರು ಹಾಗೂ ದಾಖಲೆಗಳಪ್ರತಿಗಳನ್ನು ನೀಡಿದ್ದರು.

ಫುಟ್‌ಬಾಲ್: ಬೆಂಗಳೂರು ವಾರಿಯರ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಬೆಂಗಳೂರು ವಾರಿಯರ್ಸ್ ಎಫ್‌ಸಿ ತಂಡದವರು ಬಿಡಿಎಫ್‌ಎ 'ಬಿ' ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಶುಕ್ರವಾರ ನಡೆದ ಪಂದ್ಯದಲ್ಲಿ ವಾರಿಯರ್ಸ್ 3–0 ಗೋಲುಗಳಿಂದ ಆರ್.ಎಸ್ ಸ್ಪೋರ್ಟ್ಸ್ ಎಫ್‌ಸಿ ತಂಡವನ್ನು ಮಣಿಸಿತು. ಮೊಹಮ್ಮದ್ ರಯಾನ್ (2ನೇ ನಿ.), ಕೆವಿನ್ (9ನೇ ನಿ.) ಮತ್ತು ಮೋಹಿತ್ ಸಿಂಗ್ (58 ನೇ ನಿ.) ಅವರು ವಿಜಯಿ ತಂಡದ ಪರ ಗೋಲು ಗಳಿಸಿದರು.

ಸೋಮವಾರ ನಡೆಯಲಿರುವ 'ಎ' ಡಿವಿಷನ್ ಲೀಗ್ ಪಂದ್ಯಗಳಲ್ಲಿ ಸೌತ್ ಯುನೈಟೆಡ್ ಎಫ್‌ಸಿ– ತಿಲಕ್ ಮೆಮೋರಿಯಲ್ ಹಾಗೂ ಆರ್‌ಡಬ್ಲ್ಯುಎಫ್– ಡಿವೈಇಎಸ್ ತಂಡಗಳು ಎದುರಾಗಲಿವೆ.


ಬಿಎಫ್‌ಸಿ ತಂಡದ ಸುನಿಲ್ ಚೆಟ್ರಿ (ಬಲ) ಅಭ್ಯಾಸ ನಡೆಸಿದರು

ಐಎಸ್‌ಎಲ್: ಬಿಎಫ್‌ಸಿಗೆ ಸತತ ಎರಡನೇ ಗೆಲುವಿನ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡದವರು ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶನಿವಾರ ಒಡಿಶಾ ಎಫ್‌ಸಿ ತಂಡವನ್ನು ಎದುರಿಸಲಿದ್ದಾರೆ.

ಬೆಂಗಳೂರಿನ ತಂಡ ಈ ಋತುವಿನಲ್ಲಿ ಒಮ್ಮೆಯೂ ಸತತ ಎರಡು ಪಂದ್ಯ ಗೆದ್ದಿಲ್ಲ. ಇದೀಗ ಸತತ ಎರಡನೇ ಜಯದ ನಿರೀಕ್ಷೆಯೊಂದಿಗೆ ಕಂಠೀರವ ಕ್ರೀಡಾಂಗಣದಲ್ಲಿ ಕಣಕ್ಕಿಳಿಯಲಿದೆ.

ಕಳೆದ ವಾರ ನಡೆದಿದ್ದ ಪಂದ್ಯದಲ್ಲಿ ಬಿಎಫ್‌ಸಿ ತಂಡ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ವಿರುದ್ಧ ಗೆದ್ದಿತ್ತು. ಪ್ಲೇ ಆಫ್ ಹಂತ ಪ್ರವೇಶಿಸುವ ಸಾಧ್ಯತೆಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಈ ಪಂದ್ಯದಲ್ಲೂ ಜಯ ಅನಿವಾರ್ಯ.

13 ಪಂದ್ಯಗಳಿಂದ ಅಷ್ಟೇ ಅಂಕಗಳನ್ನು ಹೊಂದಿರುವ ಬಿಎಫ್‌ಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. 22 ಪಾಯಿಂಟ್ಸ್ ಹೊಂದಿರುವ ಒಡಿಶಾ ಐದನೇ ಸ್ಥಾನದಲ್ಲಿದೆ. ಬೆಂಗಳೂರಿನ ತಂಡ ಕಳೆದ ಐದು ಪಂದ್ಯಗಳಲ್ಲಿ ಒಂದರಲ್ಲಿ ಮಾತ್ರ ಗೆದ್ದಿದೆ.

'ಪ್ಲೇ ಆಫ್ ಹಂತ ಪ್ರವೇಶಿಸಲು ಬೇಕಾದಷ್ಟು ಪಾಯಿಂಟ್ಸ್ ಕಲೆಹಾಕಲು ನಮಗೆ ಇನ್ನೂ ಅವಕಾಶವಿದೆ. ಪ್ಲೇ ಆಫ್‌ನಲ್ಲಿ ಸ್ಥಾನ ಪಡೆಯುವುದು ನಮ್ಮ ಗುರಿ. ಅದರಲ್ಲಿ ವಿಫಲವಾದರೆ ನಿಜಕ್ಕೂ ನಿರಾಸೆಯಾಗಲಿದೆ' ಎಂದು ಬಿಎಫ್‌ಸಿ ಕೋಚ್ ಸೈಮನ್ ಗ್ರೇಸನ್ ಹೇಳಿದ್ದಾರೆ.

ಒಡಿಶಾ ತಂಡವು ನಂದಕುಮಾರ್ ಮತ್ತು ಬ್ರೆಜಿಲ್‌ನ ಡಿಯಾಗೊ ಮೌರಿಸಿಯೊ ಅವರನ್ನು ನೆಚ್ಚಿಕೊಂಡಿದೆ. ನಂದಕುಮಾರ್ ಅವರು ಈ ಋತುವಿನಲ್ಲಿ ಐದು ಗೋಲು ಗಳಿಸಿದ್ದಾರೆ.

ಪಂದ್ಯ ಆರಂಭ: ಸಂಜೆ 5.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಸುತ್ತೂರು ಜಾತ್ರೆ ಕುಸ್ತಿ 22ರಿಂದ

ಮೈಸೂರು: ಜಿಲ್ಲೆಯ ಸುತ್ತೂರು ಕ್ಷೇತ್ರದಲ್ಲಿ ನಡೆಯುವ ಜಾತ್ರೆ ಅಂಗವಾಗಿ ಇದೇ 22ರಿಂದ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆ ಆಯೋಜಿಸಲಾಗಿದೆ.

'ಸುತ್ತೂರು ಕೇಸರಿ' ಹಾಗೂ 'ಸುತ್ತೂರು ಕುಮಾರ' ಪ್ರಶಸ್ತಿಗಳಿಗಾಗಿ 60 ಜೋಡಿಗಳು ಸೆಣಸಾಡಲಿವೆ. ಇಲ್ಲಿನ ಸುತ್ತೂರು ಶಾಖಾ ಮಠದಲ್ಲಿ ಶುಕ್ರವಾರ ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಿದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಿವರ ನೀಡಿದರು.

' ಎಂಟು ವರ್ಷ ವಯಸ್ಸಿನ ಕುಸ್ತಿಪಟುಗಳಿಂದ 40 ವರ್ಷದ ಪೈಲ್ವಾನ್‌ಗಳವರೆಗೂ ಅವಕಾಶ ಕಲ್ಪಿಸಲಾಗಿದೆ. ಬಾಲಕರ ವಿಭಾಗದ ಕುಸ್ತಿ ಸಾಂಕೇತಿಕವಾಗಿರುತ್ತದೆ. ಪೈಲ್ವಾನ್ ಪ್ರಹ್ಲಾದ್ ಕುಸ್ತಿ ಜ್ಯೋತಿ ತರಲಿದ್ದಾರೆ. ಹರಿಯಾಣದ ಹೆಸರಾಂತ ಪೈಲ್ವಾನ್ ಬಂಟಿ ಕುಮಾರ್ ಮತ್ತು ಬೆಳಗಾವಿಯ ಪೈಲ್ವಾನ್ ನಾಗರಾಜು ನಡುವೆ ಮಾರ್ಫಿಟ್ ಕುಸ್ತಿ ನಡೆಯಲಿದೆ. ಗೆದ್ದವರಿಗೆ 'ಸುತ್ತೂರು ಕೇಸರಿ' ಪ್ರಶಸ್ತಿ ಲಭಿಸಲಿದೆ. ರಮ್ಮನಹಳ್ಳಿಯ ಪೈಲ್ವಾನ್ ರವಿ ಮತ್ತು ಶ್ರೀರಂಗಪಟ್ಟಣದ ಪೈಲ್ವಾನ್ ಮಂಜು (ಟಗರು) ಮಧ್ಯೆ ಸುತ್ತೂರು ಕುಮಾರ ಪ್ರಶಸ್ತಿಗಾಗಿ ಸೆಣಸಾಟ ನಡೆಯಲಿದೆ' ಎಂದರು.

ಮೊಹಮ್ಮಡನ್– ಐಜ್ವಾಲ್ ಎಫ್‌ಸಿ ಪಂದ್ಯ ಡ್ರಾ

ಕೋಲ್ಕತ್ತ (ಪಿಟಿಐ): ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ಮತ್ತು ಐಜ್ವಾಲ್ ಎಫ್‌ಸಿ ತಂಡಗಳ ನಡುವಣ ಐ–ಲೀಗ್ ಟೂರ್ನಿಯ ಪಂದ್ಯ ಶನಿವಾರ 2–2 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಐಜ್ವಾಲ್ ತಂಡದ ಎರಡೂ ಗೋಲುಗಳನ್ನು ಮಾರ್ಕಸ್ ತಂದಿತ್ತರೆ, ಮೊಹಮ್ಮಡನ್ ಪರ ಹೆನ್ರಿ ಕಿಸೆಕಾ ಅವರು ಚೆಂಡನ್ನು ಗುರಿ ಸೇರಿಸಿದರು. ವಿರಾಮದ ವೇಳೆಗೆ ಉಭಯ ತಂಡಗಳು 1–1 ರಲ್ಲಿ ಸಮಬಲ ಸಾಧಿಸಿದ್ದವು.